ಶನಿವಾರ, ಮಾರ್ಚ್ 29, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 88 | ಪುಟ 22

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ ಅನುಕೂಲವೇ?

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
77,414	23,519	₹94,140 (ಬೆಂಗಳೂರು)	₹1.06 ಲಕ್ಷ (ಬೆಂಗಳೂರು)	85.50



ಭೂಕಂಪ: 150ಕ್ಕೂ ಹೆಚ್ಚು ಸಾವು



- ಎಲ್ಲೆಲ್ಲಿ ಭೂಕಂಪ? ಮ್ಯಾನ್ಮಾರ್ ಮತ್ತು ಥಾಯ್ಲೆಂಡ್
- ಎಷ್ಟು ತೀವ್ರತೆ? ರಿಕ್ಟರ್ ಮಾಪನದಲ್ಲಿ 7.7ರಷ್ಟು
- ಏನೇನು ಅನಾಹುತ? ಮ್ಯಾನ್ಮಾರ್‌ನಲ್ಲಿ ಕನಿಷ್ಠ 150 ಮಂದಿ ಸಾವು
- ಬ್ಯಾಂಕಾಕ್‌ನಲ್ಲಿ ನೆಲಕ್ಕುರುಳಿದ 30 ಮಹಡಿಯ ಗಗನಚುಂಬಿ ಕಟ್ಟಡ

ವಿವರ 14



ಭೂಕಂಪದ ಪರಿಣಾಮ ಬ್ಯಾಂಕಾಕ್‌ನಲ್ಲಿ ನೆಲಕ್ಕುರುಳಿದ ಗಗನಚುಂಬಿ ಕಟ್ಟಡ – ಎಎಫ್‌ಪಿ ಚಿತ್ರ

ಪರಿಷತ್ ಸದಸ್ಯ ರಾಜೇಂದ್ರ ಹತ್ಯೆಗೆ ₹70 ಲಕ್ಷಕ್ಕೆ ಒಪ್ಪಂದ, ರೌಡಿ ಸೇರಿದಂತೆ ಐವರ ವಿರುದ್ಧ ಎಫ್‌ಐಆರ್

ಕೊಲೆಗೆ ಸುಪಾರಿ: ಪ್ರಭಾವಿ ಕೈವಾಡ?

ಪ್ರಜಾವಾಣಿ ವಾರ್ತೆ

ತುಮಕೂರು: ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರ ಪುತ್ರ, ವಿಧಾನ ಪರಿಷತ್ ಸದಸ್ಯ ಆರ್.ರಾಜೇಂದ್ರ ಅವರ ಕೊಲೆಗೆ ಸಂಚು ನಡೆಸಿದ್ದ ಆರೋಪದ ಮೇಲೆ ಐವರ ವಿರುದ್ಧ ಇಲ್ಲಿನ ಕ್ಯಾತ್ಸಂದ್ರ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಎಫ್‌ಐಆರ್ ದಾಖಲಾಗಿದೆ. ಬೆಂಗಳೂರಿನ ಪ್ರಭಾವಿ ವ್ಯಕ್ತಿಯೊಬ್ಬರು ಕೊಲೆಗೆ ₹70 ಲಕ್ಷಕ್ಕೆ ಸುಪಾರಿ ನೀಡಿದ್ದರು ಎಂಬ ಆರೋಪ ಎಫ್‌ಐಆರ್‌ನಲ್ಲಿ ಇದೆ.

ಸೋಮ, ಭರತ್, ಅಮಿತ್, ಗುಂಡಾ, ಯತೀಶ್ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ. ಆರೋಪಿಗಳ ಪೈಕಿ ಸೋಮ ಎಂಬಾತ ರೌಡಿ ಶೀಟರ್ ಎಂಬುದು ಗೊತ್ತಾಗಿದೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರನ್ನು ಗುರುವಾರ ಭೇಟಿ ಮಾಡಿದ್ದ ರಾಜೇಂದ್ರ ಅವರು ದೂರು ಸಲ್ಲಿಸಿದ್ದರು. ಘಟನೆಯು ತುಮಕೂರಿನಲ್ಲಿ ನಡೆದಿದ್ದು, ಎಸ್‌ಪಿಯವರಿಗೆ ದೂರು ಸಲ್ಲಿಸುವಂತೆ ಡಿಜಿಪಿ ಸೂಚಿಸಿದ್ದರು. ಅವರ ಸೂಚನೆ ಮೇರೆಗೆ ಶುಕ್ರವಾರ ಎಸ್‌ಪಿ ಕಚೇರಿಗೆ ತೆರಳಿದ ರಾಜೇಂದ್ರ ಅವರು ಕೊಲೆಗೆ ಕೆಲವರು ಸಂಚು ರೂಪಿಸಿದ್ದು, ತನಿಖೆ ನಡೆಸುವಂತೆ ಕೋರಿ ದೂರು ಸಲ್ಲಿಸಿದರು. ದೂರಿನ ಬೆನ್ನಲ್ಲೇ ಐವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಎಫ್‌ಐಆರ್‌ನಲ್ಲಿ ಏನಿದೆ?: ‘ಬೆಂಗಳೂರಿನ ಪ್ರಭಾವಿ ವ್ಯಕ್ತಿಗಳು ನನ್ನ ಕೊಲೆಗೆ ಪಿತೂರಿ ನಡೆಸಿದ್ದು, ಒಂದು ಗುಂಪಿಗೆ ₹70 ಲಕ್ಷಕ್ಕೆ ಸುಪಾರಿ ನೀಡಿದ್ದು, ಮುಂಗಡವಾಗಿ ₹5 ಲಕ್ಷ ನೀಡಲಾಗಿತ್ತು. ಇದಕ್ಕೆ ಸಂಬಂಧಿಸಿದ ಆಡಿಯೊ ತುಣುಕು ಲಭ್ಯವಾಗಿದೆ. ಅನಾಮಧೇಯ ಮೂಲಗಳಿಂದ ಕೆಲವು ತಿಂಗಳ ಹಿಂದೆ ಆಡಿಯೊ ರೆಕಾರ್ಡ್ ಸಿಕ್ಕಿತ್ತು. ಅದರ ಒಂದು ತುಣುಕಿನಲ್ಲಿ ಇಬ್ಬರು ವ್ಯಕ್ತಿಗಳು ಸಂಭಾಷಣೆ ನಡೆಸಿದ್ದಾರೆ. ಸೋಮ, ಭರತ್, ಅಮಿತ್, ಗುಂಡಾ, ಯತೀಶ್ ಇತರರು ಹತ್ಯೆಗೆ ಸಂಚು ರೂಪಿಸಿದ ಬಗ್ಗೆ ಮಾಹಿತಿ ಲಭ್ಯವಾಗಿದೆ.

‘ಸೋಮ, ಭರತ, ಇತರರು ನಗರದ ಶಿರಾ ಗೇಟ್ ತೋಟದ ಮನೆಯಲ್ಲಿ ಕೊಲೆಗೆ ಸಂಚು ರೂಪಿಸಿದ್ದರು. ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದ್ದರು. ನನ್ನನ್ನು ಕೊಲೆ ಮಾಡುವುದಕ್ಕಾಗಿಯೇ ಕಾರನ್ನೂ ಖರೀದಿಸಿದ್ದರು. ಬೆಂಗಳೂರಿನ ಕಲಾಸಿಪಾಳ್ಯ, ಮಧುಗಿರಿ ಭಾಗದಲ್ಲಿ ನನ್ನ ಚಲನವಲನ ತಿಳಿದುಕೊಳ್ಳಲು ಕೆಲವು ಹಿಂಬಾಲಕರನ್ನು ನೇಮಿಸಿಕೊಂಡಿದ್ದರು’ ಎಂದು ದೂರಿನಲ್ಲಿರುವ ಮಾಹಿತಿಯನ್ನು ಎಫ್‌ಐಆರ್ ಉಲ್ಲೇಖಿಸಿದೆ.

‘ತಂದೆಯ ಮೇಲಿನ ರಾಜಕೀಯ ದ್ವೇಷದಿಂದ ಸಂಚು’



ರಾಜೇಂದ್ರ

‘ನನ್ನನ್ನು ಕೊಲೆ ಮಾಡಿಸಲು ಒಪ್ಪಂದ ಮಾಡಿಕೊಳ್ಳಲಾಗಿತ್ತು. ನನ್ನ ತಂದೆ ರಾಜಣ್ಣ ಮುಖ್ಯಮಂತ್ರಿಯವರ ಆಪ್ತ ಬೆಂಬಲಿಗರಾಗಿದ್ದಾರೆ. ಕೆಲವು ಪ್ರಬಲ, ಉನ್ನತ ರಾಜಕಾರಣಿಗಳು ತಂದೆ ಮೇಲೆ ರಾಜಕೀಯ ದ್ವೇಷ ಹೊಂದಿದ್ದಾರೆ. ಬೆದರಿಕೆ, ಕ್ರಿಮಿನಲ್ ಒಳ ಸಂಚು, ಆಮಿಷದ ಮಾರ್ಗಗಳ ಮೂಲಕ ರಾಜಕೀಯವಾಗಿ ಮುಗಿಸಲು ಸಂಚು ರೂಪಿಸಿದ್ದಾರೆ’ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಕಳೆದ ನವೆಂಬರ್ ತಿಂಗಳಲ್ಲಿ ಕ್ಯಾತ್ಸಂದ್ರ ಮನೆಯಲ್ಲಿ ಹಿರಿಯ ಮಗಳ ಜನ್ಮ ದಿನಾಚರಣೆ ಕಾರ್ಯಕ್ರಮವಿತ್ತು. ಈ ಸಂದರ್ಭದಲ್ಲಿ ಕೆಲವರು ನನ್ನನ್ನು ಹತ್ಯೆ ಮಾಡುವುದಕ್ಕಾಗಿ ಕಾರ್ಮಿಕರ ವೇಷದಲ್ಲಿ ಮನೆಗೆ ಬಂದಿದ್ದರು. ಆಗ ಹತ್ಯೆ ಮಾಡಲು ಸಾಧ್ಯವಾಗಿಲ್ಲ. ಇದಕ್ಕೆ ಪರ್ಯಾಯವಾಗಿ ಮುಂದಿನ ದಿನಗಳಲ್ಲಿ ಹತ್ಯೆ ಮಾಡಲು ಸಂಚು ರೂಪಿಸುವ ಸಲುವಾಗಿ ನನ್ನ ಕಾರಿಗೆ ಜಿಪಿಎಸ್ ಅಳವಡಿಸುವ ಪ್ರಯತ್ನವೂ ನಡೆದಿದೆ’ ಎಂದು ರಾಜೇಂದ್ರ ಅವರ ಹೇಳಿಕೆಯನ್ನು ಎಫ್‌ಐಆರ್ ಉಲ್ಲೇಖಿಸಲಾಗಿದೆ.

ಯಾವ ಸೆಕ್ಷನ್ ಅಡಿ ಪ್ರಕರಣ

ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 109 (ಕೊಲೆ ಯತ್ನ), 190 (ಕಾನೂನು ಬಾಹಿರ ಚಟುವಟಿಕೆ), 329 (4) (ಅತಿಕ್ರಮ ಪ್ರವೇಶ), 61(2)ರ (ಕ್ರಿಮಿನಲ್ ಸಂಚು) ಅಡಿ ಪ್ರಕರಣ ದಾಖಲಿಸಲಾಗಿದೆ.

ರಾಜೇಂದ್ರಗೆ ಹೆಚ್ಚಿನ ಭದ್ರತೆ

ರಾಜೇಂದ್ರ ಅವರ ಮನೆ ಕ್ಯಾತ್ಸಂದ್ರ ಪೊಲೀಸ್ ಠಾಣೆ ವ್ಯಾಪ್ತಿಗೆ ಬರಲಿದ್ದು, ಪ್ರಕರಣ ದಾಖಲಾಗಿದೆ. ಅವರಿಗೆ ಈಗಾಗಲೇ ಭದ್ರತೆ ನೀಡಲಾಗಿದೆ. ಹೆಚ್ಚುವರಿ ಭದ್ರತೆಗೆ ಮನವಿ ಮಾಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ತಿಳಿಸಿದರು.

ಡಿಜಿಟಲ್ ಅರೆಸ್ಟ್‌ಗೆ ಇಬ್ಬರ ‘ಬಲಿ’

ಸೈಬರ್ ವಂಚಕರ ಸತತ ಕಿರುಕುಳ: ವೃದ್ಧ ದಂಪತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಖಾನಾಪುರ (ಬೆಳಗಾವಿ ಜಿಲ್ಲೆ): ಸೈಬರ್ ವಂಚಕರ ಕಾಟ ತಾಳಲಾರದೇ, ತಾಲ್ಲೂಕಿನ ಬೀಡಿ ಗ್ರಾಮದಲ್ಲಿ ವೃದ್ಧ ದಂಪತಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಶುಕ್ರವಾರ ಗೊತ್ತಾಗಿದೆ. ಪತ್ನಿ ಗುರುವಾರ ರಾತ್ರಿ ನಿದ್ರೆ ಮಾತ್ರೆ ಸೇವಿಸಿದ್ದರೆ, ಪತಿ ಚಾಕುವಿನಿಂದ ತಮ್ಮ ಕುತ್ತಿಗೆಗೆ ಚುಚ್ಚಿಕೊಂಡು, ಮನೆಯ ಹಿಂದಿನ ನೀರಿನ ತೊಟ್ಟಿಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಬೀಡಿಯ ಕ್ರಿಶ್ಚಿಯನ್ ಓಣಿಯ ನಿವಾಸಿಗಳಾದ ಡಿಯಾಗೋ ನಜರತ್ (83) ಮತ್ತು ಅವರ ಪತ್ನಿ ಪ್ಲೇವಿಯಾ ಡಿಯಾಗೋ ನಜರತ್ (78) ಮೃತರು. ಸೈಬರ್ ವಂಚಕರ ಕಾಟ ತಾಳದೇ ಸಾಯುತ್ತಿರುವುದಾಗಿ ಡಿಯಾಗೋ ಬರೆದಿಟ್ಟ ‘ಡೆತ್‌ನೋಟ್’ ಪೊಲೀಸರಿಗೆ ಸಿಕ್ಕಿದೆ. ಡಿಯಾಗೋ ಅವರು ಮಹಾರಾಷ್ಟ್ರದಲ್ಲಿ ಬಿಎಸ್‌ಎನ್‌ಎಲ್ ಸಂಸ್ಥೆಯ ಹಿರಿಯ ಅಧಿಕಾರಿಯಾಗಿ, ಮಹಾರಾಷ್ಟ್ರ ಸಚಿವಾಲಯದಲ್ಲಿ ಕರ್ತವ್ಯ ನಿರ್ವಹಿಸಿ, ನಿವೃತ್ತರಾಗಿದ್ದರು.



ಡಿಯಾಗೋ ಮತ್ತು ಪ್ಲೇವಿಯಾ

‘ನಿವೃತ್ತಿ ಬಳಿಕ ಡಿಯಾಗೋ ಅವರು ಪತ್ನಿ ಜೊತೆ ತಮ್ಮ ಮೂಲ ಊರಾದ ಬೀಡಿಯಲ್ಲಿ ವಾಸಿಸುತ್ತಿದ್ದರು. ಅವರಿಗೆ ಮಕ್ಕಳಿರಲಿಲ್ಲ. ಸಮಾಜ ಸೇವೆಯಲ್ಲಿ ತೊಡಗಿಕೊಂಡಿದ್ದರು. ಕೆಲ ವಿದ್ಯಾರ್ಥಿಗಳಿಗೆ ಎಂಬಿಬಿಎಸ್ ಶುಲ್ಕ ಕಟ್ಟಿ ಶಿಕ್ಷಣಕ್ಕೆ ನೆರವಾಗಿದ್ದರು’ ಎಂದು ಡಿಯಾಗೋ ಕುಟುಂಬದವರು ತಿಳಿಸಿದ್ದಾರೆ.

‘ಸಮಾಜಸೇವೆಗೆ ಹಣ ಖರ್ಚು ಮಾಡುತ್ತಿರುವುದನ್ನು ಗಮನಿಸಿದ ಸೈಬರ್ ವಂಚಕರು, ದೆಹಲಿಯಿಂದ ವಿಡಿಯೊ ಕಾಲ್ ಮೂಲಕ ಬೆದರಿಕೆ ಒಡ್ಡುತ್ತಿದ್ದರು. ₹50 ಲಕ್ಷ ಪಡೆದರೂ ಕಿರುಕುಳ ನಿಲ್ಲಿಸಿರಲಿಲ್ಲ’ ಎಂದು ಮೂಲಗಳು ತಿಳಿಸಿವೆ.

ಸೈಬರ್ ವಂಚಕರ ಖಾತೆಗಳ ಪರಿಶೀಲನೆ ನಡೆದಿದೆ. ಇಂಥ ಪ್ರಕರಣಗಳು ಕಂಡುಬಂದರೆ ಜನರು ನೇರವಾಗಿ ಪೊಲೀಸರನ್ನು ಸಂಪರ್ಕಿಸಬೇಕು

ಡಾ.ಭೀಮಾಶಂಕರ ಗುಳೇದ
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬೆಳಗಾವಿ

‘ದೆಹಲಿಯಲ್ಲಿ ಉನ್ನತ ಹುದ್ದೆಯಲ್ಲಿ ಇರುವುದಾಗಿ ಹೇಳಿಕೊಂಡ ವ್ಯಕ್ತಿಯೊಬ್ಬರು ನಮಗೆ ಪದೇಪದೇ ಬೆದರಿಕೆ ಹಾಕಿದ್ದಾರೆ. ನನ್ನ ಸಿಮ್‌ಕಾರ್ಡ್ ದುರ್ಬಳಕೆ ಮಾಡಿಕೊಂಡಿದ್ದಾರೆ. ಅನಿಲ್ ಯಾದವ್ ಎಂಬ ವ್ಯಕ್ತಿ ಕರೆ ಮಾಡಿ, ‘ನಿಮ್ಮ ನಂಬರಿನಿಂದ ನನಗೆ ಬೆತ್ತಲೆ ಚಿತ್ರಗಳು, ಅಶ್ಲೀಲ ಸಂದೇಶಗಳು ರವಾನೆಯಾಗಿವೆ. ನಿಮ್ಮ ವಿರುದ್ಧ ಸೈಬರ್ ಸೆಲ್‌ಗೆ ದೂರು ನೀಡಿದ್ದೇನೆ’ ಎಂದು ಹೇಳಿದ್ದರು’ ಎಂದು ಡಿಯಾಗೋ ಅವರು ಇಂಗ್ಲಿಷ್‌ನಲ್ಲಿ ಡೆತ್‌ನೋಟ್ ಬರೆದಿಟ್ಟಿದ್ದಾರೆ.

6ನೇ ಪುಟ ನೋಡಿ

ಕೇಂದ್ರ ಸರ್ಕಾರಿ ನೌಕರರ ತುಟ್ಟಿಭತ್ಯೆ ಶೇ 2ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರಿ ನೌಕರರ ತುಟ್ಟಿಭತ್ಯೆ (ಡಿಎ) ಹಾಗೂ ಪಿಂಚಣಿದಾರರಿಗೆ ತುಟ್ಟಿ ಪರಿಹಾರವನ್ನು (ಡಿಆರ್) ಮೂಲ ವೇತನದ ಶೇ 2ರಷ್ಟು ಹೆಚ್ಚಿಸಲಾಗಿದೆ. ಇದರಿಂದ 1.15 ಕೋಟಿ ನೌಕರರು ಮತ್ತು ಪಿಂಚಣಿದಾರರಿಗೆ ಅನುಕೂಲವಾಗಲಿದೆ.

ಪ್ರಸ್ತುತ ಮೂಲ ವೇತನದ ಶೇ 53ರಷ್ಟು ಡಿಎ ಮತ್ತು ಡಿಆರ್ ಇದ್ದು, ಶೇ 55ಕ್ಕೆ ಹೆಚ್ಚಳವಾಗಲಿದೆ. ಇದು ಜನವರಿ 1ರಿಂದ ಪೂರ್ವಾನ್ವಯವಾಗಲಿದೆ.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಂವಹನ ಸಚಿವ ಅಶ್ವಿನಿ ವೈಷ್ಣವ್, ‘ತುಟ್ಟಿಭತ್ಯೆ ಮತ್ತು ತುಟ್ಟಿ ಪರಿಹಾರ ಏರಿಕೆಗೆ ಸಚಿವ ಸಂಪುಟವು ಒಪ್ಪಿಗೆ ನೀಡಿದೆ. ಇದಕ್ಕಾಗಿ ಸರ್ಕಾರವು ₹6,614 ಕೋಟಿ ಅನುದಾನವನ್ನು ನಿಗದಿಪಡಿಸಿದೆ’ ಎಂದು ತಿಳಿಸಿದ್ದಾರೆ.

ಪ್ರಸ್ತುತ 48.66 ಲಕ್ಷ ನೌಕರರು ಮತ್ತು 66.55 ಲಕ್ಷ ಪಿಂಚಣಿದಾರರು ಇದ್ದಾರೆ.

‘ಹೋಟೆಲ್‌ಗಳಲ್ಲಿ ಸೇವಾ ಶುಲ್ಕ ಕಡ್ಡಾಯವಲ್ಲ’

ನವದೆಹಲಿ (ಪಿಟಿಐ): ‘ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳಲ್ಲಿ ಗ್ರಾಹಕರು ಸ್ವಯಂಪ್ರೇರಿತವಾಗಿ ಸೇವಾ ಶುಲ್ಕ ನೀಡಬಹುದು. ಆದರೆ, ಸೇವಾ ಶುಲ್ಕ ನೀಡುವುದನ್ನು ಕಡ್ಡಾಯಗೊಳಿಸುವಂತಿಲ್ಲ’ ಎಂದು ದೆಹಲಿ ಹೈಕೋರ್ಟ್ ಶುಕ್ರವಾರ ಹೇಳಿದೆ.

ಸೇವಾ ಶುಲ್ಕ ನಿಷೇಧಿಸಿ ಕೇಂದ್ರೀಯ ಗ್ರಾಹಕರ ರಕ್ಷಣಾ ಪ್ರಾಧಿಕಾರ (ಸಿಸಿಪಿಎ) ಮಾರ್ಗದರ್ಶಿ ನಿಯಮಗಳನ್ನು ಪ್ರಕಟಿಸಿತ್ತು. ಇದನ್ನು ಪ್ರಶ್ನಿಸಿ ಹೋಟೆಲ್ ಮತ್ತು ರೆಸ್ಟೋರೆಂಟ್ ಮಾಲೀಕರ ಸಂಘವು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿತು.

ತೀರ್ಪು ಪ್ರಕಟಿಸಿದ ನ್ಯಾಯಮೂರ್ತಿ ಪ್ರತಿಭಾ ಎಂ.ಸಿಂಗ್, ಅಹಾರದ ಬಿಲ್ ಮೇಲೆ ಗ್ರಾಹಕರಿಗೆ ಸೇವಾ ಶುಲ್ಕ ವಿಧಿಸುವಂತಿಲ್ಲ ಎಂದು ಆದೇಶಿಸಿದರು.

‘ಸೇವಾ ಶುಲ್ಕ ವಿಧಿಸುವುದು ಗ್ರಾಹಕರಲ್ಲಿ ತಪ್ಪುಗ್ರಹಿಕೆಗೆ ಕಾರಣವಾಗಬಹುದು. ಸೇವಾ ತೆರಿಗೆ ಅಥವಾ ಜಿಎಸ್‌ಟಿ ಅನ್ನು ಈ ರೂಪದಲ್ಲಿ ಪಡೆಯಲಾಗುತ್ತಿದೆ ಎಂದು ಅವರು ತಪ್ಪಾಗಿ ಭಾವಿಸಬಹುದು’ ಎಂದು ಕೋರ್ಟ್ ಅಭಿಪ್ರಾಯಪಟ್ಟಿತು.

‘ಹೀಗೆ ಸೇವಾ ಶುಲ್ಕ ವಸೂಲಿ ಮಾಡುವುದು ನ್ಯಾಯಯುತವಲ್ಲದ ವ್ಯಾಪಾರಿ ನಡೆ’ ಎಂದು ಕೋರ್ಟ್ ಅಭಿಪ್ರಾಯಪಟ್ಟಿತು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸಚಿವರಿಗೆ ಬೇಡವಾದ ‘ಕಣ್ಗಾವಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಶ್ರೀಸಾಮಾನ್ಯರ ಮನೆ–ತೋಟ, ನಗರ–ಪಟ್ಟಣಗಳ ಪ್ರತಿ ಬೀದಿಗಳಲ್ಲೂ ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲು ಇದೆ. ಸಚಿವರ ಅಧಿಕೃತ ನಿವಾಸಗಳಿಗೆ ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲಿನ ಭದ್ರತೆಯೇ ಇಲ್ಲ.

ಬೆಂಗಳೂರಿನ ಬಹುತೇಕ ಎಲ್ಲ ಬೀದಿಗಳಲ್ಲಿ ನಗರ ಪೊಲೀಸ್, ನಗರ ಸಂಚಾರ ಪೊಲೀಸ್ ಸಿ.ಸಿ.ಟಿ.ವಿ ಕ್ಯಾಮೆರಾಗಳು ಇವೆ. ಪ್ರತಿಷ್ಠಿತ ಪ್ರದೇಶ ಗಳಲ್ಲಿ ರಾತ್ರಿ ವೇಳೆಯಲ್ಲೂ ಜನರ ಮುಖವನ್ನು, ವಾಹನಗಳ ನೋಂದಣಿ ಫಲಕಗಳನ್ನು ಸ್ಪಷ್ಟವಾಗಿ ಸೆರೆಹಿಡಿಯಬಲ್ಲ, ವಿಡಿಯೊ ದಾಖಲಿಸಬಲ್ಲಂತಹ ಅತ್ಯಾಧುನಿಕ ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿವೆ.

‘ನಮ್ಮಲ್ಲಿ ಅತ್ಯಾಧುನಿಕ ಕ್ಯಾಮೆರಾಗಳು ಇವೆ. ನಗರದ ಚಾಲುಕ್ಯ ವೃತ್ತದಲ್ಲಿ ನೀವು ನಿಂತಿದ್ದರೆ, ನಿಮ್ಮ ಕೈಗಡಿಯಾರದಲ್ಲಿನ ಸಮಯ ಎಷ್ಟು ಎಂಬುದನ್ನು ನಿಯಂತ್ರಣ ಕೊಠಡಿಯಲ್ಲಿ ಕೂತು ನೋಡಬಹುದಾದ ಸಾಮರ್ಥ್ಯದ ಕ್ಯಾಮೆರಾ ನಮ್ಮಲ್ಲಿದೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಸದನದಲ್ಲಿ ಹಲವು ಬಾರಿ ಹೇಳಿದ್ದಾರೆ.

‘ಮಧುಬಲೆ’ ಯತ್ನದ ಬಗ್ಗೆ ಪ್ರತಿಕ್ರಿಯಿಸಿದ್ದ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು, ‘ನನ್ನ ಮನೆಯಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಇಲ್ಲ. ಹೀಗಾಗಿ ಯಾವುದೇ ಸಾಕ್ಷ್ಯ ಇಲ್ಲ’ ಎಂದು ಹೇಳಿದ್ದರು. ಸಚಿವರ ಮನೆಗಳಿಗೆ ಇಂತಹ ಭದ್ರತೆ ಏಕಿಲ್ಲ ಎಂದು ‘ಪ್ರಜಾವಾಣಿ’ ಪರಿಶೀಲನೆ ನಡೆಸಿತು.

ಸಚಿವರ ಬಂಗಲೆಗಳ ನಿರ್ವಹಣೆ ಮಾಡುವ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಈ ಬಗ್ಗೆ ಸಚಿವರಿಗೆ ಹಲವು ಬಾರಿ ಪ್ರಸ್ತಾವ ಸಲ್ಲಿಸಿದರೂ, ಯಾವ ಸಚಿವರೂ ಇದಕ್ಕೆ ಒಪ್ಪಿಗೆ ನೀಡಿಲ್ಲ. ಹೀಗಾಗಿ, ಅಳವಡಿಸಲು ಸಾಧ್ಯವಾಗಿಲ್ಲ ಎನ್ನುತ್ತಾರೆ ಹೆಸರು ಬಹಿರಂಗ ಪಡಿಸಲು ಬಯಸದ ಅಧಿಕಾರಿಯೊಬ್ಬರು

6ನೇ ಪುಟ ನೋಡಿ

ಕ್ಯಾಮೆರಾ ಕಣ್ಣಿಗೆ ವಿರೋಧವೇಕೆ?

‘ಸರ್ಕಾರದ ವತಿಯಿಂದ ಕ್ಯಾಮೆರಾ ಅಳವಡಿಸಿದರೆ, ಅದನ್ನು ನಿಯಂತ್ರಣ ಕೊಠಡಿಗೆ ಲಿಂಕ್ ಮಾಡಬೇಕಾಗುತ್ತದೆ. ಆಗ ದೃಶ್ಯಾವಳಿಗಳು ಸರ್ಕಾರದ ಸುಪರ್ದಿಗೆ ಬರುತ್ತವೆ. ಜತೆಗೆ ಅವುಗಳಿಗೆ ಮಾಹಿತಿ ಹಕ್ಕು ಕಾಯ್ದೆಯೂ ಅನ್ವಯವಾಗುತ್ತದೆ. ಈ ಕಾರಣಕ್ಕೆ ಹಲವು ಸಚಿವರು ಕ್ಯಾಮೆರಾ ಹಾಕಿಸಲು ವಿರೋಧ ವ್ಯಕ್ತಪಡಿಸುತ್ತಾರೆ’ ಎಂದು ಅಧಿಕಾರಿ ವಿವರಿಸಿದರು.

ಮಧುಬಲೆ: ಗಡ್ಡಧಾರಿಗಾಗಿ ಹುಡುಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರನ್ನು ‘ಮಧುಬಲೆ’ಗೆ ಕೆಡವಲು ಪ್ರಯತ್ನಿಸಿದ ಪ್ರಕರಣದ ಕುರಿತು ಪ್ರಾಥಮಿಕ ತನಿಖೆ ನಡೆಸುತ್ತಿರುವ ಸಿಐಡಿ ತನಿಖಾಧಿಕಾರಿಗಳು, ವ್ಯಕ್ತಿಯೊಬ್ಬರಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ ಎಂದು ಗೊತ್ತಾಗಿದೆ.

‘ಹನಿಟ್ರ್ಯಾಪ್ ಮಾಡಲು ಅಪರಿಚಿತರು ವಕೀಲರ ಸೋಗಿನಲ್ಲಿ ಮನೆಗೆ ಬಂದಿದ್ದರು. ಎರಡು ಬಾರಿ ಭೇಟಿ ಆದಾಗಲೂ ಅವರೊಂದಿಗೆ ಜೀನ್ಸ್ ಪ್ಯಾಂಟ್, ಬ್ಲೂ ಟಾಪ್ ಧರಿಸಿದ್ದ ಯುವತಿ ಬಂದಿದ್ದರು’ ಎಂಬುದಾಗಿ ಸಚಿವ ಕೆ.ಎನ್.ರಾಜಣ್ಣ ಅವರು ಹೇಳಿಕೆ ನೀಡಿದ್ದಾರೆ. ಅವರ ಆ ಹೇಳಿಕೆ ಹಾಗೂ ಮೂರು ಪುಟಗಳ ದೂರು ಆಧರಿಸಿ ಪ್ರಕರಣದ ವಿಚಾರಣೆ ನಡೆಸಲಾಗುತ್ತಿದೆ. ಕೆಲವರ ಹೇಳಿಕೆ ಪಡೆದುಕೊಳ್ಳಲಾಗಿದೆ. ಗಡ್ಡಧಾರಿ ವ್ಯಕ್ತಿಯೊಬ್ಬರ ಬಗ್ಗೆ ಮಾಹಿತಿ ನೀಡಿದ್ದಾರೆ. ಆ ವ್ಯಕ್ತಿಗಾಗಿ ಹುಡುಕಾಟ ನಡೆಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.


12ನೇ ಪುಟ ನೋಡಿ





'ಬೆಂಗಳೂರಿನ ಜನರಿಗೆ ಅನ್ಯಾಯ'

ಪ್ರಜಾವಾಣಿ ವಾರ್ತೆ


ವಾಟಾಳ್ ನಾಗರಾಜ್

ಬೆಂಗಳೂರು: 'ಬಿಬಿಎಂಪಿಯನ್ನು ಐದು ನಗರ ಪಾಲಿಕೆಗಳನ್ನಾಗಿ ವಿಂಗಡಿಸುವ 'ಗ್ರೇಟರ್ ಬೆಂಗಳೂರು' ಯೋಜನೆ ಬೆಂಗಳೂರಿಗರಿಗೆ ಮಾಡುತ್ತಿರುವ ಅನ್ಯಾಯ. ಕೆಂಪೇಗೌಡರಿಗೆ ಮಾಡುವ ಅವಮಾನ' ಎಂದು ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಆರೋಪಿಸಿದರು.

'ಬೆಂಗಳೂರಿನಲ್ಲಿ ಹೆಚ್ಚು ನಗರ ಪಾಲಿಕೆಗಳು ಸೃಷ್ಟಿಯಾಗಲಿರುವುದರಿಂದ, ತಮಿಳು, ಹಿಂದಿ ಭಾಷಿಕರು ಅಧಿಕಾರಕ್ಕೆ ಬರುವ ಸಾಧ್ಯತೆ ಇರುತ್ತದೆ. ಬೆಂಗಳೂರು ಮತ್ತೊಂದು ಬೆಳಗಾವಿ ಆಗುವ ಸಾಧ್ಯತೆ ಇದೆ. ಕನ್ನಡಿಗರಿಗೆ ಮಾರಕವಾಗಿರುವ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ' ಹಾಗೂ ಯೋಜನೆಯನ್ನು ವಿರೋಧಿಸಿ ಏಪ್ರಿಲ್ 26ರಂದು ಈಡುಗಾಯಿ ಒಡೆಯುವ ಮೂಲಕ ಪ್ರತಿಭಟಿಸಲಾಗುತ್ತದೆ' ಎಂದು ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

'ನಗರದ ರಸ್ತೆಗಳ ರಿಪೇರಿ, ಜನರಿಗೆ ಕುಡಿಯುವ ನೀರು ಕೊಡಲು ಸಾಧ್ಯವಾಗುತ್ತಿಲ್ಲ. ಆದರೂ ರಾಜಕೀಯ ಅಧಿಕಾರಕ್ಕಾಗಿ ನಗರವನ್ನು ಒಡೆದು ಹೋಳು ಮಾಡಿ, ವಿಕೇಂದ್ರೀಕರಣ ಮಾಡುತ್ತಿದ್ದೇವೆ ಎಂದು ನಾಟಕವಾಡುತ್ತಿದ್ದಾರೆ. ಮೊದಲು ನಗರ ನಿವಾಸಿಗಳಿಗೆ ಮೂಲಸೌಕರ್ಯ ಕೊಟ್ಟು, ಸಂಚಾರ ದಟ್ಟಣೆ ನಿವಾರಣೆಗೆ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

PUBLIC NOTICE

This is to inform the general public that my client proposes to enter into a sale transaction with Mr. Gopal Purandar Das S/o. ESP Das, aged about 34 years (**'Owner'**) for purchase of the immovable property more fully described in the **'Schedule'** hereinbelow and hereinafter referred to as the **'Schedule Property'**. The Owner has represented to my Client that he is the absolute owner having ownership rights and marketable title over the Schedule Property. If any person/s having any claim, right, title or interest whatsoever over the Schedule Property and objections for the sale, if any., the same may be forwarded to the undersigned in writing with supporting documents within **7 (seven)** days from the date of publication of this notice, failing which it will be deemed that there are no claims, right, title or interest by anybody whomsoever and there are "NO OBJECTIONS" for completion of the sale transaction and my client will proceed with the execution and registration of the absolute sale deed.

SCHEDULE: All the piece and parcel of immovable property bearing E-PID No. 5150528617 (Property No. 932/C-15), measuring 63 feet, from East to West and 40 feet, from North to South, totally admeasuring 2,520 square feet, situated at 22nd Main Road, 4th T Block, Jayanagar, Ward No. 168 (Pattabhiramanagar) Bangalore, along with a building constructed thereon having a built up area of 1,200 square feet and bounded as follows: **On the EAST BY : Site No. 933; On the WEST BY : Road; On the NORTH BY : Site No. 931; On the SOUTH BY : Road.**

Place : Bangalore
Date: 28.03.2025

M.Sudhakar, Advocate,
No.37, 1st Floor, Opp.Kamala Nehru Vidhaya Mandir South end Road,
Basavangudi, BANGALORE – 560 004.
Mobile No. 9886063456

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 64/2024/ಎಸ್‌ಬಿಸಿ
ದಿನಾಂಕ : 25–03–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂಗಳ ಸರಬರಾಜಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ : ಕಂಪ್ರೆಸ್ಡ್ ಏರ್ ಪೈಪ್‌ಲೈನ್‌ನ ಸರಬರಾಜು, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವುದು. (ಟೆಂಡರ್ ಸಂ. ಎಲ್8255384) (ಪ್ರಮಾಣ : 01 ಸೆಟ್)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ :
18–04–2025 ರಂದು 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು
ಪಿಯುಬಿ/873/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25 ಬೆಂಗಳೂರು

South Western Railway - SWR | SWRRLY | SWRRLY

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್ : ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮು.ಇಂ(ವಿ)/ಪ್ರವಬೆ/ಅಇಂ(ಕ)/ಸ.ಕಾ.ಇಂ–4/20391 ದಿನಾಂಕ: 27.03.2025

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿ ವಿಚಾರಣೆ ಸಂಖ್ಯೆ: **ಕವಿಪ್ರನಿನಿ/ಮು.ಇಂ/ಪ್ರ/ಬೆಂ/C–ಮಾದರಿಯ ವೆಡ್ಜ್ ಕನೆಕ್ಟರ್ಸ್–ಸಿಇಪಿ–125–2024–25** ಬೆಂಗಳೂರಿನ ಪ್ರಸರಣ (ಕಾರ್ಯಾಚರಣೆ) ವಲಯದ ಅಡಿಯಲ್ಲಿ ಟಿ.ಎಲ್&ಎಸ್.ಎಸ್ (ಕಾರ್ಯಾಚರಣೆ) ಮಾಲೂರು ವಿಭಾಗದಲ್ಲಿ ಬರುವ ವಿವಿಧ 220/66/11ಕೆವಿ ಮತ್ತು 66/11ಕೆವಿ ಉಪ–ಕೇಂದ್ರಗಳಿಗೆ ವಿನ್ಯಾಸ, ತಯಾರಿಕೆ, ಪರೀಕ್ಷೆ ಮತ್ತು ಸರಬರಾಜು ಕುರಿತು ವಿವಿಧ ಗಾತ್ರಗಳ **C–ಮಾದರಿಯ ವೆಡ್ಜ್ ಕನೆಕ್ಟರ್ಸ್‌ಗಳನ್ನು** ಬಲಹೀನಗೊಂಡಿರುವ ಟರ್ಮಿನಲ್ ಮತ್ತು ಕ್ಲ್ಯಾಂಪ್‌ಗಳನ್ನು ಬದಲಾಯಿಸಲು ಬಿಡ್‌ನ್ನು ಆಹ್ವಾನಿಸಲಾಗಿದೆ.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರವೇ ಸ್ವೀಕರಿಸಲಾಗುತ್ತದೆ. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿನ ವಿಷಯದ ವಿಚಾರಣೆಯ ಕುರಿತು ವಿವರವಾದ ಅಧಿಸೂಚನೆಯನ್ನು **05.04.2025** ರಂದು ಅಥವಾ ನಂತರ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಗೆ ಲಾಗ್‌ಇನ್ ಮಾಡುವ ಮೂಲಕ ಪಡೆಯಬಹುದು. ಇತರ ವಿವರಗಳನ್ನು ಕೆಳಗೆ ಸಹಿ ಮಾಡಿದವರ ಕಛೇರಿಯಿಂದ ಪಡೆಯಬಹುದು.

ಸಹಿ/– ಮುಖ್ಯ ಇಂಜಿನಿಯರ್ (ವಿ), ಪ್ರಸರಣ (ಕಾರ್ಯಾಚರಣೆ) ವಲಯ,
ಕ.ವಿ.ಪ್ರ.ನಿ.ನಿ. ಆನಂದರಾವ್ ವೃತ್ತ, ಬೆಂಗಳೂರು–09.
ದೂರವಾಣಿ : 080–22282601 / 602

ಮೈಸೂರು ಸಕ್ಕರೆ ಕಂಪನಿ ನಿಯಮಿತ,
(ಕರ್ನಾಟಕ ಸರ್ಕಾರದ ಒಳಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ–571 402.
ಎಂಎಸ್‌ಕೋ/ಎಸ್ಟೇಟ್/134/2024–25 ದಿ:28–03–2025

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ

ಮೈಸೂರು ಸಕ್ಕರೆ ಕಂಪನಿಯು ಬೆಂಗಳೂರಿನಲ್ಲಿರುವ ಮೈಷುಗರ್ ಕಟ್ಟಡ, ಟೌನ್‌ಹಾಲ್ ಮುಂಭಾಗ ಜೆ.ಸಿ.ರಸ್ತೆಯಲ್ಲಿ ಇರುವ ಮೈಷುಗರ್ ಕಛೇರಿ ಆವರಣದಲ್ಲಿ 4500 ಚದರ ಅಡಿ ಪ್ರದೇಶದಲ್ಲಿ ವಾಹನ ನಿಲುಗಡೆಗೆ ಕಂಪನಿಯು ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನಗಳ ಪಾರ್ಕಿಂಗ್ (ಭಾರಿ ವಾಹನಗಳನ್ನು ಹೊರತುಪಡಿಸಿ) ಟೆಂಡರ್ ಸಂಖ್ಯೆ : MSCO/2024-25/SE0008/CALL-2 ರ ಪ್ರಕಾರ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಆಸಕ್ತರು ಇ–ಟೆಂಡರ್ ನಲ್ಲಿ ಭಾಗವಹಿಸಬಹುದಾಗಿದೆ.
(1). ಟೆಂಡರನ್ನು ತುಂಬುವ ದಿನಾಂಕ: 28.03.2025 ರಿಂದ ದಿನಾಂಕ: 15.04.2025 ಸಂಜೆ:5.00 ರ ವರೆಗೆ (2). ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 17.04.2025.ಟೆಂಡರನ್ನು ಸ್ವೀಕರಿಸುವ/ ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ಈ ವಿಚಾರದಲ್ಲಿ ಅಂತಿಮ ನಿರ್ಧಾರವನ್ನು ವ್ಯವಸ್ಥಾಪಕ ನಿರ್ದೇಶಕರು ತೆಗೆದುಕೊಳ್ಳುತ್ತಾರೆ.
ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸೆಲ್ 080–25501216/25501227 ಅಥವಾ 7892467431 ರವರನ್ನು ಸಂಪರ್ಕಿಸುವುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ಸನಿ–ಮಂ/ಕೆಎಸ್ ಎಂಸಿಿಎ/806/2024–25

IN THE SUPREME COURT OF INDIA
EXTRA-ORDINARY APPELLATE JURISDICTION
SPECIAL LEAVE PETITION (CIVIL) No. 9521 OF 2024
WITH PRAYER FOR INTERIM RELIEF

RAINBOW ADVERTISING ...Petitioner(s)
-Versus-
LUBNA HASSAN AND OTHERS ...Respondent(s)

To:
STAR CONSTRUCTION AND ADVERTISING,
A Proprietary Concern, having its office at
No. 1110, 11th Floor, Barton Centre,
M.G. Road, Bengaluru 560001,
District - Bangalore, Karnataka

PID: 49805/2025 FOR R [4]
IN SLP(C)No.9521/2024
(SEC IV-A)

WHEREAS, the Petition Special Leave to Appeal with prayer for interim relief along with above mentioned (copy enclosed) filed in the Registry by **Mr. BHARADWAJ S.,** Advocate, on behalf of the Petitioner(s) above named was listed for hearing before this Hon'ble Court on **29th April, 2024,** when the Court was pleased to pass the following order:-

"Issue notice."

AND WHEREAS, the matter above mentioned was listed before **Ld. Registrar's Court on 20th February, 2025,** When the following order was passed:-
"Counter affidavit has already been filed by Respondent Nos. 1 to 3.
Ld. Counsel for petitioner has filed application seeking subtitued service of Respondent No.4. The same is hereby allowed. Let proof of publication be filed within a period of four weeks. List again on 14.4.2025"

NOW, THEREFORE, TAKE NOTICE that the above petition with prayer for interim relief along will be posted for hearing before this Court in due course and you may enter appearance before this court either in person or through an advocate on record of this Court duly appointed by you in that behalf within **30 days from the date of service of notice.** You may thereafter show cause to the Court on the day that may subsequently be specified as to why Special Leave Petition and interim relief as prayed be not granted and the resultant appeal be not allowed.

You may file your affidavit in opposition to the petition as provided under Rule 14(1) of Order XXI, S.C.R. 2013 within **30 days** from the date of receipt of notice or not later than **2 weeks before the date appointed for hearing,** whichever be earlier, but shall do so only by setting out the grounds in opposition to the questions of law or grounds set out in the SLP and may produce such pleadings and documents filed before the court/ Tribunal against whose order the SLP is filed and shall also set out the grounds for not granting interim order or for vacating interim order if already granted.

TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.

Dated: 27th February, 2025 **Sd/- ASSISTANT REGISTRAR**

ಜಿಬಿಜಿಬಿಯಿಂದ, ಮೇಯರ್ ಕಾರ್ಪೊರೇಟರ್ ದುರ್ಬಲ





ಬೆಂಗಳೂರು: 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆಯು (ಜಿಬಿಜಿಬಿ) ಹಲವು ಪ್ರಮುಖ ಕಾರಣಗಳಿಗಾಗಿ ನಾಗರಿಕರಲ್ಲಿ ಗೊಂದಲ, ವಿವಾದ ಮತ್ತು ವಿರೋಧವನ್ನು ಹುಟ್ಟುಹಾಕಿದೆ. ಮೊದಲನೆಯದಾಗಿ, ಈ ಮಸೂದೆಯು ಮೆಟ್ರೊಪಾಲಿಟನ್ ಯೋಜನಾ ಸಮಿತಿಯನ್ನು (ಎಂಪಿಸಿ) ದುರ್ಬಲಗೊಳಿಸುವ ಮೂಲಕ ಸಂವಿಧಾನವನ್ನು ಉಲ್ಲಂಘನೆ ಮಾಡಲಾಗುತ್ತಿದೆ' ಎಂದು ನಮ್ಮ ಬೆಂಗಳೂರು ಪ್ರತಿಷ್ಠಾನದ ಮುಖ್ಯಸ್ಥ ವಿನೋದ್ ಜಾಕೋಬ್ ಅಭಿಪ್ರಾಯಪಟ್ಟರು.

'ಎರಡನೆಯದಾಗಿ, ಮೇಯರ್ ಹಾಗೂ ವಾರ್ಡ್‌ಗಳ ಕಾರ್ಪೊರೇಟರ್‌ಗಳನ್ನು ಬದಿಗಿಡುವ ಮೂಲಕ ನಗರದ ಜನಪ್ರತಿನಿಧಿಗಳ ಧ್ವನಿ, ಆಶಯವನ್ನು ನಿರ್ಲಕ್ಷಿಸಲಾಗಿದೆ. ಇದಲ್ಲದೆ, ಮಸೂದೆಯು ಪ್ರದೇಶ ಸಭೆಗಳನ್ನು (ಏರಿಯಾ ಸಭಾ) ರದ್ದುಗೊಳಿಸುವ ಮೂಲಕ, ಸಮುದಾಯದ ಭಾಗವಹಿಸುವಿಕೆಯನ್ನು ಕಡಿಮೆ ಮಾಡುತ್ತದೆ.

'ಇದರಿಂದ ನಾಗರಿಕರಿಗೆ ಅಗತ್ಯವಾದ ಸೌಲಭ್ಯವನ್ನು ಕಲ್ಪಿಸುವ ಆಶಯವನ್ನು ನಿರ್ಬಂಧಿಸಲಾಗಿದೆ. ಇದಕ್ಕೂ ಹೆಚ್ಚಾಗಿ, ದಕ್ಷತೆಯನ್ನು ಸುಧಾರಿಸುವ ಬದಲು, ನಿಯಮಗಳು ಮತ್ತು ಯೋಜನೆಗಳನ್ನು ಅಧಿಕಾರಶಾಹಿಗಳಿಗಾಗಿಯೇ ಬಿಡಿಸುವ ಅವಕಾಶವನ್ನು ಮಸೂದೆ ಮಾಡಿಕೊಟ್ಟಿದೆ ಎಂದರು.

'ಕೆಲವರ ಕೈಯಲ್ಲೇ ಅಧಿಕಾರವನ್ನು ಕೇಂದ್ರೀಕರಿಸುವ ಮೂಲಕ, ಮಸೂದೆಯು ಪ್ರಜಾಪ್ರಭುತ್ವದ ತತ್ವಗಳಿಗೆ ವಿರುದ್ಧವಾಗಿದೆ. ಪ್ರಜಾಪ್ರಭುತ್ವವನ್ನು ರಕ್ಷಿಸಲು ಮತ್ತು ಆಡಳಿತದಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ'ಯಲ್ಲಿ ಅಗತ್ಯ ಕ್ರಮಗಳನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ' ಎಂದು ಹೇಳಿದರು.

ಚುನಾವಣೆ ಮುಂದೂಡುವ ತಂತ್ರ



ಬಿಬಿಎಂಪಿಯನ್ನು ಹಲವು ಭಾಗಗಳನ್ನಾಗಿ ತುಂಡು ಮಾಡಿ 'ಗ್ರೇಟರ್ ಬೆಂಗಳೂರು' ಎಂದು ಮಾಡುವುದರ ಹಿಂದೆ ಚುನಾವಣೆಯನ್ನು ಮುಂದೂಡುವ ತಂತ್ರ ಎದ್ದು ಕಾಣುತ್ತದೆ. ಇದೂ ಒಂದು ಗದ್ದಲವಾಗಿ ನ್ಯಾಯಾಲಯಕ್ಕೆ ಹೋಗುತ್ತದೆ. ಯಾವುದೇ ಪಕ್ಷದವರಿಗೂ ಚುನಾವಣೆ ಬೇಕಿಲ್ಲ ಎನಿಸುತ್ತದೆ. ಕಾರ್ಪೊರೇಟರ್‌ಗಳು ಇಲ್ಲದಿರುವುದರಿಂದ ಅಲ್ಲಿ ಅಧಿಕಾರಿಗಳ ಆರ್ಭಟ ಹೆಚ್ಚಾಗಿದೆ. ಹೆಸರು ಬದಲಿಸುವುದರ ಬದಲಾಗಿ ಮೂಲಸೌಕರ್ಯಗಳನ್ನು ನೀಡುವುದರ ಬಗ್ಗೆ ಕೂಡಲೇ ಗಮನಹರಿಸಲಿ. ಜನರ ಜೊತೆಗೆ ನಾಡಿನ ನಿರ್ಮಾತೃ ಕೆಂಪೇಗೌಡರ ಆತ್ಮವೂ ಸಂತೋಷಪಡುತ್ತದೆ.

ಹೇಮಲತಾ ಮುರಳಿ, ಕುಮಾರಸ್ವಾಮಿ ಬಡಾವಣೆ

ಹೆಚ್ಚು ನಗರಪಾಲಿಕೆಗಳ ಅಗತ್ಯವಿದೆ



ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ, ಕುಡಿಯುವ ನೀರು, ವಿದ್ಯುತ್, ಕಸ ವಿಂಗಡಣೆ ಮತ್ತು ಇನ್ನಿತರ ಮೂಲ ಕಾರ್ಯಗಳು ಸುಸೂತ್ರವಾಗಿ ಮತ್ತು ತ್ವರಿತವಾಗಿ ನಡೆಯಬೇಕೆಂದಲ್ಲಿ ಒಂದಕ್ಕಿಂತ ಹೆಚ್ಚು ಮಹಾನಗರ ಪಾಲಿಕೆಗಳ ಅಗತ್ಯವಿದೆ. ಬೆಳೆಯುತ್ತಿರುವ ನಗರದ ಹೊಸ ಹೊಸ ಬಡಾವಣೆಗಳಲ್ಲಿ ಸಾರ್ವಜನಿಕರ ಅನುಕೂಲಕರ ಮತ್ತು ಆರೋಗ್ಯಕರ ವಾತಾವರಣ ನಿರ್ಮಾಣವಾಗಬೇಕಿದ್ದರೆ 'ಗ್ರೇಟರ್ ಬೆಂಗಳೂರು' ಯೋಜನೆ ಸೂಕ್ತವಾದದ್ದು. ಆದರೆ, ಆಡಳಿತ ಸ್ವಚ್ಛ ಮತ್ತು ಪ್ರಾಮಾಣಿಕತೆಯಿಂದ ಕೂಡಿದ್ದಲ್ಲಿ ಸಮಸ್ಯೆಗಳು ತಲೆದೋರುವುದಿಲ್ಲ.

ಅಶ್ವತ್ಥ ಕಲ್ಲೇದೇವರಹಳ್ಳಿ


ಮೊದಲು ಚುನಾವಣೆ ನಡೆಸಿ



'ಗ್ರೇಟರ್ ಬೆಂಗಳೂರು' ಎಲ್ಲರಿಗೂ ಬೇಕು. ಆದರೆ ಈಗಿರುವ ವ್ಯವಸ್ಥೆಯಲ್ಲಿ ಬಿಬಿಎಂಪಿ ಚುನಾವಣೆ ನಡೆಸುವುದು ಬಹಳ ಒಳ್ಳೆಯದು. ನಂತರ ಗ್ರೇಟರ್ ಬೆಂಗಳೂರು ಮಾಡುವುದು ಸೂಕ್ತ. ಈಗಿರುವ ಬಿಬಿಎಂಪಿಯಲ್ಲಿ ಬಹಳ ಸಮಸ್ಯೆಗಳಿವೆ. ಶಾಸಕರು ಜನರ ಮಾತುಗಳನ್ನು ಕೇಳುವುದಿಲ್ಲ. ಅವರಿಗೆ ಬೇಕಾದ ನಾಯಕರ ಮಾತುಗಳನ್ನು ಕೇಳುತ್ತಾರೆ. ರಸ್ತೆಗಳು, ಕುಡಿಯುವ ನೀರು, ದಾರಿ ದೀಪಗಳು ಮತ್ತು ಬಹುದೊಡ್ಡ ಸಮಸ್ಯೆ ಎಂದರೆ ಕಸ ವಿಲೇವಾರಿ ಆಗುತ್ತಿಲ್ಲ. ಈ ವ್ಯವಸ್ಥೆಯಲ್ಲಿ ಬಿಬಿಎಂಪಿ ಚುನಾವಣೆ ನಡೆಸುವುದು ಬಹು ಮುಖ್ಯ. ಆಯ್ಕೆಯಾದ ಕಾರ್ಪೊರೇಟರ್‌ಗಳು ಜನರ ಸಮಸ್ಯೆಗಳನ್ನು ಬಗೆಹರಿಸುತ್ತಾರೆ ಎಂಬ ಭರವಸೆ ಇದೆ.

ಪುಷ್ಪಲತಾ, ಕೋಣನ ಅಗ್ರಹಾರ

ಅಭಿವೃದ್ಧಿಗೆ ಕುಂದು



ಒಂದು ಕಡೆ ಆದಷ್ಟು ಬೇಗ ಬಿಬಿಎಂಪಿ ಚುನಾವಣೆಯನ್ನು ನಡೆಸುತ್ತೇವೆ ಎಂದು ಹೇಳುತ್ತಾರೆ. ಆದರೆ 'ಗ್ರೇಟರ್ ಬೆಂಗಳೂರು' ಮಾಡುತ್ತೇವೆ ಎಂದೂ ಹೇಳುತ್ತಾರೆ. ಇದರ ವಿರುದ್ಧ ಸಾರ್ವಜನಿಕರು ಕಾನೂನು ಮೊರೆ ಹೋಗುತ್ತಾರೆ. ಇದರಿಂದ ಚುನಾವಣೆ ನಡೆಸಲು ಸಾಧ್ಯವಾಗುವುದಿಲ್ಲ. ವಿನಾಕಾರಣ ಚುನಾವಣೆಯನ್ನು ಮುಂದೂಡುವ ತಂತ್ರ ಇದಾಗಿರುತ್ತದೆ. ಈಗಾಗಲೇ ಕಾರ್ಪೊರೇಟರ್‌ಗಳು ಇಲ್ಲದೆ ಇರುವುದರಿಂದ ಬೆಂಗಳೂರು ಅಭಿವೃದ್ಧಿಗೆ ಕುಂದುಂಟಾಗಿದೆ. ಆದ್ದರಿಂದ ಗ್ರೇಟರ್ ಬೆಂಗಳೂರನ್ನು ಕೈಬಿಟ್ಟು ಆದಷ್ಟು ಬೇಗ ಚುನಾವಣೆ ನಡೆಸಲಿ.

ಜಯರಾಮಯ್ಯ, ಬಾಲಾಜಿ ಬಡಾವಣೆ

'ಗ್ರೇಟ್ ಸ್ಲಂಗಳ' ಅಭಿವೃದ್ಧಿಯಾಗಲಿ



'ಗ್ರೇಟರ್ ಬೆಂಗಳೂರು' ಬದಲು 'ಗ್ರೇಟ್ ಸ್ಲಂಗಳ' ಅಭಿವೃದ್ಧಿ ಆಗಬೇಕು. ಅಲ್ಲಿನ ಜನರ ಶಿಕ್ಷಣ, ಆರೋಗ್ಯ, ವಸತಿ, ಸ್ವಚ್ಛತೆ ಬಗ್ಗೆ ಸರ್ಕಾರ ಕಾಳಜಿ ತೋರಿಸಬೇಕು. ಅಲ್ಲಿನ ಮಕ್ಕಳು ಕುಡಿತ, ಗಾಂಜಾ ಚಟಕ್ಕೆ ದಾಸರಾಗಿ, ಪೋಷಕರು ಬೀದಿ ಪಾಲಾಗುತ್ತಿದ್ದಾರೆ. ಸಂವಿಧಾನದ ಆಶಯದಂತೆ ಪ್ರತಿಯೊಬ್ಬ ಪ್ರಜೆಯ ಅಭಿವೃದ್ಧಿ ಬಗ್ಗೆ ಸರ್ಕಾರ ಚಿಂತಿಸಬೇಕು. ಶ್ರೀಮಂತರ 'ಗ್ರೇಟರ್ ಬೆಂಗಳೂರು' ಬದಲು ಬಡವರ ಜೀವನ ಸುಧಾರಿಸುವ 'ಗ್ರೇಟರ್ ಬಿಬಿಎಂಪಿ' ಆಗಲಿ.

ಸಯ್ಯದ್ ಯೇಜಸ್ ಪಾಷ, ಬಸವೇಶ್ವರನಗರ

'ಗ್ರೇಟರ್ ಬೆಂಗಳೂರು': ನೀವೇನನ್ನುತ್ತೀರಿ?

ರಾಜ್ಯ ಸರ್ಕಾರ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ– 2024' ಮೂಲಕ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿ, ಅದರಡಿ ನಗರಪಾಲಿಕೆಗಳನ್ನು ರಚಿಸಲು ಮುಂದಾಗಿದೆ. ಈ ಬಗ್ಗೆ ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು 'ಪ್ರಜಾವಾಣಿ'ಗೆ ಕಳುಹಿಸಬಹುದು. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರದೊಂದಿಗೆ ವಾಟ್ಸ್ ಆ್ಯಪ್‌ಗೆ ಕಳುಹಿಸಿ.

96060 38256

ಸುದ್ದಿ 2 ನಿಮಿಷ

ಬಿಬಿಎಂಪಿ ವಿಭಜನೆಗೆ ಶಾಸಕ ಮುನಿರಾಜು ವಿರೋಧ

ಪೀಣ್ಯದಾಸರಹಳ್ಳಿ: 'ಐತಿಹಾಸಿಕ ಬೆಂಗಳೂರು ನಗರವನ್ನು ಐದು ಪಾಲಿಕೆಗಳನ್ನಾಗಿ ವಿಂಗಡಿಸಿ ಗ್ರೇಟರ್ ಬೆಂಗಳೂರು ಮಾಡಲು ಹೊರಟಿರುವ ಕಾಂಗ್ರೆಸ್ ಸರ್ಕಾರದ ನಿಲುವಿಗೆ ನನ್ನ ವಿರೋಧವಿದೆ' ಎಂದು ಶಾಸಕ ಎಸ್. ಮುನಿರಾಜು ಹೇಳಿದರು.

ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಬೆಂಗಳೂರು ನಗರಕ್ಕೆ ಒಬ್ಬರೇ ಮೇಯರ್, ಉಪ ಮೇಯರ್ ಇರಬೇಕು. ಈಗಿರುವ ಮಹಾನಗರ ಪಾಲಿಕೆಯನ್ನು ಒಡೆದರೆ ಅದು ಶೋಭೆ ತರುವುದಿಲ್ಲ. ಗ್ರೇಟರ್ ಬೆಂಗಳೂರು ಯೋಜನೆಗೆ ಬಿಜೆಪಿ ಹಾಗೂ ನಗರದ ಶಾಸಕನಾಗಿ ನನ್ನ ವಿರೋಧವಿದೆ' ಎಂದು ತಿಳಿಸಿದರು.

'ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ತಲೆದೋರಿಲ್ಲ. ಇಡೀ ದಾಸರಹಳ್ಳಿ ಕ್ಷೇತ್ರ ಬೋರ್‌ವೆಲ್‌ಗಳ ಆಧಾರಿತವಾಗಿದೆ. ಹಾಗಾಗಿ ಇನ್ನೂ 25 ಬೋರ್‌ವೆಲ್ ಕೊರೆಯುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಲಾಗಿದೆ' ಎಂದು ತಿಳಿಸಿದರು.

ಲಿಂಗತ್ವ ಅಲ್ಪಸಂಖ್ಯಾತರಿಗಾಗಿ ಪ್ರತ್ಯೇಕ ಶೌಚಾಲಯ



ಬೆಂಗಳೂರು: ನಗರದ ಉಪ್ಪಾರ ಪೇಟೆ ಪೊಲೀಸ್ ಠಾಣೆಯ ಎದುರು ರೋಟರಿ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 3192 ಸಂಸ್ಥೆ ಹಾಗೂ ಸುಲಭ್ ಇಂಟರ್‌ನ್ಯಾಷನಲ್ ಸಹಯೋಗದಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗಾಗಿ ನಿರ್ಮಿಸಿರುವ ಶೌಚಾಲಯವನ್ನು ಶುಕ್ರವಾರ ಉದ್ಘಾಟಿಸಲಾಯಿತು.

ಶೌಚಾಲಯ ಉದ್ಘಾಟಿಸಿದ ರೋಟರಿ ಇಂಟರ್‌ನ್ಯಾಷನಲ್ (ಆರ್‌ಐ) ಡೈರೆಕ್ಟರ್ ಕೆ.ಪಿ. ನಾಗೇಶ್ ಮಾತನಾಡಿ, 'ಮೊದಲಿನಿಂದಲೂ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಾ ಬಂದಿರುವ ರೋಟರಿ, ದೇಶದಲ್ಲೇ ಮೊದಲ ಬಾರಿಗೆ ಲಿಂಗತ್ವ ಅಲ್ಪಸಂಖ್ಯಾತರಿಗಾಗಿ ಪ್ರತ್ಯೇಕ ಶೌಚಾಲಯವನ್ನು ನಿರ್ಮಿಸಿದೆ' ಎಂದರು.

'ಸುಲಭ್ ಇಂಟರ್‌ನ್ಯಾಷನಲ್ ಸಹಯೋಗದಲ್ಲಿ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ(ಸಿಎಸ್‌ಆರ್) ಬಳಸಿಕೊಂಡು ದೇಶದ ಪ್ರತಿ ಜಿಲ್ಲೆ, ತಾಲ್ಲೂಕು ಹಂತದಲ್ಲೂ ಲಿಂಗತ್ವ ಅಲ್ಪಸಂಖ್ಯಾತರಿಗಾಗಿ ಇಂಥ ಶೌಚಾಲಯವನ್ನು ನಿರ್ಮಿಸುವುದು ನಮ್ಮ ಗುರಿಯಾಗಿದೆ' ಎಂದರು.

ಆರ್‌ಐನ ಚಾರ್ಟರ್ ಗವರ್ನರ್ ವಿ. ಶ್ರೀನಿವಾಸ ಮೂರ್ತಿ, 'ಲಿಂಗತ್ವ ಅಲ್ಪಸಂಖ್ಯಾತರು ಪುರುಷರು ಮತ್ತು ಮಹಿಳೆಯರ ಶೌಚಾಲಯಗಳನ್ನು ಪ್ರವೇಶಿಸಲು ಅವಕಾಶ ಇಲ್ಲ. ಇದರಿಂದ ಅವರು ಶೌಚಾಲಯದ ಸೌಲಭ್ಯವಿಲ್ಲದೇ ಪರಿತಪಿಸುವುದನ್ನು ಗಮನಿಸಿದ್ದೆವು. ಅವರಿಗೆ ಶೌಚಾಲಯ ನಿರ್ಮಿಸಬೇಕೆಂಬ ಕನಸಿತ್ತು. ಅದು ಈಗ ಸಾಕಾರಗೊಂಡಿದೆ' ಎಂದು ಹೇಳಿದರು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್
(ಶಿಕ್ಷಣ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆ ಅಡಿಯಲ್ಲಿನ ಶಾಸನಬದ್ಧ ಅಂಗಸಂಸ್ಥೆ)
ನೆಲ್ಸನ್ ಮಂಡೇಲಾ ಮಾರ್ಗ, ವಸಂತಕುಂಜ, ನವದೆಹಲಿ

ಜಾಹೀರಾತು ಸಂ. ಎಐಸಿಟಿಇ/ಆಡಳಿತ ಬ್ಯೂರೋ/02(03)/2025

ಸದಸ್ಯ ಕಾರ್ಯದರ್ಶಿ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಹುದ್ದೆಗಾಗಿ ಜಾಹೀರಾತು – ಕೊನೆಯ ದಿನಾಂಕ ವಿಸ್ತರಣೆ

ಜಾಹೀರಾತು ಸಂ. ಎಐಸಿಟಿಇ / ಆಡಳಿತ ಬ್ಯೂರೋ/ 02(02)/2025 ಸಂಬಂಧಿಸಿದಂತೆ, ಸದಸ್ಯ ಕಾರ್ಯದರ್ಶಿ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಹುದ್ದೆಗೆ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕವನ್ನು 11.04.2025 ರವರೆಗೆ ವಿಸ್ತರಿಸಲಾಗಿದೆ. ಮೇಲೆ ತಿಳಿಸಲಾಗಿರುವ ಜಾಹೀರಾತಿನಲ್ಲಿ ಉಲ್ಲೇಖಿಸಲಾಗಿರುವ ಇನ್ನುಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

cbc21300/12/0020/2425

ಏಪ್ರಿಲ್ 23ಕ್ಕೆ ರಾಜ್ಯಮಟ್ಟದ ವಿಶ್ವಕರ್ಮ ಜನಜಾಗೃತಿ ಸಮಾವೇಶ

ಬೆಂಗಳೂರು: ಕರ್ನಾಟಕ ವಿಶ್ವಕರ್ಮ ಜನ ಸೇವಾ ಸಂಘವು ಏ. 23ರ ಮಧ್ಯಾಹ್ನ 2.30ಕ್ಕೆ ಇಲ್ಲಿನ ರವೀಂದ್ರ ಕಲಾಕ್ಷೇತ್ರದಲ್ಲಿ ರಾಜ್ಯಮಟ್ಟದ ವಿಶ್ವಕರ್ಮ ಜನಜಾಗೃತಿ ಸಮಾವೇಶ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ. ಸೋಮಶೇಖರ್, 'ಈ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುತ್ತಾರೆ. ವಸಂತ ಮುರುಳಿ ಆಚಾರ್ ಅವರನ್ನು ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಮರ, ಕಬ್ಬಿಣ, ಕಲ್ಲಿನ ಕೆತ್ತನೆ ಸೇರಿ ಪಂಚವೃತ್ತಿಗಳ ಸಾಧಕ ಐವರಿಗೆ 'ಕರ್ನಾಟಕ ವಿಶ್ವಕರ್ಮ ಸಿರಿ ಸಮ್ಮಾನ್' ಸೇರಿ ವಿವಿಧ ಪ್ರಶಸ್ತಿ ನೀಡಲಾಗುತ್ತದೆ. ಕಲೆ, ಶಿಕ್ಷಣ, ಸಾಹಿತ್ಯ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಐವರು ಸಾಧಕಿಯರಿಗೆ 'ವಿಶ್ವಕರ್ಮ ಕಲಾಸಿಂಧು' ಸೇರಿ ಐದು ಪ್ರಶಸ್ತಿ ನೀಡಲಾಗುತ್ತದೆ. ಇವಕ್ಕೆ ನಾಮ ನಿರ್ದೇಶನ ಆಹ್ವಾನಿಸಲಾಗಿದೆ' ಎಂದರು.

'ನಮ್ಮ ಸಮುದಾಯದವರಿಗೆ ರಾಜಕೀಯದಲ್ಲಿ ಸೂಕ್ತ ಪ್ರಾತಿನಿಧ್ಯ ದೊರೆತಿಲ್ಲ. ರಾಜ್ಯದಲ್ಲಿ ಹಿಂದುಳಿದ ವರ್ಗದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಎರಡನೇ ಸಮುದಾಯ ವಿಶ್ವಕರ್ಮ. ಸಮಾಜದಲ್ಲಿ ನಮ್ಮ ಸಮುದಾಯ ಪ್ರಬಲವಾಗಿದ್ದು, ನಮ್ಮ ಶಕ್ತಿ ಏನು ಎಂಬುದನ್ನು ರಾಜಕೀಯ ಪಕ್ಷಗಳು, ರಾಜಕಾರಣಿಗಳಿಗೆ ಮನದಟ್ಟು ಮಾಡಿಕೊಡಲು ಈ ಸಮಾವೇಶ ಸಹಕಾರಿಯಾಗಲಿದೆ. ಸಮುದಾಯಕ್ಕೆ ಅಗತ್ಯ ಸವಲತ್ತು ಹಾಗೂ ರಾಜಕೀಯ ಸ್ಥಾನಮಾನಗಳನ್ನು ಒದಗಿಸಬೇಕು' ಎಂದು ಆಗ್ರಹಿಸಿದರು.

'ಸಮಾವೇಶದಲ್ಲಿ ವಿಶ್ವಕರ್ಮ, ವಿವಿಧ ಸಮುದಾಯಗಳ ಮಠಾಧೀಶರು ಪಾಲ್ಗೊಳ್ಳುತ್ತಾರೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮುದಾಯದ ಗಣ್ಯರು ಉಪಸ್ಥಿತರಿರುತ್ತಾರೆ' ಎಂದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Water Proofing

LEAKAGE...
LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

LONG TERM Office Rental Old Airport Road VDB TOUCHDOWN Next to HAL Museum. 7447Sqft Fully Fitted Out Office with 96 Work Stations 5 Cabins 3 Meeting 1 Board, 1 MD Cabin, 1 Cafeteria. WhatsApp Msg Only: 9845031550

AVAILABLE FOR-RENT on 1st, 2nd and 3rd floor 3300 sft each floor on 100 feet ring road Banashankari 3rd stage. Contact: 9886080699, 7795058346

16000SQFT_G+3 floors commercial space_for`rent suitable_for Hospital, Diagnostics, Software, e-commerce, Hotels 4th`Block HBR`Layout facing Ring`Road. call- Dr.Syed Inayathulla 8861817913.

MORE THAN_1300 SQFT Space,Builtarea in`First Floor,Near Shivabalayogi Aashrama Suitable for`Office on_RENT is_Available. Rao.8277182755. 080-26589728 8277607596.

Flats

3_BHK SEMI Furnished Flat for Rent_in Byrappa Layout, Whitefield. Call:-8861817913

Industrial And Factory

JIGANI SURROUNDING Warehouses For Rent 12000, 30000, 35000, 56000 Sqft, (Brokers Excuse) Asset Manager. 9481801053

Godown

WAREHOUSE AVAILABLE FOR_RENT. Buitlup Area 1.30_Lakhs Sqft. Near_VOLVO Factory, HOSKOTE, Suitable:for Logistics, Godown, Industry. 9611135365.

PERSONAL

Change of Name

I, ANNAMMA Residing`at No.28, Annamma_Nilaya, Behind SVK.Kalyana_Mantapa, 5th`Main`Road, Jnanajyothinagara, Bengaluru-560056 have`changed my`Name`to MUNIVENKATAMMA vide`Affidavit dtd:28.03.2025 Sworn`Before Notary H.R.Karunakara, Bangalore

SANTOSH MANGSHETTY, NO- 2-909/69/32, Plot No-32, Sedam Road, Swastik Nagar, Kalaburagi- 585105, have changed my name to SANTOSH JAGANATH MANGSHETTY vide affidavit Dated- 28/03/2025

CHANGE OF NAME
I, **Mohammed Fasi,** residing at No.07, 2nd Floor, 5th Main, Vinayakanagar, Hebbal, Bengalore-560024, have changed my name to **MAHESH KUMAR & converted From Islamic to Hinduism,** vide affidavit dated 21-03-2025, sworn before Notary Shiva Kumara M.N., Bengaluru.

BUSINESS

Business to Business

Finance

AVAILABLE FOR All Types of Lands Karnataka & other States Wanted Investors For Properties 9739627282

JOB OPPORTUNITIES

Teachers/ Professors

ST.PHILOMENA PUBLIC SCHOOL, Byalakere, Yelahanka, Bangalore required Trained & Experienced TEACHERS all subjects (Primary & High School) 9480091189/ 9845036582/ stphilomenas118@gmail.com

WANTED_HEAD Mistress, Teachers_for All`Subjects, P.T., Part-Time Yoga, Clerks_with Computer Knowledge Primary/High School. J.P.Nagar: 9845042249/ 26590773

DH Classifieds ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
9845114560
9901641752
9886213331
9731810277
9900428036
080-45557163/164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಕೆ. ವೈಷ್ಣವಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ. ಎ. ನಾರಾಯಣಗೌಡ, ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್, ಕರ್ನಾಟಕ ಕಾನೂನು ಆಯೋಗದ ಸದಸ್ಯ ನ್ಯಾಯಮೂರ್ತಿ ಅಶೋಕ್ ಜಿ. ನಿಜಗಣ್ಣವರ, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ಕೆಪಿಸಿಸಿ ಪದವೀಧರ ವಿಭಾಗದ ಉಪಾಧ್ಯಕ್ಷೆ ಹರ್ಷಿತಾ ರಾಮೋಜಿ ಗೌಡ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಮಹಿಳೆಯರಿಗೆ ಬೆಂಗಳೂರು ಅಪಾಯಕಾರಿ: ಹೇಮಲತಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳೆಯರ ಮೇಲಿನ ದೌರ್ಜನ್ಯದಲ್ಲಿ ದೇಶದಲ್ಲಿ ಬೆಂಗಳೂರು ಮೂರನೇ ಸ್ಥಾನದಲ್ಲಿದೆ. ಇಲ್ಲಿ ಮಹಿಳೆಯರು ಸುರಕ್ಷಿತರಲ್ಲ' ಎಂದು ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್ ತಿಳಿಸಿದರು.

ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ 'ಸರ್ಕಾರಿ ಇಲಾಖೆಗಳಲ್ಲಿ ಮಹಿಳೆಯರು' ಕುರಿತು ಅವರು ಮಾತನಾಡಿದರು.


ಹಳ್ಳಿಗಳಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಕೊಲೆ, ಹಲ್ಲೆ, ಅಪಹರಣ, ಅತ್ಯಾಚಾರಗಳು ನಡೆಯುವುದಿಲ್ಲ. ಬೆಂಗಳೂರಿನಲ್ಲಿ ಒಂದೇ ವರ್ಷದಲ್ಲಿ ಪ್ರಕರಣಗಳ ಸಂಖ್ಯೆ ಶೇ 4ರಷ್ಟು ಹೆಚ್ಚಾಗಿದೆ. ಹಳ್ಳಿಗಳಲ್ಲಿ ನೌಕರರೆಲ್ಲ ಸುರಕ್ಷಿತವಾಗಿ ಮನೆ ತಲುಪುತ್ತಿದ್ದಾರೆ. ಬೆಂಗಳೂರಿನಲ್ಲಿ ಅಂಥ ಸುರಕ್ಷಿತ ವಾತಾವರಣ ಇಲ್ಲ ಎಂದು ಹೇಳಿದರು.

ಬೆಂಗಳೂರಿನಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಹಲ್ಲೆ, ಅತ್ಯಾಚಾರ, ಕೊಲೆ ಸೇರಿದಂತೆ ಎಲ್ಲ ತರಹದ ದೌರ್ಜನ್ಯ ಪ್ರಕರಣಗಳು 2022ರಲ್ಲಿ 3.71 ಲಕ್ಷ ದಾಖಲಾಗಿದ್ದರೆ, 2023ರಲ್ಲಿ 4.65 ಲಕ್ಷಕ್ಕೇರಿದೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ತಿಳಿಸಿದೆ ಎಂದರು.

'ಹಳ್ಳಿಗಳಲ್ಲಿ ಸಾಮಾಜಿಕ ಪಿಡುಗುಗಳು ಅಧಿಕ ಇವೆ. ಹಿಂದುಳಿದ ಸಮುದಾಯಗಳ ಮಹಿಳೆಯರನ್ನು ಸಂಪ್ರದಾಯದ ಹೆಸರಲ್ಲಿ ಶೋಷಿಸುವ ದೇವದಾಸಿ ಪದ್ಧತಿ, ಮುತ್ತು ಕಟ್ಟುವುದು ಮುಂತಾದ ಅನಿಷ್ಟ ಪದ್ಧತಿಗಳು ಇನ್ನೂ ನಮ್ಮ ಹಳ್ಳಿಗಳಲ್ಲಿ ನಡೆಯುತ್ತಿವೆ' ಎಂದು ಬೇಸರ ವ್ಯಕ್ತಪಡಿಸಿದರು.

ವಿಧಾನಮಂಡಲ ಮತ್ತು ಸಂಸತ್ತಿನ ಸ್ಥಾನಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡಿಲ್ಲ. ಮಹಿಳೆಯರು, ಮನೆಯಲ್ಲಿ, ಶಾಲೆಗಳಲ್ಲಿ, ಉದ್ಯೋಗದ ಸ್ಥಳಗಳಲ್ಲಿಯೂ ಸುರಕ್ಷಿತರಾಗಿಲ್ಲ. ಎಷ್ಟೇ ದೌರ್ಜನ್ಯಗಳು ನಡೆದರೂ ಮಹಿಳೆಯರು ಮುಂದೆ ಸಾಗುತ್ತಲೇ ಇದ್ದಾರೆ. ಯಾವ ರಂಗದಲ್ಲಿಯೂ ಹಿಂದೆ ಉಳಿದಿಲ್ಲ ಎನ್ನುವುದಷ್ಟೇ ಸಮಾಧಾನದ ವಿಚಾರ ಎಂದು ತಿಳಿಸಿದರು.

ಸಂಘದ ಅಧ್ಯಕ್ಷೆ ರೋಶನಿ ಗೌಡ ಅಧ್ಯಕ್ಷತೆ ವಹಿಸಿದ್ದರು. ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.


ಆದೀಶ್ವರ್
ಎಲೆಕ್ಟ್ರೋ ವರ್ಲ್ಡ್
gadget for every budget!
Happy
ಯುಗಾದೀಶ್ವರ್
AC MELA
AIR-CONDTIONER INSTANT CASH BACK UPTO ₹4,000/- ON CC & DC EMI TRANSACTION
GET UPTO ₹10,000/- UPI MONEY BACK ON BAJAJ FINSERV PURCHASE
PAY BANK TRANSFER
SCAN QR FOR FREE REWARDS VOUCHER WORTH UP TO ₹999/-
1 MONTH EMI HOLIDAY
BUY IN MARCH PAY EMI IN MAY
JUST PAY ₹999/-
FREE* STANDARD INSTALLATION FOR 4 & 5 STAR SELECTED BRANDS, MODELS
DEBIT & CREDIT CARD EASY EMI OPTION AVAILABLE
TAKE HOME YOUR FAVOURITE
INVERTER AIR-CONDITIONERS
PAY BALANCE IN EASY EMI
LOW DONWNPAYMENT
LOW EMI
LONG TENURE EMI
5 STAR
4 STAR
3 STAR
Available in
2.0 TON, 1.5 TON, & 1.0 TON
SAVE POWER
STABILIZER FREE
FAST COOLING
LG Life's Good
AI CONVERTABLE 6-IN-1 ADC SENSOR
• AUTO CLEAN • DUAL INVERTER COMPRESSOR
• ADC SENSOR • HD FILTER WITH ANTI-VIRUS PROTECTION
• 100% COPPER TUBES WITH OCEAN BLACK PROTECTION
Haier
TRIPLE INVERTER +
• FROST SELF CLEAR TECHNOLOGY
• TRIPLE INVERTER+ UPTO 65% ENERGY SAVING
• UPTO 20M LONG AIR THROW
• INTELLI CONVERTABLE - 7 IN 1 HYPER PCB
Whirlpool
XPAND INVERTER AC
• 6TH SENSE TECHNOLOGY
• XPAND COOLING TECHNOLOGY
• PM 2.50U FILTER
• MICROBLOCK FILTER
IFB
HD COOLING INVERTER AC
• FLEXI 8 IN 1 • AMB TEMP
• SLEEP • 24 DEGREE AUTO SET
• WI-FI COMPATIBLE
• IN BUILT WI-FI MODULE
• CATECHIN FILTER
• ANTI MILDEW
Godrej
POWERFUL COOLING SUPER SAVINGS
• 5 IN 1 CONVERTIBLE TECHNOLOGY
• 10 YEAR WARRANTY ON INVETER COMPRESSOR
• NANO-COATED ANTI-VIRAL FILTER
• ANTI -MICROBAL SELF CLEANING • ACTIVE CARBONFILTER
BPL
Happy Little Things
SUPER COOLING PERFORMANCE
• FILTER CLEAN REMINDER
• SELF DIAGNOSIS • HIGH DENSITY FILTER
• MULTIPLE SPEED • DUAL DRAINAGE
• ROOM TEMPERATURE DISPLAY • ANTI MID DEW
NOW ENJOY, COOL & CLEAN AIR
KENSTAR
HAVELLS
BPL
Symphony
Godrej
SPECIAL PRICE ₹5,490/- ONWARDS
CEILING FANS | PEDESTAL FANS
TABLE FANS | WALL FANS
Crompton Greaves
HAVELLS
SPECIAL PRICE ₹1,790/- ONWARDS
SUPER SMART Ugadi Offers
iphone16 Pro Max
Get ₹2499 Worth Laptop Bag FREE
₹7500 ₹3000
ONEPLUS
OnePlus 13R 5G
Get ₹1999 Worth HP BT Sport NB FREE
₹2000 ₹3000
vivo
VIVO V 50
Get ₹2499 Worth Laptop Bag FREE
₹3000
oppo
OPPO F29 5G
Get ₹1999 Worth Nu Republic Speaker FREE
10% 6 Month Screen Replacement
mi
Redmi Note 14 Pro+
Get ₹3999 Worth Tekk Sound Bar FREE
₹1000
realme
Realme 14 Pro/Pro Plus/Lite
Get ₹1899 Worth HP Power Bank FREE
₹2000 ₹3000
SAMSUNG
Samsung Galaxy A56
Get ₹1299 Worth OG Tune FREE
₹2913 ₹3000
TECNO
Tecno SPARK 30
Get ₹1399 Worth Country 7 Speaker FREE
All Branded Accessories
pebble ZEBRONICS MAPIPOLA JBL LYNE AIRIS
UPTO 80% OFF
ಚನ್ನಪಟ್ಟಣ
ಶಿರಸಿ
ಕೋಲಾರ
ಬೆಳಗಾವಿ
ಬಳ್ಳಾರಿ
ಚಿತ್ರದುರ್ಗ
ದಾವಣಗೆರೆ
ತಿಪಟೂರು
ತುಮಕೂರು
ಕುಣಿಗಲ್
ಯಾದಗಿರಿ
ಮಂಡ್ಯ
ಗೋಕರ್ಣ
ಕೊಪ್ಪಳ
ಬೀದರ್
ಕಲಬುರ್ಗಿ
ಕೆ.ಆರ್. ನಗರ
ಚನ್ನರಾಯಪಟ್ಟಣ
ವಿಜಯಪುರ
ಸಿಂಧನೂರ್
ಕುಶಾಲನಗರ
ಚಿಕ್ಕಮಗಳೂರು
ಶಹಾಪುರ
ತಿಪಟೂರು
ಮೈಸೂರು 5 ಸ್ಟೋರ್ಸ್
ಕುವೆಂಪುನಗರ
ಹಿನಕಲ್
ಉದಯಗಿರಿ
ಜೆ.ಪಿ ನಗರ
ಡಾ. ರಾಜ್‌ಕುಮಾರ್ ರಸ್ತೆ
Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com





ಶ್ವಾನಪಡೆ ತರಬೇತಿ ಹೀಗೆ




ಪಿಕ್ಚರ್ ಪ್ಯಾಲೇಸ್



ರನ್, ಸರ್ಚ್, ಸ್ವಾಪ್... ಕ್ಯಾಚ್...
ಹೀಗೆ ಹೇಳಿದ್ದನ್ನೆಲ್ಲ ಕೇಳುವ ಶ್ವಾನ ಪಡೆಯ ತರಬೇತಿ ನಡೆಯುವುದು ಬೆಂಗಳೂರಿನಲ್ಲಿ. ಶ್ವಾನದಳ ಕರ್ನಾಟಕ ರಾಜ್ಯ ಪೊಲೀಸ್ ಬೆಂಗಳೂರು ಕೇಂದ್ರವೇ ಜಿಲ್ಲಾ ಶ್ವಾನ ಪಡೆಗೂ ಇಲ್ಲಿಂದಲೇ ತರಬೇತಿ ನೀಡಿ ಕಳುಹಿಸುತ್ತದೆ. ಶ್ವಾನ ದಳದಲ್ಲಿ ಡಾಬರ್ ಮ್ಯಾನ್ ಪಿಂಚರ್ ಲ್ಯಾಬ್ರೇಟರ್ ರಿಟ್ರಿವರ್ ಬೆಲ್ಜಿಯನ್ ಮಾಲಿನೊಯ್ಸ್ ಜರ್ಮನ್ ಶೆಫರ್ಡ್ ತಳಿಗಳನ್ನು ಬಳಸಿಕೊಳ್ಳಲಾಗುತ್ತದೆ. ಶ್ವಾನದಳವನ್ನು ಯೋಗೇಂದ್ರಸ್ವಾಮಿ ಪಿಎಂ ಅವರ ತಂಡವು ತರಬೇತಿಗೊಳಿಸುತ್ತದೆ. ಹೈಕೋರ್ಟ್, ವಿಧಾನಸೌಧ, ಏರ್‌ಪೋರ್ಟ್‌ಗಳಲ್ಲಿ ಈ ಶ್ವಾನದಳ ಕಾರ್ಯನಿರ್ವಹಿಸುತ್ತದೆ. ಶ್ವಾನ ಪಡೆಯ ಎಲ್ಲ ಕಸರತ್ತುಗಳನ್ನೂ ಪ್ರಜಾವಾಣಿಯ ಓದುಗರಿಗಾಗಿ ಸೆರೆ ಹಿಡಿದಿರುವುದು ಫೋಟೊ ಜರ್ನಲಿಸ್ಟ್ **ರಂಜು ಪಿ**














‘ಪ್ಯಾನ್ ಇಂಡಿಯಾ ಸಿನಿಮಾ ಕಷ್ಟ’

‘ಭಾಯ್, ಭಾಯ್’ ಎಂದು ಕೂಗುವ ಅಭಿಮಾನಿಗಳೆಲ್ಲಾ ಚಿತ್ರಮಂದಿರಗಳಿಗೆ ಬರುವುದಿಲ್ಲ. ಜತೆಗೆ, ಬಾಲಿವುಡ್ ಮತ್ತು ದಕ್ಷಿಣದ ನಟರನ್ನು ಸೇರಿಸಿ ಪ್ಯಾನ್ ಇಂಡಿಯಾ ಸಿನಿಮಾ ಮಾಡುವುದು ಕಷ್ಟ ಎಂದು ನಟ ಸಲ್ಮಾನ್ ಖಾನ್ ಅಭಿಪ್ರಾಯಪಟ್ಟಿದ್ದಾರೆ.

ಸಂದರ್ಶನವೊಂದರಲ್ಲಿ ಮಾತನಾಡಿದ ಅವರು, ‘ದಕ್ಷಿಣ ಭಾರತದ ಚಿತ್ರ ನಿರ್ಮಾಪಕ ಅಟ್ಲಿ ಜತೆಗಿನ ತಮ್ಮ ಬಹು ನಿರೀಕ್ಷಿತ ಆಕ್ಷನ್ ಚಿತ್ರವು ಬಜೆಟ್ ಸೇರಿದಂತೆ ಇತರೆ ಸಮಸ್ಯೆಗಳಿಂದಾಗಿ ವಿಳಂಬವಾಗಿದೆ’ ಎಂದು ಹೇಳಿದ್ದಾರೆ.

‘ಅಟ್ಲಿ ಅವರು ಬಹಳ ದೊಡ್ಡ ಬಜೆಟ್ ಆಕ್ಷನ್ ಚಿತ್ರವನ್ನು ಬರೆದಿದ್ದಾರೆ. ಬಜೆಟ್ ಸೇರಿದಂತೆ ಕೆಲವು ಕಾರಣಗಳಿಂದ ತಡವಾಗಿದೆ. ಹಾಗೆಯೇ ಚಿತ್ರದಲ್ಲಿ ರಜನಿಕಾಂತ್ ಸರ್ ಅಥವಾ ಕಮಲ್ ಹಾಸನ್ ಸರ್ ಇಬ್ಬರಲ್ಲಿ ಯಾರು ಇರುತ್ತಾರೆಂದು ನನಗೆ ತಿಳಿದಿಲ್ಲ’ ಎಂದು ತಿಳಿಸಿದ್ದಾರೆ.



ಸಲ್ಮಾನ್ ಖಾನ್

ಬಾಲಿವುಡ್ ಮತ್ತು ದಕ್ಷಿಣದ ನಟರನ್ನು ಸೇರಿಸಿ ಪ್ಯಾನ್ ಇಂಡಿಯಾ ಸಿನಿಮಾ ಮಾಡುವುದು ಕಷ್ಟ. ಒಂದು ವೇಳೆ ಅಂತಹ ಸಹಯೋಗ ಸಂಭವಿಸಲು ಸರಿಯಾದ ಸ್ಕ್ರಿಪ್ಟ್ ಅಗತ್ಯವಿದೆ ಎಂದು ಸಲ್ಮಾನ್ ಅಭಿಪ್ರಾಯಪಟ್ಟಿದ್ದಾರೆ.

‘ದಕ್ಷಿಣ ಭಾರತದ ಚಿತ್ರನಟರು ಹೆಚ್ಚು ಸಂಭಾವನೆ ತೆಗೆದುಕೊಳ್ಳುತ್ತಾರೆ. ಅದೇ ರೀತಿ ನಾವು ಕೂಡ ಸಂಭಾವನೆ ತೆಗೆದುಕೊಳ್ಳುತ್ತೇವೆ. ಅದರಲ್ಲಿ ಯಾವುದೇ ವ್ಯತ್ಯಾಸಗಳಿಲ್ಲ. ಉದಾಹರಣೆಗೆ, ‘ರಾಮಾಯಣ’ದಂತಹ ಚಿತ್ರದಲ್ಲಿ ಎಲ್ಲರೂ ಒಟ್ಟಾಗಿ ನಟಿಸಬಹುದು. ನಾನು ದಕ್ಷಿಣದ ನಿರ್ದೇಶಕರು, ನಟರು ಮತ್ತು ತಂತ್ರಜ್ಞರೊಂದಿಗೆ ಅನೇಕ ಚಿತ್ರಗಳಲ್ಲಿ ಕೆಲಸ ಮಾಡಿದ್ದೇನೆ’ ಎಂದು ಹೇಳಿದ್ದಾರೆ.

‘ದಕ್ಷಿಣ ರಾಜ್ಯಗಳಲ್ಲಿ ನನ್ನನ್ನು ‘ಭಾಯ್, ಭಾಯ್’ ಎಂದು ಕರೆಯುವ ಹೆಚ್ಚಿನ ಸಂಖ್ಯೆಯ ಅಭಿಮಾನಿಗಳು ಇದ್ದರೂ ಕೂಡ ಸಿನಿಮಾ ಬಿಡುಗಡೆಯಾದಾಗ ಚಿತ್ರಮಂದಿರಗಳಿಗೆ ಹೋಗುವುದಿಲ್ಲ. ನಾವು ರಜನಿಕಾಂತ್, ಚಿರಂಜೀವಿ, ಸೂರ್ಯ, ರಾಮ್ ಚರಣ್ ಅವರ ಚಿತ್ರಗಳನ್ನು ವೀಕ್ಷಿಸುತ್ತೇವೆ. ಅವರು ನಮ್ಮ ಸಿನಿಮಾಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಆದರೆ, ಅವರ ಅಭಿಮಾನಿಗಳು ನಮ್ಮ ಚಿತ್ರಗಳನ್ನು ನೋಡಲು ಹೋಗುವುದಿಲ್ಲ’ ಎಂದು ಸಲ್ಮಾನ್ ಖಾನ್ ತಿಳಿಸಿದ್ದಾರೆ.

‘ಪ್ಯಾನ್ ಇಂಡಿಯಾ ಸಿನಿಮಾ ನಿರ್ಮಿಸಲು ಹೆಚ್ಚಿನ ಹಣ ಬೇಕಾಗುತ್ತದೆ. ನಮ್ಮ ದೇಶದಲ್ಲಿರುವ ಚಿತ್ರಮಂದಿರಗಳ ಸಂಖ್ಯೆಯನ್ನು ನೋಡಿದರೆ ಹಣ ಹಿಂಪಡೆಯುವುದು ತುಂಬಾ ಕಷ್ಟಕರವಾಗುತ್ತದೆ. ನಮ್ಮಲ್ಲಿ 20,000ರಿಂದ 30,000 ಚಿತ್ರಮಂದಿರಗಳಿದ್ದರೆ, ನಾವು ಹಾಲಿವುಡ್ ಅನ್ನೇ ಆಳಬಹುದು’ ಎಂದು ಖಾನ್ ಹೇಳಿದ್ದಾರೆ.

‘ಸಿಕಂದರ್’ ನಂತರ ನಾನು ಮತ್ತೊಂದು ದೊಡ್ಡ ಆಕ್ಷನ್ ಚಿತ್ರದಲ್ಲಿ ನನ್ನ ಅಣ್ಣ... ಸಂಜಯ್ ದತ್ ಅವರೊಂದಿಗೆ ಕಾಣಿಸಿಕೊಳ್ಳಲಿದ್ದೇನೆ ಎಂದು ಖಾನ್ ಮಾಹಿತಿ ಹಂಚಿಕೊಂಡಿದ್ದಾರೆ.

ಸಾಜಿದ್ ನಾದಿಯಾದ್‌ವಾಲಾ ನಿರ್ಮಾಣ ಮತ್ತು ಎ.ಆರ್. ಮುರುಗದಾಸ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ‘ಸಿಕಂದರ್’ ಚಿತ್ರ ಇದೇ ಮಾರ್ಚ್ 30ರಂದು ಈದ್ ಹಬ್ಬದಂದು ಬಿಡುಗಡೆಯಾಗಲಿದೆ. ಈ ಚಿತ್ರದಲ್ಲಿ ರಶ್ಮಿಕಾ ಮಂದಣ್ಣ, ಸತ್ಯರಾಜ್, ಕಾಜಲ್ ಅಗರ್ವಾಲ್ ಮತ್ತು ಶರ್ಮಾನ್ ಜೋಶಿ ಸೇರಿದಂತೆ ಇತರರು ನಟಿಸಿದ್ದಾರೆ. ❖


ಕ್ರಿಶ್ 4 ಸಿನಿಮಾಗೆ ಹೃತಿಕ್ ನಿರ್ದೇಶನ

‘ಕ್ರಿಶ್ 4’ ಸಿನಿಮಾ ಮೂಲಕ ಬಾಲಿವುಡ್ ನಟ ಹೃತಿಕ್ ರೋಷನ್ ಅವರು ನಿರ್ದೇಶಕರಾಗಿ ಬಡ್ತಿ ಪಡೆಯಲಿದ್ದಾರೆ.

ಬಹು ನಿರೀಕ್ಷಿತ ‘ಕ್ರಿಶ್ 4’ ಚಿತ್ರವನ್ನು ರಾಕೇಶ್ ರೋಷನ್ ಫಿಲ್ಮ್‌ಕ್ರಾಫ್ಟ್ ಜತೆಯಾಗಿ ಯಶ್‌ರಾಕ್ ಫಿಲ್ಮ್ಸ್ ನಿರ್ಮಾಣ ಮಾಡುತ್ತಿದೆ. 2026ರಲ್ಲಿ ಚಿತ್ರ ಬಿಡುಗಡೆಯಾಗುವ ಸಾಧ್ಯತೆಯಿರುವುದಾಗಿ ನಿರ್ಮಾಪಕರು ಹೇಳಿದ್ದಾರೆ.

ಕುರಿತು ಮಾತನಾಡಿರುವ ಹೃತಿಕ್ ತಂದೆ ರಾಕೇಶ್ ರೋಷನ್, ‘ಕ್ರಿಶ್ 4 ನಿರ್ದೇಶನದ ಜವಾಬ್ದಾರಿಯನ್ನು ನನ್ನ ಪುತ್ರನಿಗೆ ನೀಡುತ್ತಿದ್ದೇನೆ. ಮುಂದಿನ ದಶಕಗಳಷ್ಟು ದೂರ ಕ್ರಿಶ್ ಪಯಣವನ್ನು ಪ್ರೇಕ್ಷಕರ ಎದುರು ತೆರೆದಿಡಲು ಹೃತಿಕ್‌ಗೆ ಮಹತ್ವಾಕಂಕ್ಷೆಯ ದೃಷ್ಟಿಕೋನವಿದೆ. ನಿರ್ದೇಶಕನ ಟೋಪಿ ಧರಿಸಿ ಅವನನ್ನು ನೋಡುವುದಕ್ಕಿಂತ ಹೆಚ್ಚಿನ ಹೆಮ್ಮೆ ಇನ್ನೊಂದಿಲ್ಲ. ಸೂಪರ್ ಹೀರೋ ಕ್ರಿಶ್‌ನ ಮುಂದಿನ ಭಾಗವನ್ನು ಹೃತಿಕ್ ತೆರೆದಿಡಲಿದ್ದಾರೆ’ ಎಂದು ಹೇಳಿದ್ದಾರೆ.

2006ರಲ್ಲಿ ಕ್ರಿಶ್ ಸಿನಿಮಾ ಬಿಡುಗಡೆಗೊಂಡಿತ್ತು. ಅದಾದ ಬಳಿಕ 2013ರಲ್ಲಿ ಕ್ರಿಶ್ 3 ಸಿನಿಮಾ ತೆರೆಕಂಡಿತ್ತು. ಎರಡೂ ಸಿನಿಮಾಗಳು ಗಲ್ಲಾ ಪೆಟ್ಟಿಗೆಯಲ್ಲಿ ಭರ್ಜರಿ ಯಶಸ್ಸು ಕಂಡಿತ್ತು. ❖



ಹೃತಿಕ್ ರೋಷನ್

WONDERLA

ಮಿಷನ್ ಇಂಟರ್‌ಸ್ಟೆಲ್ಲರ್ ಅನಾವರಣ

ದೇಶದ ಅತಿದೊಡ್ಡ ಮನರಂಜನಾ ತಾಣವಾದ ವಂಡರ್‌ಲಾ ಹಾಲಿಡೇಸ್ ಲಿಮಿಟೆಡ್ ಬೆಂಗಳೂರಿನಲ್ಲಿರುವ ತನ್ನ ಪಾರ್ಕ್‌ನಲ್ಲಿ ‘ಮಿಷನ್ ಇಂಟರ್‌ಸ್ಟೆಲ್ಲರ್’ ಎಂಬ ಹೊಸ ಲೋಕವನ್ನು ಪರಿಚಯಿಸಿದೆ. ಜನರನ್ನು ಭೂಮಿಯ ಆಚೆಗೆ ಕರೆದೊಯ್ಯುವ ದೇಶದ ಅತಿದೊಡ್ಡ ಎಲ್‌ಇಡಿ ಆಧಾರಿತ ಥಿಯೇಟರ್ ಇದಾಗಿದ್ದು, ಬಾಹ್ಯಾಕಾಶದ ಬಗ್ಗೆ ಹೊಸ ಅನುಭವವನ್ನು ನೀಡಲಿದೆ. ನಕ್ಷತ್ರ, ಗ್ರಹಗಳು ಮತ್ತು ಖಗೋಳ ವಿಸ್ಮಯಗಳ ಬಗ್ಗೆ ತಿಳಿಸಿಕೊಡಲಿದೆ

ಈ ಹೊಸ ಥಿಯೇಟರ್‌ನ ಅನಾವರಣ ಕಾರ್ಯಕ್ರಮದಲ್ಲಿ ನಟಿ ಆಶಿಕಾ ರಂಗನಾಥ್, ಅರುಣ್ ಕೆ.ಛಿಟ್ಟಿಲಪಲ್ಲಿ ಮತ್ತು ವಂಡರ್‌ಲಾ ಹಾಲಿಡೇಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಧೀರನ್ ಚೌಧರರಿ, ಬೆಂಗಳೂರು ಪಾರ್ಕ್‌ನ ಮುಖ್ಯಸ್ಥ ರುದ್ರೇಶ್ ಎಚ್.ಎಸ್ ಅವರು ಭಾಗಿಯಾಗಿದ್ದರು.

ವಿಶೇಷ ರಿಯಾಯಿತಿಗಳು ಲಭ್ಯ ವಿದ್ದು https:bookings.wonderla.com ಮೂಲಕ ನೋಂದಣಿ ಮಾಡಿಕೊಳ್ಳಿ. ಹೆಚ್ಚಿನ ಮಾಹಿತಿಗಾಗಿ 80372 30333, 9945557777 ಸಂಪರ್ಕಿಸಿ. ❖

‘ಭಾವನಾತ್ಮಕ ದೃಶ್ಯಗಳಲ್ಲಿ ಸಲ್ಮಾನ್ ನಟನೆ ಅದ್ಭುತ’

‘ಸಲ್ಮಾನ್ ಖಾನ್ ಅವರು ಉತ್ತಮ ನಟ, ಭಾವನಾತ್ಮಕ ದೃಶ್ಯಗಳಲ್ಲಿ ಅದ್ಭುತವಾಗಿ ನಟಿಸುತ್ತಾರೆ ಎಂದು ಬಾಲಿವುಡ್ ನಟ ಅಮೀರ್ ಖಾನ್ ಶ್ಲಾಘಿಸಿದ್ದಾರೆ.

ಸಲ್ಮಾನ್ ಖಾನ್, ರಶ್ಮಿಕಾ ಮಂದಣ್ಣ ನಟನೆಯ ಸಿಕಂದರ್ ಚಿತ್ರದ ಪ್ರಚಾರ ವಿಡಿಯೊದಲ್ಲಿ ಇಬ್ಬರು ಬಾಲಿವುಡ್ ನಟರು ಒಟ್ಟಿಗೆ ಕಾಣಿಸಿಕೊಂಡಿದ್ದಾರೆ. ನಿರ್ದೇಶಕ ಎ.ಆರ್. ಮುರುಗದಾಸ್ ಕೂಡ ಜತೆಯಾಗಿದ್ದಾರೆ.

ಯುಟ್ಯೂಬ್‌ನಲ್ಲಿ ಹಂಚಿಕೊಂಡ ವಿಡಿಯೊದಲ್ಲಿ ಮುರುಗದಾಸ್ ಅವರ ಬಳಿ, ಯಾವ ನಟ ಯಾವುದರಲ್ಲಿ ಉತ್ತಮ ಎಂದು ಹೇಳುವಂತೆ ಅಮೀರ್ ಕೇಳುತ್ತಾರೆ. ಮಾತುಕತೆ ವೇಳೆ ಮುರುಗದಾಸ್ ಅವರು ಸಲ್ಮಾನ್ ಅವರು ಸಿಕಂದರ್ ಸಿನಿಮಾದಲ್ಲಿ ಉತ್ತಮವಾಗಿ ನಟಿಸಿದ್ದಾರೆ, ಅದರಲ್ಲೂ ಅಳುವ ದೃಶ್ಯದಲ್ಲಿ ಗ್ಲಿಸರಿನ್ ಇಲ್ಲದೆ ನೈಜವಾಗಿ ಅತ್ತಿದ್ದಾರೆ ಎಂದಿದ್ದಾರೆ.

ಈ ವೇಳೆ ಅಭಿಪ್ರಾಯ ಹಂಚಿಕೊಂಡಿರುವ ಅಮೀರ್, ‘ನಾನು ನೋಡಿದ್ದೇನೆ, ಭಾವನಾತ್ಮಕ ದೃಶ್ಯಗಳಲ್ಲಿ ಸಲ್ಮಾನ್ ಅವರ ನಟನೆ ಅದ್ಭುತವಾಗಿರಲಿದೆ’ ಎಂದಿದ್ದಾರೆ. ❖



ಸಲ್ಮಾನ್ ಖಾನ್ ಮತ್ತು ಅಮೀರ್ ಖಾನ್



- 70 W ಇಂಡಕ್ಷನ್ ಫ್ಯಾನ್‌ಗಳ ವಿರುದ್ಧ 30 W ವಿದ್ಯುತ್
- IoT ಸಕ್ರಿಯ
- ಬೆಳಕು
- ಕಡಿಮೆ ಶಬ್ದ
- ಆಕರ್ಷಕ ಬಣ್ಣಗಳು

*Operates on: Remote, Smartphone, Wi-fi/IoT and Alexa

BEE 5 STAR | IS 374 CM/L- 8800112515

*Available Colours: WHITE BROWN TEAK

Scan QR to know more

For Free Demo: 9582 123456 | www.kuhl.in | For trade queries, please call 9582 123456 or Email at trade@kuhl.in

KARNATAKA: Central Bangalore: Shiva Electricals - 9743066660; Chinraj Enterprises - 9964458007; JV Electricals – 9886846157; • **North Bangalore:** Eco Shades - 9008302595; • **West Bangalore**: Lighting Palace – 9845355005; Durgha Build Pro - 9591447861; Industrial and Control Products - 9901115353; • **East Bangalore:** Saini World – 7795581106; • **South Bangalore:** Arambh Studio – 9986365669; Priority Concepts – 9900044811; Sunlight – 9886033866; Vinayaka Enterprises - 9341227232; Shri Prakash Light House – 8861214255; • **Mysore**: Arihant Electricals – 8197077706; Mangaldeep - 9900630007; Kaveri Appliances and Lightings – 9448978346; Manipal Electronics – 9448274300; • **Hubli:** Creative space - 9902776886; • **Davangere:** Eshwar Radio and TV - 9845533411; • **Distributors: Bangalore: West/North:** Abirami B2B Trading (Sairam Distributors) - 9972873609; • **South:** Bangalore Electrical Distributor - 9886422916; • **North-East**: Sri Krishna Agency - 9916450106; • **Central:** ABM Associates - 7353698596; • **East:** SDN Electricals - 9972215422; • **South-East**: Raj Enterprises - 8792166816; • **Mysore:** Sandhya Enterprises - 9740029224.

Buy Online on:

Scan to Locate Nearest Dealer

HONDA

Scooter ಅಂದ್ರೆ ACTIVA

All New ACTIVA 110

All New ACTIVA 125

Honda RoadSync App | Smart TFT screen | Smart Key Technology





₹0/- ಸಂಸ್ಕರಣಾ ಶುಲ್ಕ*
₹0/- ದಾಖಲಾತಿ ಶುಲ್ಕ*



ಕಡಿಮೆ ಬಡ್ಡಿ ದರ @ 7.99%** | ಕ್ಯಾಶ್‌ಬ್ಯಾಕ್ 5% ವರೆಗೆ ₹5000# | IDFC FIRST Bank Credit Card# | HDFC BANK Credit Card# | ಈ ಕೊಡುಗೆಗಳು ಸೀಮಿತ ಅವಧಿಗೆ ಮಾತ್ರ | ಡೀಲರ್ ವಿವರಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ

#ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ. #Honda ಟೂ ವೀಲರ್ ವಾಹನದ ಯಾವುದೇ ಮಾದರಿಯ ಖರೀದಿಗೆ ಕ್ಯಾಶ್‌ಬ್ಯಾಕ್ ಆಫರ್‌ನಲ್ಲಿ HDFC ಬ್ಯಾಂಕ್ ಕ್ರೆಡಿಟ್ ಕಾರ್ಡ್ ಮತ್ತು IDFC FIRST ಬ್ಯಾಂಕ್ ಕ್ರೆಡಿಟ್ ಕಾರ್ಡ್ ಬಳಸಿ ಪೈನ್ ಲ್ಯಾಬ್ಸ್ ಯಂತ್ರಗಳ ಮೂಲಕ ಮಾತ್ರ EMI ವಹಿವಾಟುಗಳ ಮೇಲೆ ಗರಿಷ್ಠ ₹5000 ವರೆಗಿನ 5% ಕ್ಯಾಶ್‌ಬ್ಯಾಕ್ ಸೇರಿದೆ. #ಈ ಯೋಜನೆ ಆಯ್ದ ಮಳಿಗೆಗಳಲ್ಲಿ ಮಾತ್ರ ಲಭ್ಯವಿದೆ. #ಕ್ಯಾಶ್‌ಬ್ಯಾಕ್ ಆಫರ್ ಮಾರ್ಚ್ 31, 2025 ರವರೆಗೆ ಮಾತ್ರ ಮಾನ್ಯವಾಗಿರುತ್ತದೆ. **ಹಣಕಾಸು ಯೋಜನೆಯು ಹಣಕಾಸುದಾರರ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟು ಏಕಪಕ್ಷೀಯ ವಿವೇಚನೆಗೆ ಒಳಪಟ್ಟಿರುತ್ತದೆ. **ಪೂರ್ವ ಸೂಚನೆ ಇಲ್ಲದೆ ಆಫರ್‌ಗಳನ್ನು ಬದಲಾಯಿಸಬಹುದು ಅಥವಾ ಹಿಂಪಡೆಯಬಹುದು. *ಸಾಲದ ಅನುಮೋದನೆಯು ಹಣಕಾಸುದಾರರ ಏಕಪಕ್ಷೀಯ ವಿವೇಚನೆಗೆ ಒಳಪಟ್ಟಿರುತ್ತದೆ ಮತ್ತು ಹೆಚ್ಚುವರಿ ದಾಖಲೆಗಳು ಬೇಕಾಗಬಹುದು. *ಬಡ್ಡಿ ದರಗಳು, ಡೌನ್ ಪೇಮೆಂಟ್‌ಗಳು ಮತ್ತು ಅವಧಿಯು ಅರ್ಜಿದಾರರ ಕ್ರೆಡಿಟ್ ಪ್ರೊಫೈಲ್ ಅನ್ನು ಅವಲಂಬಿಸಿರುತ್ತದೆ. *ಗ್ರಾಹಕರು ಕಡಿಮೆ ಬಡ್ಡಿ ದರವನ್ನು ಅಥವಾ 0 ಪ್ರಕ್ರಿಯೆ/ಕಾಗದಪತ್ರ ಶುಲ್ಕಗಳನ್ನು ಆಯ್ಕೆ ಮಾಡಬಹುದು. *ಈ ಯೋಜನೆಯನ್ನು ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹಾಯಕ ಡೀಲರ್‌ಗಳು ಒದಗಿಸುತ್ತಿದ್ದಾರೆ ಮತ್ತು ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಅಧಿಕೃತ ಡೀಲರ್‌ಗಳಿಂದ ಆಕ್ಟಿವಾ 110cc ಮತ್ತು ಆಕ್ಟಿವಾ 125cc ಖರೀದಿಯ ಮೇಲೆ ಪಡೆಯಬಹುದು. *ಈ ಆಫರ್‌ಗಳು ತಮಿಳುನಾಡು, ತೆಲಂಗಾಣ, ಕರ್ನಾಟಕ, ಕೇರಳ, ಆಂಧ್ರಪ್ರದೇಶದಲ್ಲಿ ಮಾತ್ರ ಅನ್ವಯಿಸುತ್ತವೆ. *ಪೂರ್ವ ಸೂಚನೆ ಇಲ್ಲದೆ ಆಫರ್‌ಗಳನ್ನು ಬದಲಾಯಿಸಬಹುದು ಅಥವಾ ಹಿಂಪಡೆಯಬಹುದು. **ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ. ಚಿತ್ರದಲ್ಲಿ ತೋರಿಸಿರುವ ಉತ್ಪನ್ನವು ಮಾರುಕಟ್ಟೆಯಲ್ಲಿ ಲಭ್ಯವಿರುವ ನಿಜವಾದ ಉತ್ಪನ್ನಕ್ಕಿಂತ ಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿರುವ ಬಿಡಿಭಾಗಗಳು ಪ್ರಮಾಣಿತ ಉಪಕರಣಗಳ ಭಾಗವಾಗಿರುವುದಿಲ್ಲ.

Honda Motorcycle & Scooter India Pvt. Ltd., Registered Office: Plot No. 1 , Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda.hmsi.in

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ADMISSION CORNER



PROPERTY CORNER

ಕ್ಲಾಸಿಫೈಡ್ಸ್





PUBLIC NOTICE

ಸಾರ್ವಜನಿಕ ಪ್ರಕಟಣೆ

To WHOMSOEVER IT may concern

ನನ್ನ ಕಕ್ಷಿದಾರರಾಗಿರುವ ಶ್ರೀ. ಸಂಭಾಶಿವಂ ಅವರ ಮಗನಾದ 43 ವರ್ಷ ವಯಸ್ಸುಳ್ಳ **ಶ್ರೀ. ಎಸ್. ಶಂಕರ್ ರವರು** ಶ್ರೀ. ಅಮರ್ ದೇವ್‌ರವರ ಮಗನಾದ 76 ವರ್ಷ ವಯಸ್ಸುಳ್ಳ ಶ್ರೀ. ಜಗದೀಶ್ ಪ್ರಕಾಶ್ ಗುಪ್ತಾ ರವರಿಂದ ಸೈಟ್ ನಂಬರ್ 69, NTI ನೌಕರರ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲೇಔಟ್, ವಿದ್ಯಾರಣ್ಯಪುರ, ನರಸೀಪುರ ಹಳ್ಳಿ, ಯಲಹಂಕ, ಬೆಂಗಳೂರು ಸ್ಥಳದಲ್ಲಿ ಹೊಂದಿರುವ ಖಾಲಿ ನಿವೇಶವನ್ನು ಅಮೂಲ್ಯವಾದ ಮಾರಾಟ ಪರಿಗಣೆಯೊಂದಿಗೆ ಖರೀದಿಸಲು ಇಚ್ಛಿಸಿದ್ದಾರೆ.

ಈ ಸ್ವತ್ತಿನ ಚಕ್ಕುಬಂದಿ:
ಪೂರ್ವದಲ್ಲಿ: ರಸ್ತೆ,
ಪಶ್ಚಿಮದಲ್ಲಿ: ಸೈಟ್ ನಂಬರ್ 100,
ಉತ್ತರದಲ್ಲಿ: ಸೈಟ್ ನಂಬರ್ 70,
ದಕ್ಷಿಣದಲ್ಲಿ: ಸೈಟ್ ನಂಬರ್ 68.

ಯಾವುದೇ ವ್ಯಕ್ತಿಯು ಈ ಆಸ್ತಿಯ ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಕ್ಕು, ಹಕ್ಕು ಹಸ್ತಾಂತರ, ಆಸಕ್ತಿ, ಆಗ್ರಹ, ಬೇಡಿಕೆ, ಆಕ್ಷೇಪಣೆ ಇತ್ಯಾದಿ ಇದ್ದಲ್ಲಿ, ಅವರು ಈ ಸೂಚನೆ ಪ್ರಕಟಣೆಯಾದ **ದಿನಾಂಕದಿಂದ 15 ದಿನಗಳ** ಒಳಗೆ ಕೆಳಗೆ ಸಹಿ ಮಾಡಿದವರಿಗೆ ಲಿಖಿತವಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬೇಕು, ಇಲ್ಲದಿದ್ದಲ್ಲಿ ನನ್ನ ಕಕ್ಷಿದಾರರು ಈ ಹೇಳಿದ ಆಸ್ತಿಯನ್ನು ಖರೀದಿಸಲು ಮುಂದುವರೆಯುವರು.

Ranganath Rangegowda,
Advocate,
We Are Law Associates
Cubbonpet, Bangalore,
Mob. 988073 0325

ELCITA
ELECTRONICS CITY INDUSTRIAL TOWNSHIP AUTHORITY
No. 7(P) West Phase, Electronics City Bangalore : 560 100

NOTICE
AUCTION SALE OF USED VEHICLE.

ELCITA invites auction bids for the sale one **Sweeping Machine (2019 model)** in running condition, parked at # 7 (P) ELCIA Complex, Electronics City West Phase Bangalore : 560100.
For details visit: www.elcita.in
For Vehicle inspection contact Mr Srinivas RN (9886039113) or srinivas.rn@elcita.in
Last date of submission of auction documents along with demand draft for earnest money: 10-04-2025 up to 5pm.

PUBLIC NOTICE
To Place your Classified Ads Contact
9731810277

REAL ESTATE SELLING

Sites

Anjanapura

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call: 9964627255

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BDA SITE for Sale, Residential and Prime Commercial, Banashankari 6th Stage, Banashankari 5th Stage, Uttarahalli, Rajarajeshwarinagara, 30x40, 40x60, 50x80. 9916592400

BANASHANKARI 6TH Stage, 9th Block, BDA, 30x40sft, West Facing, Park attached, Rs.1.08Crore. Owner 9845259332

Bannerghatta Road

FOR SALE .north facing site in a private layout 50x75.. B khatha with shed rental 30k. Basvanapura. Bannerghatta road Price 5000 rs/ sqft .Slightly negotiable. Contact 9242444999 Brokers excuse..

Basavanagudi

SALE BDA 30x50 South Face 30ft Road BSK 1st Stage Hanumanth Nagar Good Location 8880014616

Girinagar

CORNER SITE in GIRINAGAR 4th phase Measuring 2600 Square feet for SALE. 5.1 Crores. Genuine buyers contact: 9611843935.

Jayanagar

BDA SITE for Sale, Residential and Prime Commercial, Jayanagara, JP Nagara, BMT Layout, HSR Layout, Koramangala 30x40, 40x60, 50x80. 9916592400

J P Nagar

JPNAGAR 1ST Phase, 2,040 SqFt. BDA Approved, SE Corner Site, Navodaya Layout, beside Banashankari Metro and behind Sobha Dewflower Apartment 16,500/ SqFt. 9900955337

Kanakapura Road

BDA SITE for Sale, Residential and Commercial, Anjanapura, BDA Layout, Narayananagara, BCMC Layout, Judicial Layout, Vakil Garden, Kanakapura Road, 30x40, 40x60, 50x80. 9916592400

BANASHANKARI ANJANAPURA BDA Sites Sale. 3,900 Sqft Site Sale Jayanagar Housing Layout 7,000/- Call-9740150364 /8884707773

Kempegowda Layout

BDA-SITE FOR-SALE 20x30 and 40x60 at Good Location In Nadaprabhu Kempegowda Layout Call:7676900174 6363496142

FOR SALE BDA allotted and BDA auction @ Kempegowda Layout Near to Chalagatta metro station Mysore road. 30x40, 40x60, 50x80 and 15000 sqft Corner plot available. 9916592400

KEMPEGOWDA LAYOUT Site Sale 4th Block #4160 40X60, 7th Block #2792 30X40 Call: 9900444944/ 9844262220

Out-Station

KHB SITE 60x40 East Facing, Housing Board colony (Kempegowda layout) Near citizen public school Nanjanagudu. Owner: 8310030380

Rajarajeshwari Nagar

41X40 W/S Corner Site sale University Layout, Rajarajeshwarinagar. Beautiful location, ₹19000/- Sqft. Direct Owner. 9591013777

Vishweshwariah Layout

40X60 NORTH FACE HIG,KHB LAYOUT Satellite Club Circle Vishweshwaraiah Layout 1st Block 100 Feet Kengeri Main Road, Behind Semi Commercial Site Sale Reasonable Price Call:9945191143 9945694783.

"VISHVESWARAIAH 1ST-BLOCK 30x40 South/ West facing Site Sale Near 100 ft Road Genuine Buyers only: 9845268611"

Udupi

KHB SITE 1725 SQFT HEBRI TOWN AMIDST NATURE WESTERN GHATS 26 LAKHS OWNER 9606866368

Commerical

J C Road

PRIME COMMERCIAL site 45'x38' on JC Road for Sale @ sub reg value. Clear title. GN Properties: 9845044179, 9845036855.

Joint Development

Begur

BEGUR MICO LAYOUT 43 Guntas SALE Occupied Land, Quoting 33% Less than Market Price. 9481801053

House

Banaswadi

INDEPENDENT HOUSE SALE Constructed on BDA Site 30x40 (2700.sft) (G+2)2BHK each floor, OMBR Layout, near Palloti Church. Call: 9480618382.

J P Nagar

SALE JPNAGAR 2nd Phase Corner Property 30x40 Duplex-House 3BHK 1700sqft Granite-flooring Price 4cr Classic Estates 9845302589

Srirampura

HOUSE FOR SALE in Sriramapuram, Land measuring 1500 sqft. Building 4000+. Ground+2. Covered Parking for 2 Cars. Contact: 9500995889, 9171918285.

REAL ESTATE BUYING

Joint Development


General

WANTED RESIDENTIAL Converted Land 1 to 50 Acres for JD/ SALE BBMP Limits Apts. Above 40ft Road Property Champions: 9845950996

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654



SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 12.50 CRORES
Call: 89713-79031 / 96111-99900

BDA-SITE WANTED @ Banashankari 6th Stage any Block 30x40, 40x60, 50x80 Immediate Settlement Contact: 98455-55666

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ADVT


ವಿದ್ಯಾನಿಕೇತನ್ ಪಬ್ಲಿಕ್ ಸ್ಕೂಲ್‌ನ ಯಶೋಗಾಥೆ
ಕಲಿಕೆಗೊಂದು ಉತ್ತಮ ಶಾಲೆ ವಿದ್ಯಾನಿಕೇತನ್ ಪಬ್ಲಿಕ್ ಸ್ಕೂಲ್



ಬೆಂಗಳೂರಿನ ಸುಂಕದಕಟ್ಟೆಯಲ್ಲಿರುವ ವಿದ್ಯಾನಿಕೇತನ್ ಪಬ್ಲಿಕ್ ಸ್ಕೂಲ್ ಅತ್ಯಂತ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ಖ್ಯಾತ ಶಿಕ್ಷಣ ಸಂಸ್ಥೆ ಎಂಬ ಹೆಗ್ಗಳಿಕೆಯನ್ನು ಪಡೆದಿದೆ. 1990ರಲ್ಲಿ ಪ್ರಾರಂಭಗೊಂಡು 35 ವರ್ಷಗಳನ್ನು ಯಶಸ್ವಿಯಾಗಿ ಪೂರೈಸುತ್ತಿರುವ ಈ ಶಿಕ್ಷಣ ಸಂಸ್ಥೆಯು ನರ್ಸರಿಯಿಂದ 10ನೇ ತರಗತಿಯವರೆಗೂ ರಾಜ್ಯ ಪಠ್ಯಕ್ರಮದಲ್ಲಿ ನಡೆಯುತ್ತಿದ್ದು ಈ ಶಾಲೆಯು ಸಾಧನೆಯ ಮೂಲಕ ಸುತ್ತ ಮುತ್ತಲ ಬಡಾವಣೆಯ ಜನರಿಂದ ಆಕರ್ಷಿತಗೊಂಡು 3 ಮಕ್ಕಳಿಂದ ಪ್ರಾರಂಭವಾಗಿ ಇಂದು 1800ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಈಗ ಇಲ್ಲಿ ವ್ಯಾಸಂಗ ಮಾಡುತ್ತಿರುವುದು ವಿದ್ಯಾರ್ಥಿಗಳ ಪಾಲಿಗೆ ಜ್ಞಾನಸುದೆಯಾಗಿರುವ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್ ಬೃಹತ್ ವೃಕ್ಷವಾಗಿ ಬೆಳೆಸಿದ ಕೀರ್ತಿಯು ಅಧ್ಯಕ್ಷರಾದ ಶ್ರೀಮತಿ ಗಂಗಮ್ಮ ಡಿ. ಕಾರ್ಯದರ್ಶಿಗಳಾದ ಶ್ರೀ ಧನಂಜಯ ಕೆ.ಹೆಚ್. ಹಾಗೂ ಗೌರವ ಅಧ್ಯಕ್ಷರಾದ ಶ್ರೀ ಸಿ. ಕೃಷ್ಣಪ್ಪ ರವರುಗಳಿಗೆ ಸಲ್ಲುತ್ತದೆ. ಈ ಸಂಸ್ಥೆಯು ಇವರ ಕನಸಿನ ಕೂಸು. ಇಲ್ಲಿನ ಆಡಳತ ಮಂಡಳಿಯು ಅತ್ಯುತ್ತಮ ಗುಣಮಟ್ಟ ಹಾಗೂ ಅನುಭವಿ ತಜ್ಞರ ತಂಡವನ್ನು ಹೊಂದಿದೆ. ಶಾಲಾ ಆಡಳಿತ ಮಂಡಳಿಯವರ ಮಾರ್ಗದರ್ಶನದಿಂದ ಪರಿಣಿತ ಉಪನ್ಯಾಸಕರ ಬಳಗ ಅವಿರತ ಶ್ರಮದೊಂದಿಗೆ ಉತ್ತಮ ಫಲಿತಾಂಶ ತರುವಲ್ಲಿ ಶ್ರಮಿಸುತ್ತಿದೆ. ಇದುವರೆಗೆ **S.S.L.C.** ಪರೀಕ್ಷೆಯಲ್ಲಿ ಸುಮಾರು 26 ಬ್ಯಾಚುಗಳಲ್ಲಿ ಶೇಕಡ ನೂರಕ್ಕೆ ನೂರರಷ್ಟು ಫಲಿತಾಂಶ ಬಂದಿರುತ್ತದೆ. 2021–22ನೇ ಸಾಲಿನಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ 625 ಕ್ಕೆ 625 ಅಂಕ ಪಡೆದ ವಿದ್ಯಾರ್ಥಿ ಚಂದು ಎಸ್. ಹಾಗೂ 625 ಕ್ಕೆ 623 ಅಂಕ ಪಡೆದ ಕೀರ್ತನ ಕೆ.ಎನ್. ವಿದ್ಯಾರ್ಥಿ ರಾಜ್ಯಕ್ಕೆ 4ನೇ ಸ್ಥಾನವನ್ನು ಪಡೆಯುವ ಮೂಲಕ ಶಾಲೆಗೆ ಕೀರ್ತಿ ತಂದಿರುತ್ತಾರೆ. ನಮ್ಮ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ರಾಜ್ಯ, ದೇಶ, ವಿದೇಶಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವುದು ವಿಶೇಷ. ಈ ಸಂಸ್ಥೆಯು ಉತ್ತುಂಗಕ್ಕೇರಲು ಸದಾ ಮಾರ್ಗದರ್ಶಕರು ಮತ್ತು ಪ್ರೋತ್ಸಾಹಿ ಪೋಷಕರುಗಳು ಕಾರಣಕರ್ತರಾಗಿರುತ್ತಾರೆ.



ನಮ್ಮ ಶಾಲೆಯಲ್ಲಿ ಕಲಿಯುವ ಮಕ್ಕಳು ಬಡ ಹಾಗೂ ಮಧ್ಯಮ ವರ್ಗದವರು. ಮಕ್ಕಳು ಜೀವನದಲ್ಲಿ ಅನೇಕ ಸವಾಲುಗಳನ್ನು ಮೆಟ್ಟಿ ನಿಲ್ಲಬೇಕು. ಗುರುಗಳಿಂದ ದೊರೆತ ಮಾರ್ಗದರ್ಶನದಿಂದ ವಿದ್ಯಾರ್ಥಿಗಳು ಜೀವನದಲ್ಲಿ ಮೌಲ್ಯಾಧಾರಿತ ಶಿಕ್ಷಣದ ಜೊತೆಗೆ ಒಳ್ಳೆಯ ಸಂಸ್ಕಾರವನ್ನು ಪಡೆದು ಪ್ರತೀದಿನ ಓದಿಗೆ ಪ್ರೇರೇಪಿಸಬೇಕು. – **ಶ್ರೀಮತಿ ಗಂಗಮ್ಮ ಡಿ.** ಅಧ್ಯಕ್ಷರು.



ನಮ್ಮನ್ನು ಎಲ್ಲರೂ ಕೈ ಬಿಟ್ಟರೂ, ನಾವು ಕಲಿತಂತಹ ವಿದ್ಯೆ ಮತ್ತು ದುಡಿಮೆ ಕೈ ಬಿಡೋಲ್ಲ.
– **ಶ್ರೀ ಧನಂಜಯ ಕೆ.ಹೆಚ್.** ಕಾರ್ಯದರ್ಶಿ




ನಾನು ಸುಮಾರು 10 ಶಾಲೆಗಳನ್ನು ನೋಡಿದಾಗ ನನಗೆ ತುಂಬಾ ಇಷ್ಟವಾದ್ದದು ವಿದ್ಯಾನಿಕೇತನ್ ಶಾಲೆ. ಈ ಶಾಲೆಯ ಶಿಕ್ಷಕರು ರಾತ್ರಿ 10 ಗಂಟೆಯ ನಂತರವೂ ಪೋಷಕರ ಕರೆಗಳಿಗೆ ಸ್ಪಂದಿಸುತ್ತಾರೆ.
– **ಶ್ರೀಮತಿ ಡಿ. ಅನ್ನಪೂರ್ಣ** ಪೋಷಕರು.



2004ರಲ್ಲಿ S.S.L.C. ವಿದ್ಯಾರ್ಥಿಯಾಗಿದ್ದು ಶುಲ್ಕದಲ್ಲಿ ಬಹಳ ರಿಯಾಯಿತಿ ನೀಡಿದ್ದರು. ಓದಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಿದ್ದು ಎಂದರೆ ಈ ಶಾಲೆ. ನಾವು ಏನೇ ತಪ್ಪು ಮಾಡಿದರು ಅದನ್ನು ತಿದ್ದಿ ಒಳ್ಳೆ ಮಾರ್ಗದರ್ಶನ ನೀಡಿದ್ದರಿಂದ ನಾನು ಇಂದು ಉತ್ತಮ ಸ್ಥಾನದಲ್ಲಿರಲು ಕಾರಣ.
– **ಶ್ರೀ ಬಿ.ಜಿ. ದಯಾನಂದ್** ಭೂಗರ್ಭ ಶಾಸ್ತ್ರಜ್ಞರು, ಬೆಂಗಳೂರು ವಿಶ್ವವಿದ್ಯಾಲಯ, ಹಳೆಯ ವಿದ್ಯಾರ್ಥಿ



ಶಿಕ್ಷಕರು ನನಗೆ ತುಂಬಾ ಸಹಕಾರಿಯಾಗಿದ್ದರು. ನಾವು ಯಾವುದೇ ಸ್ಪರ್ದೆಯಲ್ಲಿ ವಿಜೇತರಾದರೆ ತುಂಬಾ ಸಂತೋಷಪಡುತ್ತಿದ್ದವರು ಶಿಕ್ಷಕರು. ನಾವು ಏಳಿಗೆಯಾಗಬೇಕಾದರೆ ಶಿಕ್ಷಕರ ಪಾತ್ರ ಬಹಳ ಮುಖ್ಯ ಅಂತ ಶಿಕ್ಷಣ ಈ ಶಾಲೆಯಲ್ಲಿ ನನಗೆ ಸಿಕ್ಕಿದೆ ಎಂದು ಹೆಮ್ಮೆ ಪಡುತ್ತೇನೆ. ಶಿಕ್ಷಕರು ಒಳ್ಳೆಯ ವಿಷಯವನ್ನೇ ನಮಗೆ ಬೋದಿಸುತ್ತಿದ್ದರು. ಅದನ್ನು ಕೇಳಿದ್ದಕ್ಕೆ ಇಂದು ನಮಗೆ ಒಳ್ಳೆಯದಾಗಿದೆ.
– **ಶ್ರೀ ಜೆ. ಮಂಜುನಾಥ್** ಪೊಲೀಸ್ ಇನ್ಸ್‌ಪೆಕ್ಟರ್‌ಹಳೆಯ ವಿದ್ಯಾರ್ಥಿ.




ನಾನು ಈ ಶಾಲೆಯಲ್ಲಿ ಓದಿ ಒಳ್ಳೆ ಬುದ್ಧಿ, ನಡತೆ, ಹಿರಿಯರಿಗೆ ಗೌರವ, ತಂದೆ ತಾಯಿಯರಿಗೆ ಪ್ರೀತಿ ಇವೆಲ್ಲವನ್ನು ಈ ಶಾಲೆ ಕಲಿಸಿತು. ಇಂದು ನಾನು ಕಿರುತೆರೆ ನಟಿಯಾಗಿ ತುಂಬಾ ಸುಖವಾದ ಜೀವನವನ್ನು ಮಾಡುತ್ತಿರುವುದಕ್ಕೆ ವಿದ್ಯಾನಿಕೇತನ ಸ್ಕೂಲೇ ಕಾರಣ.
– **ಚಂದನ ಸಂಕೇತ್** ಕಿರುತೆರೆ ನಟಿ, ಹಳೆಯ ವಿದ್ಯಾರ್ಥಿನಿ



ನನ್ನ ಮಗಳು 9ನೇ ತರಗತಿ. ಶಾಲೆಗೂ ನನಗೂ 9 ವರ್ಷದಿಂದ ಒಡನಾಟವಿದೆ. ಶಿಸ್ತಿನಿಂದ ಕೂಡಿರುವ ಶಾಲೆ, ಬೇರೆ ಶಾಲೆಗಳನ್ನು ಹೋಲಿಕೆ ಮಾಡಿದರೆ ಈ ಶಾಲೆಯಲ್ಲಿ ಅತ್ಯಂತ ಕಡಿಮೆ ಶುಲ್ಕದಲ್ಲಿ ಒಳ್ಳೆ ವಿದ್ಯೆ ಕೊಡುತ್ತಾರೆ ವರ್ಷಕ್ಕೆ 4 ಬಾರಿ ಶುಲ್ಕ ಕಟ್ಟಲು ಅವಕಾಶ ಕಲ್ಪಿಸಿಕೊಡುತ್ತಾರೆ.
–**ವಿಜಯ್‌ಕುಮಾರ್** ಪೋಷಕರು



ನಾನು L.K.G. ಯಿಂದ 10ನೇ ತರಗತಿಯವರೆಗೂ ಇಲ್ಲೇ ಓದಿದ್ದು S.S.L.C. ಪರೀಕ್ಷೆ ಸಮಯದಲ್ಲಿ ಬೆಳಿಗ್ಗೆ 8 ರಿಂದ ಸಂಜೆ 6 ರ ತನಕ ಶಿಕ್ಷಕರು ಪಾಠವನ್ನು ಹೇಳಿಕೊಡುತ್ತಿದ್ದರು ಇದರಿಂದ ಪರೀಕ್ಷೆಯಲ್ಲಿ ಬಹಳ ಉಪಯೋಗವಾಯಿತು. ಶಿಕ್ಷಕರಿಂದ ಬಹಳ ಸಹಕಾರ ಸಿಕ್ಕಿದೆ ನಾನು ಇವತ್ತು ಡಾಕ್ಟರ್ ಆಗಿದ್ದೇನೆ ಎಂದರೆ ಈ ಶಾಲೆಯ ಕೊಡುಗೆನೇ ತುಂಬಾ.
– **ಡಾ॥ ಗಜಲಕ್ಷ್ಮೀ ಎಸ್.ಹೆಚ್.** ಮಕ್ಕಳ ವೈದ್ಯರು, ಕಲ್ಕತ್ತ.



ಬೆಂಗಳೂರು ಜಿಲ್ಲಾ ಪಂಚಾಯಿತಿ ಸಿಇಒ ಕೆ.ಎಸ್. ಲತಾಕುಮಾರಿ ಅಭಿಮತ

‘ಮಹಿಳೆಗೆ ಸೂಕ್ತ ಪ್ರಾತಿನಿಧ್ಯ ಸಿಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳೆಯರಿಗೆ ಸಂಸತ್ತು, ವಿಧಾನಸಭೆಗಳ ಜೊತೆಗೆ, ವಿಶ್ವವಿದ್ಯಾಲಯಗಳ ಕುಲಪತಿ ಮತ್ತು ಕುಲಸಚಿವ ಹುದ್ದೆಗಳಲ್ಲೂ ಸೂಕ್ತ ಪ್ರಾತಿನಿಧ್ಯ ಕಲ್ಪಿಸಬೇಕು’ ಎಂದು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಸ್.ಲತಾಕುಮಾರಿ ಹೇಳಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯ (ಬಿಸಿಯು) ಶುಕ್ರವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದರು.

‘ಮಹಿಳೆಯರಲ್ಲಿ ಉನ್ನತ ಶಿಕ್ಷಣ ಪಡೆಯುವವರ ಪ್ರಮಾಣ ಕಡಿಮೆ. ಇಂಥ ಸಮಯದಲ್ಲಿ ಬಿಸಿಯುನಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚಿನ ಉತ್ತೇಜನ ನೀಡುತ್ತಿರುವುದು ಉತ್ತಮ ಬೆಳವಣಿಗೆ’ ಎಂದು ಪ್ರಶಂಸಿಸಿದರು.



ಕಾರ್ಯಕ್ರಮದಲ್ಲಿ ಲತಾಕುಮಾರಿ, ಪದ್ಮಿನಿ ಪ್ರಸಾದ್ ಮತ್ತು ಶ್ವೇತಾ ರವಿಶಂಕರ್ ಅವರನ್ನು ಸನ್ಮಾನಿಸಲಾಯಿತು

ಲೈಂಗಿಕ ಶಿಕ್ಷಣ ತಜ್ಞೆ ಡಾ. ಪದ್ಮಿನಿ ಪ್ರಸಾದ್ ಮಾತನಾಡಿ, ‘ಹೆಣ್ಣು ಭ್ರೂಣ ಹತ್ಯೆಯಂತಹ ಕ್ರೌರ್ಯವನ್ನು ಎಲ್ಲರೂ ಖಂಡಿಸಬೇಕು. ಇಂಥ ಕೃತ್ಯದ ಮೂಲಕ ಹುಟ್ಟುವ ಮೊದಲೇ ಮಹಿಳೆಗೆ ಮರಣ ದಂಡನೆ ವಿಧಿಸುವಂತಹ ಅಮಾನವೀಯ ಪ್ರವೃತ್ತಿಗೆ ಸಂಪೂರ್ಣ ವಿರಾಮ ಹಾಕಬೇಕು’ ಎಂದು ಸಲಹೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬಿಸಿಯು ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಮಾತನಾಡಿ, ‘ಸ್ತ್ರೀ ಸಬಲೀಕರಣದ ಗುರಿ ಸಾಧನೆಗೆ ಶಿಕ್ಷಣ ಪೂರಕವಾಗಬಲ್ಲದು’ ಎಂದು ಪ್ರತಿಪಾದಿಸಿದರು.

‘ನಮ್ಮ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಪೈಕಿ ಹೆಣ್ಣು ಮಕ್ಕಳೇ ಅಧಿಕವಾಗಿದ್ದು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯಲ್ಲೂ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ’ ಎಂದರು.

ಬೆಂಗಳೂರು ವಕೀಲರ ಸಂಘದ ಖಜಾಂಚಿ ಶ್ವೇತಾ ರವಿಶಂಕರ್ ಮಾತನಾಡಿದರು. ಕುಲಸಚಿವರಾದ ಟಿ.ಜವರೇಗೌಡ, ಪ್ರೊ.ಬಿ.ರಮೇಶ್ ಉಪಸ್ಥಿತರಿದ್ದರು.

ಮೂವರು ಅತಿಥಿಗಳು ಹಾಗೂ ಬಿಸಿಯು ಅಧೀಕ್ಷಕಿ ಪದ್ಮಮ್ಮ ಅವರನ್ನು ಸನ್ಮಾನಿಸಲಾಯಿತು. ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಮೂವರು ಸಾಧಕಿಯರಿಗೆ ಗೌರವ

ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರಿನಲ್ಲಿ ಮುಂದಿನ ವರ್ಷದಿಂದ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಪತ್ರಿಕೋದ್ಯಮದ ಮೊದಲ ಛಾಯಾಗ್ರಾಹಕಿ ಹೋಮಿ ವ್ಯಾರಾಲ ಮತ್ತು ಮೊದಲ ಯುದ್ಧ ವರದಿಗಾರ್ತಿ ಪ್ರಭಾ ದತ್ ಅವರ ಹೆಸರಲ್ಲಿ ಪ್ರತಿ ವರ್ಷ ಪ್ರಶಸ್ತಿ ನೀಡಬೇಕು. ಈ ಎರಡೂ ಪ್ರಶಸ್ತಿಗಳಿಗೆ ತಲಾ ₹ 1 ಲಕ್ಷ ಪ್ರಶಸ್ತಿ ಮೊತ್ತವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಲಿದ್ದಾರೆ’ ಎಂದು ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ತಿಳಿಸಿದರು.

ಕರ್ನಾಟಕ ಪತ್ರಕರ್ತೆಯರ ಸಂಘ ಶುಕ್ರವಾರ ಆಯೋಜಿಸಿದ್ದ ಮಹಿಳಾ ದಿನಾಚರಣೆ ಮತ್ತು ಸಾಧಕಿಯರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಹೋಮಿ ವ್ಯಾರಾಲ, ಪ್ರಭಾ ದತ್, ಕಮಲಾ ಮಂಕೇಕರ್ ಅವರು ಭಾರತೀಯ ಪತ್ರಿಕಾ ಕ್ಷೇತ್ರದಲ್ಲಿ ಯಾವತ್ತೂ ಅಳಿಸಲಾಗದ ಹೆಜ್ಜೆ ಗುರುತುಗಳನ್ನು ದಾಖಲಿಸಿರುವುದು ಮಾತ್ರವಲ್ಲ, ಇಂದಿನ ಯುವ ಪತ್ರಕರ್ತೆಯರಿಗೆ ಸ್ಫೂರ್ತಿಯಾಗಿದ್ದಾರೆ.



ಕರ್ನಾಟಕ ಪತ್ರಕರ್ತೆಯರ ಸಂಘ ಶುಕ್ರವಾರ ಆಯೋಜಿಸಿದ್ದ ಸಮಾರಂಭದಲ್ಲಿ ಕೆ.ವಿ. ಪ್ರಭಾಕರ್ ಅವರು ಪದ್ಮಾ ಕೋಲಾರ, ಪೂರ್ಣಿಮಾ ರವಿ ಮತ್ತು ಸಬೀಹಾ ಬಾನು ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು ಪ್ರಜಾವಾಣಿ ಚಿತ್ರ

ಪುರುಷ ಪ್ರಾಬಲ್ಯವೇ ತುಂಬಿದ್ದ ಪತ್ರಿಕೋದ್ಯಮದಲ್ಲಿ ಈ ಮೂವರೂ ಪತ್ರಿಕೋದ್ಯಮದ ಮಾದರಿಗಳಾಗಿ ಉಳಿದಿದ್ದಾರೆ’ ಎಂದರು.

‘ತಂತ್ರಜ್ಞಾನದ ಕಾರಣಕ್ಕೆ ಮಾಧ್ಯಮ ಕ್ಷೇತ್ರ ಸಹ ಬೆಳೆದಿದೆ. ಪುರುಷರಂತೆ ಮಹಿಳೆಯರಿಗೂ ಹೆಚ್ಚೆಚ್ಚು ಅವಕಾಶಗಳು ಒದಗುತ್ತಿವೆ. ಮಾಧ್ಯಮಗಳ ನಿರ್ಣಾಯಕ ಹುದ್ದೆಗಳಲ್ಲಿ ಮಹಿಳೆಯರೇ ಇಲ್ಲ ಎನ್ನುವ ಪರಿಸ್ಥಿತಿ ನಿಧಾನಕ್ಕೆ ಬದಲಾಗುತ್ತಿದೆ. ‘ಓ ವುಮೇನಿಯಾ’ ಸಂಸ್ಥೆ ನೀಡಿರುವ ವರದಿಯ ಪ್ರಕಾರ ಮಾಧ್ಯಮಗಳಲ್ಲಿ ಶೇಕಡ 13ರಷ್ಟು ಪ್ರಮುಖ ಹುದ್ದೆಗಳಲ್ಲಿ ಈಗ ಪತ್ರಕರ್ತೆಯರು ಇದ್ದಾರೆ’ ಎಂದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರಲ್ಲೇ ಪತ್ರಿಕಾ ಛಾಯಾಗ್ರಾಹಕಿ ಮತ್ತು ಯುದ್ಧ ವರದಿಗಾರ್ತಿಗೆ ಪ್ರತಿ ವರ್ಷ ದತ್ತಿ ಪ್ರಶಸ್ತಿ ನೀಡಲಾಗುವುದು’ ಎಂದು ರಾಜ್ಯ ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಪದ್ಮಾ ಶಿವಮೊಗ್ಗ ಘೋಷಿಸಿದರು.

ಇದೇ ವೇಳೆ ಬೆಂಗಳೂರು ದೂರದರ್ಶನ ಕೇಂದ್ರದ ವಾರ್ತಾ ವಾಚಕಿ ಸಬೀಹಾ ಬಾನು, ಪತ್ರಿಕಾ ಛಾಯಾಗ್ರಾಹಕಿ ಪೂರ್ಣಿಮಾ ರವಿ, ಸಫಾಯಿ ಕರ್ಮಚಾರಿಗಳ ಹೋರಾಟಗಾರ್ತಿ ಪದ್ಮಾ ಕೋಲಾರ ಅವರಿಗೆ ಪತ್ರಕರ್ತೆಯರ ಸಂಘದ ಪ್ರಶಸ್ತಿ ಪ್ರದಾನ ಮಾಡಲಾಯಿತು.

ರಾಜ್ಯ ಪತ್ರಕರ್ತೆಯರ ಸಂಘದ ಪ್ರಧಾನ ಕಾರ್ಯದರ್ಶಿ ಮಂಜುಶ್ರೀ ಕಡಕೋಳ, ಪತ್ರಕರ್ತೆ ವಿಜಯಾ, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಸಂಘದ ಪದಾಧಿಕಾರಿಗಳು ಹಾಜರಿದ್ದರು.

PUBLIC NOTICE

Our client (“**Client**”) intends to purchase the properties described in the Schedule hereunder from the owners (“**Land Owners**”) Any person/s, firms, societies, institutions (corporate or otherwise) claiming to have any right, title, interest, benefit, claim or demand in, or to, the Schedule Property and/or any part thereof, by way of sale, agreement, exchange, gift, grant, lease, tenancy, license, assignment, mortgage, charge, lien, trust, family arrangement / settlement, encumbrance, inheritance, bequest, easement, possession, maintenance, development rights, order / decree / judgment of any Court / Statutory Authority, agreement, understanding or otherwise howsoever, to the Schedule Property is required to intimate the same in writing together with true copies of all documentary proof in support thereof, to the undersigned, at the address given below, within **Fourteen (14) days** from the date of publication of this notice, failing which, our clients shall proceed ahead to purchase the Schedule Property and no further claims in respect of the Schedule Property would be considered any time thereafter.

SCHEDULE PROPERTY

ALL THAT PIECE AND PARCEL of the below detailed land parcels, all situated at Byranahalli Village, Kasaba Hobli, Nelamangala Taluk, Bangalore Rural District, Karnataka, and bounded by :

Sl. No.	Sy. Nos of Byranahalli Village	Land Area	Boundaries (East : E, West : W, North : N & South : S)
1.	106	21 Guntas	E : Land in Survey No. 109 W : Land in Survey No. 123 N : Land in Survey No. 105 S : Land in Survey No. 109
2.	110/1	02 acres 20 Guntas including 04.08 Guntas of Kharab land	E : Land belonging to Mrs. Channamma S No 111/1. W : Land in Survey No. 122 N : Land in Survey No. 109 S : Remaining portion of land in Survey No.110
3.	112/2	03 Guntas	E : Land in Survey No. 112/3 W : Land in Survey No. 111/1 N : Land in Survey No. 112/3 S : Land in Survey No. 112/3
4.	112/4	01 Acre 15 Guntas	E : Land in Survey No. 112/5 & 112/6 W : Land in Survey No.112/7 N : Land in Survey No.109/2 S : Land in Survey No. 112/4 remaining land
5.	112/5	01 Acre	E : Land in Survey No. 113/8 W : Land in Survey No. 112/4 N : Land in Survey No. 109/1 S : Land in Survey No. 112/1 New Number : 112/6
6.	112/6	01 acre 21 Guntas	E : Land in Survey No.113/7 and 113/8 W : Land in Survey No. 112/4 N : Land in Survey No. 112/5 S : Land in Survey No. 112/1
7.	112/7	01 Acre 12 Guntas	E : Land in Survey No. 112/4 W : Land in Survey No. 111/1 N : Land in Survey No. 109/2 S : Land in Survey No. 112/3
8.	122/3	01 Acre 36 Guntas and inclusive of 16 Guntas of Kharab	E : Land in Survey No.110/1 W : Land in Survey No.122/2 N : Land in Survey No.131 S : Land in Survey No 86/2 & 122/3
9.	111/1	02 Acres 13.08 Guntas situated	E : Land in Survey No. 112/1 W : Land in Survey No : 110/1 N : Land in Survey No. 109 S : Land in Survey No. 111/2
10.	109/2	02 Acres 17 Guntas including 04 Guntas of Kharab land	E : Land in Survey No.109/1 W : Land in Survey No.106 N : Water Channel S : Land in Survey No. 112/4
11.	109/1	33 Guntas including 01 Guntas of Kharab	E : Lake W : Land in Survey No.109/2 N : Water Channel S : Land in Survey No. 112/5, 113/8 & 113/9
12.	113/7	01 Acre 28 Guntas	E : Land in Survey No.113/5 W : Land in Survey No.112/1 N : Land in Survey No.113/8 & 113/9 S : Land in Survey No. 113/6
13.	113/8	01 Acre 19 Guntas	E : Land in Survey No. 113 / 9 W : Land in Survey No.112 / 5 New Number : 112 / 6 N : Land in Survey No.109 / 1 S : Land in Survey No. 113 / 7

Total Extent : 18 Acre 38.08 Guntas (758.08 Guntas)

FoxMandal Solicitors & Advocates

Mr. S T Prashantha Kumar, Senior Partner
Mr. Mali Pavan Gowda, G-Head
Fox Mandal & Associates, Solicitors & Advocates,
FM House, 6/12, Primrose Road, Bangalore - 560025, Karnataka, India
Phone: +91 80 2559 5911 e-mail: prashantha.kumar@foxmandal.in
Dated: 29.03.2025

CRPF Montessori School,
GC CRPF, Yelahanka, Bengaluru-560064
Ph-080-29567730

WALK IN INTERVIEW

Name of Post	Number of Vacancies	Salary	Date of Walk in Interview	Eligibility Conditions for Teacher
Head Mistress	01	Rs.15000/-	04/04/2025 1000 Hrs	1. First preference . Nursery trained teachers who are matriculate and above having Nursery trained Diploma from a recognized Training Institution 2. Second preference. JBT / trained graduates / trained post-graduates.

CRPF Montessori School,
GC CRPF, Yelahanka, Bengaluru-560064
Ph-080-29567730

WALK IN INTERVIEW

Name of Post	Number of Vacancies	Salary	Date of Walk in Interview	Eligibility Conditions for Teacher
Teacher	11	Rs.13000/-	11/04/2025 1000 Hrs	1. First preference: Nursery trained teachers who are matriculate and above having Nursery trained Diploma from a recognized Training Institution 2. Second preference: JBT / trained graduates /trained post-graduates.
Nanny	10	Rs. 8000/-	11/04/2025 1000 Hrs	10th Pass.



FARNAZ

FURNITURE WAREHOUSE SALE

DIVISION OF SME TRADING

121/3 - 121/8, Near Alanoville Villa, Kannur Village & Post Bengaluru East Bengaluru - 560077.

LOCATE US

BIGGEST UGADI MARCH END SALE

LIVING ROOM | BEDROOM | DINING ROOM | OFFICE | OUTDOOR | MATTRESSES | HOME DECOR & MORE



IMMEDIATE DELIVERY | FREE INSTALLATION | PAY IN EASY INSTALLMENTS AT NO EXTRA COST | HDFC BANK We understand your world | BAJAJ FINSERV | EMI

+91 9901018963 / 8197131010 www.smetrading.in

ಜಿಲ್ಲಾ ಘಟಕದ ಅಧ್ಯಕ್ಷರ 'ಕೈ' ಬಲ

ನವದೆಹಲಿ: ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರಿಗೆ ಇನ್ನಷ್ಟು ಅಧಿಕಾರ ನೀಡುವ ಸಂಬಂಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯದ ಎಲ್ಲ ಜಿಲ್ಲಾ ಘಟಕದ ಅಧ್ಯಕ್ಷರ ಜತೆಗೆ ಶುಕ್ರವಾರ ಸಭೆ ನಡೆಸಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಎಐಸಿಸಿಯು ಜಿಲ್ಲಾ ಅಧ್ಯಕ್ಷರಿಗೆ ಶಕ್ತಿ ತುಂಬಿ ಸಂಘಟನೆಗೆ ಹೊಸ ಸ್ವರೂಪ ನೀಡಲು ಮುಂದಾಗಿದೆ' ಎಂದರು. 'ಪಕ್ಷ ಸರ್ಕಾರಕ್ಕಿಂತ ದೊಡ್ಡದು. ಹೀಗಾಗಿ ಹೈಕಮಾಂಡ್ ನಾಯಕರು ಜಿಲ್ಲಾ ಅಧ್ಯಕ್ಷರಿಗೆ ವಿಶೇಷ ಸಭೆ ಆಯೋಜಿಸಿದ್ದರು' ಎಂದರು.

'ಯಾವ ರೀತಿ ಸದಸ್ಯತ್ವ ಅಭಿಯಾನ ನಡೆಸಬೇಕು, ಮತದಾರರ ಪಟ್ಟಿ ಪರಿಶೀಲನೆ, ಬಿಎಲ್‌ಒಗಳ ನೇಮಕ, ಜಾಲತಾಣಗಳ ಪರಿಣಾಮಕಾರಿ ಬಳಕೆ, ದೇಣಿಗೆ ಸಂಗ್ರಹ ಸೇರಿ ಅನೇಕ ಮಾರ್ಗದರ್ಶನ ನೀಡಿದರು. ಗುಜರಾತಿನಲ್ಲಿ ನಡೆಯಲಿರುವ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಿಗೆ ಶಕ್ತಿ ತುಂಬುವ ಬಗ್ಗೆ ತೀರ್ಮಾನಿಸಲಾಗುವುದು' ಎಂದು ತಿಳಿಸಿದರು.

ಕಾಂಗ್ರೆಸ್‌ನಲ್ಲಿಯೇ ಅಧ್ಯಕ್ಷ, ಮುಖ್ಯಮಂತ್ರಿ ಆಗಬೇಕು– ಸತೀಶ ಜಾರಕಿಹೊಳಿ

'ನಾನು ಆರ್‌ಎಸಿ ಟಿಕೆಟ್‌ನಲ್ಲಿದ್ದೇನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮದು ಕಾಂಗ್ರೆಸ್ ಪಕ್ಷ. ಇಲ್ಲಿಯೇ ಅಧ್ಯಕ್ಷ, ಮುಖ್ಯಮಂತ್ರಿ ಆಗಬೇಕು. ನಾನು 'ರಿಸರ್ವೇಷನ್ ಅಗೈನೆಸ್ಟ್ ಕ್ಯಾನ್ಸಲೇಷನ್ (ಆರ್‌ಎಸಿ) ಟಿಕೆಟ್ ನಲ್ಲಿದ್ದೇನೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮಾರ್ಮಿಕವಾಗಿ ಹೇಳಿದರು.



ಸತೀಶ ಜಾರಕಿಹೊಳಿ

ನವದೆಹಲಿಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಮತ್ತು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರನ್ನು ಭೇಟಿ ಮಾಡಿರುವ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನಮ್ಮದೇ ಗಾಡಿ ಫುಲ್ ಆಗಿರುವಾಗ ಜೆಡಿಎಸ್‌ನ 18 ಶಾಸಕರನ್ನು ತೆಗೆದುಕೊಂಡು ಏನು ಮಾಡೋಣ' ಎಂದು ಪ್ರಶ್ನಿಸಿದರು.

'ಓವರ್ ಲೋಡೆಡ್ ಇದ್ದರೂ ನಮ್ಮದು ಕಾಂಗ್ರೆಸ್ ಪಕ್ಷವೇ. ಈಗಾಗಲೇ 138 ಶಾಸಕರಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿಯೇ ಕಾಯುತ್ತೇನೆ. ಯಾರಾದರೂ ಮೆಜೆಸ್ಟಿಕ್ ದಟ್ಟಣೆಯಲ್ಲಿ ಸಿಕ್ಕಿಹಾಕಿಕೊಂಡು ಬರುವುದು ತಡವಾದರೆ ಅವಕಾಶ ಸಿಗಬಹುದು. ಮಹಾರಾಷ್ಟ್ರದಲ್ಲಿ ಅಜಿತ್ ಪವಾರ್ ಹಾಗೂ ಏಕನಾಥ್ ಶಿಂದೆ ರೀತಿಯಲ್ಲಿ ಕರ್ನಾಟಕದಲ್ಲಿ ಯಾರೂ ಇಲ್ಲ. ಆ ಸಾಮರ್ಥ್ಯ ಇಲ್ಲಿ ಯಾರಿಗೂ ಇಲ್ಲ' ಎಂದರು.

ವರಿಷ್ಠರ ಜೊತೆ ಚರ್ಚಿಸಿಲ್ಲ: 'ಹನಿ ಟ್ರ್ಯಾಪ್ ಕುರಿತಂತೆ ವರಿಷ್ಠರ ಜೊತೆ ಚರ್ಚಿಸಿಲ್ಲ. ದೆಹಲಿಗೆ ಹೋಗಿ ದೂರು ನೀಡುವ ಅಗತ್ಯ ನನಗಿಲ್ಲ' ಎಂದರು. 'ಕುಮಾರಸ್ವಾಮಿಯವರ ಸಹಕಾರದ ಪ್ರಶ್ನೆ ಉದ್ಭವಿಸುವುದಿಲ್ಲ. ಕುಮಾರಸ್ವಾಮಿ, ಸೋಮಣ್ಣ ಅವರಂತೆ ಪ್ರಲ್ಹಾದ ಜೋಶಿ ಅವರನ್ನೂ ಭೇಟಿ ಮಾಡಿದ್ದೇನೆ. ಬೆಳಗಾವಿ ವಿಮಾನ ನಿಲ್ದಾಣದ ಕಾಮಗಾರಿ ಸ್ಥಗಿತಗೊಂಡಿದ್ದು, ಅದನ್ನು ಚುರುಕುಗೊಳಿಸುವ ಕುರಿತು ಚರ್ಚಿಸಿದ್ದೇನೆ' ಎಂದರು.

'ಅಧಿವೇಶನ ಮುಗಿದ ಬಳಿಕ ನಾನು ರಾಜಣ್ಣ ಅವರನ್ನು ಭೇಟಿ ಮಾಡಿಲ್ಲ. ರಾಜಣ್ಣ ಸಿಕ್ಕಿದ ಬಳಿಕ, ಹನಿಟ್ರ್ಯಾಪ್ ವಿಚಾರದಲ್ಲಿ ಯಾಕೆ ತಣ್ಣಗಾದರು ಎಂಬ ಬಗ್ಗೆ ಚರ್ಚೆ ಮಾಡುತ್ತೇನೆ. ಎಲ್ಲದಕ್ಕೂ ಇತಿಶ್ರೀ ಹಾಡಬೇಕು. ಇಲ್ಲದಿದ್ದರೆ ಹೋದಲ್ಲಿ ಬಂದಲ್ಲಿ ಮತ್ತೆ ಹನಿಟ್ರ್ಯಾಪ್ ವಿಚಾರ ಚರ್ಚೆಯಾಗಲಿದೆ' ಎಂದರು.

ಸತೀಶ ಜಾರಕಿಹೊಳಿ– ಎಂ.ಬಿ ಪಾಟೀಲ ಚರ್ಚೆ

ಬೆಂಗಳೂರು: ನವದೆಹಲಿಯಲ್ಲಿ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಮರಳಿರುವ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ಶುಕ್ರವಾರ ಭೇಟಿ ಮಾಡಿ ಮಾತುಕತೆ ನಡೆಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

'ಮಧುಬಲೆ' ಗದ್ದಲದ ನಡುವೆ ದೆಹಲಿಗೆ ತೆರಳಿದ್ದ ಸತೀಶ ಜಾರಕಿಹೊಳಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಇದೇ ವೇಳೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರನ್ನೂ ಭೇಟಿ ಮಾಡಿದ್ದರು. ಈ ಭೇಟಿ ರಾಜಕೀಯ ವಲಯದಲ್ಲಿ ನಾನಾ ಚರ್ಚೆಗೆ ಕಾರಣವಾಗಿದ್ದವು.

ಸತೀಶ ಜಾರಕಿಹೊಳಿ ಅವರನ್ನು ಅವರ ಸರ್ಕಾರಿ ನಿವಾಸದಲ್ಲಿ ಭೇಟಿ ಮಾಡಿ ಎಂ.ಬಿ. ಪಾಟೀಲ ಮಾತುಕತೆ ನಡೆಸಿದ್ದಾರೆ. ದೆಹಲಿಯಲ್ಲಿ ಹೈಕಮಾಂಡ್ ನಾಯಕರ ಜೊತೆಗಿನ ಚರ್ಚೆಯ ಬಗ್ಗೆಯೇ ಉಭಯ ನಾಯಕರು ಮಾತುಕತೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ಸತೀಶ ಜಾರಕಿಹೊಳಿ, 'ಎಂ.ಬಿ. ಪಾಟೀಲರ ಭೇಟಿ ಮತ್ತು ಮಾತುಕತೆಯಲ್ಲಿ ವಿಶೇಷ ಅರ್ಥ ಕಲ್ಪಿಸಬೇಕಾದ ಅಗತ್ಯವಿಲ್ಲ. ಇದು ಸಹಜ ಭೇಟಿ' ಎಂದು ಸಮರ್ಥನೆ ನೀಡಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಚರ್ಚೆ: ದೆಹಲಿ ಭೇಟಿಯ ಸಂದರ್ಭದಲ್ಲಿ ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆಯ ಕುರಿತು ಹೈಕಮಾಂಡ್ ನಾಯಕರ ಜೊತೆ ಸತೀಶ ಜಾರಕಿಹೊಳಿ ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ. ಕೆಪಿಸಿಸಿಗೆ ಪೂರ್ಣಾವಧಿ ಅಧ್ಯಕ್ಷರನ್ನು ನೇಮಕ ಮಾಡಬೇಕು ಎಂದು ಅವರು ಮತ್ತೊಮ್ಮೆ ವಾದ ಮುಂದಿಟ್ಟಿದ್ದಾರೆ. ಈ ಎಲ್ಲ ಹಿನ್ನೆಲೆಯಲ್ಲಿ ಇಬ್ಬರು ನಾಯಕರು ಚರ್ಚೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಸುದ್ದಿ 2 ನಿಮಿಷ

ಕಾಂಗ್ರೆಸ್ ಮಧುಬಲೆಯ ಕಂಪನಿ ಛಲವಾದಿ ಆರೋಪ

ಮೈಸೂರು: 'ಕಾಂಗ್ರೆಸ್ ಮಧುಬಲೆಯ (ಹನಿಟ್ರ್ಯಾಪ್) ಕಂಪನಿ. ವಿರೋಧಿಸುವವರು, ಪ್ರಶ್ನಿಸುವವರು ಅಥವಾ ಭ್ರಷ್ಟಾಚಾರ ಹೊರತರುವವರನ್ನು ಟ್ರ್ಯಾಪ್ ಮಾಡುತ್ತದೆ' ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ಇಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿ, 'ಆ ಕಂಪನಿಯವರು ಹೊರಗಿನವರಿಗಿಂತ ಸ್ವಪಕ್ಷೀಯರನ್ನೇ ಹೆಚ್ಚು ಟ್ರ್ಯಾಪ್ ಮಾಡುತ್ತಾರೆ. ಮಧುಬಲೆಗೆ ಬೀಳಿಸುವುದಷ್ಟೇ ಅಲ್ಲದೇ ಫೋನ್ ಟ್ಯಾಪ್ ಕೂಡ ಮಾಡುತ್ತಾರೆ. ಇದೆಲ್ಲಕ್ಕೂ ಉತ್ತರಿಸಬೇಕಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಯಿಮುಚ್ಚಿ ಕುಳಿತಿರುವುದನ್ನು ನೋಡಿದರೆ, ಅವರೂ ಟ್ರ್ಯಾಪ್ ಆಗಿದ್ದಾರೆಯೇ ಎಂಬ ಅನುಮಾನ ನನ್ನದು' ಎಂದರು.



'ಸತ್ಯ ಆಚೆಗೆ ಬಂದರೆ ಪಕ್ಷದ ಮರ್ಯಾದೆ ಹೋಗುತ್ತದೆಂಬ ಕಾರಣಕ್ಕೆ ಅವರು ಸುಮ್ಮನಿದ್ದಾರೆ. ತಪ್ಪು ಮಾಡುವುದರ ಜೊತೆಗೆ, ಅದನ್ನು ಮುಚ್ಚಿ ಹಾಕುವುದೂ ತಪ್ಪೇ. ಆದರೆ, ಅದಕ್ಕೆ ಬಿಜೆಪಿ ಬಿಡುವುದಿಲ್ಲ' ಎಂದರು.

ಬಸನಗೌಡ ಪಾಟೀಲ ಯತ್ನಾಳ ಉಚ್ಚಾಟನೆ ಬಗ್ಗೆ ಪ್ರತಿಕ್ರಿಯಿಸಿ, 'ನಮ್ಮ ಹೈಕಮಾಂಡ್ ಈಗ ಟೆಸ್ಟ್ ಆಟ ಬಿಟ್ಟಿದೆ. ಈಗೇನಿದ್ದರೂ ಟಿ–ಟ್ವೆಂಟಿ ಮ್ಯಾಚ್ ಆಡುತ್ತದೆ. ನೆಕ್ಸ್ಟ್ ವಿಕೆಟ್ ಎಸ್.ಟಿ. ಸೋಮಶೇಖರ್ ಹಾಗೂ ಹೆಬ್ಬಾರ್" ಎಂದರು.

ಹೆದರುವ ಕಾಲ ಮುಗಿದಿದೆ: ಹೆಬ್ಬಾರ

ಶಿರಸಿ: 'ಪಕ್ಷದಲ್ಲಿ ಇಟ್ಟುಕೊಳ್ಳಬೇಕೆ ಅಥವಾ ಉಚ್ಚಾಟಿಸಬೇಕೆ ಎಂಬುದನ್ನು ನನಗೆ ನೋಟಿಸ್ ನೀಡಿದವರು ನಿರ್ಧರಿಸಬೇಕು. ನಾನು ರಾಜಕಾರಣದಲ್ಲಿ ಹೆದರುವ ಕಾಲ ಮುಗಿದಿದೆ' ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು.

'ನನ್ನನ್ನೂ ಸೇರಿ ಐವರಿಗೆ ಬಿಜೆಪಿ ಕೇಂದ್ರ ಶಿಸ್ತು ಸಮಿತಿಯು ನೋಟಿಸ್ ಜಾರಿ ಮಾಡಿತ್ತು. 72 ಗಂಟೆಯಲ್ಲಿ ಉತ್ತರಿಸಬೇಕು ಎಂಬ ಸೂಚನೆಯಿತ್ತು. ನಾನು 24 ಗಂಟೆಯಲ್ಲಿ ಉತ್ತರಿಸಿದ್ದೇನೆ. ಸೂಕ್ತ ಕಾಲ ಬಂದಾಗ, ಉತ್ತರವನ್ನು ಬಹಿರಂಗಪಡಿಸುವೆ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ಎಸ್.ಟಿ.ಸೋಮಶೇಖರ ಮತ್ತು ಶಿವರಾಮ ಹೆಬ್ಬಾರ ಉಚ್ಚಾಟನೆ ಬಾಕಿಯಿದೆ ಎಂಬಂತೆ ಛಲವಾದಿ ನಾರಾಯಣಸ್ವಾಮಿ ಮಾತನಾಡಿದ್ದಾರೆ. ಅವರಿಗೆ ನನ್ನನ್ನು ಉಚ್ಚಾಟಿಸುವ ಅಧಿಕಾರವಿಲ್ಲ. ಅವರು ವಿಧಾನ ಪರಿಷತ್ ಸಭಾ ನಾಯಕರಷ್ಟೇ. ನನ್ನನ್ನು ಉಚ್ಚಾಟಿಸುವ ವೇದಿಕೆ ಬೇರೆಯಿದೆ. ಉಚ್ಚಾಟಿಸಿದರೆ, ಆಗ ನಾನು ಮಾತನಾಡುವೆ' ಎಂದರು.

ಏಳಿಗೆ ಸಹಿಸದವರಿಂದ ಷಡ್ಯಂತ್ರ– ಸೋಮಶೇಖರ್ (ಬೆಂಗಳೂರು ವರದಿ): 'ನನ್ನ ಜನಪ್ರಿಯತೆ ಸಹಿಸದ ಪಕ್ಷದ ಒಳಗಿನ ಮತ್ತು ಹೊರಗಿನವರು ಮಾಡಿದ ಷಡ್ಯಂತ್ರದಿಂದ ನೋಟಿಸ್ ಪಡೆಯುವಂತಾಗಿದೆ' ಎಂದು ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ಅವರು ಪಕ್ಷದ ಶಿಸ್ತು ಸಮಿತಿ ನೀಡಿರುವ ಶೋಕಾಸ್ ನೋಟಿಸಿಗೆ ಉತ್ತರ ನೀಡಿದ್ದಾರೆ.

'ನನ್ನ ವಿರುದ್ಧದ ಆಪಾದನೆಗಳು ಅಸ್ಪಷ್ಟ ಮತ್ತು ಸಮರ್ಥನೀಯವಲ್ಲ. ಅಲ್ಲದೇ ನನ್ನ ಸ್ವತಂತ್ರ ಧ್ವನಿಯನ್ನು ಅಡಗಿಸುವ ಉದ್ದೇಶದ್ದಾಗಿದೆ' ಎಂದು ಅವರು ಎರಡು ಪುಟಗಳ ಪತ್ರದಲ್ಲಿ ತಿಳಿಸಿದ್ದಾರೆ.

ಯತ್ನಾಳ ಉಚ್ಚಾಟನೆ ವಾಪಸ್‌ಗೆ ಮನವಿ

ಬೆಂಗಳೂರಿನಲ್ಲಿ ಯತ್ನಾಳ ಪರ ಮುಖಂಡರ ಸಭೆ • 'ಹೊಸ ಪಕ್ಷ ಕಟ್ಟಲ್ಲ, ಬಿಜೆಪಿ ತೊರೆಯಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಉಚ್ಚಾಟನೆ ಮಾಡಿರುವ ಆದೇಶ ಹಿಂಪಡೆಯುವಂತೆ ಬಿಜೆಪಿ ವರಿಷ್ಠರ ಮನವೊಲಿಸಲು ಯತ್ನಾಳ ಬಣ ನಿರ್ಧರಿಸಿದೆ.



ಯತ್ನಾಳ

ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅವರ ಬೆಂಗಳೂರಿನ ನಿವಾಸದಲ್ಲಿ ಶುಕ್ರವಾರ ಸಭೆ ನಡೆಸಿದ ಶಾಸಕರಾದ ರಮೇಶ ಜಾರಕಿಹೊಳಿ, ಬಿ.ಪಿ. ಹರೀಶ್, ಮಾಜಿ ಸಚಿವ ಕುಮಾರ್ ಬಂಗಾರಪ್ಪ, ಮುಖಂಡ ಎನ್.ಆರ್. ಸಂತೋಷ್ ಮೊದಲಾದವರು, ಉಚ್ಚಾಟನೆ ಪ್ರಕರಣವನ್ನು ಸೌಹಾರ್ದವಾಗಿ ಬಗೆಹರಿಸಿಕೊಳ್ಳುವ ಕುರಿತು ಸುದೀರ್ಘ ಚರ್ಚೆ ನಡೆಸಿದರು.

ರಾಜ್ಯ ಘಟಕದ ಅಧ್ಯಕ್ಷರ ಸರ್ವಾಧಿಕಾರಿ ಮನೋಭಾವ, ಪಕ್ಷದಲ್ಲಿನ ಆಂತರಿಕ ಪ್ರಜಾಪ್ರಭುತ್ವ ಕುಸಿತ, ಪಕ್ಷ ಕಟ್ಟಿ ಬೆಳೆಸಿದ, ಪಕ್ಷಕ್ಕೆ ಆಸರೆಯಾಗಿ ನಿಂತ ಹಿರಿಯ ನಾಯಕರ ಕಡೆಗಣನೆ, ರಾಜ್ಯದಲ್ಲಿನ ಪಕ್ಷದ ಸ್ಥಿತಿಗತಿ ಕುರಿತು ವರಿಷ್ಠರಿಗೆ ಮನವರಿಕೆ ಮಾಡಿಕೊಡಬೇಕು. ಭವಿಷ್ಯದಲ್ಲಿ ಪಕ್ಷವನ್ನು ಸದೃಢವಾಗಿ ಕಟ್ಟುವುದು, 2028ರಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸುವುದೂ ಸೇರಿದಂತೆ ವಿಜಯೇಂದ್ರ ವಿರುದ್ಧ ಅಸಮಾಧಾನ ಹೊಂದಿರುವ ನಾಯಕರಲ್ಲಿರುವ ಪಕ್ಷ ನಿಷ್ಠೆ ಕುರಿತು ಅರ್ಥಮಾಡಿಸಬೇಕು ಎಂದು ನಿರ್ಧಾರಕ್ಕೆ ಬಂದಿದ್ದಾರೆ.

ಸಭೆಯ ನಂತರ ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಕುಮಾರ್ ಬಂಗಾರಪ್ಪ, 'ಯತ್ನಾಳ ಅವರ ಉಚ್ಚಾಟನೆ ಕ್ರಮ ಆಘಾತ ತಂದಿದೆ. ಪಕ್ಷದ ಕಾರ್ಯಕರ್ತರು, ಹಿಂದೂ ಕಾರ್ಯಕರ್ತರಿಗೆ ನೋವಾಗಿದೆ. ಈ ನಿರ್ಧಾರ ಪುನರ್‌ಪರಿಶೀಲಿಸಲು ವರಿಷ್ಠರನ್ನು ಕೋರಲು ತೀರ್ಮಾನಿಸಿದ್ದೇವೆ' ಎಂದರು.

'ಬಿಜೆಪಿಯಲ್ಲಿನ ಆಂತರಿಕ ಪ್ರಜಾಪ್ರಭುತ್ವ ರಕ್ಷಣೆಗೆ ಧ್ವನಿ ಎತ್ತಿರುವ ನಾವ್ಯಾರೂ ಪಕ್ಷ ತೊರೆಯುವುದಿಲ್ಲ, ಬೇರೆ ಪಕ್ಷ ಕಟ್ಟುವುದಿಲ್ಲ. ಪಕ್ಷದಲ್ಲಿದ್ದುಕೊಂಡೇ ಪಕ್ಷದ ಉಳಿವಿಗೆ ಹೋರಾಟ ನಡೆಸುತ್ತೇವೆ. ಜವಾಬ್ದಾರಿ ಸ್ಥಾನದಲ್ಲಿ ಇರುವವರು ಮೊದಲು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು ಎನ್ನುವುದು ನಮ್ಮೆಲ್ಲರ ನಿಲುವು. ಅದಕ್ಕಾಗಿ ನಮ್ಮ ಅಹವಾಲು ಆಲಿಸಬೇಕು' ಎಂದು ಹೇಳಿದರು.

ಪಕ್ಷದ ಪರ ನಿಂತಿದ್ದೇವೆ: ರೇಣುಕಾಚಾರ್ಯ

'ನಾನು ಹಾಗೂ ನನ್ನ ಜತೆ ಇರುವವರು ಪಕ್ಷದ ಶಿಸ್ತಿನ ಸಿಪಾಯಿಗಳು. ಪಕ್ಷ ಹಾಗೂ ಪಕ್ಷದ ಅಧ್ಯಕ್ಷ, ವರಿಷ್ಠರ ವಿರುದ್ಧ ಹೇಳಿಕೆ ನೀಡಿಲ್ಲ. ಬಿಜೆಪಿ ಶಿಸ್ತು ಸಮಿತಿ ನೀಡಿರುವ ನೋಟಿಸ್‌ಗೆ ಉತ್ತರ ನೀಡಿದ್ದೇವೆ' ಎಂದು ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಹಲವರು ಪಕ್ಷ ಕಟ್ಟಿ, ಬೆಳೆಸಿದ್ದಾರೆ. ಬಿ.ವೈ. ವಿಜಯೇಂದ್ರ ಅವರನ್ನು ವರಿಷ್ಠರು ನೇಮಕ ಮಾಡಿದ್ದಾರೆ. ಅವರ ವಿರುದ್ಧ ಕೆಲವರು ನಿರಂತರ ಟೀಕೆ ಮಾಡಿದ್ದನ್ನು ಖಂಡಿಸಿದ್ದೇವೆ. ಪಕ್ಷ ವಿರೋಧಿ ನಡೆ ಪ್ರದರ್ಶಿಸಿಲ್ಲ. ಹಾಗಾಗಿ, ನೋಟಿಸ್‌ಗೆ ಹೆದರುವ ಪ್ರಶ್ನೆಯೇ ಇಲ್ಲ' ಎಂದರು.

'ಸ್ವಾಮೀಜಿ ಆತ್ಮವಿಮರ್ಶೆ ಮಾಡಿಕೊಳ್ಳಲಿ'

'ಯತ್ನಾಳ ಅವರ ಉಚ್ಚಾಟನೆ ವಾಪಸ್ ಪಡೆಯುವಂತೆ ಬಸವಜಯ ಮೃತ್ಯುಂಜಯ ಸ್ವಾಮೀಜಿ ಎಚ್ಚರಿಕೆ ನೀಡಿರುವುದು ಆಶ್ಚರ್ಯ ತಂದಿದೆ. ನಮ್ಮದು ರಾಜಕೀಯ ಪಕ್ಷ, ಅವರದ್ದು ಮಠ. ಸ್ವಾಮೀಜಿ ಈ ಬಗ್ಗೆ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು' ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಯತ್ನಾಳ ಬಣ ಮತ್ತೆ ಸಭೆ ಸೇರಿರುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, 'ಎಲ್ಲವನ್ನೂ ಕೇಂದ್ರದ ನಾಯಕರು ಗಮನಿಸುತ್ತಿದ್ದಾರೆ. ಯತ್ನಾಳ್ ಉಚ್ಚಾಟನೆ ಹಿಂಪಡೆಯುವಂತೆ ಕೇಳುವ ಹಕ್ಕು ಕಾರ್ಯಕರ್ತರಿಗಿದೆ' ಎಂದರು.

ಎಸ್.ಟಿ. ಸೋಮಶೇಖರ್ ಹಾಗೂ ಶಿವರಾಂ ಹೆಬ್ಬಾರ್ ಉಚ್ಚಾಟನೆ ಆಗಲಿದ್ದಾರೆ ಎಂಬ ಛಲವಾದಿ ನಾರಾಯಣಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಈ ಬಗ್ಗೆ ಕೇಂದ್ರದ ನಾಯಕರು ತೀರ್ಮಾನಿಸಲಿದ್ದಾರೆ.ಬಿಜೆಪಿಯಲ್ಲಿ ನಾವೆಲ್ಲರೂ ಒಂದಾಗಿ ಹೋಗಬೇಕು ಎಂಬ ಅಭಿಪ್ರಾಯ ನನ್ನದು. ಪಕ್ಷದ ಹಿರಿಯರು ಕೈಗೊಂಡ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ ' ಎಂದರು.

ಡಿಜಿಟಲ್ ಅರೆಸ್ಟ್‌ಗೆ 2 'ಬಲಿ'

ಒಂದನೇ ಪುಟದಿಂದ...

'ಬಳಿಕ ಸುಮಿತ ಬಿಸ್ರಾ ಹೆಸರಿನ ವ್ಯಕ್ತಿ ಕರೆ ಮಾಡಿ 'ಅನಿಲ ಅವರ ದೂರಿನ ಮೇಲೆ ನಿಮ್ಮ ಮೇಲೆ ಪ್ರಕರಣ ದಾಖಲಾಗಿದ್ದು, ನಿಮ್ಮನ್ನು ಡಿಜಿಟಲ್ ಅರೆಸ್ಟ್ ಮಾಡುತ್ತೇನೆ' ಎಂದು ಬೆದರಿಸಿದರು. ಹಣ ನೀಡದೇ ಇದ್ದರೆ ನಿಮ್ಮ ಸಂದೇಶ ಹಾಗೂ ಫೋಟೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವುದಾಗಿ ಹೇಳಿದ್ದರು. ಹಣ ಪಡೆದರೂ ಕಿರುಕುಳ ನಿಲ್ಲಿಸಿಲ್ಲ. ಮಾನಸಿಕವಾಗಿ ನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇವೆ. ನಮ್ಮ ದೇಹಗಳನ್ನು ವೈದ್ಯ ವಿದ್ಯಾರ್ಥಿಗಳ ಅಧ್ಯಯನಕ್ಕೆ ದಾನ ನೀಡಿ' ಎಂದೂ ಅವರು ಅದರಲ್ಲಿ ಉಲ್ಲೇಖಿಸಿದ್ದಾರೆ.

'ಸೈಬರ್ ಅಪರಾಧಿಗಳ ಬೆದರಿಕೆಯಿಂದ ದಂಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಪ್ರಕರಣ ದಾಖಲಾಗಿದೆ. ಮೊಬೈಲ್ ಫೋನ್, ಒಂದು ಚಾಕು, ಡೆತ್‌ನೋಟ್ ವಶಪಡಿಸಿಕೊಳ್ಳಲಾಗಿದೆ. ಬೆರಳಚ್ಚು ತಜ್ಞರ ಮತ್ತು ಶ್ವಾನದಳದ ತಂಡ ಸ್ಥಳ ಪರಿಶೀಲಿಸಿದೆ' ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರುತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಉಚ್ಚಾಟನೆ ಹಿಂಪಡೆಯಿರಿ'

ವಿಜಯಪುರ: ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಬಿಜೆಪಿಯಿಂದ ಉಚ್ಚಾಟಿಸಿರುವುದು ವಿರೋಧಿಸಿ ಹಿಂದೂ ಸಂಘಟನೆಗಳ ಮುಖಂಡರು ನಗರದಲ್ಲಿ ಶುಕ್ರವಾರ ಪ್ರತಿಭಟನಾ ಜಾಥಾ ನಡೆಸಿದರು. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಪ್ರತಿಕೃತಿ ದಹಿಸಿದರು.

ಸ್ವಾಮಿ ವಿವೇಕಾನಂದ ಸೇನೆ ಸಂಘಟನೆಯ ಅಧ್ಯಕ್ಷ ರಾಘವ ಅಣ್ಣಿಗೇರಿ ಮಾತನಾಡಿ, 'ಅಪ್ಪ, ಮಕ್ಕಳ ಕುತಂತ್ರ ಮತ್ತು ಕುಮ್ಮಕ್ಕಿನಿಂದ ಯತ್ನಾಳ ಅವರನ್ನು ಬಿಜೆಪಿಯಿಂದ ಹೊರ ಹಾಕಲಾಗಿದೆ. ಇದು ಬರೀ ಯತ್ನಾಳ ಉಚ್ಚಾಟನೆಯಲ್ಲ, ಪಕ್ಷದಿಂದ ಹಿಂದುತ್ವದ ಉಚ್ಚಾಟನೆಯೂ ಆಗಿದೆ' ಎಂದರು.

ಬಿಜೆಪಿ ಮುಖಂಡ ದಯಾಸಾಗರ ಪಾಟೀಲ ಮಾತನಾಡಿ, 'ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟಿಸಿದ್ದು ದುರದೃಷ್ಟಕರ. ಅವರ ಶಕ್ತಿ ಏನೆಂಬುದು ಹೈಕಮಾಂಡ್ ಮನಗಾಣಬೇಕು. ಒಂದು ಕುಟುಂಬದ ಸ್ವಾರ್ಥಕ್ಕೆ ಪಕ್ಷ ಬಲಿ ಕೊಡುವುದು ಒಳ್ಳೆಯದಲ್ಲ. ಹೈಕಮಾಂಡ್ ತಮ್ಮ ನಿರ್ಧಾರ ಹಿಂಪಡೆಯಬೇಕು' ಎಂದರು.



ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಬಿಜೆಪಿಯಿಂದ ಉಚ್ಚಾಟಿಸಿದ್ದು ವಿರೋಧಿಸಿ ವಿಜಯಪುರದಲ್ಲಿ ಹಿಂದೂ ಸಂಘಟನೆಗಳ ಮುಖಂಡರು ಶುಕ್ರವಾರ ಪ್ರತಿಭಟನಾ ಜಾಥಾ ನಡೆಸಿದರು ಪ್ರಜಾವಾಣಿ ಚಿತ್ರ

'ಸಾಲ ಮರುಪಾವತಿಗೆ ಪಿಂಚಣಿ ಹಣ ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಬ್ಯಾಂಕ್ ನೌಕರರ ಪಿಂಚಣಿಯ ಶೇ 50ಕ್ಕಿಂತ ಹೆಚ್ಚಿನ ಹಣವನ್ನು ಅವರ ಸಾಲದ ಮರುಪಾವತಿಗಾಗಿ ಕಡಿತಗೊಳಿಸುವುದು ಸಲ್ಲ' ಎಂದು ಆದೇಶಿಸಿರುವ ಹೈಕೋರ್ಟ್, 'ಪಿಂಚಣಿ ಹಣವನ್ನು ಸಾಲದ ಮರು ಪಾವತಿಗೆ ಸಂದಾಯ ಮಾಡಿಕೊಂಡರೆ ಅದು ಸಂವಿಧಾನದ 21ನೇ ವಿಧಿಯ (ಬದುಕುವ ಹಕ್ಕು) ಉಲ್ಲಂಘನೆ' ಎಂದು ಸ್ಪಷ್ಟಪಡಿಸಿದೆ.

ಈ ಸಂಬಂಧ ಕೆನರಾ ಬ್ಯಾಂಕ್ ನಿವೃತ್ತ ನೌಕರರಾದ ಕೇರಳದ ತ್ರಿಶೂರ್ ಜಿಲ್ಲೆಯ ಒ.ಕೆ.ಮುರುಗನ್ (70) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ. ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಭಾಗಶಃ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿದೆ.



'ಯಾವುದೇ ಸಿಬ್ಬಂದಿ ನಿವೃತ್ತಿ ಬಳಿಕ ಆತ ಜೀವನದ ಸಂಧ್ಯಾಕಾಲದಲ್ಲಿ ಉತ್ತಮ ಮಟ್ಟದ ಜೀವನ ಸಾಗಿಸಲು ಪಿಂಚಣಿ ಪಡೆಯುತ್ತಾರೆ. ಹೀಗಿರುವಾಗ, ಈ ಪ್ರಕರಣದಲ್ಲಿ ಅರ್ಜಿದಾರರು ಪಡೆದಿದ್ದ ಗೃಹ ಮತ್ತು ಶೈಕ್ಷಣಿಕ ಸಾಲದ ಕಂತನ್ನು ಭರ್ತಿ ಮಾಡಿಕೊಳ್ಳಲು ಅವರ ಪಿಂಚಣಿಯ ಸಂಪೂರ್ಣ ಮೊತ್ತವನ್ನು ಮರು ಪಾವತಿಗೆ ಬಳಸಿಕೊಳ್ಳುತ್ತಿರುವುದು ಸಂವಿಧಾನ ವಿರೋಧಿ ಕ್ರಮ' ಎಂದು ನ್ಯಾಯಪೀಠ ಹೇಳಿದೆ.

'ಸಂಪೂರ್ಣ ಪಿಂಚಣಿ ಮೊತ್ತ ಸಾಲದ ಮರು ಪಾವತಿಗೆ ಕಡಿತ ಮಾಡಿದರೆ ಪಿಂಚಣಿ ಮೂಲ ಉದ್ದೇಶವೇ ಮರೆಯಾದಂತೆ. ಸಿಬ್ಬಂದಿ ಮತ್ತು ಆತನ ಕುಟುಂಬ ಪಿಂಚಣಿಯನ್ನೇ ನಂಬಿದ್ದರೆ ಕುಟುಂಬದ ಆರ್ಥಿಕ ಸ್ಥಿತಿ ಶೋಚನೀಯವಾಗುತ್ತದೆ' ಎಂದು ನ್ಯಾಯಪೀಠ ವಿವರಿಸಿದೆ.

ನಿಮ್ಮ ಪರಿಸ್ಥಿತಿ ಅರ್ಥವಾಗಿದೆ: 'ಸುಪ್ರೀಂ'

ಹೈಕೋರ್ಟ್‌ಗೆ ಅರ್ಜಿ ಸಲ್ಲಿಸುವಂತೆ ಎಚ್‌ಡಿಕೆಗೆ ನ್ಯಾಯಪೀಠ ನಿರ್ದೇಶನ

ನವದೆಹಲಿ: ರಾಮನಗರ ಜಿಲ್ಲೆಯ ಬಿಡದಿ ಹೋಬಳಿಯ ಕೇತಗಾನಹಳ್ಳಿಯ ಜಮೀನನ್ನು ಕಳೆದುಕೊಳ್ಳುವ ಆತಂಕ ಎದುರಿಸುತ್ತಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಉದ್ದೇಶಿಸಿ ಸುಪ್ರೀಂ ಕೋರ್ಟ್, 'ನಿಮ್ಮ ಪರಿಸ್ಥಿತಿ ಅರ್ಥವಾಗಿದೆ. ರಾಜ್ಯದಲ್ಲಿ ಸರ್ಕಾರ ಬದಲಾವಣೆ ಆಗಿರುವುದೇ ಇದಕ್ಕೆಲ್ಲಾ ಕಾರಣ' ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿ ಪಂಕಜ್ ಮಿತ್ತಲ್ ಮತ್ತು ಎಸ್.ವಿ.ಎನ್ ಭಟ್ಟಿ ಅವರಿದ್ದ ವಿಭಾಗೀಯ ಪೀಠವು, ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ನಿಂದನೆ ಅರ್ಜಿಯನ್ನು ಹೈಕೋರ್ಟ್‌ನಲ್ಲಿ ಸಲ್ಲಿಸುವಂತೆ ಕುಮಾರಸ್ವಾಮಿ ಪರ ವಕೀಲರಿಗೆ ಸೂಚಿಸಿತು.

ನ್ಯಾಯಾಂಗ ಅರ್ಜಿಯಲ್ಲಿ ತಾನು ಪ್ರತಿವಾದಿಯಲ್ಲದೇ ಇದ್ದರೂ ಕೂಡ, ವಿಚಾರಣೆಗಳಲ್ಲಿ ನೀಡಿರುವ ತೀರ್ಪುಗಳಿಂದ, ತನ್ನ ಜಾಗದ ವಿರುದ್ಧ ತೆರವು ಆದೇಶಗಳನ್ನು ಹೊರಡಿಸಲಾಗುತ್ತಿದೆ ಮತ್ತು ತಾನು ಜಾಗದ ತೆರವಿನ ಭೀತಿ ಎದುರಿಸುತ್ತಿರುವುದಾಗಿ ಹೈಕೋರ್ಟ್‌ಗೆ ಮಾಹಿತಿ ನೀಡುವಂತೆ ವಕೀಲರಿಗೆ ನ್ಯಾಯಾಲಯ ಸೂಚಿಸಿತು.

ಕುಮಾರಸ್ವಾಮಿ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೊಹಟಗಿ, 'ಹೈಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆ ನಡೆಯುತ್ತಿದೆ. ಲೋಕಾಯುಕ್ತ ನ್ಯಾಯಾಲಯ ಕೇತಗಾನಹಳ್ಳಿ ಗ್ರಾಮದ ಭೂಮಿಯ ಒತ್ತುವರಿಯ ಆದೇಶಗಳ ತನಿಖೆಯೂ ಸೇರಿದೆ' ಎಂದರು.

ಈ ಪ್ರಕರಣಕ್ಕೆ ಸಂಬಂಧಿಸಿದ ದೂರನ್ನು 2021ರ ಮಾರ್ಚ್ 31ರಂದು ಲೋಕಾಯುಕ್ತ ರದ್ದುಗೊಳಿಸಿತ್ತು. ಆದರೆ, ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಹೈಕೋರ್ಟ್ ನಿರ್ದೇಶನದ ಅನುಸಾರ ಕಂದಾಯ ಇಲಾಖೆಯು 2025ರ ಮಾರ್ಚ್ 18ರಂದು ನ್ಯಾಯಯುತವಾಗಿ ಹೊಂದಿರುವ ಭೂಮಿ ತೆರವುಗೊಳಿಸುವಂತೆ ಅರ್ಜಿದಾರರಿಗೆ ನೋಟಿಸ್ ಕೊಟ್ಟಿದೆ ಎಂದು ಅವರು ವಿವರಿಸಿದರು.

ಇದನ್ನು 'ಪ್ರಮಾದಗಳ ಹಾಸ್ಯ' ಎಂದು ಕರೆದಿರುವ ವಕೀಲರು, 'ನ್ಯಾಯಾಂಗ ಪ್ರಕ್ರಿಯೆಯಲ್ಲಿ ಪ್ರತಿವಾದಿಯಲ್ಲದೆ ಇದ್ದರೂ ಅರ್ಜಿದಾರರಿಗೆ ತೆರವು ನೋಟಿಸ್ ಜಾರಿಗೊಳಿಸಲಾಗಿದೆ' ಎಂದರು. ಈಗ ನ್ಯಾಯಮೂರ್ತಿಗಳು, 'ಪ್ರಮಾದಗಳ ಹಾಸ್ಯ' ಯಾರ ಪರವಿದೆ ಎಂದು ಪ್ರಶ್ನಿಸಿದರು.

ಎಚ್‌ಡಿಕೆ ವಿರುದ್ಧದ ಎಸ್‌ಐಟಿ ತನಿಖೆಗೆ ದಾರಿ

ಬೆಂಗಳೂರು: 'ಲೋಕಾಯುಕ್ತ ಎಡಿಜಿಪಿ ಮತ್ತು ಎಸ್‌ಐಟಿ ಮುಖ್ಯಸ್ಥ ಎಂ.ಚಂದ್ರಶೇಖರ್ ದೂರು ಆಧರಿಸಿ ದಾಖಲಾದ ಎಫ್‌ಐಆರ್‌ಗೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತಿತರರ ವಿರುದ್ಧ ಯಾವುದೇ ರೀತಿಯ ಬಲವಂತದ ಕ್ರಮ ಕೈಗೊಳ್ಳಬಾರದು' ಎಂಬ ಏಕಸದಸ್ಯ ನ್ಯಾಯಪೀಠದ ಮಧ್ಯಂತರ ಆದೇಶಕ್ಕೆ ಹೈಕೋರ್ಟ್‌ನ ಮತ್ತೊಂದು ನ್ಯಾಯಪೀಠ ತಡೆ ನೀಡಿದೆ.

'ಸಾಯಿ ವೆಂಕಟೇಶ್ವರ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಮಂಜೂರಾಗಿರುವ ನಿರೀಕ್ಷಣಾ ಜಾಮೀನು ರದ್ದುಗೊಳಿಸುವಂತೆ ಕೋರಬಾರದು. ಈಗಾಗಲೇ ರದ್ದುಪಡಿಸುವಂತೆ ಕೋರಿದ್ದರೆ ಅದರಲ್ಲಿ ಮುಂದುವರಿಯದಂತೆ ಪ್ರಾಸಿಕ್ಯೂಷನ್ ಅನ್ನು ನಿರ್ಬಂಧಿಸಲಾಗಿದೆ ಎಂಬ ಏಕಸದಸ್ಯ ನ್ಯಾಯಪೀಠದ ಮಧ್ಯಂತರ ಆದೇಶವನ್ನು ಮಾರ್ಪಾಡು ಮಾಡಬೇಕು' ಎಂದು ಕೋರಿ ಎಸ್‌ಐಟಿ ಮಧ್ಯಂತರ ಅರ್ಜಿ ಸಲ್ಲಿಸಿತ್ತು.

ಈ ಮಧ್ಯಂತರ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರು ಶುಕ್ರವಾರ ವಿಚಾರಣೆ ನಡೆಸಿ, ಸಮನ್ವಯ ನ್ಯಾಯಪೀಠದ 2024ರ ನ.6ರ ಆದೇಶದಲ್ಲಿ ಮಾರ್ಪಾಡು ಮಾಡಿದರು.

'ಲೋಕಾಯುಕ್ತ ದಾಖಲಿಸಿರುವ ಪ್ರಕರಣಕ್ಕೆ ಸಂಬಂಧಿಸಿ ಮಾಡಲಾಗಿರುವ ನಿರ್ಬಂಧದ ಆದೇಶ ಇಂದಿನಿಂದ ಚಾಲ್ತಿಯಲ್ಲಿ ಇರುವುದಿಲ್ಲ. ಸಂಜಯನಗರ ಠಾಣೆಯಲ್ಲಿ ದಾಖಲಾಗಿರುವ ಬೆದರಿಕೆ ಪ್ರಕರಣಕ್ಕೆ ಮಾತ್ರವೇ ಸೀಮಿತವಾಗಿ ಮಾತನಾಡಲಾಗುವುದು' ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಸಾಯಿ ವೆಂಕಟೇಶ್ವರ ಅಕ್ರಮ ಗಣಿಗಾರಿಕೆ ಆರೋಪದ ಪ್ರಕರಣದಲ್ಲಿ ಕುಮಾರಸ್ವಾಮಿ ವಿರುದ್ಧದ ತನಿಖಾ ಪ್ರಕ್ರಿಯೆಗೆ ಎಸ್‌ಐಟಿಗೆ ಇದ್ದ ಅಡ್ಡಿ ನಿವಾರಣೆಯಾದಂತಾಗಿದೆ.

'ಹುಲಿ ಸಂರಕ್ಷಿತ ಪ್ರದೇಶಗಳ ಹುಲಿಗಳ ಸಮೀಕ್ಷೆ 2024' ವರದಿ ಪ್ರಕಟ

ರಾಜ್ಯದಲ್ಲಿರುವ ಹುಲಿಗಳ ಸಂಖ್ಯೆ 393

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಅಂದಾಜು 393 ಹುಲಿಗಳಿರುವುದು ದಾಖಲಾಗಿದ್ದು, ಕೆಲವು ಹುಲಿಗಳು ಸಂರಕ್ಷಿತ ಪ್ರದೇಶಗಳಿಂದ ಇತರ ಹುಲಿ ವಾಸಸ್ಥಾನ ಪ್ರದೇಶಗಳತ್ತ ವಲಸೆ ಹೋಗುತ್ತಿವೆ ಎಂದು 'ಹುಲಿಗಳ ಸಮೀಕ್ಷೆ- 2024'ರಲ್ಲಿ ಉಲ್ಲೇಖಿಸಲಾಗಿದೆ.

ದೇಶದ ಹುಲಿ ಅಭಯಾರಣ್ಯಗಳಲ್ಲಿ ನಡೆದ ವಾರ್ಷಿಕ ಮೇಲ್ವಿಚಾರಣಾ ಸಮೀಕ್ಷೆಯ ಭಾಗವಾಗಿ ರಾಜ್ಯದ ನಾಗರಹೊಳೆ, ಬಂಡೀಪುರ, ಭದ್ರಾ, ಬಿಳಿಗಿರಿ ರಂಗನಾಥ ಸ್ವಾಮಿ ದೇವಸ್ಥಾನ (ಬಿಆರ್‌ಟಿ) ಮತ್ತು ಕಾಳಿ (ದಾಂಡೇಲಿ-ಅಣಶಿ) ಅಭಯಾರಣ್ಯದಲ್ಲಿ 2023ರ ನವೆಂಬರ್ ಮತ್ತು 2024ರ ಫೆಬ್ರವರಿ ಮಧ್ಯೆ ನಡೆಸಿದ ಸಮೀಕ್ಷಾ ವರದಿಯಲ್ಲಿ ಈ ಅಂಶವಿದೆ.

ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು 'ಕರ್ನಾಟಕ ರಾಜ್ಯದ ಹುಲಿ ಸಂರಕ್ಷಿತ



ಪ್ರದೇಶಗಳ ಹುಲಿಗಳ ಸಮೀಕ್ಷೆ- 2024' ವರದಿಯನ್ನು ಬಿಡುಗಡೆ ಮಾಡಿದ್ದಾರೆ.

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ಮಾರ್ಗಸೂಚಿಗಳ ಪ್ರಕಾರ, ಅಖಿಲ ಭಾರತ ಹುಲಿ ಗಣತಿಯ ಭಾಗವಾಗಿ ಎಲ್ಲ ರಾಜ್ಯಗಳ ಹುಲಿ ವಾಸಸ್ಥಾನ ಪ್ರದೇಶಗಳಲ್ಲಿ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಹುಲಿ, ಆನೆ, ಇತರ ಬೇಟೆ ಹಾಗೂ ಸಸ್ಯಾಹಾರಿ ಪ್ರಾಣಿಗಳ ಗಣತಿ ನಡೆಸಲಾಗುತ್ತದೆ. ಹುಲಿ ಸಂರಕ್ಷಣೆಯಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕದಲ್ಲಿ 2015ರಿಂದ ಈ ಸಮೀಕ್ಷೆ ನಡೆಸಲಾಗುತ್ತಿದೆ.

ರಾಜ್ಯದ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಹುಲಿಗಳ ಸಂಖ್ಯೆ

ವರ್ಷ	ಕ್ಯಾಮೆರಾ ಪಾಯಿಂಟ್	ಸೆರೆಯಾದ ವಿಶಿಷ್ಟ ಹುಲಿಗಳು	ಅಂದಾಜು ಹುಲಿಗಳ ಸಂಖ್ಯೆ
2014	578	226	261
2018	1,776	332	472
2020	1,818	365	403
2022	2,179	376	417
2023	2,162	384	408
2024	2,160	373	393

ಬೆಂಗಳೂರಿನ ಅರಣ್ಯ ಭವನದಲ್ಲಿರುವ ವನ್ಯಜೀವಿ ತಾಂತ್ರಿಕ ಘಟಕದಲ್ಲಿ ಈ ಸಮೀಕ್ಷೆಯ ಮಾಹಿತಿಯನ್ನು ವಿಶ್ಲೇಷಿಸಿ, 'ಹುಲಿಗಳ, ಸಸ್ಯಾಹಾರಿ ಹಾಗೂ ಇತರ ಪ್ರಾಣಿಗಳ ವಾರ್ಷಿಕ ವರದಿ– 2024' ಪ್ರಕಟಿಸಲಾಗಿದೆ.

ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಒಟ್ಟು 2,160 ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಸುಮಾರು 61 ಲಕ್ಷ ವನ್ಯಜೀವಿ ಚಿತ್ರಗಳು ಪಡೆಯಲಾಗಿದೆ. ಹುಲಿ ಚಿತ್ರಗಳನ್ನು ಎ.ಐ (ಕೃತಕ ಬುದ್ಧಿಮತ್ತೆ) ಆಧಾರಿತ ತಂತ್ರಾಂಶದ ಮೂಲಕ ಪ್ರತ್ಯೇಕಿಸಲಾಗಿದ್ದು, ಪ್ರತಿ ಹುಲಿಯ ಎರಡು ಬದಿಯಲ್ಲಿನ ವಿಭಿನ್ನ ಪಟ್ಟೆ ವಿನ್ಯಾಸವನ್ನು ಗುರುತಿಸುವ ಮೂಲಕ ವಿಶಿಷ್ಟ ಹುಲಿಗಳನ್ನು ಗುರುತಿಸಲಾಗುತ್ತದೆ. ಮುಂಬರುವ 'ಅಖಿಲ ಭಾರತ ಹುಲಿ ಅಂದಾಜು ವರದಿ- 2026' ರಿಂದ ಕರ್ನಾಟಕದಲ್ಲಿರುವ ಹುಲಿಗಳ ನಿಖರ ಸಂಖ್ಯೆ ಲಭ್ಯವಾಗಲಿದೆ.

ಹುಲಿಗಳ ಚಲನ ಚಟುವಟಿಕೆ ಕಾರಣದಿಂದ, ರಾಜ್ಯದ ಐದು ಹುಲಿ ಸಂರಕ್ಷಣೆ ಪ್ರದೇಶಗಳ ವಾರ್ಷಿಕ ಹುಲಿ ಸಮೀಕ್ಷೆ ಫಲಿತಾಂಶದಲ್ಲಿ ಏರುಪೇರು ಕಾಣಬಹುದು. ಆದರೆ, ಇಡೀ ರಾಜ್ಯದಲ್ಲಿ ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಸಮೀಕ್ಷೆ ಮಾಡಲಾಗುತ್ತಿದ್ದು, ಐದು ಹುಲಿ ಸಂರಕ್ಷಿತ ಪ್ರದೇಶಗಳು ಹಾಗೂ ಇತರ ಹುಲಿ ವಾಸಸ್ಥಾನಗಳಲ್ಲೂ ಹುಲಿಗಳ ಸಂಖ್ಯೆ ಕ್ರಮೇಣ ಏರಿಕೆ ಆಗಿದೆ ಎಂದೂ ವರದಿಯಲ್ಲಿದೆ.

ಸಚಿವರಿಗೆ ಬೇಡವಾದ 'ಕಣ್ಗಾವಲು'

ಒಂದನೇ ಪುಟದಿಂದ...

ಸಿ.ಎಂ ನಿವಾಸಕ್ಕೆ ಮಾತ್ರ ಕ್ಯಾಮೆರಾಗಳನ್ನು ಕಡ್ಡಾಯವಾಗಿ ಅಳವಡಿಸಬೇಕಿದೆ. ಈ ಕಾರಣದಿಂದ ಸಿದ್ದರಾಮಯ್ಯ ಅವರ ಅಧಿಕೃತ ಸರ್ಕಾರಿ ನಿವಾಸ 'ಕಾವೇರಿ'ಯಲ್ಲಿ ಕೆಲ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇನ್ನು ಕೆಲವು ಕ್ಯಾಮೆರಾಗಳನ್ನು ಮುಖ್ಯಮಂತ್ರಿ ಅವರೇ ವೈಯಕ್ತಿಕ ವೆಚ್ಚದಲ್ಲಿ ಹಾಕಿಸಿಕೊಂಡಿದ್ದಾರೆ.

ಉಳಿದಂತೆ ನಗರದ ಕೇಂದ್ರ ಭಾಗದ ವಿವಿಧೆಡೆ ಇರುವ ಸಚಿವರ ಅಧಿಕೃತ ನಿವಾಸಗಳಲ್ಲಿ, 12 ನಿವಾಸಗಳನ್ನು ಪರಿಶೀಲಿಸಲಾಯಿತು. ವಿಧಾನ ಸಭಾಧ್ಯಕ್ಷ, ವಿಧಾನ ಪರಿಷತ್ ಸಭಾಪತಿ ಅವರ ಅಧಿಕೃತ ನಿವಾಸಗಳ ಹೊರಗೂ ಪರಿಶೀಲಿಸಲಾಯಿತು. ಯಾರ ಮನೆಗಳಲ್ಲೂ ಅಧಿಕೃತ ಸಿ.ಸಿ.ಟಿ.ವಿ ಕ್ಯಾಮೆರಾ ಇಲ್ಲ. ಐವರು ಸಚಿವರು ಮಾತ್ರ ವೈಯಕ್ತಿಕವಾಗಿ ಇಂತಹ ಭದ್ರತಾ ವ್ಯವಸ್ಥೆ ಮಾಡಿಸಿಕೊಂಡಿದ್ದಾರೆ. ಆದರೆ ಆ ಕ್ಯಾಮೆರಾಗಳ ದೃಶ್ಯಾವಳಿಗಳು ಅವರ ನಿಯಂತ್ರಣದಲ್ಲೇ ಇರುತ್ತವೆ.

'ಕೆಲವರು ಕ್ಯಾಮೆರಾ ಬೇಕು ಎಂದು ಹಾಕಿಸಿಕೊಳ್ಳುತ್ತಾರೆ. ಆದರೆ ಕ್ಯಾಮೆರಾ ದೃಶ್ಯಾವಳಿ ಅವರ ನಿಯಂತ್ರಣದಲ್ಲೇ ಇರುತ್ತದೆ. ಇನ್ನು ಅನೇಕರು ಕ್ಯಾಮೆರಾ ಹಾಕಿಸಿಕೊಳ್ಳುವುದೇ ಇಲ್ಲ. ಏನಾದರೂ ಅಚಾತುರ್ಯ ನಡೆದರೆ ಅದಕ್ಕೆ ಸಾಕ್ಷ್ಯಗಳೇ ಇರುವುದಿಲ್ಲ. ಮೊದಲಿನಿಂದಲೂ ಹೀಗೆಯೇ ನಡೆದುಕೊಂಡು ಬಂದಿದೆ' ಎನ್ನುತ್ತಾರೆ ಸಚಿವರ ಅಧಿಕೃತ ನಿವಾಸಗಳ ಸಿಬ್ಬಂದಿ.



ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಅಧಿಕೃತ ನಿವಾಸದ ಗೋಡೆಯ ಮೇಲೆ ಒಂದು ಸಿ.ಸಿ.ಟಿ.ವಿ ಕ್ಯಾಮೆರಾ ಇದ್ದು, ಹೊರಾವರಣದಿಂದ ಬಹಳ ದೂರವಿದೆ ಚಿತ್ರ: ರಂಜು ಪಿ.

ನಾಗರಿಕರ ಮೇಲೆ ಕ್ಯಾಮೆರಾ ಕಣ್ಗಾವಲು

- ಬೆಂಗಳೂರಿನಲ್ಲಿ ಪೊಲೀಸ್ ಇಲಾಖೆ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳು 7,500
- 3,000 ಸ್ಥಳಗಳಲ್ಲಿ ಈ ಕ್ಯಾಮೆರಾಗಳು ಇದ್ದು, ಕೇಂದ್ರ ನಿಯಂತ್ರಣ ಕೊಠಡಿಗೆ ದೃಶ್ಯಾವಳಿಗಳನ್ನು ರವಾನಿಸುತ್ತವೆ
- 890 ಕೃತಕ ಬುದ್ಧಿಮತ್ತೆ (ಎಐ) ಕ್ಯಾಮೆರಾಗಳನ್ನು ಅಳವಡಿಸಲು ಗೃಹ ಇಲಾಖೆ ಕ್ರಮ ತೆಗೆದುಕೊಂಡಿದೆ
- 500 ಎ.ಐ ಕ್ಯಾಮೆರಾ ಅಳವಡಿಕೆಗೆ ಗುರುತಿಸಲಾದ ಸ್ಥಳಗಳ ಸಂಖ್ಯೆ ಬಳಕೆ ಸ್ವರೂಪ
- ಈ ಮೊದಲು ನಗರದಲ್ಲಿ ಸಂಚಾರ ವ್ಯವಸ್ಥೆಯ ಮೇಲೆ ನಿಗಾ ಇರಿಸಲು ಸಿ.ಸಿ.ಟಿ.ವಿ ಕ್ಯಾಮೆರಾಗಳ ಬಳಕೆ
- ನಿರ್ಭಯಾ ಪ್ರಕರಣದ ನಂತರ ಮಹಿಳಾ ಸುರಕ್ಷತೆ ಕಾರಣಕ್ಕಾಗಿ ಎಲ್ಲ ರಸ್ತೆಗಳಲ್ಲಿ, ವೃತ್ತಗಳಲ್ಲಿ, ಜನವಿರಳ ಪ್ರದೇಶಗಳಲ್ಲಿ 7000ಕ್ಕೂ ಹೆಚ್ಚು ಕ್ಯಾಮೆರಾಗಳ ಅಳವಡಿಕೆ. 'ನಿರ್ಭಯಾ' ನಿಧಿ ಬಳಕೆ
- ಬಸ್ ನಿಲ್ದಾಣ, ಆಟೊ ನಿಲ್ದಾಣ, ಉದ್ಯಾನ, ಕ್ರೀಡಾಂಗಣ, ಶಾಲಾ–ಕಾಲೇಜುಗಳು ಮತ್ತು ಪಾರ್ಕಿಂಗ್ ಪ್ರದೇಶಗಳಲ್ಲಿ ಕ್ಯಾಮೆರಾ ಕಣ್ಗಾವಲು
- ಸುರಕ್ಷತೆ ದೃಷ್ಟಿಯಿಂದ ಮನೆ–ಅಂಗಡಿ, ಕಚೇರಿಗಳಲ್ಲೂ ಸಿಸಿಟಿವಿ ಕ್ಯಾಮೆರಾ ಬಳಕೆ ಮಾಡುತ್ತಿರುವ ಸಾರ್ವಜನಿಕರು
- ಪ್ರವೇಶ ದ್ವಾರ ಮತ್ತು ರಸ್ತೆಯತ್ತ ಮುಖಮಾಡಿಯೇ ಕ್ಯಾಮೆರಾಗಳ ಅಳವಡಿಕೆ

ಎಲ್ಲೆಲ್ಲಿದೆ, ಎಲ್ಲೆಲ್ಲಿಲ್ಲ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧಿಕೃತ ನಿವಾಸ, ಸಚಿವರಾದ ಸತೀಶ ಜಾರಕಿಹೊಳಿ, ಜಮೀರ್ ಅಹಮದ್ ಖಾನ್, ಕೆ.ಜೆ.ಜಾರ್ಜ್ ಮತ್ತು ಲಕ್ಷ್ಮೀ ಹೆಬ್ಬಾಳಕರ ಮನೆಗಳಲ್ಲಿ ವೈಯಕ್ತಿಕವಾಗಿ ಹಾಕಿಸಿಕೊಂಡ ಕ್ಯಾಮೆರಾಗಳು ಇವೆ.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರಿಗೆ ಸೆವೆನ್ ಮಿನಿಸ್ಟರ್ಸ್ ಹೌಸ್ ಸಮುಚ್ಚಯದಲ್ಲಿ ನೀಡಲಾಗಿರುವ ಅಧಿಕೃತ ನಿವಾಸದಲ್ಲಿ ಕ್ಯಾಮೆರಾಗಳು ಇಲ್ಲ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಮನೆಯ ಕಾಂಪೌಂಡ್ ಮತ್ತು ಆವರಣದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳು ಇಲ್ಲ.

ಸಚಿವರಾದ ಎಚ್.ಸಿ.ಮಹದೇವಪ್ಪ, ಈಶ್ವರ ಬಿ.ಖಂಡ್ರೆ, ಕೆ.ಎಚ್.ಮುನಿಯಪ್ಪ, ಎನ್.ಚಲುವರಾಯಸ್ವಾಮಿ, ಸಂತೋಷ್ ಲಾಡ್, ಎಂ.ಬಿ. ಪಾಟೀಲ, ಪ್ರಿಯಾಂಕ್ ಖರ್ಗೆ ಅವರ ಅಧಿಕೃತ ನಿವಾಸದ ಆವರಣದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳು ಕಾಣಲಿಲ್ಲ.

ಮಹಾರಾಷ್ಟ್ರದಲ್ಲಿ ಆಸ್ಪತ್ರೆಗೆ ದಾಖಲು ● ಪ್ರೀತಿಸಿ ಮದುವೆ, ಕೆಲಸ ವಿಚಾರಕ್ಕೆ ಗಲಾಟೆ

ಆತ್ಮಹತ್ಯೆಗೆ ಯತ್ನಿಸಿದ ಆರೋಪಿ ರಾಕೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ದೊಡ್ಡ ಕಮ್ಮನಹಳ್ಳಿಯ ಮನೆಯೊಂದರಲ್ಲಿ ಪತ್ನಿ ಗೌರಿ ಅನಿಲ್ ಸಾಂಬೇಕರ್(32) ಅವರನ್ನು ಕೊಲೆ ಮಾಡಿ, ಮೃತದೇಹವನ್ನು ಟ್ರಾಲಿ ಬ್ಯಾಗ್‌ನಲ್ಲಿ ತುಂಬಿಟ್ಟಿದ್ದ ಪತಿ, ಆರೋಪಿ ರಾಕೇಶ್ ರಾಜೇಂದ್ರ ಕೇಲ್ಡಾರ್ ಸಹ ಮಹಾರಾಷ್ಟ್ರದಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಆತನನ್ನು ಪುಣೆಯ ಸಸೂನ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಆರೋಪಿಯನ್ನು ವಶಕ್ಕೆ ಪಡೆದುಕೊಳ್ಳಲು ಹುಳಿಮಾವು ಠಾಣೆಯ ಪೊಲೀಸರು ಪುಣೆಗೆ ತೆರಳಿದ್ದಾರೆ. ಆರೋಪಿಯ ಆರೋಗ್ಯದಲ್ಲಿ ಚೇತರಿಕೆ ಕಾಣಿಸಿದ ಬಳಿಕ ವಶಕ್ಕೆ ಪಡೆದುಕೊಂಡು, ಅಲ್ಲಿನ ನ್ಯಾಯಾಲಯಕ್ಕೆ ಹಾಜರು ಪಡಿಸಿ ಬೆಂಗಳೂರಿಗೆ ಕರೆತರಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯ ದೊಡ್ಡ ಕಮ್ಮನಹಳ್ಳಿಯ ಅಪಾರ್ಟ್‌ಮೆಂಟ್ ಬಳಿಯ ಮನೆಯೊಂದರ ಮೂರನೇ ಮಹಡಿಯಲ್ಲಿ ಮಹಿಳೆಯ ಕೊಲೆ ನಡೆದಿರುವುದು ಗುರುವಾರ ರಾತ್ರಿ ಪೊಲೀಸರಿಗೆ ಗೊತ್ತಾಗಿತ್ತು. ಮನೆಯ ಬಾಗಿಲು ಒಡೆದು ಪರಿಶೀಲಿಸಿದಾಗ ಟ್ರಾಲಿ ಬ್ಯಾಗ್‌ನಲ್ಲಿ ಮೃತದೇಹ ಪತ್ತೆ ಆಗಿತ್ತು.



ಆರೋಪಿ ರಾಕೇಶ್ ಹಾಗೂ ಕೊಲೆಯಾದ ಗೌರಿ

ಮೃತದೇಹದ ಎದುರು ಕುಳಿತಿದ್ದ ಆರೋಪಿ

ಪತ್ನಿಯ ಕೊಲೆ ಮಾಡಿ ಕೆಲಹೊತ್ತು ಮೃತದೇಹದ ಎದುರೇ ಆರೋಪಿ ಕುಳಿತಿದ್ದ. ಅದಾದ ಮೇಲೆ ಶವ ವಿಲೇವಾರಿಗೆ ಪ್ರಯತ್ನಿಸಿದ್ದ ಎಂಬುದು ಗೊತ್ತಾಗಿದೆ.

ಪ್ರೀತಿಸಿ ಮದುವೆ: 'ಕೊಲೆಯಾದ ಗೌರಿ ಅವರ ತಂದೆ ಬೆಳಗಾವಿಯವರು. ಗೌರಿ ಅವರಿಗೆ ಐದು ವರ್ಷವಿದ್ದಾಗ ಅವರ ತಂದೆ ಮೃತಪಟ್ಟಿದ್ದರು. ನಂತರ, ಇಡೀ ಕುಟುಂಬ ಮಹಾರಾಷ್ಟ್ರಕ್ಕೆ ತೆರಳಿ ಅಲ್ಲಿಯೇ ನೆಲಸಿತ್ತು. ಸೋದರ ಮಾವನ ಮಗ ರಾಕೇಶ್‌ನನ್ನು ಗೌರಿ ಪ್ರೀತಿಸಿದ್ದರು. ಮದುವೆಗೆ ತಾಯಿ ಹಾಗೂ ಸಹೋದರ ಗಣೇಶ್ ವಿರೋಧ ವ್ಯಕ್ತಪಡಿಸಿದ್ದರು. ಮನೆಯವರ ವಿರೋಧದ ಮಧ್ಯೆ ಎರಡು ವರ್ಷದ ಹಿಂದೆ ಮಹಾರಾಷ್ಟ್ರದ ರಾಕೇಶ್ ರಾಜೇಂದ್ರ ಕೇಲ್ಡಾರ್‌ನನ್ನು ಗೌರಿ ಮದುವೆ ಆಗಿದ್ದರು' ಎಂದು ಮೂಲಗಳು ತಿಳಿಸಿವೆ.

ಆರಂಭದಲ್ಲೇ ವೈಮನಸ್ಸು: 'ಮದುವೆ ಆದ ಆರಂಭದಲ್ಲೇ ಗಂಡನ ಮನೆಯವರಿಗೂ ಗೌರಿ ಅವರಿಗೂ ಹೊಂದಾಣಿಕೆಯ ಸಮಸ್ಯೆ ಆಗಿತ್ತು. ದಂಪತಿ ಪ್ರತ್ಯೇಕವಾಗಿ ವಾಸಿಸಲು ನಿರ್ಧರಿಸಿದ್ದರು. ರಾಕೇಶ್ ಬಿ.ಕಾಂ ಪದವಿ ಪಡೆದಿದ್ದ, ಗೌರಿ ಸಮೂಹ ಸಂವಹನ ವಿಭಾಗದಲ್ಲಿ ಪದವಿ ಪಡೆದುಕೊಂಡಿದ್ದರು. ಒಂದು ತಿಂಗಳ ಹಿಂದೆ ಬೆಂಗಳೂರಿಗೆ ಬಂದು ದೊಡ್ಡ ಕಮ್ಮನಹಳ್ಳಿಯಲ್ಲಿ ಬಾಡಿಗೆಗೆ ಮನೆ ಪಡೆದು ನೆಲಸಿದ್ದರು. ರಾಕೇಶ್‌ಗೆ ಖಾಸಗಿ ಕಂಪನಿಯಲ್ಲಿ ಕೆಲಸ ಸಿಕ್ಕಿತ್ತು. ಪತ್ನಿ ಕೆಲಸದ ಹುಡುಕಾಟದಲ್ಲಿದ್ದರು' ಎಂದು ಮೂಲಗಳು ಹೇಳಿವೆ

ಕೆಲಸದ ವಿಚಾರಕ್ಕೆ ಗಲಾಟೆ: ಗೌರಿ ಅವರು ಕೆಲಸಕ್ಕೆ ವಿವಿಧ ಕಂಪನಿಗಳಿಗೆ ಅರ್ಜಿ ಹಾಕಿದ್ದರು. ಎಲ್ಲಿಯೂ ಕೆಲಸ ಸಿಕ್ಕಿರಲಿಲ್ಲ. ಇದರಿಂದ ಬೇಸರಗೊಂಡು ಗಂಡನನ್ನೇ ದೂರಿದ್ದರು. 'ಮತ್ತೆ ಮಹಾರಾಷ್ಟ್ರಕ್ಕೆ ವಾಪಸ್ ಹೋಗೋಣ' ಎಂದು ಹೇಳಿದ್ದರು. ರಾಕೇಶ್ ಪತ್ನಿಯ ಮಾತು ಕೇಳಿರಲಿಲ್ಲ. ಇದೇ ವಿಚಾರಕ್ಕೆ ಮಾರ್ಚ್ 26ರಂದು ದಂಪತಿ ಮಧ್ಯೆ ಗಲಾಟೆ ನಡೆದಿತ್ತು. ಮೊದಲಿಗೆ ಪತ್ನಿಯ ಮೇಲೆ ರಾಕೇಶ್ ಹಲ್ಲೆ ನಡೆಸಿದ್ದ. ಕೋಪಗೊಂಡಿದ್ದ ಗೌರಿ ಅಡುಗೆ ಕೋಣೆಯಲ್ಲಿದ್ದ ಚಾಕುವನ್ನು ಪತಿಯತ್ತ ಎಸೆದಿದ್ದರು. ಅದೇ ಚಾಕು ತೆಗೆದುಕೊಂಡು ಗೌರಿಯ ಕುತ್ತಿಗೆಗೆ ಇರಿದು ಕೊಲೆ ಮಾಡಿದ್ದ. ಮೃತದೇಹವನ್ನು ಸಾಗಣೆ ಮಾಡಲು ಕಾಲು ಮುರಿದು ಟ್ರಾಲಿ ಬ್ಯಾಗ್‌ನಲ್ಲಿ ತುಂಬಿದ್ದ. ಮನೆಯಿಂದ ಬ್ಯಾಗ್ ಅನ್ನು ಹೊರಕ್ಕೆ ಕೊಂಡೊಯ್ಯಲು ಮುಂದಾದ ವೇಳೆ ಹ್ಯಾಂಡಲ್ ತುಂಡಾಗಿತ್ತು. ಶೌಚಾಲಯದಲ್ಲಿ ಟ್ರಾಲಿ ಬ್ಯಾಗ್ ಅನ್ನು ಇಟ್ಟು ಕಾರಿನಲ್ಲಿ ಪರಾರಿ ಆಗಿದ್ದ' ಎಂದು ಮೂಲಗಳು ತಿಳಿಸಿವೆ.

ಅಸ್ವಸ್ಥನಾಗಿ ಬಿದ್ದಿದ್ದ...

ಕೃತ್ಯ ಎಸಗಿದ ಬಳಿಕ ಆರೋಪಿ ಮುಂಬೈಗೆ ತೆರಳಿದ್ದ. ಮುಂಬೈನ ಶಿರ್ವಾಲ್ ಪೊಲೀಸ್ ಠಾಣೆ ಸಮೀಪದಲ್ಲಿ ಅಸ್ವಸ್ಥನಾಗಿ ಬಿದ್ದಿದ್ದ. ಅಲ್ಲಿನ ಪೊಲೀಸರು ಆತನನ್ನು ಆಸ್ಪತ್ರೆಗೆ ದಾಖಲು ಮಾಡಿದ್ದರು. ಸತಾರದ ಸ್ಥಳೀಯ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಗುರುವಾರ ತಡರಾತ್ರಿ ಪುಣೆಯ ಸಸೂನ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂಬುದಾಗಿ ಅಲ್ಲಿನ ಪೊಲೀಸರು ಮಾಹಿತಿ ನೀಡಿದ್ದಾರೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದ್ದಾರೆ.

ರಾಕೇಶ್ ಫಿನಾಯಿಲ್ ಕುಡಿದು ಅಸ್ವಸ್ಥಗೊಂಡಿರುವ ಸಾಧ್ಯತೆಯಿದೆ. ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಾವ, ಮನೆ ಮಾಲೀಕರಿಗೆ ಕರೆ: 'ಗುರುವಾರ ಮಧ್ಯಾಹ್ನ ಪುಣೆಗೆ ತಲುಪಿದ್ದ ಆರೋಪಿ, ಗೌರಿಯವರ ಅಣ್ಣನಿಗೆ ಕರೆ ಮಾಡಿ ಪತ್ನಿಯನ್ನು ಕೊಲೆ ಮಾಡಿರುವುದಾಗಿ ಹೇಳಿದ್ದ, ನಾನೂ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೇಳಿದ್ದ. ನಂತರ, ಮನೆ ಮಾಲೀಕರಿಗೂ ಕರೆ ಮಾಡಿ, ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ತಿಳಿಸಿದ್ದ. ಇದರಿಂದ ಗಾಬರಿಗೊಂಡಿದ್ದ ಮನೆಯ ಮಾಲೀಕರು, ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದಾಗ ಶೌಚಾಲಯದಲ್ಲಿ ಮೃತದೇಹ ಪತ್ತೆಯಾಗಿತ್ತು' ಎಂದು ಮೂಲಗಳು ಹೇಳಿವೆ.

ವಿನಯ್, ರಜತ್‌ಗೆ ಜಾಮೀನು

ಮಾರಕಾಸ್ತ್ರ ಹಿಡಿದು ರೀಲ್ಸ್ ಮಾಡಿದ್ದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರಕಾಸ್ತ್ರ ಹಿಡಿದು 'ರೀಲ್ಸ್' ಮಾಡಿದ್ದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಕಿರುತೆರೆಯ ನಟರಾದ ವಿನಯ್‌ಗೌಡ ಹಾಗೂ ರಜತ್ ಕಿಶನ್ ಅವರಿಗೆ 24ನೇ ಎಸಿಜೆಎಂ ನ್ಯಾಯಾಲಯವು ಶುಕ್ರವಾರ ಜಾಮೀನು ಮಂಜೂರು ಮಾಡಿದೆ.

'ಬಿಗ್ ಬಾಸ್'ನ ಮಾಜಿ ಸ್ಪರ್ಧಿಗಳಾದ ವಿನಯ್ ಹಾಗೂ ರಜತ್ ಅವರು ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶರು ಇಬ್ಬರಿಗೂ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದರು. ₹10 ಸಾವಿರ ಭದ್ರತಾ ಠೇವಣಿ ಇಡುವಂತೆ ನ್ಯಾಯಾಲಯವು ಷರತ್ತು ವಿಧಿಸಿದೆ.



ವಿನಯ್ ಹಾಗೂ ರಜತ್ ಕಿಶನ್

'ಆರೋಪಿಗಳು ಸಾಕ್ಷ್ಯನಾಶ ಮಾಡಿದ್ದು, ಜಾಮೀನು ನೀಡಬಾರದು' ಎಂದು ಪ್ರಾಸಿಕ್ಯೂಷನ್ ಪರವಾಗಿ ವಕೀಲರು ಕೋರಿದರು.

ವಿನಯ್ ಹಾಗೂ ರಜತ್ ಅವರು ತನಿಖೆಗೆ ಸಹಕಾರ ನೀಡಲಿದ್ದಾರೆ. ವಿನಯ್ ಅವರು ಭಾನುವಾರ ಸಿನಿಮಾವೊಂದರ ಚಿತ್ರೀಕರಣದಲ್ಲಿ ಪಾಲ್ಗೊಳ್ಳಬೇಕಿದೆ. ಅವರಿಗೆ ಕಣ್ಣಿನ ಸಮಸ್ಯೆಯೂ ಇದೆ. ಈ ಕಾರಣದಿಂದ ಜಾಮೀನು ಮಂಜೂರು ಮಾಡಬೇಕು ಎಂದು ಆರೋಪಿಗಳ ಪರ ವಕೀಲರು ಕೋರಿದರು. ಆಗ ನ್ಯಾಯಾಧೀಶರು ಪ್ರತಿಕ್ರಿಯಿಸಿ, 'ಸಿನಿಮಾ ಚಿತ್ರೀಕರಣದಲ್ಲಿ ಮಚ್ಚು ಹಿಡಿದರೆ ಏನು ಮಾಡುವುದು' ಎಂದು ಪ್ರಶ್ನಿಸಿದರು.

ವಿನಯ್ ಮತ್ತು ರಜತ್ ಅವರು ಮಾರಕಾಸ್ತ್ರ ಹಿಡಿದುಕೊಂಡು ರೀಲ್ಸ್ ಮಾಡಿ ವಿಡಿಯೊವನ್ನು ಇನ್‌ಸ್ಟಾಗ್ರಾಂನ 'ಬುಜ್ಜಿ' ಖಾತೆಯಲ್ಲಿ ಅಪ್ಲೋಡ್ ಮಾಡಿದ್ದರು. ಅದನ್ನು ಗಮನಿಸಿದ್ದ ಬಸವೇಶ್ವರನಗರ ಠಾಣೆ ಪೊಲೀಸರು, ಇಬ್ಬರ ವಿರುದ್ಧವೂ ಎಫ್‌ಐಆರ್ ದಾಖಲಿಸಿಕೊಂಡು ನೋಟಿಸ್ ಜಾರಿ ವಿಚಾರಣೆ ನಡೆಸಿದ್ದರು. ಬಳಿಕ ಸಾಕ್ಷ್ಯ ನಾಶಪಡಿಸಿದ ಆರೋಪದಡಿ ಇಬ್ಬರನ್ನೂ ಬಂಧಿಸಿದ್ದರು.

ಸಾಲ ತೀರಿಸಲು ಬಾಡಿಗೆದಾರರ ಮನೆಯಲ್ಲಿ ಕಳವು

ಮನೆ ಮಾಲೀಕನ ಮಗ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲ ತೀರಿಸಲು ಬಾಡಿಗೆದಾರರ ಮನೆಯ ಬಾಗಿಲು ತೆಗೆದು ಚಿನ್ನಾಭರಣ ಕಳವು ಮಾಡಿದ್ದ ಮನೆ ಮಾಲೀಕನ ಮಗನನ್ನು ಹನುಮಂತನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹನುಮಂತನಗರದ ನಿವಾಸಿ ವಿನಯ್ (26) ಅವರನ್ನು ಬಂಧಿಸಿ, ₹4.90 ಲಕ್ಷ ಮೌಲ್ಯದ 70 ಗ್ರಾಂ ಚಿನ್ನಾಭರಣವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಶ್ರೀನಿವಾಸ ನಗರ ನಿವಾಸಿಯಾಗಿರುವ ವಿನಯ್, ಮನೆಯನ್ನು ಬಾಡಿಗೆಗೆ ನೀಡಿದ್ದ. ವಿಪರೀತ ಸಾಲ ಮಾಡಿದ್ದು, ಅದನ್ನು ತೀರಿಸಲಾಗದೆ ಸಂಕಷ್ಟಕ್ಕೆ ಸಿಲುಕಿದ್ದ. ಬಾಡಿಗೆಗಿದ್ದ ಕುಟುಂಬದ ಸದಸ್ಯರು ಬೀಗ ಹಾಕಿಕೊಂಡು ದೇವಾಲಯಕ್ಕೆ ಹೋಗಿದ್ದರು. ಆ ವೇಳೆ ಆರೋಪಿ ವಿನಯ್ ತನ್ನ ಬಳಿ ಇದ್ದ ಬಾಡಿಗೆದಾರರ ಮನೆಯ ಮತ್ತೊಂದು ಕೀಲಿಯನ್ನು ಬಳಸಿ 70 ಗ್ರಾಂ. ಆಭರಣವನ್ನು ಕಳ್ಳತನ ಮಾಡಿದ್ದ' ಎಂದು ಪೊಲೀಸರು ತಿಳಿಸಿದರು.



'ನಂತರ ಮನೆಗೆ ಬಾಡಿಗೆದಾರರು ವಾಪಸ್ ಬಂದು ನೋಡಿದಾಗ ಆಭರಣ ಕಳ್ಳತನವಾಗಿತ್ತು. ಆದರೆ ಮನೆಯ ಬಾಗಿಲ ಬೀಗ ಒಡೆದಿರಲಿಲ್ಲ. ಈ ಬಗ್ಗೆ ಅವರು ಪೊಲೀಸರಿಗೆ ದೂರು ನೀಡಿದ್ದರು. ಆರೋಪಿಯು ಪೊಲೀಸರಿಗೆ ಸಿಕ್ಕಿ ಬೀಳುವ ಭಯದಿಂದ ಕದ್ದ ಚಿನ್ನ ಮಾರಾಟ ಮಾಡದೇ ಮನೆಯಲ್ಲಿ ಇಟ್ಟಿದ್ದ' ಎಂದು ಹೇಳಿದರು.

ಗಮನ ಬೇರೆಡೆ ಸೆಳೆದು ಕಳ್ಳತನ

ಬೆಂಗಳೂರು: ಚಿನ್ನಾಭರಣ ಅಂಗಡಿಯಲ್ಲಿ ಗಮನ ಬೇರೆಡೆ ಸೆಳೆದು ಕಳ್ಳತನ ಮಾಡಿದ್ದ ಆರೋಪಿಯನ್ನು ಹನುಮಂತನಗರ ಠಾಣೆ ಪೊಲೀಸರು ಬಂಧಿಸಿ ₹12.10 ಲಕ್ಷ ಮೌಲ್ಯದ 160 ಗ್ರಾಂ. ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ. ಹನುಮಂತನಗರದ ರವಿ ಬಂಧಿತ ಆರೋಪಿ.

'ರಾಘವೇಂದ್ರ ಬ್ಲಾಕ್‌ನ ನಿವಾಸಿಯೊಬ್ಬರು ಚಿನ್ನಾಭರಣ ಅಂಗಡಿ ಹೊಂದಿದ್ದರು. ಅವರ ಪತ್ನಿ ಅಂಗಡಿಯಲ್ಲಿದ್ದಾಗ ಗ್ರಾಹಕನಂತೆ ಬಂದ ಆರೋಪಿ,ಬೆಳ್ಳಿ ನಾಣ್ಯವನ್ನು ಖರೀದಿಸಿದ್ದ, ನಂತರ ಇತರೆ ಆಭರಣ ತೋರಿಸುವಂತೆ ಅವರ ಗಮನ ಬೇರೆಡೆ ಸೆಳೆದಿದ್ದ. ಆಭರಣ ತೆಗೆದು ತೋರಿಸು ವಷ್ಟರಲ್ಲಿ ಪ್ಲಾಸ್ಟಿಕ್ ಕವರ್‌ನಲ್ಲಿಟ್ಟಿದ್ದ 15 ಗ್ರಾಂ. ತೂಕದ ಚಿನ್ನದ ಸರವನ್ನು ಕಳವು ಮಾಡಿಕೊಂಡು ಪರಾರಿಯಾಗಿದ್ದ' ಎಂದು ಪೊಲೀಸರು ತಿಳಿಸಿದರು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿ, ಶ್ರೀನಗರ ಬಸ್ ನಿಲ್ದಾಣದ ಬಳಿ ಆರೋಪಿಯನ್ನು ಚಿನ್ನದ ಸರ ಸಮೇತ ವಶಕ್ಕೆ ಪಡೆದರು.

ಆರೋಪಿಯು ನಗರದ ವಿವಿಧೆಡೆ ಮನೆಗಳವು ಮಾಡಿರುವುದು ಗೊತ್ತಾಗಿದೆ.

ಈತನ ಮಾಹಿತಿಯಂತೆ ಸರ್ಜಾಪುರ ಮತ್ತು ಪೀಣ್ಯ ಪೊಲೀಸ್ ಠಾಣೆ ವ್ಯಾಪ್ತಿಗಳಲ್ಲಿ ಕಳವು ಮಾಡಿ ಹಳಿಯಾಳ ಮತ್ತು ಕಿತ್ತೂರು ನಿವಾಸಿಗಳಿಗೆ ಮಾರಾಟ ಮಾಡಿದ್ದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿ ಸೆರೆ

ಬೆಂಗಳೂರು: ಮನೆ ಮಾಲೀಕರ ಕಣ್ತಪ್ಪಿಸಿ ಆಭರಣಗಳನ್ನು ಕಳ್ಳತನ ಮಾಡಿ ಮಧ್ಯಪ್ರದೇಶಕ್ಕೆ ಪರಾರಿಯಾಗಿದ್ದ ಆರೋಪಿಯನ್ನು ಬೆಳ್ಳಂದೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶಾಹಡೋಲ್ ಜಿಲ್ಲೆಯ ನಿವಾಸಿ ಪಂಕಜ್ ಕುಮಾರ್ ಮಿಶ್ರ (28) ಎಂಬಾತನನ್ನು ಬಂಧಿಸಿ, ₹12 ಲಕ್ಷ ಮೌಲ್ಯದ 141 ಗ್ರಾಂ. ತೂಕದ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

ಸರ್ಜಾಪುರ ಮುಖ್ಯರಸ್ತೆಯಲ್ಲಿರುವ ಪುಷ್ಕರ ಅವರು 2 ವರ್ಷಗಳ ಹಿಂದೆ ಮನೆ ಕೆಲಸಕ್ಕೆ ಪಂಕಜ್‌ನನ್ನು ನೇಮಕ ಮಾಡಿಕೊಂಡಿದ್ದರು. ಅದೇ ಮನೆಯಲ್ಲಿ ಕಳ್ಳತನ ಮಾಡಿ ಪಂಕಜ್ ಮಧ್ಯಪ್ರದೇಶಕ್ಕೆ ಪರಾರಿಯಾಗಿದ್ದ.

ಹೆಚ್ಚುವರಿ ಬಸ್ ರಸ್ತೆಗಿಳಿಸಿದ ಕೆಎಸ್‌ಆರ್‌ಟಿಸಿ, ಖಾಸಗಿ ಸಂಸ್ಥೆಗಳು

ಹಬ್ಬ: ಹೆಚ್ಚಿದ ಜನ, ವಾಹನ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗ ಇನ್ನಿತರ ಕಾರಣಗಳಿಗಾಗಿ ಊರು ಬಿಟ್ಟು ನಗರಕ್ಕೆ ಬಂದಿರುವ ಜನರು ಯುಗಾದಿ, ರಂಜಾನ್ ಹಬ್ಬದ ನಿಮಿತ್ತ ತಮ್ಮ ಊರುಗಳಿಗೆ ಹೊರಟಿರುವುದರಿಂದ ನಗರದ ಬಸ್ ನಿಲ್ದಾಣಗಳಲ್ಲಿ ಭಾರಿ ಜನದಟ್ಟಣೆ ಉಂಟಾಯಿತು. ಹೊರ ಜಿಲ್ಲೆ, ಹೊರ ರಾಜ್ಯಗಳನ್ನು ಸಂಪರ್ಕಿಸುವ ನಗರದ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಸಂಚಾರಕ್ಕೆ ತೊಡಕುಂಟಾಯಿತು.

ಭಾನುವಾರ ಯುಗಾದಿ, ಸೋಮವಾರ ರಂಜಾನ್ ಹಬ್ಬಗಳಿದ್ದು, ಜನರು ಶುಕ್ರವಾರವೇ ಲಗೇಜುಗಳೊಂದಿಗೆ ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣ, ರೈಲು ನಿಲ್ದಾಣ, ಶಾಂತಿನಗರ ಬಸ್ ನಿಲ್ದಾಣ, ಮೈಸೂರು ರಸ್ತೆ ಸ್ಯಾಟ್‌ಲೈಟ್ ಬಸ್ ನಿಲ್ದಾಣಗಳ ಕಡೆಗೆ ಗುಂಪು ಗುಂಪಾಗಿ ಬರತೊಡಗಿದ್ದರು.

ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ಕಲಬುರ್ಗಿ ಸಹಿತ ವಿವಿಧ ನಗರಗಳಿಗೆ ಹೋಗುವವರು ನಿಲ್ದಾಣಗಳಲ್ಲಿ ಜಮಾಯಿಸಿದ್ದರಿಂದ ಬಸ್, ರೈಲು ನಿಲ್ದಾಣಗಳು ಕಿಕ್ಕಿರಿದಿದ್ದವು. ಮುಂಗಡವಾಗಿ ಟಿಕೆಟ್ ಕಾಯ್ದಿರಿಸಿದ್ದ ಜನ, ನಿಲ್ದಾಣಕ್ಕೆ ಬಂದು ಬಸ್ಸಿಗಾಗಿ ಹುಡುಕಾಟ ನಡೆಸಿದರು. ಮುಂಗಡ ಕಾಯ್ದಿರಿಸದೇ ಬಂದವರು ಸೀಟು ಸಿಗದೇ ಪರದಾಡುವಂತಾಯಿತು.

ಚಾಲುಕ್ಯ ವೃತ್ತ, ಆನಂದರಾವ್ ವೃತ್ತ, ಮೈಸೂರು ರಸ್ತೆ, ಯಶವಂತಪುರ, ಆರ್‌ಎಂಸಿ ಯಾರ್ಡ್, ತುಮಕೂರು ರಸ್ತೆ, ಹೊಸೂರು ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಅಧಿಕವಾಗಿತ್ತು. ಮೆಜೆಸ್ಟಿಕ್ ನಿಲ್ದಾಣದಿಂದ ಹೊರಟಿದ್ದ ಬಸ್‌ಗಳು, ದಟ್ಟಣೆಯಿಂದಾಗಿ ನಿಧಾನವಾಗಿ ಸಂಚರಿಸಿದವು.

ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದರಿಂದ ಕೆಎಸ್‌ಆರ್‌ಟಿಸಿ, ಹೆಚ್ಚುವರಿಯಾಗಿ 2,000 ಬಸ್‌ಗಳ ವ್ಯವಸ್ಥೆ ಮಾಡಿತ್ತು. ನಗರದಿಂದ ಹೊರಗೆ ಸಂಚರಿಸಲು ಬಿಎಂಟಿಸಿ ಬಸ್‌ಗಳನ್ನು ಕೂಡ ಬಳಸಿಕೊಳ್ಳಲಾಗಿದೆ. ಖಾಸಗಿ ಕಂಪನಿಗಳು ಸಹ ಹೆಚ್ಚುವರಿ ಬಸ್‌ಗಳನ್ನು ರಸ್ತೆಗೆ ಇಳಿಸಿದ್ದವು.



ಯುಗಾದಿ, ರಂಜಾನ್ ಹಬ್ಬದ ನಿಮಿತ್ತ ಜನರು ತಮ್ಮ ತಮ್ಮ ಊರುಗಳಿಗೆ ಹೊರಟಿರುವುದರಿಂದ ಮೆಜೆಸ್ಟಿಕ್ ಕೆಂಪೇಗೌಡ ಬಸ್‌ನಿಲ್ದಾಣದಲ್ಲಿ ಶುಕ್ರವಾರ ಭಾರಿ ದಟ್ಟಣೆ ಉಂಟಾಯಿತು ಪ್ರಜಾವಾಣಿ ಚಿತ್ರ

ಖಾಸಗಿ ಬಸ್ ದರ ಏರಿಕೆ: ದಾಳಿ

ಹಬ್ಬಗಳ ಪ್ರಯುಕ್ತ ಪ್ರಯಾಣಿಕರಿಂದ ಅಧಿಕ ದರ ವಸೂಲಿ ಮಾಡುತ್ತಿರುವ ಖಾಸಗಿ ಬಸ್‌ಗಳ ಮೇಲೆ ಸಾರಿಗೆ ಇಲಾಖೆ ಶುಕ್ರವಾರ ರಾತ್ರಿ ದಾಳಿ ಮಾಡಿದೆ.

ವಿವಿಧ ಪ್ರಾದೇಶಿಕ ಸಾರಿಗೆ ಕಚೇರಿ ವ್ಯಾಪ್ತಿಗಳಲ್ಲಿ ಕಾರ್ಯಾಚರಣೆ ನಡೆಸಲು ವಿಶೇಷ ಪಡೆಗಳನ್ನು ರಚಿಸಲಾಗಿತ್ತು. ಗೊರಗುಂಟೆ ಪಾಳ್ಯದಲ್ಲಿ 17 ಬಸ್‌ಗಳ ವಿರುದ್ಧ ಪ್ರಕರಣ ದಾಖಲಿಸಿ ₹ 9 ಸಾವಿರ ದಂಡ ವಿಧಿಸಲಾಗಿದೆ.

ಮೆಜೆಸ್ಟಿಕ್, ನೆಲಮಂಗಲ, ಕಲಾಸಿಪಾಳ್ಯ, ಜ್ಞಾನಭಾರತಿ ಸೇರಿದಂತೆ ವಿವಿಧೆಡೆ ದಾಳಿ ಮಾಡಲಾಗಿದೆ. ಕಾರ್ಯಾಚರಣೆ ಮುಂದುವರಿದಿದೆ ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

₹45 ಕೋಟಿ ಜಿಎಸ್‌ಟಿ ವಂಚನೆ, ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮತ್ತು ಕೋಲಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಪನಿಯೊಂದು ₹44.83 ಕೋಟಿಯಷ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಂಚಿಸಿರುವುದನ್ನು ಪತ್ತೆ ಮಾಡಿರುವ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು, ಉದ್ಯಮಿ ಒಬ್ಬರನ್ನು ಬಂಧಿಸಿದ್ದಾರೆ.

ಕೋಲಾರದಲ್ಲಿ ಕಾರ್ಖಾನೆ ಮತ್ತು ಬೆಂಗಳೂರಿನಲ್ಲಿ ಕಚೇರಿ ಹೊಂದಿರುವ ಲಾರಾಗಾ ಮೆಟಲ್ಸ್ ಪ್ರೈವೇಟ್ ಲಿಮಿಟೆಡ್ ನಕಲಿ ಇನ್ವಾಯ್ಸ್‌ಗಳು ಮತ್ತು ಬ್ಯಾಂಕ್ ಖಾತೆಗಳನ್ನು ಸೃಷ್ಟಿಸಿ, ಹೂಡುವಳಿ ತೆರಿಗೆ ಜಮೆ (ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್) ಅನ್ನು ಕ್ಲೇಮು ಮಾಡಿದೆ. ಕಂಪನಿಯ ಕಚೇರಿ ಮೇಲೆ ಈಚೆಗೆ ದಾಳಿ ನಡೆಸಿ, ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ ಈ ವಂಚನೆ ಪತ್ತೆಯಾಗಿದೆ ಎಂದು ತೆರಿಗೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ಕಂಪನಿಯ ಪ್ರವರ್ತಕರಾದ ಘನಶ್ಯಾಮ್ ಅಗರ್‌ವಾಲ್ ಮತ್ತು ಮುಕುಂದ್ ಅಗರ್‌ವಾಲ್ ಅವರು ತೆರಿಗೆ ವಂಚನೆಯಲ್ಲಿ ಭಾಗಿಯಾಗಿದ್ದಾರೆ. ಕಂಪನಿಯು ಈಚಿನ ತ್ರೈಮಾಸಿಕದಲ್ಲಿ ₹250 ಕೋಟಿ ಮೊತ್ತದ ವಹಿವಾಟು ನಡೆಸಿದೆ. ಆದರೆ ಇದರಲ್ಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಹೆಸರಿನಲ್ಲಿ ₹44.38 ಕೋಟಿ ವಂಚಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಸಂಬಂಧ ಮುಕುಂದ್ ಅಗರ್‌ವಾಲ್ ಅವರನ್ನು ಬಂಧಿಸಿ, ವಿಚಾರಣೆ ನಡೆಸಲಾಯಿತು. ಕಂಪನಿಯ ಸರಕು ಮತ್ತು ಸೇವೆ ಪಡೆದುಕೊಂಡ ಗ್ರಾಹಕರ ಹೆಸರಿನ ಬದಲಿಗೆ, ಪೂರೈಕೆದಾರರ ಹೆಸರಿನಲ್ಲೇ ನಕಲಿ ಇನ್ವಾಯ್ಸ್ ಸೃಷ್ಟಿಸಲಾಗುತ್ತಿತ್ತು. ಜತೆಗೆ ಬ್ಯಾಂಕ್ ಖಾತೆಗಳನ್ನೂ ತೆರೆದು, ಅದಕ್ಕೆ ಹಣ ಪಾವತಿ ಮಾಡಲಾಗುತ್ತಿತ್ತು. ಆ ಹಣವನ್ನು ಆರೋಪಿ ತಮ್ಮ ಖಾತೆಗೆ ವರ್ಗಾಯಿಸಿಕೊಳ್ಳುತ್ತಿದ್ದರು. ಆದರೆ ಈ ವಹಿವಾಟನ್ನು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅಡಿ ತೋರಿಸಿ, ತೆರಿಗೆ ವಂಚಿಸುತ್ತಿದ್ದರು ಎಂದು ಮಾಹಿತಿ ನೀಡಿದ್ದಾರೆ.

ಆರೋಪಿಯನ್ನು ಆರ್ಥಿಕ ಅಪರಾಧಗಳ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗಿತ್ತು. ನ್ಯಾಯಾಲಯವು ಮುಕುಂದ್ ಅವರನ್ನು ಏಪ್ರಿಲ್ 9ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.



ಎಂಬಿಎ ಸ್ನಾತಕೋತ್ತರ ಪದವಿಯಲ್ಲಿ ಚಿನ್ನದ ಪದಕ ಪಡೆದ ಹರಿಪ್ರಿಯಾ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಚಿನ್ನದ ಪದಕ ಪ್ರದಾನ ಮಾಡಿದರು. ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ, ಕುಲಾಧಿಪತಿ ಸಬಿತಾ ರಾಮಮೂರ್ತಿ ಹಾಜರಿದ್ದರು

'ತಂತ್ರಜ್ಞಾನದೊಂದಿಗೆ ಪ್ರಗತಿ ಸಾಧಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಜ್ಞಾನ, ತಂತ್ರಜ್ಞಾನ ಬೆಳವಣಿಗೆಯಲ್ಲಿ ದೇಶ ಪ್ರಗತಿ ಸಾಧಿಸಿದೆ. ಕೃತಕ ಬುದ್ಧಿಮತ್ತೆ ದೇಶದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅಭಿಪ್ರಾಯಪಟ್ಟರು.

ನಗರದ ಸಿಎಂಆರ್ ವಿಶ್ವವಿದ್ಯಾಲಯ ಆಯೋಜಿಸಿದ್ದ ಒಂಬತ್ತನೇ ಘಟಿಕೋತ್ಸವದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ವಿದ್ಯಾರ್ಥಿಗಳು ತಂತ್ರಜ್ಞಾನಗಳನ್ನು ಬಳಸಿಕೊಂಡು ಸ್ಪರ್ಧಾತ್ಮಕವಾಗಿ ಬೆಳೆಯುವ ಮೂಲಕ ದೇಶವನ್ನು ಬಲಿಷ್ಠವಾಗಿ ಕಟ್ಟಬೇಕು. ಈ ನಿಟ್ಟಿನಲ್ಲಿ ಸಿಎಂಆರ್ ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಒತ್ತು ನೀಡಿದೆ' ಎಂದು ಹೇಳಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, 'ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ದೇಶಕ್ಕೆ ಕೊಡುಗೆ ನೀಡಬೇಕು. ಸಿಎಂಆರ್ ವಿಶ್ವವಿದ್ಯಾಲಯವು, ವಿದ್ಯಾರ್ಥಿಗಳಿಗೆ ಗುಣಾತ್ಮಕ, ಮೌಲ್ಯಯುತ ಶಿಕ್ಷಣ ನೀಡುತ್ತಿದೆ. ಪ್ರತಿಭಾವಂತ ವಿದ್ಯಾರ್ಥಿ ಸಮುದಾಯವನ್ನು ದೇಶಕ್ಕೆ ಕೊಡುಗೆಯಾಗಿ ನೀಡುತ್ತಿದೆ' ಎಂದು ಶ್ಲಾಘಿಸಿದರು.

ಇದಕ್ಕೂ ಮುನ್ನ ರಾಜ್ಯಪಾಲರು 24 ಸಂಶೋಧನಾ ವಿದ್ಯಾರ್ಥಿಗಳಿಗೆ ಪಿಎಚ್.ಡಿ, 34 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಿದರು. 2023-24ನೇ ಸಾಲಿನಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆದ 2188 ವಿದ್ಯಾರ್ಥಿಗಳಿಗೆ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಸಿ.ರಾಮಮೂರ್ತಿ ಮತ್ತು ಕುಲಾಧಿಪತಿ ಸಬಿತಾ ರಾಮಮೂರ್ತಿ ಪದವಿ ಪ್ರಮಾಣ ಪತ್ರ ಪ್ರದಾನ ಮಾಡಿದರು.

ಕುಲಪತಿ ಎಚ್.ಬಿ.ರಾಘವೇಂದ್ರ, ಸಿಎಂಆರ್ ಜ್ಞಾನಧಾರ ಟ್ರಸ್ಟ್ ಕಾರ್ಯದರ್ಶಿ ಕೆ.ಸಿ ಜಗನ್ನಾಥ ರೆಡ್ಡಿ, ಸಹ ಕುಲಾಧಿಪತಿ ಕೆ.ಆರ್ ಜಯದೀಪ್, ಕುಲಸಚಿವ ಪ್ರವೀಣ್ ಮತ್ತಿತರರು ಹಾಜರಿದ್ದರು.

'ನಾಡಿನ ಅಭಿವೃದ್ಧಿಗೆ ಸಮಿತಿ ಮಾಡಿದ್ದ ನಾಲ್ವಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೂರದೃಷ್ಟಿ ಇಟ್ಟುಕೊಂಡು ಮೂರು ಸಮಿತಿಗಳನ್ನು ಮಾಡಿ ನಾಡಿನ ಸಮಗ್ರ ಅಭಿವೃದ್ಧಿಗಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಶ್ರಮಿಸಿದ್ದರು ಎಂದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಅಧ್ಯಕ್ಷ ಚನ್ನಪ್ಪ ಕಟ್ಟಿ ಸ್ಮರಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಶುಕ್ರವಾರ ಹಮ್ಮಿಕೊಂಡಿದ್ದ ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾ ಸಮಿತಿ, ಭೂ ವ್ಯವಸಾಯ ಸಮಿತಿ ಮತ್ತು ಕೈಗಾರಿಕಾ ಸಮಿತಿಗಳನ್ನು ಮಾಡಿ ಯೋಜನೆಗಳನ್ನು ರೂಪಿಸಿದ್ದರು ಎಂದು ಹೇಳಿದರು.



ಚನ್ನಪ್ಪ ಕಟ್ಟಿ

ಮುಜರಾಯಿ ಇಲಾಖೆಯ ಆಯುಕ್ತ ಎಂ.ವಿ. ವೆಂಕಟೇಶ್ ಮಾತನಾಡಿ, 'ಕನ್ನಡವನ್ನು ಪೂರ್ಣ ಪ್ರಮಾಣದಲ್ಲಿ ಪ್ರೀತಿಸಿ, ಅನುಸರಿಸಬೇಕು. ಆಡಳಿತ, ತಂತ್ರಜ್ಞಾನ ಒಳಗೊಂಡಂತೆ ಪ್ರತಿ ಹಂತದಲ್ಲಿಯೂ ಬಳಕೆ ಮಾಡಬೇಕು. ಬದುಕಿನ ಭಾಷೆಯನ್ನಾಗಿ ಮಾಡಿಕೊಳ್ಳಬೇಕು. ಕನ್ನಡದ ಸಾಧಕರನ್ನು ಗುರುತಿಸುವ ಮೂಲಕ ಸಾಧನೆ ಮಾಡುವವರಿಗೆ ಇನ್ನಷ್ಟು ಸ್ಫೂರ್ತಿ ತುಂಬಬೇಕು. ಆಗ ಕನ್ನಡ ಉಳಿಯುತ್ತದೆ' ಎಂದು ಸಲಹೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅಧ್ಯಕ್ಷತೆ ವಹಿಸಿದ್ದರು. ಮಾಹಿತಿ ಆಯೋಗ ಆಯುಕ್ತ ರುದ್ರಣ್ಣ ಹರ್ತಿಕೋಟೆ, ದಾನಿಗಳಾದ ಎನ್.ಕೆ. ರಮೇಶ್, ಪಿ. ಮಹೇಶ್ ಉಪಸ್ಥಿತರಿದ್ದರು.

ಜೋಯಾಲುಕ್ಕಾಸ್‌ನಲ್ಲಿ ವಜ್ರಾಭರಣ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ವ್ಯಾಪಾರ ಸಂಸ್ಥೆ ಜೋಯಾಲುಕ್ಕಾಸ್‌ನಲ್ಲಿ ಶುಕ್ರವಾರ 'ಪ್ರೈಡ್ ಡೈಮಂಡ್ ವೆಡ್ಡಿಂಗ್' ಸಂಗ್ರಹ ಅನಾವರಣಗೊಳಿಸಲಾಯಿತು.

ನಗರದ ಎಂ.ಜಿ.ರಸ್ತೆಯ ಮಳಿಗೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಟಿ ಮಾಳವಿಕಾ ಶರ್ಮಾ, ಸಂಸ್ಥೆಯ ಮುಖ್ಯ ಕಾರ್ಯಾಚರಣೆ ಅಧಿಕಾರಿ (ಸಿಒಒ) ಬೇಬಿ ಜಾರ್ಜ್ ಹಾಗೂ ಗ್ರಾಹಕರು ವಜ್ರಾಭರಣಗಳನ್ನು ಪ್ರದರ್ಶಿಸಿದರು.

ಇದೇ ವೇಳೆ ರೂಪದರ್ಶಿಗಳು ವಜ್ರಾಭರಣಗಳನ್ನು ಧರಿಸಿ ರ‍್ಯಾಂಪ್ ವಾಕ್ ಮಾಡಿದರು. ಈ ಆಭರಣಗಳ ಸಂಗ್ರಹವು ವಧುವಿನ ಸೌಂದರ್ಯ ಹೆಚ್ಚಿಸಲಿದೆ. ಹೊಳೆಯುವ ವಜ್ರದ ನೆಕ್ಲೇಸ್‌ಗಳು, ಸೊಗಸಾದ ಕಿವಿಯೋಲೆಗಳು, ಬಳೆಗಳು ಮತ್ತು ಉಂಗುರಗಳು ಪ್ರಮುಖ ಆಕರ್ಷಣೆಯಾಗಿವೆ.

ಬೇಬಿ ಜಾರ್ಜ್ ಮಾತನಾಡಿ, 'ಸೊಬಗು ಹಾಗೂ ಅತ್ಯಾಧುನಿಕತೆ ಬಯಸುವ ವಧುಗಳಿಗಾಗಿ ವಿನ್ಯಾಸಗೊಳಿಸಿರುವ ಆಭರಣಗಳು ಜೋಯಾಲುಕ್ಕಾಸ್‌ನ ಎಲ್ಲ ಮಳಿಗೆಗಳಲ್ಲಿ ಲಭ್ಯ. ಬೆಂಗಳೂರಿನ ಜನರು ಹೊಸ ಫ್ಯಾಷನ್ ಅನ್ನು ಸ್ವೀಕರಿಸುತ್ತಾರೆ' ಎಂದು ಹೇಳಿದರು.

ನಟಿ ಮಾಳವಿಕಾ ಶರ್ಮಾ ಮಾತನಾಡಿ, 'ಸಾಂಪ್ರದಾಯಿಕ ಶೈಲಿ ಮತ್ತು ವಿನ್ಯಾಸದ ವಜ್ರಾಭರಣಗಳು ಆಕರ್ಷಕವಾಗಿದ್ದು, ನಾನು ಅಭಿಮಾನಿಯಾಗಿದ್ದೇನೆ. ಈ ಆಭರಣಗಳು ಗ್ರಾಹಕರಿಗೆ ಇಷ್ಟವಾಗಲಿವೆ' ಎಂದರು.



ನಗರದ ಎಂ.ಜಿ.ರಸ್ತೆಯ ಜೋಯಾಲುಕ್ಕಾಸ್ ಆಭರಣ ಮಳಿಗೆಯಲ್ಲಿ ಶುಕ್ರವಾರ ಸಂಸ್ಥೆಯ ಸಿಒಒ ಬೇಬಿ ಜಾರ್ಜ್, ನಟಿ ಮಾಳವಿಕಾ ಶರ್ಮಾ ಅವರು ಗ್ರಾಹಕರೊಂದಿಗೆ ಹೊಸ ವಿನ್ಯಾಸದ ವಜ್ರಾಭರಣಗಳನ್ನು ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು ಆರ್‌ಪಿಒ ವಿರುದ್ಧ ಪಾಕ್ ಸುಳ್ಳು ಸುದ್ದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ (ಆರ್‌ಪಿಒ) ಅವರನ್ನು ಗುರಿಯಾಗಿಸಿ ಪಾಕಿಸ್ತಾನದ ಕೆಲವು 'ಎಕ್ಸ್' ಬಳಕೆದಾರರು ಸುಳ್ಳು ಸುದ್ದಿ ಹಬ್ಬಿಸಿದ್ದಾರೆ.

ಬೆಂಗಳೂರಿನ ಆರ್‌ಪಿಒ ಅಜಿತ್ ಜಾನ್‌ಜೋಶುವಾ ಅವರು ಭಾರತದ ಗುಪ್ತಚರ ಸಂಸ್ಥೆ 'ರಾ'ಗೆ ಕೆಲಸ ಮಾಡುತ್ತಿದ್ದಾರೆ. ಬಲೂಚಿಸ್ತಾನದಲ್ಲಿ ರೈಲಿನ ಮೇಲೆ ನಡೆದ ಭಯೋತ್ಪಾದಕ ದಾಳಿಯಲ್ಲಿ ಅವರ ಕೈವಾಡವಿದೆ ಎಂದು ಕೆಲವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬಲೂಚಿಸ್ತಾನದ ಉಗ್ರಗಾಮಿ ಸಂಘಟನೆಯಾದ ಬಿಎಲ್‌ಎ ಪ್ರತಿನಿಧಿಗಳ ಜತೆ ಮಾತುಕತೆ ನಡೆಸಲು ಅವರು ಇರಾನ್‌ಗೂ ಭೇಟಿ ನೀಡಿದ್ದಾರೆ ಎಂದು ಕೆಲ ಪೋಸ್ಟ್‌ಗಳಲ್ಲಿ ಉಲ್ಲೇಖಿಸಲಾಗಿದೆ.

'ಅಜಿತ್ ಜಾನ್ ಜೋಶುವಾ ಅವರು ಬೆಂಗಳೂರಿನ ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ ಆಗಿದ್ದಾರೆ. ಅವರಿಗೆ ಸಂಬಂಧಿಸಿದ ಈ ಕೆಳಗಿನ ಪೋಸ್ಟ್‌ಗಳು ನಕಲಿ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು 'ಎಕ್ಸ್' ನಲ್ಲಿ ಪೋಸ್ಟ್ ಮಾಡಿದ್ದಾರೆ.

ನಗರದಲ್ಲಿ ಇಂದು

ದೇವಸ್ಥಾನ ಸ್ವಚ್ಛತಾ ಅಭಿಯಾನ: ಆಯೋಜನೆ: ಗಂಧದ ಗುಡಿ ಫೌಂಡೇಷನ್, ಸ್ಥಳ: ಪಂಚಮುಖಿ ಗಣೇಶ ದೇವಸ್ಥಾನ, ಹೊರಮಾವು, ಕೆ.ಆರ್. ಪುರ, ಬೆಳಿಗ್ಗೆ 7

ದಶಮಾನೋತ್ಸವ ಸಂಭ್ರಮ ಹಾಗೂ ಪ್ರಶಸ್ತಿ ಪ್ರದಾನ: ಗೊ.ರು.ಚನ್ನಬಸಪ್ಪ, ಅತಿಥಿಗಳು: ಮಹೇಶ ಜೋಶಿ, ಡಿ.ಪಿ. ಅನಂತ, ವಿಶ್ವೇಶ್ವರ ಭಟ್, ಮಹೇಂದ್ರ ಮುನ್ನೋತ್ ಜೈನ್, ಆಯೋಜನೆ: ಕಲಾ ದರ್ಪಣ-ಆರ್ಟ್‌ರಿಫ್ಲೆಕ್ಟ್ಸ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಾಂಸ್ಕೃತಿಕ ಕಾರ್ಯಕ್ರಮ ಬೆಳಿಗ್ಗೆ 8.30ರಿಂದ, ಸಭಾ ಕಾರ್ಯಕ್ರಮ ಬೆಳಿಗ್ಗೆ 11

ಲಕ್ಷ ಎಳ್ಳು ಬತ್ತಿ ದೀಪೋತ್ಸವ: ಶನೈಶ್ಚರ ಜಪ, ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ, ಹನುಮಾನ್ ಚಾಲೀಸ ಪಠಣ, ಆಯೋಜನೆ: ಪತಂಜಲಿ ಯೋಗ ಶಿಕ್ಷಣ ಸಂಸ್ಥೆ, ಗಾಯತ್ರಿ ಸೇವಾ ಪ್ರತಿಷ್ಠಾನ, ಸ್ಥಳ: ರಾಣಿ ಅಬ್ಬಕ್ಕ ಆಟದ ಮೈದಾನ, ಮಹಾಲಕ್ಷ್ಮಿ ಲೇಔಟ್, ಸಂಜೆ 4.30



ಕನ್ನಡ ಉಪನ್ಯಾಸಕರ ಸಮಾಗಮ: ಮುಖ್ಯ ಅತಿಥಿ: ಎಸ್.ಜಿ. ಸಿದ್ಧರಾಮಯ್ಯ, ಅಭಿನಂದಿತರು: ಎಲ್.ಎನ್. ಮುಕುಂದರಾಜ್, ಉಪಸ್ಥಿತಿ: ತ್ರಿವೇಣಿ ಪಿ., ಬೈರಹನುಮಯ್ಯ ಜಿ.ಎನ್., ಹೊ.ನ. ನೀಲಕಂಠೇಗೌಡ, ಅಧ್ಯಕ್ಷತೆ: ಜೀವನ್‌ಬಾಬು ಆರ್., ಆಯೋಜನೆ: ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಕನ್ನಡ ಉಪನ್ಯಾಸಕರ ವೇದಿಕೆ, ಸ್ಥಳ: ಕೇಂಬ್ರಿಡ್ಜ್ ಪದವಿ ಪೂರ್ವ ಕಾಲೇಜು, ಬಸವನಪುರ, ಕೆ.ಆರ್. ಪುರ, ಬೆಳಿಗ್ಗೆ 9

'ಶುಕ್ರ ಸಂಜೀವಿನೀ' ಯಕ್ಷಗಾನ ತಾಳಮದ್ದಳೆ: ಕಲಾವಿದರು: ಶಂಕರ ಭಟ್ಟ ಬಾರೆ, ಮಂಜುನಾಥ ದೇವದಮನೆ, ವೆಂಕಟೇಶ ಕತ್ರಗಾಲ, ರಘು ಶರ್ಮಾ, ಪ್ರಸನ್ನ ಭಟ್ಟ ಮಾಗೋಡ, ರವಿಶಂಕರ ದೊಡ್ನಳ್ಳಿ, ತಿರುಮಲೇಶ್ವರ ಬಾಲಿಗದ್ದೆ, ಸುಧೀರ ಹೆಗಡೆ ಕಲ್ಲಳ್ಳಿ, ವಿನಾಯಕ ಓಡ್ಲಮನೆ, ಫಾಟಕ್ ಯಕ್ಷ ಸಂಸ್ಕೃತಿ ಟ್ರಸ್ಟ್, ಹೋರಾ ಫೌಂಡೇಷನ್ ತಾಳಮದ್ದಳೆ ಒಕ್ಕೂಟ, ಸ್ಥಳ: ಚಿತ್ಪಾವನ ಸಮಾಜ, ರಾಜಾಜಿನಗರ, ಸಂಜೆ 4

ಸಾಹಿತ್ಯ ಸಂಜೆ: ವಿಕ್ರಮಾರ್ಜುನ ವಿಜಯಂ ಸರಣಿ ಉಪನ್ಯಾಸ: ಕೆ.ಎಸ್. ಮಧುಸೂದನ್, ಆಯೋಜನೆ ಮತ್ತು ಸ್ಥಳ: ಭಾನು ನೆನಪಿನ ನಾಣಿ ಅಂಗಳ, ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ 2ನೇ ಹಂತ, ಸಂಜೆ 6



ಕಾನೂನು ವಿದ್ಯಾರ್ಥಿಗಳಿಗೆ 'ವೃತ್ತಿ ಮಾರ್ಗದರ್ಶನ ಕಾರ್ಯಾಗಾರ': ಮುಖ್ಯ ಅತಿಥಿಗಳು: ಎಂ.ಜಿ. ಶಕುರೆ ಕಮಲ, ಎಚ್. ವಿ. ಪ್ರವೀಣ್ ಗೌಡ, ಪ್ರತಿಮಾ ನಾರಾಯಣ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ: ಶೇಷಾದ್ರಿಪುರಂ ಕಾನೂನು ಮಹಾವಿದ್ಯಾಲಯ, ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 9

ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿಗಳು: ಲಿಂಗರಾಜ ಗಾಂಧಿ, ಡಾ. ಮಹೇಶ್ ಆರ್. ಗೌಡ, ಅಧ್ಯಕ್ಷತೆ: ಎಚ್.ಎನ್. ಸುರೇಶ್, ಆಯೋಜನೆ: ಭಾರತೀಯ ವಿದ್ಯಾ ಭವನ, ಮಾನಸ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ, ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

'ಕ್ಲಾರೆಟ್ ಕಾವ್ಯ ಪ್ರಶಸ್ತಿ' ಪ್ರದಾನ ಹಾಗೂ 'ಎಳೆ ತಳಿರು' ಪುಸ್ತಕ ಬಿಡುಗಡೆ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ಥಾಮಸ್ ವಿ. ತೆನೆಡಿಯಲ್, ಪ್ರಶಸ್ತಿ ಪ್ರದಾನ: ದೀಪಿಕಾ ಬಿ.ಆರ್., ಅಧ್ಯಕ್ಷೀಯ ನುಡಿ: ಜೋಸೆಫ್ ಎಸ್., ಉಪಸ್ಥಿತಿ: ಮಾದೇಶ್ ಎನ್., ಆಯೋಜನೆ ಹಾಗೂ ಸ್ಥಳ: ಸೈಂಟ್ ಕ್ಲಾರೆಟ್ ಕಾಲೇಜು, ಜಾಲಹಳ್ಳಿ, ಬೆಳಿಗ್ಗೆ 11.15

ಮಹಿಳಾ ದಿನಾಚರಣೆ, ಮಾತೃ ಸೌರಭ ಸಂಭ್ರಮ ಹಾಗೂ ಕವಿಗೋಷ್ಠಿ: ಉದ್ಘಾಟನೆ: ಮನು ಬಳಿಗಾರ್, ಅಧ್ಯಕ್ಷತೆ: ಎಸ್. ಷಡಕ್ಷರಿ, ಅತಿಥಿಗಳು: ವೇಮಗಲ್ ನಾರಾಯಣಸ್ವಾಮಿ, ಮುದ್ದುಮೋಹನ್, ಪದ್ಮಿನಿ ನಾಗರಾಜು, ಕವಿಗೋಷ್ಠಿ ಅಧ್ಯಕ್ಷತೆ: ಶೀಲಾ ಅರಕಲಗೂಡು, ಆಯೋಜನೆ: ಋತುಸೌರಭ ಫೌಂಡೇಷನ್, ಡಾ. ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್. ಆರ್. ಕಾಲೊನಿ, ಸಂಜೆ 4

ಯುಗಾದಿ-ರಂಜಾನ್ ಸಾಮರಸ್ಯ, ಕವಿ ಸಮ್ಮಿಲನ: ಮೊಹಮ್ಮದ್ ಆಜಂ ಶಾಹೀದ್, ಪದ್ಮ ಟಿ. ಚಿನ್ಮಯಿ, ಹೇಮಂತ್ ಲಿಂಗಪ್ಪ, ಮಂಜುಳಾ ಬಿ.ವಿ., ಶಿವಶಂಕರ್ ಸೀಗೆಹಟ್ಟಿ, ಎಸ್.ಕೆ. ಮಂಜುನಾಥ್, ರೇಣುಕಾ ಕೊಡಕುಂಟಿ, ಲಕ್ಷ್ಮೀ ಕಿಶೋರ್ ಅರಸ್, ಆರ್.ಜೆ. ಪ್ರಿಯಾಂಕ, ರಮ್ಯಾ ನವೀನ್ ಕೃಷಿ, ಹರೀಶ್ ಎಸ್. ಸಿಂಗ್ರಿಹಳ್ಳಿ, ಕೌಶಿಕ್ ಬಿ.ಕೆ., ಶರಣ ಬಸವ, ಮಂಜುಳಾ ಭಾರ್ಗವಿ, ಬಿದಲೋಟಿ ರಂಗನಾಥ್, ಅರುಣ್ ಕುಮಾರ್ ಪುಷ್ಪದಂತ, ಶಾಂತಾ ಜಯಾನಂದ, ವಿರೇಶ ಸಜ್ಜನ, ಅಧ್ಯಕ್ಷತೆ: ಕೆ. ಷರೀಫಾ, ಆಯೋಜನೆ: ಜನಶಿಕ್ಷಣ ಟ್ರಸ್ಟ್, ಕ್ರಿಯಾ ಮಾಧ್ಯಮ, ಸ್ಥಳ: ಜನಶಕ್ತಿ ಮೀಡಿಯಾ, ಕ್ರಿಯಾ ಮಾಧ್ಯಮ ಕಚೇರಿ, ಸುಬ್ಬರಾಮ ಚೆಟ್ಟಿ ರಸ್ತೆ, ಬಸವನಗುಡಿ, ಸಂಜೆ 4

ಸಂಗೀತ ಬೈಠಕ್: ಗಾಯನ: ವಿಶಾಲ್ ಹೆಗಡೆ, ವಿವೇಕ್ ಭಟ್, ತಬಲಾ: ಸಂತೋಷ ಹೆಗಡೆ, ಸಂದೇಶ ಹೆಗಡೆ, ಹಾರ್ಮೋನಿಯಂ: ವಿಘ್ನೇಶ್ ಭಾಗವತ್, ಆಯೋಜನೆ ಹಾಗೂ ಸ್ಥಳ: ಬಾಗೇಶ್ರೀ ಸ್ಟುಡಿಯೊ, ಸಂಜೆ 5



ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-562123
ದೂರವಾಣಿ ಸಂಖ್ಯೆ: 080-23718487
ಇ-ಮೇಲ್: itstaff_ulb_mnhalli@yahoo.com
ಸಂಖ್ಯೆ: ಮಾ.ನ.ಕಾ/ತಾ.ಶಾ/25/2024-25 ದಿನಾಂಕ: 27-03-2025
ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)
2024-25ನೇ ಸಾಲಿನ ನಗರಸಭಾ ನಿಧಿ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ. INDENT-38078, INDENT-38099, INDENT-38103, INDENT-34672(SC)-Call-2, INDENT-34745 (SC)-Call-2, INDENT-34751 (SC)Call-2, INDENT-34707-Call-2.
ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿ ಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: 16.04.2025 ಸಂಜೆ 5.30 ಗಂಟೆಯವರೆಗೆ ಹಾಗೂ ಸಲ್ಲಿಸಿರುವ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 17.04.2025 ಸಂಜೆ 5.30 ಗಂಟೆಗೆ.
ಸಹಿ/- ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ
ವಾಸಾಸಂಇ/ವಾಪ್ರಾ/5968/ಸ್ಕ್ಯಾನ್/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸೋಲುಗಳ ಹೊಡೆತ, ಅವಮಾನಗಳ ಹೊಡೆತ, ಬಡತನದ ಹೊಡೆತ ಬಿದ್ದಾಗಲೇ ಮನುಷ್ಯನ ಬದುಕು ಬದಲಾಗುವುದು. –ಗೌತಮ ಬುದ್ಧ

ಹಾಲು, ವಿದ್ಯುತ್ ದರ ಏರಿಕೆ ಗ್ರಾಹಕರಿಗೆ ಪೆಟ್ಟಿನ ಮೇಲೆ ಪೆಟ್ಟು

ರಾಜ್ಯದಲ್ಲಿ ಹಾಲು ಮತ್ತು ವಿದ್ಯುತ್ ದರ ಏಕಕಾಲಕ್ಕೆ ಹೆಚ್ಚಳವಾಗಿದೆ. ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಹಾಲು ಮತ್ತು ಮೊಸರಿಗೆ ಪ್ರತಿ ಲೀಟರ್‌ಗೆ ₹ 4ರಷ್ಟು ಹೆಚ್ಚಳ ಮಾಡಿದೆ. ಇದೇ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ದರ ಪರಿಷ್ಕರಣೆ ಕೋರಿ ಸಲ್ಲಿಸಿದ್ದ ಅರ್ಜಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ತನ್ನ ತೀರ್ಮಾನವನ್ನು ಪ್ರಕಟಿಸಿದೆ. ವಿದ್ಯುತ್ ಬಳಕೆದಾರರು ಮಂಜೂರಾತಿ ಪಡೆದ ಲೋಡ್‌ನ ಪ್ರಮಾಣಕ್ಕೆ ಅನುಗುಣವಾಗಿ ನಿಗದಿತ ಶುಲ್ಕವನ್ನು ಹೆಚ್ಚಳ ಮಾಡುವುದಕ್ಕೆ ಆಯೋಗ ಒಪ್ಪಿಗೆ ಸೂಚಿಸಿದೆ. ಪ್ರತಿ ಕಿಲೊವಾಟ್ ಲೋಡ್‌ಗೆ ₹ 25ರಂತೆ ನಿಗದಿತ ಶುಲ್ಕವನ್ನು ಹೆಚ್ಚಳ ಮಾಡಲಾಗಿದೆ. ಇದೇ ಸಂದರ್ಭದಲ್ಲಿ ಗೃಹ ಬಳಕೆಯ ಪ್ರತಿ ಯೂನಿಟ್ ವಿದ್ಯುತ್ ದರವನ್ನು 10 ಪೈಸೆಯಷ್ಟು ಕಡಿಮೆ ಮಾಡಲಾಗಿದೆ. ವಿದ್ಯುತ್ ದರ ಇಳಿಕೆ ಮಾಡಿದಂತೆ ಬಿಂಬಿಸಿ ಜನರ ಮೇಲೆ ಭಾರಿ ಹೊರೆಯನ್ನು ಹೊರಿಸುವ ಈ ಕ್ರಮ ಸ್ವೀಕಾರಾರ್ಹವಲ್ಲ. ವಿದ್ಯುತ್ ಪ್ರಸರಣ ಮತ್ತು ಸರಬರಾಜು ನೌಕರರ ಪಿಂಚಣಿ ಹಾಗೂ ಗ್ರಾಚ್ಯುಟಿಗೆ ಸರ್ಕಾರ ಭರಿಸಬೇಕಾದ ಪಾಲನ್ನು ಗ್ರಾಹಕರಿಗೆ ವರ್ಗಾಯಿಸುವ ಪ್ರಸ್ತಾವವನ್ನು ಆಯೋಗವು ಕಳೆದ ವಾರ ಅನುಮೋದಿಸಿತ್ತು. ಇದರಿಂದಾಗಿ ಗ್ರಾಹಕರು ಪ್ರತಿ ಯೂನಿಟ್‌ಗೆ 36 ಪೈಸೆ ಹೆಚ್ಚುವರಿಯಾಗಿ ತೆರಬೇಕಾಗಿದೆ.

ಅಗತ್ಯ ವಸ್ತುಗಳು, ಸರಕು ಮತ್ತು ಸೇವೆಗಳ ದರ ಏರಿಕೆಯ ಬಿಸಿಯಲ್ಲಿ ಬೇಯುತ್ತಿರುವ ಸಾರ್ವಜನಿಕರನ್ನು ಹಾಲು ಮತ್ತು ವಿದ್ಯುತ್ ದರ ಹೆಚ್ಚಳದ ತೀರ್ಮಾನಗಳು ಮತ್ತಷ್ಟು ಸಂಕಷ್ಟಕ್ಕೆ ದೂಡಲಿವೆ. ಅಗತ್ಯ ವಸ್ತುಗಳ ದರ ನಿರಂತರವಾಗಿ ಏರುಮುಖದಲ್ಲೇ ಇದೆ. ಇದರಿಂದಾಗಿ ಕಡಿಮೆ ಆದಾಯದ ಜನಸಮೂಹವು ಆರ್ಥಿಕ ಸಂಕಷ್ಟದಲ್ಲೇ ಜೀವನ ಸಾಗಿಸಬೇಕಾದ ಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಸಹಕಾರಿ ವಲಯದ ಕೆಎಂಎಫ್ ಹಾಲು ಮತ್ತು ಮೊಸರಿನ ದರ ಹೆಚ್ಚಿಸಿದ್ದರೆ, ರಾಜ್ಯ ಸರ್ಕಾರಿ ಸ್ವಾಮ್ಯದ ಕೆಪಿಟಿಸಿಎಲ್ ಹಾಗೂ ಎಸ್ಕಾಂಗಳು ವಿದ್ಯುತ್ ದರ ಹೆಚ್ಚಿಸಿವೆ. ಈ ತೀರ್ಮಾನಗಳು ರಾಜ್ಯದ ಬಹುಪಾಲು ಜನರನ್ನು ಆರ್ಥಿಕವಾಗಿ ಬಾಧಿಸಲಿವೆ. 2023ರ ಜುಲೈನಿಂದ ಈಚೆಗೆ ಮೂರನೇ ಬಾರಿಗೆ ಹಾಲು ಮತ್ತು ಮೊಸರಿನ ದರವನ್ನು ಕೆಎಂಎಫ್ ಹೆಚ್ಚಿಸಿದೆ. ಈ ಅವಧಿಯಲ್ಲಿ ಪ್ರತಿ ಲೀಟರ್ ಹಾಲು ಮತ್ತು ಮೊಸರಿನ ದರದಲ್ಲಿ ₹ 7ರಷ್ಟು ಏರಿಕೆ ಮಾಡಲಾಗಿದೆ. ಹಾಲು ಮತ್ತು ಮೊಸರು ಬಹುತೇಕ ಕುಟುಂಬಗಳ ನಿತ್ಯ ಬಳಕೆಯ ಉತ್ಪನ್ನಗಳು. ಅಪೌಷ್ಟಿಕತೆ ನಿವಾರಣೆಯಲ್ಲೂ ಇವುಗಳ ಪಾತ್ರ ಗಣನೀಯ. ಇವುಗಳ ದರವನ್ನು ನಿರಂತರವಾಗಿ ಏರಿಕೆ ಮಾಡುತ್ತಾ, ಜನರ ಕೈಗೆಟುಕದಂತೆ ಮಾಡುವ ನಿರ್ಧಾರವು ಜನಹಿತಕ್ಕೆ ವಿರುದ್ಧವಾದುದು. ದರ ಏರಿಕೆಯ ಪೂರ್ಣ ಮೊತ್ತವನ್ನು ಹಾಲು ಉತ್ಪಾದಕರಿಗೇ ವರ್ಗಾವಣೆ ಮಾಡುತ್ತಿರುವುದಾಗಿ ರಾಜ್ಯ ಸರ್ಕಾರ ಮತ್ತು ಕೆಎಂಎಫ್ ಸಮರ್ಥಿಸಿಕೊಳ್ಳಬಹುದು. ಆದರೆ, ರಿಯಾಯಿತಿ ದರದಲ್ಲಿ ಪಶು ಆಹಾರ ಒದಗಿಸುವ ಮತ್ತು ಬೇರೆ ರೂಪದಲ್ಲಿ ಸಹಾಯಧನ ನೀಡುವ ಮೂಲಕ ಸರ್ಕಾರವೇ ನೆರವಾಗಲು ಅವಕಾಶ ಇದೆ. ಆ ಹೊರೆಯನ್ನು ದರ ಹೆಚ್ಚಳದ ಮೂಲಕ ಗ್ರಾಹಕರಿಗೆ ವರ್ಗಾಯಿಸುವುದು ಜನಸಾಮಾನ್ಯರ ಜೀವನವನ್ನು ಸಂಕಷ್ಟಕ್ಕೆ ದೂಡುವಂತಹ ನಿರ್ಧಾರ. ಕೆಎಂಎಫ್ ಹಾಲು ಮತ್ತು ಮೊಸರನ್ನು ಮಾತ್ರ ಮಾರಾಟ ಮಾಡುತ್ತಿಲ್ಲ. ಬೆಣ್ಣೆ, ತುಪ್ಪ, ಚೀಸ್ ಸೇರಿದಂತೆ ಹಾಲಿನ ಉಪಉತ್ಪನ್ನಗಳನ್ನೂ ಉತ್ಪಾದಿಸಿ, ಮಾರಾಟ ಮಾಡುತ್ತಿದೆ. ಉಪಉತ್ಪನ್ನಗಳ ಮಾರಾಟದಲ್ಲಿನ ಲಾಭಾಂಶವನ್ನು ರೈತರಿಗೆ ವರ್ಗಾಯಿಸುವ ಮೂಲಕ ಅವರ ಹಿತ ಕಾಯಬಹುದು. ಸಂಬಂಧಪಟ್ಟವರು ಈ ದಿಸೆಯಲ್ಲಿ ಗಂಭೀರವಾಗಿ ಯೋಚಿಸಬೇಕಿದೆ.



ದರ ಏರಿಕೆ ನಿರ್ಧಾರವನ್ನು ಕೈಬಿಟ್ಟು ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಮಾದರಿ ನಡೆಯನ್ನು ಸರ್ಕಾರ ಆಯ್ಕೆ ಮಾಡಿಕೊಳ್ಳಬೇಕು

ವಿದ್ಯುತ್ ದರ ಹೆಚ್ಚಳದ ವಿಚಾರದಲ್ಲೂ ಗ್ರಾಹಕರ ಮೇಲೆ ನಿರಂತರವಾಗಿ ಗದಾಪ್ರಹಾರ ಆಗುತ್ತಲೇ ಇದೆ. ಪ್ರತಿ ವರ್ಷವೂ ವಿದ್ಯುತ್ ದರ ಪರಿಷ್ಕರಣೆ ನಡೆಯುತ್ತಿದೆ. ಕೆಪಿಟಿಸಿಎಲ್ ಮತ್ತು ವಿದ್ಯುತ್ ಸರಬರಾಜು ಕಂಪನಿಗಳು ಅನುಭವಿಸುತ್ತಿರುವ ನಷ್ಟವನ್ನು ಗ್ರಾಹಕರಿಗೆ ವರ್ಗಾಯಿಸುವ ತೀರ್ಮಾನಗಳೇ ಯಾವಾಗಲೂ ಹೊರಬೀಳುತ್ತವೆ. ಈ ಬಾರಿ ಅದರಲ್ಲೂ ಭಿನ್ನ ಮಾರ್ಗವೊಂದನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಮಂಜೂರಾದ ಲೋಡ್ ಆಧಾರದಲ್ಲಿ ನಿಗದಿತ ಶುಲ್ಕ ಹೆಚ್ಚಳ ಮಾಡಿರುವುದರಿಂದ ಗ್ರಾಹಕರು ಹೆಚ್ಚು ವಿದ್ಯುತ್ ಬಳಕೆ ಮಾಡದಿದ್ದರೂ ದುಬಾರಿ ಮೊತ್ತ ಪಾವತಿಸಬೇಕಾಗುತ್ತದೆ. ಈಗ 'ಗೃಹ ಜ್ಯೋತಿ' ಯೋಜನೆಯಡಿ ರಾಜ್ಯದ ಹೆಚ್ಚಿನ ಕುಟುಂಬಗಳು ಉಚಿತವಾಗಿ ವಿದ್ಯುತ್ ಪಡೆಯುತ್ತಿವೆ. ಯೋಜನೆ ಜಾರಿಯಲ್ಲಿ ಇರುವವರೆಗೂ ಈ ಹೊರೆ ಅವರನ್ನು ಬಾಧಿಸದೇ ಇರಬಹುದು. ಆದರೆ, ಗೃಹ ಜ್ಯೋತಿ ಯೋಜನೆಯ ಅನುಕೂಲ ಪಡೆಯದ ಕುಟುಂಬಗಳು, ವಾಣಿಜ್ಯ, ಕೈಗಾರಿಕೆ ಮತ್ತು ಇತರ ವಲಯದ ಗ್ರಾಹಕರಿಗೆ ಇದು ದೊಡ್ಡ ಹೊರೆಯಾಗಿ ಪರಿಣಮಿಸಲಿದೆ. ಪ್ರಸರಣ ನಷ್ಟ, ವಿದ್ಯುತ್ ಸೋರಿಕೆ ತಡೆ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಂದ ಬಾಕಿ ಇರುವ ಸಾವಿರಾರು ಕೋಟಿ ರೂಪಾಯಿಗಳ ಮೊತ್ತದ ವಿದ್ಯುತ್ ಶುಲ್ಕ ವಸೂಲಾತಿಯಂತಹ ಕ್ರಮಗಳ ಮೂಲಕ ಕೆಪಿಟಿಸಿಎಲ್ ಹಾಗೂ ಎಸ್ಕಾಂಗಳನ್ನು ನಷ್ಟದಿಂದ ಹೊರ ತರುವುದಕ್ಕೆ ಆದ್ಯತೆ ನೀಡಬೇಕು. ಆಡಳಿತ ವೆಚ್ಚವನ್ನು ತಗ್ಗಿಸುವ ಮೂಲಕ ಈ ಸಂಸ್ಥೆಗಳನ್ನು ಸಶಕ್ತಗೊಳಿಸಬೇಕು. ದರ ಏರಿಕೆ ನಿರ್ಧಾರವನ್ನು ಕೈಬಿಟ್ಟು ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಮಾದರಿ ನಡೆಯನ್ನು ಸರ್ಕಾರ ಆಯ್ಕೆ ಮಾಡಿಕೊಳ್ಳಬೇಕು.

ದಿನದ ಟ್ವೀಟ್


ಭೀಕರ ದುರಂತ

ಮಕ್ಕಳನ್ನು ಸುಶಿಕ್ಷಿತರನ್ನಾಗಿ ಮಾಡಲು ಪೋಷಕರು ಅಪಾರ ತ್ಯಾಗ ಮಾಡುತ್ತಾರೆ. ಆದರೂ ಕೆಲವರು ತಮ್ಮ ಜೀವನವನ್ನೇ ಹಾಳು ಮಾಡಿಕೊಂಡು ಬಿಡುತ್ತಾರೆ. ತಮ್ಮ ಭವಿಷ್ಯಕ್ಕೆ ಕಲ್ಲು ಹಾಕಿಕೊಳ್ಳುವುದಷ್ಟೇ ಅಲ್ಲ ಇತರರ ಜೀವವನ್ನೂ ತೆಗೆಯುತ್ತಾರೆ. ಎಂತಹ ದುರಂತ...

(ಬೆಂಗಳೂರಿನಲ್ಲಿ ವ್ಯಕ್ತಿಯೊಬ್ಬ ಪತ್ನಿಯನ್ನು ಕೊಂದು ಟ್ರಾಲಿ ಬ್ಯಾಗ್‌ನಲ್ಲಿ ಹಾಕಿಟ್ಟಿದ್ದ ಪ್ರಕರಣಕ್ಕೆ ಪ್ರತಿಕ್ರಿಯೆ)

ಮನಿಷ್ ಕೊಠಾರಿ

ಕಿಡಿನುಡಿ



ಮೈಕ್ ಮುಂದೆ ನಿಂತಾಗ ಯತ್ನಾಳ ಏನೇನೋ ಮಾತನಾಡಿಬಿಡುತ್ತಾರೆ. ತಪ್ಪು ತಿದ್ದಿಕೊಳ್ಳಲು ಪಕ್ಷವು ಸಾಕಷ್ಟು ಅವಕಾಶವನ್ನು ಅವರಿಗೆ ಕೊಟ್ಟಿತ್ತು. ಆದರೆ, ಸರಿಯಾಗಲಿಲ್ಲ. ಹೀಗಾಗಿ ಉಚ್ಚಾಟಿಸಿದೆ. ಇದು ಬೇರೆಯವರಿಗೆ ಎಚ್ಚರಿಕೆಯ ಗಂಟೆ. ನಮ್ಮ ಪಕ್ಷ ಕಾರ್ಯಕರ್ತರಿಂದ ಉಳಿದಿದೆಯೇ ವಿನಾ ನಾಯಕರಿಂದಲ್ಲ. ನಮ್ಮಲ್ಲಿ ಹುಲಿಗಳಾರೂ ಇಲ್ಲ. ಹುಲಿ ಎಂದರೆ ಕಾಡಿಗೆ ಕಳುಹಿಸಿಬಿಡುತ್ತಾರೆ.

ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 29-3-2000

• ರಾಜ್ಯಸಭಾ ಚುನಾವಣೆ: ಹಣದ ಪ್ರಭಾವ ಹತೋಟಿಗೆ ಆದೇಶ

ನವದೆಹಲಿ, ಮಾರ್ಚ್ 28 (ಯುಎನ್‌ಐ)– ಕರ್ನಾಟಕ, ಉತ್ತರಪ್ರದೇಶ ಮತ್ತು ಇತರ ಕೆಲವು ರಾಜ್ಯ ವಿಧಾನಸಭೆಗಳಿಂದ ರಾಜ್ಯಸಭೆಗೆ ನಾಳೆ ನಡೆಯುವ ಚುನಾವಣೆಯಲ್ಲಿ ಹಣದ ಪ್ರಭಾವ ಬೀರುವುದನ್ನು ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಚುನಾವಣಾ ಆಯೋಗ ಕೇಂದ್ರ ಹಣಕಾಸು ಇಲಾಖೆಗೆ ಪತ್ರ ಬರೆದಿದೆ.

'ರಾಜ್ಯಸಭಾ ಚುನಾವಣೆಯಲ್ಲಿ ಹಣದ ಪ್ರಭಾವ ಕೆಲಸ ಮಾಡುವುದು ಆತಂಕದ ವಿಷಯ' ಎಂದು ಹೇಳಿದ ಮುಖ್ಯ ಚುನಾವಣಾ ಆಯುಕ್ತ ಎಂ.ಎಸ್.ಗಿಲ್ ಅವರು ತಮ್ಮ ಪತ್ರಕ್ಕೆ 'ಹಣಕಾಸು ಇಲಾಖೆಯಿಂದ ಅನುಕೂಲಕರ ಉತ್ತರ ಬಂದಿದೆ' ಎಂದರು.

'ಹಣದ ಪ್ರಭಾವವನ್ನು ತಡೆಯಲು ಹಣಕಾಸು ಸಚಿವಾಲಯಕ್ಕೆ ಅಧಿಕಾರ ಹಾಗೂ ಹಲವಾರು ಮಾರ್ಗಗಳಿವೆ. ಆದಾಯ ತೆರಿಗೆ ಹಾಗೂ ಜಾಗೃತಿ ಇಲಾಖೆ ಅಧಿಕಾರಿಗಳನ್ನು ಈ ಉದ್ದೇಶಕ್ಕೆ ಬಳಸಿಕೊಳ್ಳಬೇಕು' ಎಂದು ಅವರು ಅಭಿಪ್ರಾಯಪಟ್ಟರು.

'ರಾಜ್ಯಸಭೆಯನ್ನು ಹಿರಿಯರ ಸಭೆ ಎಂದು ಕರೆಯಲಾಗುತ್ತದೆ. ಪ್ರೌಢ ಸದಸ್ಯರಿಗಾಗಿ ಇರುವುದು ರಾಜ್ಯಸಭೆ, ಅದರ ಘನತೆಯನ್ನು ಕಾಪಾಡಿಕೊಳ್ಳಬೇಕು' ಎಂದು ಹೇಳಿದರು.

50 ವರ್ಷಗಳ ಹಿಂದೆ

ಶನಿವಾರ, 29-3-1975

• ದಾವಣಗೆರೆ ಯಶಸ್ವಿ ಬಂದ್

ದಾವಣಗೆರೆ, ಮಾರ್ಚ್ 28– ಕನ್ನಡ ಚಳವಳಿಗಾರರು ನೀಡಿದ್ದ ಕರೆ ಮೇರೆಗೆ ಇಂದು ದಾವಣಗೆರೆ ಬಂದ್ ಆಚರಿಸಲಾಯಿತು.


ಸಗಟು ವ್ಯಾಪಾರ ಸಂಪೂರ್ಣ ಸ್ಥಗಿತವಾಗಿತ್ತು. ಬೆಳಿಗ್ಗೆ ಸ್ವಲ್ಪಹೊತ್ತು ಬಾಗಿಲು ತೆರೆದಿದ್ದ ಕೆಲವು ಅಂಗಡಿಗಳವರೂ ಗಿರಾಕಿಗಳು ಬರದಿದ್ದ ಕಾರಣ ಬಾಗಿಲು ಮುಚ್ಚಬೇಕಾಯಿತು.

ಅಂಗಡಿಗಳನ್ನು ಮುಚ್ಚುವಂತೆ ಯಾರೂ ಬಲವಂತ ಮಾಡಲಿಲ್ಲ. ಅಂಗಡಿಕಾರರು ತಾವಾಗಿಯೇ ಬಾಗಿಲು ಮುಚ್ಚಿದ್ದು, ಇಂದಿನ ಬಂದ್ ವೈಶಿಷ್ಟ್ಯವಾಗಿತ್ತು. ಕನ್ನಡ ಚಳವಳಿಗಾರರು ಹಸ್ತಪತ್ರಿಕೆಗಳನ್ನು ಹಂಚುವುದರ ಮೂಲಕ ಬಂದ್‌ಗೆ ಮನವಿ ಮಾಡಿಕೊಂಡಿದ್ದರು.

ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆ, ಕೃಷ್ಣಾ ಮತ್ತು ಕಾವೇರಿ ಜಲವಿವಾದ ಕುರಿತು ಕೇಂದ್ರವು ತಳೆದಿರುವ 'ಮಲತಾಯಿ ಧೋರಣೆ' ಬಗ್ಗೆ ಸಾರ್ವಜನಿಕರ ಗಮನ ಸೆಳೆಯುವುದೇ ಬಂದ್ ಕರೆಯ ಮುಖ್ಯ ಉದ್ದೇಶವಾಗಿತ್ತು. ಬಂದ್ ಶಾಂತಿಯುತವಾಗಿದ್ದು, ಪೊಲೀಸರು ಅಂಗಡಿಗಳನ್ನು ತೆರೆಯುವಂತೆ ವರ್ತಕರಿಗೆ ಧೈರ್ಯ ಹೇಳಿದರೂ ಯಾರೂ ಒಪ್ಪಲಿಲ್ಲ. ಬೀದಿಗಳೆಲ್ಲಾ ನಿರ್ಜನವಾಗಿದ್ದವು.

ಲೈಂಗಿಕ ಪ್ರಕರಣ: ರಾಜಕಾರಣಿಗಳು ಬಚಾವ್ ಆಗುತ್ತಾರೆ, ಆದರೆ ಹೆಣ್ಣುಮಕ್ಕಳು?

ಅವಳ ಕತೆ, ಗರ್ಭದಲ್ಲೇ ಉಳಿವ ವ್ಯಥೆ



ಅನುಸಂಧಾನ

ರವೀಂದ್ರ ಭಟ್ಟ

ಸರೋದ್ ವಾದಕ ಪಂಡಿತ್ ರಾಜೀವ ತಾರಾನಾಥ ಅವರ ತಂದೆ ಪಂಡಿತ್ ತಾರಾನಾಥ ಅವರು ಆಯುರ್ವೇದ ವೈದ್ಯರೂ ಹೌದು. ಒಂದು ದಿನ ಗರ್ಭಿಣಿಯೊಬ್ಬಳು ಅವರ ಬಳಿಗೆ ಬಂದು, ಬಸಿರು ಕಳೆದುಕೊಳ್ಳಲು ಔಷಧಿ ಕೊಡುವಂತೆ ಕೇಳಿಕೊಂಡಳು. 'ಏಕೆ?' ಎಂದು ತಾರಾನಾಥರು ಕೇಳಿದಾಗ ಅವಳು 'ನಾನು ವಿಧವೆ. ಈಗ ಬಸಿರಾಗಿರುವುದರಿಂದ ಸಮಾಜದಲ್ಲಿ ಕಷ್ಟವಾಗುತ್ತದೆ' ಎಂದು ಹೇಳಿದಳು. ಆಗ ತಾರಾನಾಥರು 'ಸರಿ, ಹೆರಿಗೆಯಾಗುವವರೆಗೆ ಆಶ್ರಮದಲ್ಲಿಯೇ ಇದ್ದುಬಿಡಮ್ಮ' ಎಂದರು. 'ಆದರೆ ನಾಳೆ ಈ ಮಗುವಿಗೆ ಅಪ್ಪ ಯಾರೆಂದು ಸಮಾಜ ಕೇಳಿದರೆ ಏನೆಂದು ಹೇಳಲಿ?' ಎಂದು ಅವಳು ಮತ್ತೆ ಕೇಳಿದಾಗ 'ನಾನು ಅಂತ ಹೇಳಿಬಿಡಮ್ಮ. ಆದರೆ ಮಗೂನ ಮಾತ್ರ ಕೊಲ್ಲಬೇಡ' ಎಂದರಂತೆ ತಾರಾನಾಥರು.

ಈ ಪ್ರಕರಣವನ್ನು ತಮ್ಮ ಜೀವನಚರಿತ್ರೆಯಲ್ಲಿ ರಾಜೀವ ತಾರಾನಾಥರು 'ಇದು ದಿಲ್ದಾರತನ ಎಂದರೆ' ಎಂದು ಬರೆಯುತ್ತಾರೆ. ತಾರಾನಾಥರ ದಿಲ್ದಾರತನದಲ್ಲಿ ಮನಸ್ಸು ಇತ್ತು, ಹೃದಯ ಇತ್ತು. ಒಂದು ಮಗುವಿನ ಜೀವ ಉಳಿಸುವ, ಒಬ್ಬ ಮಹಿಳೆಯನ್ನು ರಕ್ಷಿಸುವ ತುಡಿತ ಇತ್ತು. ಈಗ ಕಾಲ ಎಷ್ಟು ಬದಲಾಗಿದೆ ನೋಡಿ. ಈಗ ದಿಲ್ದಾರತನದ ವ್ಯಾಖ್ಯಾನ ಕೂಡ ಬದಲಾಗಿದೆ. ಗಂಡು ಕೂಡ ಬದಲಾಗಿದ್ದಾನೆ. ನಮ್ಮ ಮುಂದೆ ಬಿಚ್ಚಿಕೊಳ್ಳುತ್ತಿರುವ ನಮ್ಮ ರಾಜಕಾರಣಿಗಳ ದಿಲ್ದಾರತನವನ್ನು ನೋಡಿದರೆ ಅಸಹ್ಯವಾಗುತ್ತದೆ. ಅಲ್ಲಿ ಹೃದಯಕ್ಕೆ, ಮನಸ್ಸಿಗೆ ಜಾಗವೇ ಇಲ್ಲ. ಎಲ್ಲವೂ ವ್ಯಾಪಾರ, ಎಲ್ಲವೂ ರಾಜಕಾರಣ, ಅಧಿಕಾರದ ಲಾಲಸೆ. ಅವರಿಗೆ ಹೆಣ್ಣೆಂದರೆ ಒಂದು ವಸ್ತು. ಬೇಕಾದಾಗ ಬೇಕಾದ ಹಾಗೆ ಬಳಸಬಹುದಾದ ಮಾಂಸದ ಮುದ್ದೆ ಅಷ್ಟೆ. ಹೆಣ್ಣಿನ ಅಸಹಾಯಕತೆಯನ್ನು ಬಳಸಿಕೊಂಡು ಮೆರೆಯುವ ಮೋಜುದಾರರು ಅವರು.

ಅಧಿಕಾರ ಪಡೆಯಲು, ಅಧಿಕಾರವನ್ನು ಉಳಿಸಿಕೊಳ್ಳಲು ಮತ್ತು ಯಾರನ್ನಾದರೂ ಅಧಿಕಾರದಿಂದ ಕಿತ್ತು ಹಾಕಲು ಹೆಣ್ಣನ್ನು ಬಳಸಿಕೊಳ್ಳುವುದು ಇತ್ತೀಚಿನ ದಿನಮಾನದಲ್ಲಿ ವಿಪರೀತವಾಗುತ್ತಿದೆ. ಈಗ ಅದಕ್ಕೆ ಹೊಚ್ಚಹೊಸ ಉದಾಹರಣೆ ಎಂದರೆ, ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಮಧುಬಲೆಗೆ ಕೆಡವಲು ನಡೆದಿದೆ ಎನ್ನಲಾದ ಯತ್ನ. ಮಧುಬಲೆ ಯತ್ನಕ್ಕೆ ಸಿಲುಕಿದ ರಾಜಣ್ಣ ಅವರ ಬಗ್ಗೆ ನಮಗೆ ಸಹಾನುಭೂತಿಯೇ ವಿನಾ ಬಲೆ ಬೀಸಲು ಬಂದ ಮಧು ನಂತರ ಯಾವ ಬಲೆಯೊಳಗೆ ಸಿಲುಕಿರಬಹುದು ಎಂದು ನಾವು ಯೋಚಿಸುವುದೇ ಇಲ್ಲ.

ಎರಡು ದಶಕಗಳಿಂದ ನಮ್ಮ ವಿಧಾನಮಂಡಲ ಅಧಿವೇಶನ ಎನ್ನುವುದು ಲೈಂಗಿಕ ಅನಾಚಾರ ಕುರಿತ ಚರ್ಚೆಯ ಕೇಂದ್ರವಾಗಿದೆ. 'ದಯವಿಟ್ಟು ಕ್ಷಮಿಸಿ, ಇದು ವಯಸ್ಕರಿಗೆ ಮಾತ್ರ' ಎಂದು ಬೋರ್ಡ್ ಹಾಕುವಷ್ಟು ಅದು ಹೊಲಸಾಗಿದೆ. ನಮ್ಮ ಮಾಧ್ಯಮಗಳು ಇಂತಹ ಲೈಂಗಿಕ ಹಗರಣಗಳನ್ನು ಎಷ್ಟು ವರ್ಣರಂಜಿತವಾಗಿ ಪ್ರಸಾರ ಮಾಡಿವೆ ಎಂದರೆ, ಯಾರದ್ದಾದರೂ ರಾಜಕಾರಣಿಯ ಹೆಸರು ಹೇಳಿದರೆ ತಕ್ಷಣ ಅವರ ಮುಖ ನೆನಪಿಗೆ ಬರುವುದಿಲ್ಲ, ಬೇರೆ ಏನೋ ನೆನಪಿಗೆ ಬರುತ್ತದೆ.

2007ರಿಂದ ಇಲ್ಲಿಯವರೆಗೆ ಹತ್ತಾರು ರಾಜಕಾರಣಿಗಳ ಲೈಂಗಿಕ ಹಗರಣಗಳು ವರದಿಯಾಗಿವೆ. ಬಹುತೇಕ ಪ್ರಕರಣಗಳಲ್ಲಿ ರಾಜಕಾರಣಿಗಳು ಆರೋಪಮುಕ್ತರಾಗಿದ್ದಾರೆ. ಆದರೆ ಇಂತಹ ಪ್ರಕರಣಗಳಲ್ಲಿ ಯಾವುದೋ ಕಾರಣಕ್ಕೆ ಭಾಗಿಯಾದ ಹೆಣ್ಣುಮಕ್ಕಳ ಬದುಕು ಏನಾಗಿದೆ? ನಮ್ಮ ಸಮಾಜ ಅದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಪುರುಷರ ಕೊಳಕು ಅಹಂಕಾರ ಎಷ್ಟಿದೆ ಎಂದರೆ, ಹಾಸನದ ಯುವ ರಾಜಕಾರಣಿ ಪ್ರಜ್ವಲ್ ರೇವಣ್ಣ ಅವರ ಪ್ರಕರಣವನ್ನೇ ತೆಗೆದುಕೊಳ್ಳಿ. ನೂರಾರು ಮಹಿಳೆಯರನ್ನು ಅವರು ಲೈಂಗಿಕವಾಗಿ ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಆರೋಪ ಇದೆ. ನಮಗೆ ಪ್ರಜ್ವಲ್ ಜೈಲಿನಲ್ಲೇ ಇರುತ್ತಾರಾ, ಹೊರಗೆ ಬರುತ್ತಾರಾ ಎನ್ನುವುದರ ಬಗ್ಗೆ ಇರುವ ಕುತೂಹಲ ಆ ನೂರಾರು ಮಹಿಳೆಯರ ಬಗ್ಗೆ ಇಲ್ಲ. ಅವರ ಬದುಕನ್ನು ಸಹ್ಯ ಮಾಡುವ ಯತ್ನದಲ್ಲಿ ಇಲ್ಲ. ಅವರ ನೆಮ್ಮದಿ ಕೆಟ್ಟಿದೆ. ಆದರೂ ನಾವು ಉರಿಯುವ ಬೆಂಕಿಗೆ ಇನ್ನಷ್ಟು ತುಪ್ಪ ಸುರಿಯುತ್ತೇವೆಯೇ ವಿನಾ ಸಾಂತ್ವನ ಹೇಳುವುದಿಲ್ಲ. ಕೆಲವು ಪುರುಷರ ಮನಸ್ಸು ಹೇಗಿರುತ್ತದೆ ಎಂದರೆ, ಇಂತಹ ಪ್ರಕರಣದಲ್ಲಿ ಭಾಗಿಯಾದ ಹೆಣ್ಣನ್ನು ಕಂಡರೆ, ತನಗೂ ಒಂದು ಅವಕಾಶ ಸಿಗಬಹುದೇ ಎಂಬ ಭಾವ ಬರುತ್ತದೆಯೇ ವಿನಾ ಆ ಹೆಣ್ಣಿನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಸಮಾಜ ಕೂಡಾ ಹಾಗೆಯೇ ಇದೆ. ಯಾಕೆಂದರೆ ಸಮಾಜದಲ್ಲಿ ವಿಜೃಂಭಿಸುವುದು ಪುರುಷರ ಅಹಂಕಾರವೇ ವಿನಾ ಹೆಣ್ಣುಮಕ್ಕಳ ಕ್ಷೇಮವಲ್ಲ. ಹೆಣ್ಣು ಈಗ ಮನೆ, ಶಾಲೆ, ಕಚೇರಿ, ರಸ್ತೆ ಎಲ್ಲಿಯೂ ಸುರಕ್ಷಿತವಾಗಿಲ್ಲ.

2007ರಲ್ಲಿ ಶಾಸಕರಾಗಿದ್ದ ರೇಣುಕಾಚಾರ್ಯ ಅವರ ವಿರುದ್ಧ ಲೈಂಗಿಕ ದುರುಪಯೋಗದ ಪ್ರಕರಣ ವರದಿಯಾಯಿತು. ಅದು ಭಾರಿ ಸದ್ದು ಮಾಡಿತು. 2008ರಲ್ಲಿ ಅವರು ಸಚಿವರಾದರು. 2010ರಲ್ಲಿ ಸಚಿವ ಹರತಾಳು ಹಾಲಪ್ಪ ಅವರ ವಿರುದ್ಧವೂ ಇಂತಹದೇ ಪ್ರಕರಣ ವರದಿಯಾಯಿತು. ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಬಳಿಕ ಅವರು ಆರೋಪದಿಂದ ಮುಕ್ತರೂ ಆದರು. ಈ ಪ್ರಕರಣ ಹೊರಬಿದ್ದ ಎರಡು ವರ್ಷದೊಳಗೆ ಮೂವರು ಸಚಿವರು ವಿಧಾನಸಭೆಯ ಅಧಿವೇಶನದಲ್ಲಿಯೇ ನೀಲಿಚಿತ್ರ ವೀಕ್ಷಣೆ ಮಾಡುತ್ತಿದ್ದುದು ಬಹಿರಂಗವಾಯಿತು. ವಿಧಾನಸಭೆಯಲ್ಲಿ ಅದರ ಬಗೆಗಿನ ಚರ್ಚೆ ಕೋಲಾಹಲವನ್ನೇ ಸೃಷ್ಟಿಸಿತು. ಪರಿಣಾಮವಾಗಿ ಆ ಮೂವರೂ ರಾಜೀನಾಮೆ ನೀಡಿದರು. ಶಾಸಕರಾಗಿದ್ದ ಉಡುಪಿಯ ರಘುಪತಿ ಭಟ್ಟರ ಪ್ರಕರಣ ಆ ಬಳಿಕ ವರದಿಯಾಯಿತು. ಆಗ ಅವರು ಚುನಾವಣೆ ಕಣದಿಂದ ಹಿಂದೆ ಸರಿದರು. ಮತ್ತೊಂದು ಬಾರಿ ಸ್ಪರ್ಧಿಸಿ ಗೆದ್ದರು.

2015ರಲ್ಲಿ, ಶಾಸಕರಾಗಿದ್ದ ಎ.ರಾಮದಾಸ್ ಪ್ರಕರಣ ಹೊರಗೆ ಬಂತು. ಇದರಿಂದ ನೊಂದ ಅವರು ಆತ್ಮಹತ್ಯೆಗೂ ಯತ್ನಿಸಿದ್ದರು. ಕೆಲವು ಕಾಲದ ನಂತರ ಅವರು ಆರೋಪಮುಕ್ತರಾದರು. 2016ರಲ್ಲಿ 71 ವರ್ಷ ವಯಸ್ಸಿನ, ಸಚಿವರಾಗಿದ್ದ ಎಚ್.ವೈ.ಮೇಟಿ ಅವರ ಲೈಂಗಿಕ ಪ್ರಕರಣ ಬಹಿರಂಗವಾಯಿತು. ಅವರು ಸಚಿವ ಸ್ಥಾನ ಕಳೆದುಕೊಳ್ಳಬೇಕಾಯಿತು. ವರ್ಗಾವಣೆ ಬೇಡಿಕೆ ಇಟ್ಟ ಮಹಿಳೆಯೊಂದಿಗೆ ಅವರು ಲೈಂಗಿಕ ಸಂಪರ್ಕ ನಡೆಸಿದ್ದರು ಎನ್ನುವುದು ಆರೋಪವಾಗಿತ್ತು. ಅವರೂ ಆರೋಪಮುಕ್ತರಾದರು. 2020ರಲ್ಲಿ ಆಗಿನ ಸಚಿವ ರಮೇಶ ಜಾರಕಿಹೊಳಿ ಲೈಂಗಿಕ ಪ್ರಕರಣ ಹೊರಗೆ ಬಂತು. ಉದ್ಯೋಗ ಕೊಡಿಸುವುದಾಗಿ ಹೇಳಿ ಮಹಿಳೆಯೊಬ್ಬರನ್ನು ಲೈಂಗಿಕವಾಗಿ ಬಳಸಿಕೊಂಡಿದ್ದಾರೆ ಎಂಬ ಆರೋಪ ಕೇಳಿಬಂತು. ರಮೇಶ್ ಅವರು ಸಚಿವ ಸ್ಥಾನ ಕಳೆದುಕೊಳ್ಳಬೇಕಾಯಿತು. 2019ರಲ್ಲಿ ಶಾಸಕರೊಬ್ಬರ ಸಲಿಂಗಕಾಮದ ವಿಡಿಯೊ ಹರಿದಾಡಿತ್ತು. ಕೇಂದ್ರದಲ್ಲಿ ಸಚಿವರಾಗಿದ್ದ ರಾಜ್ಯದವರೊಬ್ಬರ ವಿಡಿಯೊ ಹೊರಬಂದ ಕಾರಣಕ್ಕೆ ಅವರು ತಮ್ಮ ಸ್ಥಾನ ಕಳೆದುಕೊಳ್ಳಬೇಕಾಯಿತು. ಇನ್ನು ಕೆಲವು ಶಾಸಕರು ಮತ್ತು ಸಂಸದರಿಗೆ ಚುನಾವಣಾ ಟಿಕೆಟ್ ನಿರಾಕರಣೆ ಮಾಡಲಾಯಿತು. ಇದರ ನಡುವೆ ಬಿ.ಎಸ್. ಯಡಿಯೂರಪ್ಪ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಯಿತು.

ಈ ಎಲ್ಲ ಪ್ರಕರಣಗಳಲ್ಲಿನ ಸಾಮಾನ್ಯ ಅಂಶ ಏನೆಂದರೆ, ಬಹುತೇಕ ಬಾರಿ ಹೆಣ್ಣನ್ನು ಬಳಸಿಕೊಳ್ಳಲಾಗಿದೆ. ಅಲ್ಲದೆ ಹಲವಾರು ಪ್ರಕರಣಗಳಲ್ಲಿ ಆರೋಪಿಗಳು ನಿರಪರಾಧಿಗಳು ಎಂದು ತನಿಖಾ ವರದಿಗಳು ಹೇಳಿವೆ. ಆದರೆ ಈ ಯಾವುದೇ ಪ್ರಕರಣದಲ್ಲಿ ಭಾಗಿಯಾದ ಹೆಣ್ಣಿನ ಕತೆ ಏನಾಯಿತು ಎನ್ನುವುದು ಈವರೆಗೂ ಯಾರಿಗೂ ಗೊತ್ತೇ ಆಗಲಿಲ್ಲ. ಸಚಿವರೊಂದಿಗೆ, ಶಾಸಕರೊಂದಿಗೆ, ಸಂಸದರೊಂದಿಗೆ ಸಲುಗೆಯಿಂದ ಇದ್ದ ಹೆಣ್ಣುಮಕ್ಕಳ ಅಸಹಾಯಕತೆ ಏನಾಗಿತ್ತು? ಯಾವ ಕಾರಣ ಒಡ್ಡಿ ಅವರನ್ನು ಇಂತಹ ಕೃತ್ಯದಲ್ಲಿ ತೊಡಗಿಸಲಾಗಿತ್ತು ಎನ್ನುವುದು ಬಹಿರಂಗವಾಗಲೇ ಇಲ್ಲ. ಅವರ ಪರಿಸ್ಥಿತಿ ಏನಿತ್ತು ಎನ್ನುವುದೂ ಗೊತ್ತಾಗಲಿಲ್ಲ. ಎಲ್ಲ ಕೃತ್ಯಗಳಲ್ಲಿಯೂ ವಿಜೃಂಭಿಸಿದ್ದು ಪುರುಷಾಹಂಕಾರ. ಅದು ಲೈಂಗಿಕ ಹಗರಣವಾಗಲಿ, ಮಧುಬಲೆಯಾಗಲಿ ಅಲ್ಲಿ ಹೆಣ್ಣು ದುರ್ಬಲೆ ಮತ್ತು ಅವಳ ಅಸಹಾಯಕತೆಯನ್ನು ಬಳಸಿಕೊಳ್ಳಲಾಗುತ್ತದೆ. ಅವಳ ಗೌರವಕ್ಕೆ ಮಸಿ ಬಳಿಯಲಾಗುತ್ತದೆ. ಅವಳನ್ನು ಬಳಸಿ ಬಿಸಾಡಲಾಗುತ್ತದೆ. ಅವಳ ಕತೆ ಗರ್ಭದೊಳಗೇ ಹುದುಗಿರುತ್ತದೆ.



ಚುರುಮುರಿ



ಟ್ರೋಲ್ ಚಾಲೆಂಜರ್ಸ್!

• ತುರುವೇಕೆರೆ ಪ್ರಸಾದ್

'ಈಗಿನ ಟ್ರೆಂಡ್ ನೋಡುದ್ರೆ ಈ ಸಾರಿ ನಾನೂರನ್ನೂ ಮೀರಬಹುದು, ಬೇಕಾದ್ರೆ ಬೆಟ್ ಕಟ್ತೀನಿ' ಎಂದ ಗುದ್ಲಿಂಗ ಹರಟೆಕಟ್ಟೇಲಿ.

'ಸಾಧ್ಯನೇ ಇಲ್ಲ ಬಿಡು. ಈಗ ಮುನ್ನೂರು ಮಾಡಕ್ಕೇ ಎಲ್ಲಾ ಮುಲುಕಾಡ್ತಿದಾರೆ. ಅಷ್ಟೇ ಅಲ್ಲ, ಚೇಸ್ಮಾಡೋರೇ ಗೆಲ್ಲೋದು' ಎಂದ ಮಾಲಿಂಗ.

'ಇಲ್ಲ ಚೇಸ್ ಮಾಡೋರು ಗೆಲ್ಲಲ್ಲ, ಪರ್ಚೇಸ್ ಮಾಡೋರೇ ಗೆಲ್ಲೋದು'.

'ವಿಚಿತ್ರವಾಗಿದ್ಯಲ್ಲ ನಿನ್ ವಾದ! ನಾನೂ ಮಾಲಿಂಗನ ಪರ ಬೆಟ್ ಕಟ್ತೀನಿ. ನಿನ್ ಪ್ರಕಾರ ಯಾವ ಟೀಂ ಅಚೀವ್‌ಮೆಂಟ್ ಇದು' ಕೇಳಿದ ಕಲ್ಲೇಶಿ.

'ಟ್ರೋಲ್ ಚಾಲೆಂಜರ್ಸ್' ಎಂದ ಗುದ್ಲಿಂಗ.

'ಲೇಯ್... ರಾಯಲ್ ಚಾಲೆಂಜರ್ಸ್ ಸರಿ, ಇದ್ಯಾವುದೋ ಟ್ರೋಲ್ ಚಾಲೆಂಜರ್ಸ್?'

'ಟವಲ್ ಹಾಕ್ಕಂಡಿರೋ ಹೊಸ ಟೀಂ. ನಾನ್ ಹೇಳಿದ್ದು ರನ್ಸ್ ಅಲ್ಲಲೇ, ವಿಕೆಟ್ಸು'.

'ವಿಕೆಟ್ಸಾ? ಅಂದ್ರ ಟೋಟಲ್ ಉದುರೊ ವಿಕೆಟ್ ಅಂತನಾ?'

'ಹೌದಲೇ, ಗ್ರೌಂಡ್‌ನಲ್ಲಿ ಡ್ಯೂ ಜಾಸ್ತಿ ಇದೆ. ಎಲ್ಲೆಲ್ಲೋ ತಿರುಗ್ತಿದೆ'.

'ಅಂದ್ರ ಮಳೆ ಹನಿ ಅಂತಾನಾ? ಹಾಗ್ ಯಾವ ಮ್ಯಾಚೂ ನಿಂತಿಲ್ವಲ್ಲ'.

'ಮಳೆಹನಿ ಅಲ್ಲ, ಜೇನಹನಿ. ಎಲ್ಲಾ ಎಚ್‌ಬಿಡಬ್ಲ್ಯು ಆಗಿ ಔಟ್ ಆಗೋ ತರ ಇದೆ'.

'ಎಲ್‌ಬಿಡಬ್ಲ್ಯು ಇದೆ, ಇದ್ಯಾವುದೋ ಎಚ್‌ಬಿಡಬ್ಲ್ಯು?'

'ಹನಿ ಬಿಫೋರ್ ವಿಕೆಟ್!'

'ಅಂದ್ರ, ನೀನು ಇಷ್ಟೊತ್ತೂ ಐಪಿಎಲ್ ಬಗ್ಗೆ ಅಲ್ವಾ ಮಾತಾಡಿದ್ದು?'

'ಹನಿಟ್ರ್ಯಾಪ್ ವಿಷ್ಯ ಐಪಿಎಲ್‌ಗಿಂತ ಇಂಟ್ರೆಸ್ಟಿಂಗ್. ವಯಸ್ಸಾದ ರಾಜಕಾರಣಿಗಳೆಲ್ಲಾ ಚಿಯರ್ ಬಾಯ್ಸ್ ಆಗಿದಾರೆ. ಲೇಟ್ ಕಟ್ಟು, ಕವರ್ ಡ್ರೈವ್ ಏನ್ ಮಾಡುದ್ರೂ ಡೀಪ್‌ಫೈನ್ ಲೆಗ್ಗಲ್ಲಿ ಕ್ಯಾಚ್ ಹಾಕ್ಕತಿದಾರೆ. ಒಂದು ಕಡೆ ಅಂಪೈರ್ ತಲೆ ಮೇಲೇ ಸಿಕ್ಸರ್ ಎತ್ತುತಾ ಇದಾರೆ. ಇಲ್ ಹಾಕಿದ್ ಬಾಲು ಡೆಲ್ಲಿ ಪಿಚ್ಚಲ್ಲಿ ಹೋಗಿ ಬಿದ್ದಿದೆ. ಇನ್ನೊಂದ್ ಕಡೆ ಬರೀ ವೈಡು, ನೋ ಬಾಲು ಎಸೆದ್ರೂ ವಿಕೆಟ್‌ಗೆ ಎಳ್ಕತಾ ಅವ್ರೆ. ಬೆಟ್ ಕಟ್ಟಕ್ಕೆ ಈ ಗೇಮ್‌ಗಿಂತ ಬೇಕಾ?'

ಎಲ್ಲಾ ಹೌದ್ಹೌದು ಎಂದು ಹಲ್ಕಿರಿದರು.

ಸಂಗತ

ಗಣಿತ ಕಲಿಕೆಗೆ ಭಾಷೆಯ ಬುನಾದಿ

ಗಣಿತ ಕಲಿಕೆಯಲ್ಲಿ ನೈಜ ಜೀವನದ ಸನ್ನಿವೇಶಗಳನ್ನು ಅಡಕಗೊಳಿಸಬೇಕು. ಆಟ, ವಿನೋದ, ರಂಜನೆಯ ಅಂಶಗಳನ್ನೂ ಅಂತರ್ಗತಗೊಳಿಸಬೇಕು

• ಎಚ್.ಬಿ.ಚಂದ್ರಶೇಖರ್


ನಾವೆಲ್ಲಾ ಒಂದು ವಿಷಯವನ್ನು ಗಮನಿಸಿಯೇ ಇರುತ್ತೇವೆ. ಮಾರುಕಟ್ಟೆಯಲ್ಲಿ ಹಣ್ಣು-ತರಕಾರಿಯಂಥ ವಸ್ತುಗಳ ಮಾರಾಟದಲ್ಲಿ ತೊಡಗಿರುವ ಮಕ್ಕಳು ನಾವು ಖರೀದಿಸಿದ ವಸ್ತುಗಳ ಬೆಲೆಯನ್ನು ಸರಸರನೆ ಲೆಕ್ಕ ಹಾಕಿ, ನಾವು ಕೊಟ್ಟ ಹಣವನ್ನು ಪಡೆದು, ನಮಗೆ ಬರಬೇಕಾದ ಚಿಲ್ಲರೆಯನ್ನು ತಕ್ಷಣ ನೀಡುತ್ತಾರೆ. ಸಾಮಾನ್ಯವಾಗಿ ಈ ರೀತಿ ಮನಸ್ಸಿನಲ್ಲೇ ವೇಗವಾಗಿ ಲೆಕ್ಕ ಹಾಕುವ ಕೌಶಲ ಶಾಲೆಗೆ ಹೋಗುವ ಹೆಚ್ಚಿನ ಮಕ್ಕಳಲ್ಲಿ ಇರುವುದಿಲ್ಲ. ಈ ಬಗ್ಗೆ ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಭಿಜಿತ್ ಬ್ಯಾನರ್ಜಿ ಮತ್ತು ಸಂಗಡಿಗರು ಇತ್ತೀಚೆಗೆ ಅಧ್ಯಯನವೊಂದನ್ನು ಕೈಗೊಂಡು, ಗಣಿತ ವಿಷಯದ ಕಲಿಕೆಯ ಬಗ್ಗೆ ಮಹತ್ವದ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

ಅಧ್ಯಯನಕಾರರು ಕೋಲ್ಕತ್ತ ನಗರದ ಮಾರುಕಟ್ಟೆಯಲ್ಲಿ ತರಕಾರಿ ಮಾರಾಟದಲ್ಲಿ ತೊಡಗಿದ್ದ ಮಕ್ಕಳಿಂದ ಒಂದೆರಡು ಬಗೆಯ ತರಕಾರಿಗಳನ್ನು 800 ಗ್ರಾಂ, 1 ಕೆ.ಜಿ. 200 ಗ್ರಾಂ ಹೀಗೆ ವಾಡಿಕೆಯಲ್ಲದ ಪ್ರಮಾಣದಲ್ಲಿ ಕೊಂಡುಕೊಂಡು ಹಣ ನೀಡಿದರು. ಆಗ, ಅಧ್ಯಯನಕ್ಕೆ ಒಳಪಡಿಸಿದ ಮಕ್ಕಳಲ್ಲಿ ಶೇ 95ರಷ್ಟು ಮಕ್ಕಳು, ಮಾರಾಟ ಮಾಡಿದ ತರಕಾರಿಗಳ ಮೌಲ್ಯವನ್ನು ಸರಿಯಾಗಿ ಲೆಕ್ಕಹಾಕಿ, ತಮಗೆ ಬರಬೇಕಾದ ಹಣ ಪಡೆದು, ಬಾಕಿ ಚಿಲ್ಲರೆಯನ್ನು ಮರಳಿಸಿದ್ದಾರೆ. ಈ ಮಕ್ಕಳಲ್ಲಿ ಶಾಲೆಗೆ ಹೋಗುವ ಮತ್ತು ಶಾಲೆಗೆ ಸೇರಿ ನಡುವೆಯೇ ಬಿಟ್ಟ ಮಕ್ಕಳಿಗೆ, ಪೋಷಕರ ಅನುಮತಿ ಪಡೆದು, ಶಾಲೆಯ ಪಠ್ಯಪುಸ್ತಕಗಳಲ್ಲಿ ಇರುವ ಮೂರು ಅಂಕಿಗಳ ಭಾಗಿಸುವ ಲೆಕ್ಕಗಳನ್ನು ಬಿಡಿಸಲು ತಿಳಿಸಲಾಯಿತು. ಆಗ ಅವರಲ್ಲಿ ಶೇ 34ರಷ್ಟು ಮಕ್ಕಳು ಮಾತ್ರ ಲೆಕ್ಕಗಳನ್ನು ಸರಿಯಾಗಿ ಬಿಡಿಸಿದ್ದಾರೆ.

ಅಧ್ಯಯನಕಾರರು ದೆಹಲಿಯ 17 ಶಾಲೆಗಳಲ್ಲಿನ ಚೆನ್ನಾಗಿ ಕಲಿಯುವ ಮಕ್ಕಳಿಗೆ ಮಾರುಕಟ್ಟೆಯಲ್ಲಿ ತಾವು ಖರೀದಿಸಿದ್ದ ತರಕಾರಿಗೆ ಸಂಬಂಧಿಸಿದ ಲೆಕ್ಕವನ್ನು ನೀಡಿ, ಪೇಪರ್, ಪೆನ್ ಒದಗಿಸಿ, ಅವರಿಗೆ ಲೆಕ್ಕ ಬಿಡಿಸಲು ಅವಶ್ಯವಾದಷ್ಟು ಸಮಯ ನೀಡಿದರು. ಆಗ, ಶೇ 96ರಷ್ಟು ಮಕ್ಕಳು ಲೆಕ್ಕಗಳನ್ನು ಸರಿಯಾಗಿ ಮಾಡಿದ್ದಾರೆ. ಇದೇ ಮಕ್ಕಳಿಗೆ ಪೇಪರ್, ಪೆನ್ ನೀಡದೇ ಮಾರುಕಟ್ಟೆಯಲ್ಲಿ ನೀಡಿದಂತಹ ಲೆಕ್ಕಗಳನ್ನು ಮೌಖಿಕವಾಗಿ ಬಿಡಿಸಲು ಹೇಳಿದಾಗ ಶೇ 60ರಷ್ಟು ಮಕ್ಕಳು ಮಾತ್ರ ಸರಿಯಾಗಿ ಲೆಕ್ಕ ಬಿಡಿಸಲು ಶಕ್ತರಾಗಿದ್ದಾರೆ.

ಮಾರುಕಟ್ಟೆಯಲ್ಲಿ ಕೆಲಸ ಮಾಡುವ ಮಕ್ಕಳು ಕೂಡಿ ಕಳೆಯುವ, ಗುಣಿಸುವ, ಭಾಗಿಸುವ ಪ್ರಕ್ರಿಯೆಗಳನ್ನು ತಮ್ಮದೇ ಆದ ವಿಧಾನದಲ್ಲಿ ಮನಸ್ಸಿನಲ್ಲೇ ಕರಾರುವಾಕ್ಕಾಗಿ ಮಾಡುತ್ತಾರೆ. ಆದರೆ ಶಾಲಾ ಮಕ್ಕಳು ಜಾಣರಾಗಿದ್ದರೂ ಈ ಲೆಕ್ಕಗಳನ್ನು ಮಾಡಲು ಪೇಪರ್, ಪೆನ್ ಸಹಾಯ ಪಡೆದೂ ಹೆಚ್ಚಿನ ಸಮಯ ತೆಗೆದುಕೊಂಡಾಗ್ಯೂ ಅನೇಕರು ಸರಿಯಾಗಿ ಲೆಕ್ಕ ಹಾಕಲು ವಿಫಲರಾಗುತ್ತಾರೆ. ಮಾರುಕಟ್ಟೆಯಲ್ಲಿ ಕೆಲಸ ಮಾಡುತ್ತಾ ಓದುವ ಕೆಲವು ಮಕ್ಕಳು, ಶಾಲೆಯಲ್ಲಿ ನೀಡುವ ಗಣಿತದ ಲೆಕ್ಕಗಳನ್ನು ಸರಿಯಾಗಿ ಮಾಡಲು ಎಡವುತ್ತಾರೆ. 'ಶಾಲಾ ಮಕ್ಕಳು' ಮತ್ತು 'ಮಾರುಕಟ್ಟೆಯ ಮಕ್ಕಳು' ಈ ಎರಡೂ ಗುಂಪುಗಳ ಮಕ್ಕಳಿಗೆ ಗಣಿತವನ್ನು ಹೆಚ್ಚು ಸಮಗ್ರವಾಗಿ ಕಲಿಯಲು ಸಹಾಯ ಮಾಡುವುದು ಹೇಗೆ ಎಂಬ ಮಹತ್ವದ ಪ್ರಶ್ನೆಯನ್ನು ಈ ಅಧ್ಯಯನ ಹುಟ್ಟುಹಾಕುತ್ತದೆ.

ಶಾಲಾ ಮಕ್ಕಳ ಗಣಿತ ಕಲಿಕೆಯು ಶಿಕ್ಷಕರು ಕಲಿಸುವ ವಿಧಾನಗಳನ್ನು ಅನುಸರಿಸಿ ಒಂದು ನಿರ್ದಿಷ್ಟ ವಿಧಾನದ ಮೂಲಕ ಸಾಗುತ್ತದೆ. ಈ ಕಾರಣ, ಶಾಲೆಯಾಚೆಗಿನ ನೈಜ ಸನ್ನಿವೇಶಗಳಲ್ಲಿ ಬರುವ ಲೆಕ್ಕಗಳನ್ನು (ಮಾರುಕಟ್ಟೆಯಲ್ಲಿ ಖರೀದಿ, ಮನೆಯಲ್ಲಿ ಹಾಲು, ವಾರ್ತಾ ಪತ್ರಿಕೆಯ ಲೆಕ್ಕ...) ತಮ್ಮದೇ ಆದ ವಿಧಾನವನ್ನು ಅನುಸರಿಸಿ ಚಕಚಕನೆ ಲೆಕ್ಕ ಹಾಕುವ ಸಹಜ ಕಲಿಕಾ ವಿಧಾನವನ್ನು ಕರಗತ ಮಾಡಿಕೊಳ್ಳಲು ವಿಫಲರಾಗುತ್ತಾರೆ.



ಪಠ್ಯದಲ್ಲಿರುವ ರೀತಿಯಲ್ಲಿ ಗಣಿತದ ಲೆಕ್ಕಗಳನ್ನು ಬಿಡಿಸುವ ವಿಧಾನದ ಜೊತೆಗೆ ಮನಸ್ಸಿನಲ್ಲೇ ಲೆಕ್ಕ ಹಾಕಿಕೊಳ್ಳುವ ಕೌಶಲಗಳನ್ನು ಮಕ್ಕಳು ಕಲಿಯದಿದ್ದರೆ ಶಾಲಾ ಪರೀಕ್ಷೆಗಳಲ್ಲಿ ಬರುವ ಕೌಶಲ ಆಧಾರಿತ ಲೆಕ್ಕಗಳನ್ನು ಕಡಿಮೆ ಸಮಯದಲ್ಲಿ ಮಾಡಲು ಅಸಮರ್ಥರಾಗುತ್ತಾರೆ. ಈ ಕಾರಣದಿಂದ, ಗಣಿತ ವಿಷಯದ ಪಠ್ಯಪುಸ್ತಕಗಳ ರಚನೆ ಮತ್ತು ಕಲಿಸುವ ವಿಧಾನಗಳಲ್ಲಿ ಅಗತ್ಯ ಬದಲಾವಣೆ ಮಾಡಿಕೊಳ್ಳುವ ಅವಶ್ಯಕತೆ ಇದೆ.

ಅಕ್ಷರ ಪ್ರತಿಷ್ಠಾನದ ಸಹಯೋಗದಲ್ಲಿ ಇತ್ತೀಚೆಗೆ ಶಿಕ್ಷಣ ಇಲಾಖೆಯು ರಾಜ್ಯದ 28 ಜಿಲ್ಲೆಗಳಲ್ಲಿ ನಡೆಸಿದ ಗ್ರಾಮ ಪಂಚಾಯಿತಿ ಹಂತದ ಗಣಿತ ಕಲಿಕಾ ಸ್ಪರ್ಧೆಯಲ್ಲಿ 4, 5 ಮತ್ತು 6ನೇ ತರಗತಿಗಳ ಮಕ್ಕಳು ಭಾಗಿಸುವ ಲೆಕ್ಕದಲ್ಲಿ ಕ್ರಮವಾಗಿ ಶೇ 44, ಶೇ 38 ಮತ್ತು ಶೇ 36ರಷ್ಟು ಮಾತ್ರ ಯಶಸ್ಸು ಗಳಿಸಿದ್ದಾರೆ. ರಾಜ್ಯ ಸರ್ಕಾರ ಕೈಗೊಂಡ ಅನೇಕ ಸಮೀಕ್ಷೆಗಳಲ್ಲಿ ವಾಕ್ಯರೂಪದಲ್ಲಿ ಇರುವ ಗಣಿತದ ಲೆಕ್ಕಗಳನ್ನು ಹೆಚ್ಚಿನ ಸಂಖ್ಯೆಯ ಮಕ್ಕಳು ಸಮರ್ಪಕವಾಗಿ ಮಾಡಲು ವಿಫಲರಾಗಿದ್ದಾರೆ ಎಂಬ ಅಂಶವನ್ನು ಕಂಡುಕೊಳ್ಳಲಾಗಿದೆ. ಗಣಿತದ ಪ್ರಶ್ನೆಗಳನ್ನು ಓದಿ, ಅರ್ಥೈಸಿಕೊಂಡು, ಬಿಡಿಸುವ ಕೌಶಲಕ್ಕೆ ಭಾಷೆಯ ಪರಿಣಾಮಕಾರಿ ಕಲಿಕೆ ಅವಶ್ಯ.

ಗಣಿತ ಕಲಿಕೆಯನ್ನು ಆರಂಭದಲ್ಲಿ ಕಲ್ಲು, ಹುಣಿಸೇಬೀಜ, ಕೈ ಬೆರಳಿನಂತಹವನ್ನು ಬಳಸುವ ಮೂಲಕ ಮೂರ್ತ ಸ್ವರೂಪದಿಂದ ನಿಧಾನವಾಗಿ ಮೂರ್ತ ವಸ್ತುಗಳಿಲ್ಲದೆ ಅಮೂರ್ತ ವಿಧಾನಗಳೆಡೆಗೆ ಮಕ್ಕಳು ಯಶಸ್ವಿಯಾಗಿ ಪಯಣಿಸುವ ರೀತಿಯಲ್ಲಿ ತರಗತಿಗಳನ್ನು ಸಜ್ಜುಗೊಳಿಸಬೇಕು. ಗಣಿತ ಕಲಿಕೆಯಲ್ಲಿ ಹೆಚ್ಚು ಹೆಚ್ಚು ನೈಜ ಜೀವನದ ಸನ್ನಿವೇಶಗಳನ್ನು ಅಡಕಗೊಳಿಸಬೇಕು. ಇದರ ಜೊತೆ ಆಟ, ವಿನೋದ, ರಂಜನೆಯ ಅಂಶಗಳನ್ನೂ ಅಂತರ್ಗತಗೊಳಿಸಿಕೊಂಡಲ್ಲಿ ಗಣಿತ ವಿಷಯವು ಎಲ್ಲ ಮಕ್ಕಳ ಮನ ಮುಟ್ಟಬಲ್ಲದು.

ವಾಚಕರ ವಾಣಿ

ಹಾಲಿನ ದರ: ರೈತರಿಗೆ ಸಿಗುವ ಪಾಲೆಷ್ಟು?

ಹಾಲು ಮತ್ತು ಮೊಸರಿನ ಮಾರಾಟ ದರ ಹೆಚ್ಚಳದ ವಿಷಯವು ಮಾಧ್ಯಮಗಳಲ್ಲಿ ಬಹು ಚರ್ಚಿತ ಸುದ್ದಿಯಾಗಿದೆ. ಈ ಸಂದರ್ಭದಲ್ಲಿ ಹಾಲು ಉತ್ಪಾದಕ ರೈತರಿಗೆ ಪ್ರತಿ ಲೀಟರ್ ಹಾಲಿಗೆ ಸಿಗುವ ಬೆಲೆ ಎಷ್ಟು ಎಂಬುದರ ಬಗ್ಗೆ ಸಹ ಮಾಧ್ಯಮಗಳು ಜನಸಾಮಾನ್ಯರಿಗೆ ಅರಿವು ಮೂಡಿಸಬೇಕಾಗಿದೆ. ಪ್ರಸ್ತುತ ಶೇ 4ರಷ್ಟು ಕೊಬ್ಬು, ಶೇ 8.5ರಷ್ಟು ಘನವಲ್ಲದ ಕೊಬ್ಬು ಅಂದರೆ ಪ್ರೋಟೀನ್, ಲ್ಯಾಕ್ಟೋಸ್, ಜೀವಸತ್ವಗಳು ಹಾಗೂ ಖನಿಜಗಳು ಇರುವ ಪ್ರತಿ ಲೀಟರ್ ಹಾಲಿಗೆ ₹ 31- 33 ದರ ನೀಡಲಾಗುತ್ತಿದೆ. ಇದರೊಂದಿಗೆ ಸರ್ಕಾರದಿಂದ ಪ್ರತಿ ಲೀಟರ್ ಹಾಲಿಗೆ ₹ 5 ಪ್ರೋತ್ಸಾಹಧನ ರೈತರಿಗೆ ಸಿಗುತ್ತದೆ. ಆದರೆ ಸರ್ಕಾರದಿಂದ ಈ ಪ್ರೋತ್ಸಾಹಧನ ಬಿಡುಗಡೆ ಆಗಿ ರೈತರ ಕೈ ಸೇರಲು ನಾಲ್ಕರಿಂದ ಆರು ತಿಂಗಳು ತಡವಾಗುತ್ತದೆ ಎಂಬುದು ಹಾಲು ಉತ್ಪಾದಕರ ಆಕ್ಷೇಪ.

ಕೊಬ್ಬು ಹಾಗೂ ಘನವಲ್ಲದ ಕೊಬ್ಬಿನ ಅಂಶವನ್ನು ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಒಟ್ಟಾರೆಯಾಗಿ ಸಂಗ್ರಹವಾಗುವ ಹಾಲಿನಲ್ಲಿ ಪರೀಕ್ಷಿಸಿ, ಆ ಸಂಘದ ಎಲ್ಲಾ ಸದಸ್ಯರಿಗೆ ಸಮನಾಗಿ ದರ ನಿಗದಿ ಮಾಡಲಾಗುತ್ತದೆ. ಆದರೆ ಖಾಸಗಿ ಡೈರಿಗಳು ಪ್ರತಿ ರೈತನಿಂದ ಸಂಗ್ರಹಿಸಿದ ಹಾಲನ್ನು ಪರೀಕ್ಷಿಸಿ, ಗುಣಮಟ್ಟದ ಆಧಾರದ ಮೇಲೆ ಲೀಟರ್ ಹಾಲಿಗೆ ₹ 35– 42ರವರೆಗೆ ನೀಡುತ್ತವೆ. ಆದರೂ ಸಹಕಾರಿ ಹಾಲು ಒಕ್ಕೂಟದಿಂದ ರೈತರಿಗೆ ನೀಡಲಾಗುತ್ತಿರುವ ಅನೇಕ ಸವಲತ್ತುಗಳ ಕಾರಣದಿಂದ ಯಥೇಚ್ಛವಾಗಿ ಹಾಲು ಸಂಗ್ರಹವಾಗುತ್ತಿದೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ, ಸರ್ಕಾರದ ಪ್ರೋತ್ಸಾಹಧನ ಇಲ್ಲದೇ ಇದ್ದ ಪಕ್ಷದಲ್ಲಿ ಹಾಲು ಒಕ್ಕೂಟಗಳು ನೀಡುವ ದರದಲ್ಲಿ ಈ ಪ್ರಮಾಣದ ಹಾಲು ಸಂಗ್ರಹಿಸಲು ಸಾಧ್ಯವಾಗುತ್ತಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ಕಾರಣದಿಂದ ಹಾಲು ಒಕ್ಕೂಟಗಳು ತಮ್ಮ ಖರ್ಚು ವೆಚ್ಚವನ್ನು ಸರಿದೂಗಿಸಲು ಬರೀ ಮಾರಾಟ ದರ ಹೆಚ್ಚಳದ ಮುಖಾಂತರ ಮಾತ್ರವಲ್ಲದೆ ನಿರ್ವಹಣಾ ವೆಚ್ಚವನ್ನು ಕಡಿತಗೊಳಿಸುವತ್ತ ಗಮನಹರಿಸಬೇಕು. ಆಗ ಮಾತ್ರ ಹಾಲು ಮಹಾ ಮಂಡಳಿಯು ಸ್ವಯಂ ಸುಸ್ಥಿರತೆಯನ್ನು ಕಾಯ್ದುಕೊಂಡು ಹಾಲು ಉತ್ಪಾದಕರು ಹಾಗೂ ಗ್ರಾಹಕರ ಹಿತ ಕಾಪಾಡಲು ಶಕ್ತವಾಗುತ್ತದೆ.

ಟಿ.ಜಯರಾಂ, ಕೋಲಾರ

ತೇರು ದುರಂತ: ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ

ಆನೇಕಲ್ ತಾಲ್ಲೂಕು ಹುಸ್ಕೂರಿನಲ್ಲಿ ಇತ್ತೀಚೆಗೆ ನಡೆದ ಮದ್ದೂರಮ್ಮ ದೇವಿಯ ಜಾತ್ರಾ ಮಹೋತ್ಸವದಲ್ಲಿ ತೇರು ಬಿದ್ದು ಇಬ್ಬರು ಮೃತಪಟ್ಟು, 8 ಮಂದಿ ಗಾಯಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ, ರಾಜಸ್ವ ನಿರೀಕ್ಷಕ ಮತ್ತು ಗ್ರಾಮ ಆಡಳಿತಾಧಿಕಾರಿಯನ್ನು ಅಮಾನತುಗೊಳಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಮಾರ್ಚ್ 28). ನೂರು ಅಡಿ ಎತ್ತರದ ತೇರು ತಾಂತ್ರಿಕ ದೋಷದಿಂದ ಕೆಳಗೆ ಬಿದ್ದದ್ದಕ್ಕೆ ಇವರನ್ನು ಅಮಾನತು ಮಾಡಿರುವುದು ಎಷ್ಟು ಸರಿ?

ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಅನ್ನುವಂತೆ ಅಷ್ಟು ದೊಡ್ಡ ಜವಾಬ್ದಾರಿಯನ್ನು ಇವರ ಮೇಲೆ ಹೊರಿಸಿ ಕೈತೊಳೆದುಕೊಳ್ಳುವುದು ಸರಿಯೇ? ಅಷ್ಟು ಎತ್ತರದ ತೇರನ್ನು ಎಳೆಯಲು ಸಾಧ್ಯವೇ, ರಸ್ತೆ ಸೂಕ್ತವಾಗಿದೆಯೇ ಎಂಬ ಬಗ್ಗೆ ಎಂಜಿನಿಯರುಗಳು ಪರೀಕ್ಷೆ ಮಾಡಿ ವರದಿ ಕೊಡಲಿಲ್ಲವೇ? ಈ ಬಗ್ಗೆ ತಹಶೀಲ್ದಾರರು ಮತ್ತು ಅದಕ್ಕಿಂತಲೂ ಮೇಲ್ಮಟ್ಟದ ಅಧಿಕಾರಿಗಳು ಅಧ್ಯಯನ ಮಾಡಲಿಲ್ಲವೇ? ಊರಿನ ಹಿರಿಯರು, ಪೊಲೀಸ್ ಇಲಾಖೆ ಸಲಹೆ ನೀಡಲಿಲ್ಲವೇ? ಎಲ್ಲಕ್ಕಿಂತ ಮಿಗಿಲಾಗಿ ದೇವಸ್ಥಾನದ ವೈದಿಕರು ಸರಿಯಾದ ಮುಹೂರ್ತ ಇಡಲಿಲ್ಲವೇ? ಇವರಾರೂ ಮಾಡದ ತಪ್ಪನ್ನು ಅವರು ಮಾಡಿದ್ದರೇ?

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಪುಸ್ತಕ ಮಳಿಗೆಗೆ ಸಿಗಲಿ ಆದ್ಯತೆ

ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಇತ್ತೀಚೆಗೆ ಪ್ರಯಾಣದ ಸಮಯದಲ್ಲಿ ಓದಲು ಪುಸ್ತಕ ಕೊಳ್ಳಲೆಂದು, ಮೊದಲೇ ತಿಳಿದಿದ್ದ ಪುಸ್ತಕದ ಮಳಿಗೆಯ ಕಡೆಗೆ ಹೋದೆ. ಆಗ ಆ ಮಳಿಗೆಯು ಶಾಶ್ವತವಾಗಿ ಬಾಗಿಲು ಹಾಕಿದ್ದನ್ನು ತಿಳಿದು ಬೇಸರವಾಯಿತು. ಕೆಎಸ್‌ಆರ್‌ಟಿಸಿಯ ಪ್ರತಿ ಬಸ್ ನಿಲ್ದಾಣದಲ್ಲಿ ಮತ್ತು ಪ್ರಮುಖ ರೈಲು ನಿಲ್ದಾಣಗಳಲ್ಲಿ ಪುಸ್ತಕದ ಮಳಿಗೆ ಕಾಯಂ ಆಗಿ ಇರುತ್ತಿತ್ತು. ಆದರೆ ಕ್ರಮೇಣವಾಗಿ ಮಳಿಗೆಯ ಬಾಡಿಗೆ ಕಟ್ಟಲಾಗದೆ ಮತ್ತು ಪತ್ರಿಕೆಗಳನ್ನು ಕೊಂಡು ಓದುವವರ ಸಂಖ್ಯೆ ತೀರಾ ಕಡಿಮೆಯಾಗಿರುವುದರಿಂದ ಇವು ನಷ್ಟಕ್ಕೆ ಸಿಲುಕಿ ಮರೆಯಾಗಿರುವಂತಿದೆ.

ಕೆಎಸ್‌ಆರ್‌ಟಿಸಿ ಮತ್ತು ರೈಲ್ವೆಯು ಪ್ರಮುಖ ನಿಲ್ದಾಣಗಳಲ್ಲಿ ಪುಸ್ತಕದ ಅಂಗಡಿಗಾಗಿಯೇ ಒಂದು ಮಳಿಗೆಯನ್ನು ಮೀಸಲಿಟ್ಟು ಕಡಿಮೆ ಬಾಡಿಗೆಗೆ ನೀಡಬೇಕು. ಆಗ ಪತ್ರಿಕೆಗಳ ವ್ಯಾಪಾರವನ್ನೇ ಅವಲಂಬಿಸಿದವರಿಗೆ ಅನುಕೂಲ ಆಗುತ್ತದೆ ಮತ್ತು ಓದುಗರನ್ನೂ ಉಳಿಸಿ ಬೆಳೆಸಿದಂತೆ ಆಗುತ್ತದೆ.

ಅಶೋಕ ಎನ್.ಎಚ್., ಕೋಲಾರ

ಸರ್ಕಾರದಿಂದ 'ಮೂರ್ಖರ ದಿನ'ಕ್ಕೆ ಕೊಡುಗೆ!

ಯುಗಾದಿಯ ಆಚರಣೆಗೆ ಜನ ಸಿದ್ಧತೆ ಮಾಡಿಕೊಳ್ಳುತ್ತಿರುವಾಗಲೇ ರಾಜ್ಯ ಸರ್ಕಾರವು ಕಹಿ ಸುದ್ದಿ ನೀಡಿದೆ. ಏಪ್ರಿಲ್ ಒಂದರಿಂದ ಜಾರಿಯಾಗುವಂತೆ ಹಾಲು ಮತ್ತು ವಿದ್ಯುತ್ ದರ ಏರಿಕೆ ಮಾಡಿದೆ. ಹಾಗೆ ನೋಡಿದರೆ, 'ಗ್ಯಾರಂಟಿ' ಎಂಬ ಬೆಲ್ಲದ ಬಲದಿಂದ ಅಧಿಕಾರ ಹಿಡಿದ ಪಕ್ಷವು ಅಂದಿನಿಂದಲೂ ಆ ಬೆಲ್ಲದ ಜೊತೆಗೆ ಬಗೆಬಗೆಯಲ್ಲಿ ಬೇವನ್ನೂ ಸೇರಿಸುತ್ತ ಬಂದಿದೆ. ಇದೀಗ, ಹಾಲು ಮತ್ತು ವಿದ್ಯುತ್ ದರ ಏರಿಕೆ ಎಂಬ ಬೇವಿನ ಡಬಲ್ ಧಮಾಕಾ!

ದರ ಏರಿಕೆಗೆ ಸಮರ್ಥನೆಯಾಗಿ ಸರ್ಕಾರವು 'ರೈತರಿಗೇ ಪಾವತಿ', 'ಕೋರ್ಟ್ ಅನುಮತಿ'ಯಂತಹ ಕಾರಣಗಳನ್ನು ನೀಡುತ್ತಿರುವುದು ಸಮರ್ಥನೀಯವಲ್ಲ. ರೈತರಿಗೆ ಹೆಚ್ಚಿನ ಹಣವನ್ನು ಮತ್ತು ವಿದ್ಯುತ್ ಸಂಸ್ಥೆಗಳ ನೌಕರರಿಗೆ ತಾನು ನೀಡಬೇಕಿರುವ ಪಿಂಚಣಿ ಮತ್ತು ಗ್ರಾಚ್ಯುಟಿ ಮೊತ್ತವನ್ನು ಸರ್ಕಾರ ತನ್ನ ಬೊಕ್ಕಸದಿಂದ ನೀಡದೆ ಜನರಿಂದಲೇ ಹೆಚ್ಚುವರಿಯಾಗಿ ವಸೂಲು ಮಾಡಬೇಕೆಂದು ರೈತರೂ ಹೇಳಿಲ್ಲ, ಕೋರ್ಟೂ ಹೇಳಿಲ್ಲ. ರೈತರು ಹಾಗೂ ವಿವಿಧ ನೌಕರ ವರ್ಗಗಳ ವಿಷಯದಲ್ಲಿ ತಾನು ನಿರ್ವಹಿಸಬೇಕಾದ ಆರ್ಥಿಕ ಜವಾಬ್ದಾರಿಯನ್ನು ಸರ್ಕಾರವು ಈ ರೀತಿ ಶ್ರೀಸಾಮಾನ್ಯರಿಗೆ ವರ್ಗಾಯಿಸತೊಡಗಿರುವುದು ಕಳವಳಕಾರಿ ಸಂಗತಿ. ಈ ಉಭಯ ಬೆಲೆ ಏರಿಕೆಯ ಜಾರಿಗೆ ಸರ್ಕಾರವು ಏಪ್ರಿಲ್ ಒಂದನ್ನು ಆಯ್ಕೆ ಮಾಡಿಕೊಂಡಿರುವುದು ಮಾತ್ರ ಸೂಕ್ತವಾಗಿದೆ. ಏಪ್ರಿಲ್ 1, 'ಮೂರ್ಖರ ದಿನ' ತಾನೆ? ವಿಶ್ವಾಸವಿಟ್ಟು ಅಧಿಕಾರ ನೀಡಿದ ರಾಜ್ಯದ ಜನರನ್ನು ಈ ಸರ್ಕಾರವು 'ಏಪ್ರಿಲ್ ಒಂದರಿಂದ ಜಾರಿಯಾಗುವಂತೆ' ಮತ್ತೊಮ್ಮೆ ಮೂರ್ಖರನ್ನಾಗಿಸಿದೆ!

ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ (ಜಿಬಿಎ) ರಾಜಧಾನಿಗೆ ಅನುಕೂಲವೇ?

ಬೆಂಗಳೂರು ಆಡಳಿತ ಸುಧಾರಣೆ 'ಜಿಬಿಎ'ಯೇ ಸದ್ಯದ ಸೂಕ್ತ ದಾರಿ

• ವಿ.ರವಿಚಂದರ್



ಬೆಂಗಳೂರಿನಲ್ಲಿರುವ ಸಂಸ್ಥೆಗಳ ನಡುವೆ ಸಮನ್ವಯ ಇಲ್ಲ. ಹೀಗಾಗಿ ಯೋಜನೆಗಳ ಅನುಷ್ಠಾನ ಪರಿಣಾಮಕಾರಿಯಾಗಿಲ್ಲ. ನಿಷ್ಕ್ರಿಯಗೊಂಡಿರುವ ಸಮನ್ವಯಕ್ಕೆ ಜೀವ ತುಂಬುವ ಉದ್ದೇಶ ಜಿಬಿಎ ಸ್ಥಾಪನೆಯ ಹಿಂದಿದೆ. ಜಿಬಿಜಿ ಮಸೂದೆ ಪರಿಪೂರ್ಣ ಅಲ್ಲದಿರಬಹುದು. ಆದರೆ, ಸದ್ಯಕ್ಕೆ ಅದು ನಮ್ಮ ಮುಂದಿರುವ ಅತ್ಯುತ್ತಮ ಆಯ್ಕೆ

ಬೆಂಗಳೂರಿನಲ್ಲಿ ಕುಸಿಯುತ್ತಿದ್ದ ಜೀವನದ ಗುಣಮಟ್ಟದಿಂದ ವಿಚಲಿತಗೊಂಡ ಕರ್ನಾಟಕ ಸರ್ಕಾರವು ನಗರದ ಆಡಳಿತವನ್ನು ಸುಧಾರಿಸುವ ದಾರಿಗಳ ಬಗ್ಗೆ ಸಲಹೆ ನೀಡುವುದಕ್ಕಾಗಿ 2014ರಲ್ಲಿ ಮೂರು ಸದಸ್ಯರ ಪುನರ್‌ರಚನಾ ಸಮಿತಿ ರಚಿಸಿತು. ಸಾವಿರದಷ್ಟು ಅಭಿಪ್ರಾಯಗಳನ್ನು ಸಂಗ್ರಹಿಸಿ ಮತ್ತು ತಜ್ಞರ ಜೊತೆ ಸಭೆಗಳನ್ನು ನಡೆಸಿದ ನಂತರ 2014–18ರ ನಡುವೆ 10 ವರದಿಗಳು ಮತ್ತು ಗ್ರೇಟರ್ ಬೆಂಗಳೂರು ಆಡಳಿತ (ಜಿಬಿಜಿ) ಕರಡು ಮಸೂದೆಯನ್ನು ಸರ್ಕಾರಕ್ಕೆ ಸಲ್ಲಿಸಿತು. ಆದರೆ, ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳದೇ ಇದ್ದುದರಿಂದ ಸಮಿತಿಯ ವರದಿಗಳು, ಮಸೂದೆ 'ಡಿಜಿಟಲ್ ದೂಳು' ಹಿಡಿಯುತ್ತಾ ಬಿದ್ದವು.

2023ರಲ್ಲಿ ಈ ಸಮಿತಿಯು ನಾಲ್ಕು ಸದಸ್ಯರನ್ನೊಳಗೊಂಡ ಬ್ರ್ಯಾಂಡ್ ಬೆಂಗಳೂರು ಸಮಿತಿಯಾಗಿ ಬದಲಾಯಿತು. 2024ರ ಮಧ್ಯದಲ್ಲಿ ಸಮಿತಿಯು ಜಿಬಿಜಿ ಮಸೂದೆಯನ್ನು ಅಂತಿಮಗೊಳಿಸಿ ಸರ್ಕಾರಕ್ಕೆ ಸಲ್ಲಿಸಿತು. ಕಳೆದ ವರ್ಷದ ಜುಲೈನಲ್ಲಿ ವಿಧಾನಸಭೆಯಲ್ಲಿ ಮಂಡಿಸಲಾದ ಪ್ರಾಥಮಿಕ ಜಿಬಿಜಿ ಮಸೂದೆಯನ್ನು ಮತ್ತಷ್ಟು ಪರಿಶೀಲನೆಗಾಗಿ ಜಂಟಿ ಸದನ ಸಮಿತಿಗೆ ಒಪ್ಪಿಸಲಾಯಿತು. ಈ ಸಮಿತಿಯು ಸರಣಿ ಸಭೆಗಳನ್ನು ನಡೆಸಿ ಮಸೂದೆಯ ಬಗ್ಗೆ ಅಭಿಪ್ರಾಯಗಳನ್ನು ಸಂಗ್ರಹಿಸಿತು. ಪರಿಷ್ಕೃತ ಜಿಬಿಜಿ ಮಸೂದೆಯನ್ನು ವಿಧಾನಸಭೆ ಮತ್ತು ಪರಿಷತ್ತಿನಲ್ಲಿ ಅಂಗೀಕರಿಸಲಾಗಿದೆ. ಮಸೂದೆಯನ್ನು ಒಪ್ಪಿಗೆಗಾಗಿ ರಾಜ್ಯಪಾಲರಿಗೆ ಕಳುಹಿಸಲಾಗಿತ್ತು. ಅವರು ಕೆಲವು ಸ್ಪಷ್ಟನೆಗಳನ್ನು ಕೇಳಿ ಈಗ ವಾಪಸ್ ಕಳುಹಿಸಿದ್ದಾರೆ. ಈ ಮಸೂದೆಯ ಬಗ್ಗೆ ಹಲವಾರು ತಪ್ಪುಕಲ್ಪನೆಗಳಿವೆ. ಮಸೂದೆಯ ನಿಬಂಧನೆಗಳಲ್ಲಿರುವ ತರ್ಕಬದ್ಧತೆಯನ್ನು ಅರಿಯಲು ಇದು ಅತ್ಯಂತ ಸೂಕ್ತ ಸಮಯ.

ಬೆಂಗಳೂರಿನ ಆಡಳಿತ ನಿರ್ವಹಿಸಲು ಮೂರು ಹಂತಗಳ ಆಡಳಿತ ವ್ಯವಸ್ಥೆ ಇರಬೇಕು ಎಂದು ಸಮಿತಿ ಸಲಹೆ ನೀಡಿತ್ತು. ಅದರ ಪ್ರಕಾರ, ಕೆಳ ಹಂತದಲ್ಲಿ ವಾರ್ಡ್‌ಗಳು, ಮಧ್ಯದ ಹಂತದಲ್ಲಿ ಹಲವು ಪಾಲಿಕೆಗಳು ಇದ್ದರೆ, ಮೇಲಿನ ಹಂತದಲ್ಲಿ ಹೊಸದಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು (ಜಿಬಿಎ) ರಚಿಸಬೇಕು. ಅಧಿಕಾರ ವಿಕೇಂದ್ರೀಕರಣ ಪರಿಕಲ್ಪನೆಯ ಅಡಿಯಲ್ಲಿ (ಸಂವಿಧಾನದ 74ನೇ ತಿದ್ದುಪಡಿಯ ಆಧಾರ) ಈ ಶಿಫಾರಸನ್ನು ಸಮಿತಿ ಮಾಡಿದೆ. ಮೇಲಿನ ಹಂತದಲ್ಲಿ ಜಿಬಿಎ ಸ್ಥಾಪನೆಯು ವಿವಿಧ ಪಾಲಿಕೆಗಳು ಮತ್ತು ಜಲಮಂಡಳಿ, ಬೆಸ್ಕಾಂ, ಬಿಡಿಎ, ಬಿಎಂಟಿಸಿ, ಬಿಎಂಆರ್‌ಸಿಎಲ್ ಮತ್ತು ಪೊಲೀಸ್ ಇಲಾಖೆಯಂತಹ ಸರ್ಕಾರಿ ನಿಯಂತ್ರಿತ ವ್ಯವಸ್ಥೆಗಳೊಂದಿಗೆ ಯೋಜನೆ ರೂಪಿಸಲು, ಸಮನ್ವಯ ಸಾಧಿಸಲು ನೆರವಾಗಲಿದೆ. ಶಾಸನ ಸಭೆ ಅಂಗೀಕರಿಸಿರುವ ಮಸೂದೆ ಈ ರೀತಿಯ ಆಡಳಿತ ರಚನೆಯನ್ನು ಉಳಿಸಿಕೊಂಡಿದೆ. ಆದರೆ, ಅದರಲ್ಲಿನ ವಿವರಗಳು ಭಿನ್ನವಾಗಿವೆ.

ಮಸೂದೆಯಲ್ಲಿರುವ ಪಾಲಿಕೆಗಳು/ವಾರ್ಡ್‌ಗಳ ರಚನೆ ಪ್ರಸ್ತಾವವು ಈಗಾಗಲೇ ಜಾರಿಯಲ್ಲಿರುವ 2020ರ ಬಿಬಿಎಂಪಿ ಕಾಯ್ದೆಯನ್ನು ಆಧರಿಸಿದೆ. ಹೆಚ್ಚು ಉತ್ತರದಾಯಿತ್ವಕ್ಕಾಗಿ, ಮೇಯರ್ ಇನ್ ಕೌನ್ಸಿಲ್/ ಪಾಲಿಕೆ ಆಡಳಿತ ಸಂಪುಟದ ಮಾದರಿ ರಚನೆಯಾಗಬೇಕು. ಆಡಳಿತದಲ್ಲಿ ಶಾಸಕರಿಗಿಂತ ವಾರ್ಡ್ ಸಮಿತಿಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಇರಬೇಕು. ಈ ಸಮಿತಿಗಳು ಗಮನಾರ್ಹವಾದ ಅಧಿಕಾರ ಹೊಂದಿರಬೇಕು, ಈ ಸಮಿತಿಗಳಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ಹೆಚ್ಚಳವಾಗುವ ಆಸ್ತಿ ತೆರಿಗೆಯಲ್ಲಿ ಒಂದು ಪಾಲು ಅವುಗಳಿಗೆ ನೀಡಬೇಕು ಎಂಬುದೂ ಸೇರಿದಂತೆ ಹಲವು ಸಲಹೆಗಳನ್ನು ಬ್ರ್ಯಾಂಡ್ ಬೆಂಗಳೂರು ಸಮಿತಿ ನೀಡಿತ್ತು (ಅಂತಿಮ ಜಿಬಿಜಿ ಮಸೂದೆಯು ಇವುಗಳನ್ನು ಒಳಗೊಂಡಿಲ್ಲ). ಇವುಗಳು ಸ್ಥಳೀಯ ಆಡಳಿತದಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುತ್ತವೆ. ಆದರೆ, ಪಾಲಿಕೆ/ ವಾರ್ಡ್‌ಗಳ ರಚನೆಗೆ ಸಂಬಂಧಿಸಿದ ಸಮಿತಿಯ ಸಲಹೆಗಳ ಬಗ್ಗೆ ಯಾವುದೇ ನಾಗರಿಕ ಗುಂಪುಗಳು, ಸಂಘಟನೆಗಳು ಜಂಟಿಸಮಿತಿ ಅಭಿಪ್ರಾಯ ಸಂಗ್ರಹಿಸುವಾಗ ಮಾತನಾಡಿಲ್ಲ ಎನ್ನುವುದು ಗಮನಿಸಬೇಕಾದ ಸಂಗತಿ. ಪರಿಣಾಮವಾಗಿ, ಈ ಸಲಹೆಗಳು ಮಸೂದೆಯ ಭಾಗವಾಗುವಂತೆ ಒತ್ತಡ ಸೃಷ್ಟಿಯಾಗಲಿಲ್ಲ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಸ್ಥಾಪನೆ ಮತ್ತು ಅದರ ರಚನೆಯು ಸಂವಿಧಾನದ 74ನೇ ತಿದ್ದುಪಡಿಯ (ಮಹಾನಗರ ಯೋಜನಾ ಸಮಿತಿ–ಎಂಪಿಸಿಯೂ ಸೇರಿದಂತೆ) ಉಲ್ಲಂಘನೆಯಾಗುತ್ತದೆ ಎಂಬುದು ಈಗ ಅಂಗೀಕಾರವಾಗಿರುವ ಮಸೂದೆಯ ಬಗೆಗೆ ಕೇಳಿಬರುತ್ತಿರುವ ಪ್ರಮುಖ ಆಕ್ಷೇಪಗಳು. ಜಿಬಿಎ ಎನ್ನುವುದು ಒಂದು ವಿನೂತನ ಪರಿಕಲ್ಪನೆ. ಸದ್ಯ ಬೆಂಗಳೂರಿನಲ್ಲಿರುವ ಹಲವು ಸಂಸ್ಥೆಗಳು ತಮ್ಮ ಪಾಡಿಗೆ ತಾವೇ ಕಾರ್ಯಾಚರಿಸುತ್ತಿವೆ. ಅವುಗಳ ನಡುವೆ ಸಮನ್ವಯ ಇಲ್ಲ. ಹೀಗಾಗಿ ಯೋಜನೆಗಳ ಅನುಷ್ಠಾನ ಪರಿಣಾಮಕಾರಿಯಾಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ನಿಷ್ಕ್ರಿಯಗೊಂಡಿರುವ ಸಮನ್ವಯಕ್ಕೆ ಜೀವ ತುಂಬುವ ಉದ್ದೇಶ ಜಿಬಿಎಯ ಹಿಂದಿದೆ. ದಶಕಗಳಿಂದ ಹಲವು ಸರ್ಕಾರಿ ಸಂಸ್ಥೆಗಳನ್ನು ಹುಟ್ಟುಹಾಕುತ್ತಾ, ನಗರ ಪಾಲಿಕೆಗೆ ಸಮಸ್ಯೆಗಳನ್ನು ಸೃಷ್ಟಿಸುತ್ತಾ ಬಂದ ದೊಡ್ಡ ಪರಂಪರೆಯೇ ನಮಗಿದೆ. ಪರಸ್ಪರ ಸಮನ್ವಯದ ವ್ಯವಸ್ಥೆಯೇ ನಮ್ಮಲ್ಲಿಲ್ಲ.

ಜಿಬಿಎ ಪ್ರಕರಣ: ನಗರದಲ್ಲಿರುವ ಎಲ್ಲ ಸರ್ಕಾರಿ ಸಂಸ್ಥೆಗಳಿಗೆ ನಗರಕ್ಕೆ ಸಂಬಂಧಿಸಿದ ಯೋಜನೆ ರೂಪಿಸಲು, ಸಂಯೋಜಿಸಲು ಮತ್ತು ಸಮನ್ವಯ ಸಾಧಿಸಲು ಒಂದು ವೇದಿಕೆಯನ್ನು ಒದಗಿಸುವ ಪ್ರಮುಖವಾದ ಕೆಲಸವನ್ನು ಜಿಬಿಎ ಮಾಡುತ್ತದೆ. ಆ ಪ್ರತಿಯೊಂದು ಸಂಸ್ಥೆಯೂ ತನ್ನದೇ ಆದ ಸ್ವಾಯತ್ತತೆ ಮತ್ತು ಪಾತ್ರವನ್ನು ಹೊಂದಿರುತ್ತದೆ. ಈ ವ್ಯವಸ್ಥೆಯನ್ನು ಸಂಗೀತ ನಿರ್ದೇಶಕನೊಂದಿಗೆ ಹೋಲಿಸಿ ನೋಡಿ. ಸಂಗೀತ ನಿರ್ದೇಶಕನ ಮೂಲಕ ನೀವು ಸಂಗೀತವನ್ನು ಕೇಳುತ್ತೀರಿ. ಇಲ್ಲದಿದ್ದರೆ, ಈಗ ಇರುವಂತೆ ಬರೀ ಗದ್ದಲವನ್ನೇ ನೀವು ಕೇಳಬೇಕಾಗುತ್ತದೆ. ಜಿಬಿಎಯ ಉಪಸ್ಥಿತಿಯು ಅಗತ್ಯವಿರುವಾಗ ಅನುದಾನವನ್ನು ನೀಡುವುದರ ಮೂಲಕ ನಗರ ಪಾಲಿಕೆಗಳಲ್ಲಿನ ಅಸಮಾನತೆಗಳನ್ನು ಪರಿಹರಿಸಲು ನೆರವಾಗುತ್ತದೆ.

ರಾಜ್ಯ ಸರ್ಕಾರವು ದಶಕಗಳಿಂದ ವ್ಯವಸ್ಥೆಯನ್ನು ಮುರಿಯುತ್ತಾ ಬಂದಿದೆ. ಈಗ ಮತ್ತೆ ಅದನ್ನು ಕಟ್ಟುವ ಹೊಣೆಗಾರಿಕೆಯೂ ಸರ್ಕಾರದ ಮೇಲೆ ಇದೆ. ಮುಖ್ಯಮಂತ್ರಿ ಅವರು ಜಿಬಿಎಯ ಮುಖ್ಯಸ್ಥರಾಗಿದ್ದರೆ ಮಾತ್ರ ಇದು ಸಾಧ್ಯ. ಯಾಕೆಂದರೆ ಜಿಬಿಎಗೆ ಸಂಬಂಧಿಸಿದ ಇಲಾಖೆಗಳ ಉಸ್ತುವಾರಿ ನೋಡಿಕೊಳ್ಳಲು ಬೇರೆ ರಾಜಕೀಯ ಪ್ರತಿನಿಧಿ ಇಲ್ಲ. ಸಮಿತಿಯ ವರದಿಯು ಮುಂದಿನ 5–10 ವರ್ಷಗಳಲ್ಲಿ ಜಿಬಿಎಯ ಮುಖ್ಯಸ್ಥರ ಹುದ್ದೆಯನ್ನು ಮೇಯರ್ ಅವರೇ ಅಲಂಕರಿಸುವಂತಾಗಬೇಕು ಎಂದು ಶಿಫಾರಸು ಮಾಡಿದೆ. ಪಾಲಿಕೆಗಳ ಆಡಳಿತ ವಿಚಾರದಲ್ಲಿ ರಾಜ್ಯ ಸರ್ಕಾರ ನೇರವಾಗಿ ಭಾಗಿಯಾಗುತ್ತದೆ ಎಂಬರ್ಥದಲ್ಲಿ ಜಿಬಿಎ ಪ್ರಕರಣವನ್ನು ಪರಿಗಣಿಸಬಾರದು. ಬದಲಿಗೆ, ಪರಿಣಾಮಕಾರಿ ವ್ಯವಸ್ಥೆಯೊಂದನ್ನು ರೂಪಿಸುವ ಪ್ರಯತ್ನವಾಗಿ ನೋಡಬೇಕು. ದೀರ್ಘಾವಧಿಯಲ್ಲಿ ಪರಿವರ್ತನೆಯೊಂದರ ಅಗತ್ಯವಿದೆ. ಈಗಿನ ಸನ್ನಿವೇಶದಲ್ಲಿ ಜಿಬಿಎ ರೂಪದಲ್ಲಿ ಮಾತ್ರ ಅದನ್ನು ಸಾಧಿಸಬಹುದು. ಇದು ಖಂಡಿತವಾಗಿ ಸಂವಿಧಾನ ವಿರೋಧಿ ಅಲ್ಲ ಅಥವಾ 74ನೇ ತಿದ್ದುಪಡಿಯ ಉಲ್ಲಂಘನೆಯೂ ಅಲ್ಲ.

ನಗರದ ಉದ್ಧಾರಕ ಎಂದು 'ಕರೆಸಿಕೊಳ್ಳುತ್ತಿರುವ' ಮಹಾನಗರ ಯೋಜನಾ ಸಮಿತಿಯ (ಎಂಪಿಸಿ) ಬಗ್ಗೆಯೂ ಚರ್ಚೆ ನಡೆಯುತ್ತಿದೆ. ಅದನ್ನೂ ರಚಿಸಿದರೆ ನಮ್ಮ ನಗರದ ಸಮಸ್ಯೆಗಳಿಗೆಲ್ಲಾ ಮೋಕ್ಷ ಸಿಗುವುದೇ? ಹಾಗೇನೂ ಆಗುವುದಿಲ್ಲ. ಅದರ ಬಗ್ಗೆ ಇನ್ನೊಮ್ಮೆ ಚರ್ಚಿಸೋಣ. ಎಂಪಿಸಿಯು ಖಂಡಿತವಾಗಿಯೂ ಅಗತ್ಯವಿದೆ (ಆದರೆ, ಎಂಪಿಸಿಯು ಈ ದೇಶದ ಎಲ್ಲಿಯೂ ಪರಿಣಾಮಕಾರಿಯಾದ ಉದಾಹರಣೆ ಇಲ್ಲ) ಮತ್ತು ಜಿಬಿಜಿ ಮಸೂದೆಯಲ್ಲಿ ಅದಕ್ಕೆ ಅವಕಾಶವನ್ನೂ ಕಲ್ಪಿಸಲಾಗಿದೆ. ತನ್ನ ಘಟಕಗಳು ನೀಡಿದ ಯೋಜನಾ ಮಾಹಿತಿಗಳ ಆಧಾರದಲ್ಲಿ ತನ್ನ ವ್ಯಾಪ್ತಿಗೆ ಬರುವ (ಜಿಬಿಜಿ ಪ್ರದೇಶಕ್ಕಿಂತಲೂ ಹೆಚ್ಚಿನ ವ್ಯಾಪ್ತಿ) ಪ್ರದೇಶದ ಅಭಿವೃದ್ಧಿಯ ಕರಡು ಯೋಜನೆಯನ್ನು ಅದು ರೂಪಿಸುತ್ತದೆ. ಎಂಪಿಸಿ ರೂಪಿಸಿದ ಯೋಜನೆಯನ್ನು ಸಂಬಂಧಿಸಿದ ಎಲ್ಲ ಪಾಲುದಾರರೊಂದಿಗೆ ಸೇರಿ ಕಾರ್ಯಗತಗೊಳಿಸಲು ಜಿಬಿಎ (ಬಿಡಿಎ ಬದಲಿಗೆ) ಇರುವುದು ನಗರಕ್ಕೆ ಅನುಕೂಲ.

ಈಗ ನಾವು ಹೊಂಡಗುಂಡಿಗಳಿಂದ ಕೂಡಿರುವ ರಸ್ತೆಯ ಕವಲುದಾರಿಯಲ್ಲಿದ್ದೇವೆ. ಅಲ್ಲಿ ನಿಂತುಕೊಂಡು ಸಂವಿಧಾನ ಉಲ್ಲಂಘನೆಯ ಆರೋಪದ ಬಗ್ಗೆ ಪ್ರಲಾಪಿಸುತ್ತಲೇ ಇರಬಹುದು ಮತ್ತು ಈಗಿರುವ ಪರಿಸ್ಥಿತಿಯಲ್ಲೇ ಉಳಿಯಬಹುದು ಅಥವಾ ಜಿಬಿಜಿ ಮಸೂದೆಯಲ್ಲಿರುವ 'ಭರವಸೆಯ ಬೆಳ್ಳಿ'ಯನ್ನು ಸ್ವೀಕರಿಸುತ್ತಾ ಸಂಬಂಧಿಸಿದ ಪಾಲುದಾರರೊಂದಿಗೆ ಒಂದೇ ರೈಲಿನಲ್ಲಿ ಕುಳಿತು ಅತ್ಯುತ್ತಮ ನಾಳೆಗಾಗಿ ಆ ರೈಲನ್ನು ಒಟ್ಟಾಗಿ ಎಳೆಯಬಹುದು. ಜಿಬಿಜಿ ಮಸೂದೆಯು ಪರಿಪೂರ್ಣವಾಗಿಲ್ಲದಿರಬಹುದು. ಆದರೆ, ಸದ್ಯಕ್ಕೆ ಅದು ನಮ್ಮ ಮುಂದಿರುವ ಅತ್ಯುತ್ತಮ ಆಯ್ಕೆ.

ಲೇಖಕ: ಬ್ರ್ಯಾಂಡ್ ಬೆಂಗಳೂರು ಸಮಿತಿಯ ಸದಸ್ಯ

ಪ್ರಜಾವಾಣಿ ಚರ್ಚೆ

ಜನರ ಬಳಿಯ ಅಧಿಕಾರ ಕಿತ್ತು ಸರ್ಕಾರಕ್ಕೆ ನೀಡುವ ಪ್ರಯತ್ನ

• ಕಾತ್ಯಾಯಿನಿ ಚಾಮರಾಜ್



ಜಿಬಿಜಿ ಮಸೂದೆಯು ಸಂವಿಧಾನದ 74ನೇ ತಿದ್ದುಪಡಿ ಕಾಯ್ದೆಯ ಆಶಯವನ್ನು ಸಂಪೂರ್ಣವಾಗಿ ಬುಡಮೇಲು ಮಾಡುತ್ತದೆ. ಹಾಗಾಗಿ, ಈ ಮಸೂದೆಯನ್ನು ಸರ್ಕಾರ ವಾಪಸ್ ಪಡೆಯಬೇಕು. ಜನರಿಂದ ವ್ಯಾಪಕವಾಗಿ ಅಭಿಪ್ರಾಯಗಳನ್ನು ಸಂಗ್ರಹಿಸಿ, ಮತ್ತೆ ಕರಡು ಮಸೂದೆ ರೂಪಿಸುವ ಪ್ರಕ್ರಿಯೆ ಆರಂಭಿಸಬೇಕು

ಸಂವಿಧಾನದ 74ನೇ ತಿದ್ದುಪಡಿ ಕಾಯ್ದೆ ಅಥವಾ ನಗರಪಾಲಿಕೆ ಕಾಯ್ದೆ ಜಾರಿಗೆ ಬಂದು 31 ವರ್ಷಗಳು ಕಳೆದಿವೆ. ಇದರಂತೆ, ಬಿಬಿಎಂಪಿಯನ್ನು ನಿಜವಾದ ನಗರ ಸ್ಥಳೀಯ ಆಡಳಿತವನ್ನಾಗಿ ಮಾಡಲು ಮತ್ತು ಸಂವಿಧಾನದ 74ನೇ ತಿದ್ದುಪಡಿಯು ಅವಕಾಶ ನೀಡಿದಂತೆ 'ಜನರಿಗೆ ಅಧಿಕಾರ ನೀಡಲು' ಕ್ರಮ ಕೈಗೊಳ್ಳಲಾಗುತ್ತದೆ ಎಂದು ಜನರು ಆಶಿಸಿದ್ದರು. ಆದರೆ, ಈಗ ಆ ತಿದ್ದುಪಡಿಯನ್ನು ಸಂಪೂರ್ಣವಾಗಿ ಬುಡಮೇಲು ಮಾಡಲು ಮತ್ತು ಬಿಬಿಎಂಪಿಯ ನಿಯಂತ್ರಣವನ್ನು ಮತ್ತೆ ರಾಜ್ಯ ಸರ್ಕಾರಕ್ಕೆ ವಹಿಸಲು ಹಾಗೂ ಸ್ಥಳೀಯ ಆಡಳಿತವನ್ನು ದುರ್ಬಲಗೊಳಿಸಲು, ನಿಷ್ಪರಿಣಾಮಕಾರಿಯಾಗಿ ಮಾಡಲು ದೊಡ್ಡ ಪ್ರಯತ್ನವೇ ನಡೆಯುತ್ತದೆ ಎಂಬುದನ್ನು ಯಾರು ಯೋಚಿಸಿದ್ದರು? ಗ್ರೇಟರ್ ಬೆಂಗಳೂರು ಆಡಳಿತ (ಜಿಬಿಜಿ) ಮಸೂದೆಯು ಮಾಡಲು ಹೊರಟಿರುವುದು ಇದನ್ನೇ. ಉತ್ತಮ ಆಡಳಿತ ನೀಡಲು ಬಿಬಿಎಂಪಿ ವಿಫಲವಾಗಿದೆ. ಹಾಗಾಗಿ, ಮುಖ್ಯಮಂತ್ರಿ, ಹಲವು ಸಚಿವರು, ಶಾಸಕರು, ಸಂಸದರು ಮತ್ತು ಅಧಿಕಾರಿಗಳ ನೇತೃತ್ವದ ರಾಜ್ಯಮಟ್ಟದ ಸಂಸ್ಥೆಯಾದ ಗ್ರೇಟರ್ ಬೆಂಗಳೂರು ಪ್ರಾಧಿಕಾರವು (ಜಿಬಿಎ) ಬಿಬಿಎಂಪಿಯನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳುತ್ತದೆ ಈ ಮಸೂದೆ.

ಬಿಬಿಎಂಪಿಯು ನಿಜವಾಗಿಯೂ ಆಡಳಿತ ನಡೆಸಲು ವಿಫಲವಾಯಿತೇ? ಅಥವಾ 74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಸರ್ಕಾರ ವಿಫಲವಾಗಿದೆಯೇ? ಈ ಮೂರು ದಶಕಗಳಲ್ಲಿ ಬಿಬಿಎಂಪಿಗೆ ನಿಯಮಿತವಾಗಿ ಚುನಾವಣೆ ನಡೆಸಲು ಸರ್ಕಾರವು ರಾಜ್ಯ ಚುನಾವಣಾ ಆಯೋಗಕ್ಕೆ ಅಧಿಕಾರವನ್ನೇ ನೀಡಲಿಲ್ಲ. ವಾರ್ಡ್‌ಗಳ ಪುನರ್‌ವಿಂಗಡಣೆ ಮತ್ತು ಮೀಸಲು ನಿಗದಿ ಮಾಡುವ ಅಧಿಕಾರವನ್ನು ತನ್ನಲ್ಲೇ ಇರಿಸಿಕೊಳ್ಳುವ ಮೂಲಕ ಸಕಾಲದಲ್ಲಿ ಬಿಬಿಎಂಪಿ ಚುನಾವಣೆ ನಡೆಸುವುದನ್ನು ಸರ್ಕಾರ ತಡೆದಿತ್ತು. ಈಗಲೂ ನಾಲ್ಕೂವರೆ ವರ್ಷಗಳಿಂದ ಚುನಾವಣೆ ನಡೆದಿಲ್ಲ. ಚುನಾಯಿತ ಆಡಳಿತ ಕೌನ್ಸಿಲ್‌ನ ರಚನೆಯಲ್ಲಿ ವಿಳಂಬವಾದರೆ ಸ್ವಾಭಾವಿಕವಾಗಿ ಸ್ಥಳೀಯ ಆಡಳಿತ ಕಳಪೆಯಾಗುತ್ತದೆ.

ಜಿಬಿಜಿ ಮಸೂದೆಯು ರಾಜ್ಯ ಚುನಾವಣಾ ಆಯೋಗದ ಅಧಿಕಾರ ಕಸಿದುಕೊಳ್ಳುವುದನ್ನು ಮುಂದುವರಿಸುವುದರ ಜತೆಗೆ ತಮ್ಮ ಅಗತ್ಯಗಳಿಗೆ ಸ್ಪಂದಿಸುವ ಸ್ಥಳೀಯ ಆಡಳಿತದಿಂದ ನಾಗರಿಕರು ವಂಚಿತರನ್ನಾಗುವಂತೆ ಮಾಡುತ್ತದೆ.

ಬೆಂಗಳೂರು ವಿಸ್ತಾರವಾಗಿ ಬೆಳೆದಿರುವುದರಿಂದ ಬಿಬಿಎಂಪಿ ಮತ್ತು ಒಬ್ಬ ಕಮಿಷನರ್ ಅವರಿಂದ ಆಡಳಿತ ನಡೆಸಲು ಸಾಧ್ಯವಿಲ್ಲ. ಹಾಗಾಗಿ ನಗರವನ್ನು ಏಳು ಸಣ್ಣ ಪಾಲಿಕೆಗಳನ್ನಾಗಿ ವಿಭಜಿಸುವ ಅಗತ್ಯವಿದೆ ಎಂದು ಮಸೂದೆ ರೂಪಿಸಿದವರು ಹೇಳಿಕೊಳ್ಳುತ್ತಿದ್ದಾರೆ. ಆದರೆ, ಹಲವು ಪಾಲಿಕೆಗಳನ್ನು ರಚಿಸಿದರೆ ಬೆಂಗಳೂರಿನ ಎಲ್ಲ ಪ್ರದೇಶಗಳಿಗೂ ವರಮಾನವನ್ನು ಸಮನಾಗಿ ಮರುಹಂಚಿಕೆ ಮಾಡುವುದು ಅಸಾಧ್ಯ ಎಂಬ ಸಂಗತಿಯನ್ನು ಅವರು ಕಡೆಗಣಿಸಿದ್ದಾರೆ. ಸಂಪನ್ಮೂಲಗಳನ್ನು ಸಮನಾಗಿ ಪುನರ್‌ಹಂಚಿಕೆ ಮಾಡಲು ಸಾಧ್ಯವಾಗದ್ದರಿಂದ ದೆಹಲಿಯಲ್ಲಿ ರಚಿಸಲಾಗಿದ್ದ ಮೂರು ಪಾಲಿಕೆಗಳನ್ನು ಮತ್ತೆ ವಿಲೀನ ಮಾಡಿದ ಉದಾಹರಣೆ ನಮ್ಮ ಮುಂದೆ ಇದ್ದಾಗ್ಯೂ, ಬಿಬಿಎಂಪಿಯನ್ನು ವಿಭಜಿಸಲಾಗುತ್ತಿದೆ.

ಪಾಲಿಕೆಗಳ ಸಮಾನ ಅಭಿವೃದ್ಧಿಯನ್ನು ಖಚಿತಪಡಿಸುವುದಕ್ಕಾಗಿ ಸಂಪನ್ಮೂಲಗಳನ್ನು ಪುನರ್‌ಹಂಚಿಕೆ ಮಾಡುವುದಕ್ಕೆ ರಾಜ್ಯ ಹಣಕಾಸು ಆಯೋಗವನ್ನು ಕೋರಲಾಗುವುದು ಎಂದು ಮಸೂದೆ ನಿರೂಪಕರು ವಾದಿಸುತ್ತಿದ್ದಾರೆ. ಆದರೆ, ಪ್ರಾಯೋಗಿಕವಾಗಿ ಇದು ಕಾರ್ಯಸಾಧುವಲ್ಲ. ಯಾಕೆಂದರೆ, ರಾಜ್ಯ ಹಣಕಾಸು ಆಯೋಗವು ಕೇವಲ ಸಲಹೆಗಳನ್ನು ನೀಡುವ ಸಂಸ್ಥೆ. ಅದು ಮಾಡುವ ಶಿಫಾರಸುಗಳನ್ನು ರಾಜ್ಯ ಸರ್ಕಾರ ಪೂರ್ಣವಾಗಿ ಜಾರಿಗೆ ತಂದ ಉದಾಹರಣೆಗಳಿಲ್ಲ. ಈ ಸಮಸ್ಯೆಯನ್ನು ನಿಭಾಯಿಸುವುದಕ್ಕಾಗಿ ದೊಡ್ಡ ನಗರಗಳಲ್ಲಿ ಒಂದು ಮಹಾನಗರ ಪಾಲಿಕೆಯನ್ನು ಉಳಿಸಿಕೊಂಡು ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಲು ವಲಯವಾರು ಕೌನ್ಸಿಲ್‌ಗಳನ್ನು ಸ್ಥಾಪಿಸಬೇಕು ಎಂದು ಸಂವಿಧಾನದ ಕಾರ್ಯನಿರ್ವಹಣೆಯನ್ನು ಪರಿಶೀಲಿಸುವ ರಾಷ್ಟ್ರೀಯ ಆಯೋಗವು ಶಿಫಾರಸು ಮಾಡಿದೆ. ಜಿಬಿಜಿ ಮಸೂದೆಯು ಈ ಅಂಶವನ್ನು ಪರಿಗಣಿಸಿಲ್ಲ. 2020ರ ಬಿಬಿಎಂಪಿ ಕಾಯ್ದೆಯಲ್ಲಿ ಈ ಅಂಶ ಇದ್ದರೂ, ಜಿಬಿಜಿ ಮಸೂದೆಯಲ್ಲಿ ಇದನ್ನು ಕೈಬಿಡಲಾಗಿದೆ.

ಸಾರಿಗೆ ಸೇರಿದಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಇತರ ಸರ್ಕಾರಿ ಸಂಸ್ಥೆಗಳ ನಡುವೆ ಉತ್ತಮ ಸಮನ್ವಯ ಸಾಧಿಸುವುದಕ್ಕಾಗಿ ಮಹಾನಗರ ಯೋಜನಾ ಸಮಿತಿ (ಎಂಪಿಸಿ) ಅಧೀನದಲ್ಲಿ ತರಬೇಕಾಗಿರುವ ಎಲ್ಲ ಕಾರ್ಯ ಚಟುವಟಿಕೆಗಳನ್ನು ಸಂವಿಧಾನದ 12ನೇ ಶೆಡ್ಯೂಲ್‌ನಲ್ಲಿ ಪಟ್ಟಿ ಮಾಡಲಾಗಿಲ್ಲ ಎಂಬ ಕಾರಣಕ್ಕೆ ಜಿಬಿಎ ಸ್ಥಾಪನೆ ಅಗತ್ಯವಿದೆ ಎಂಬ ಬಹುದೊಡ್ಡ ವಾದವನ್ನು ಮಸೂದೆ ರೂಪಿಸಿದವರು ಮುಂದಿಡುತ್ತಿದ್ದಾರೆ. ಎಲ್ಲ ಸರ್ಕಾರಿ ಸಂಸ್ಥೆಗಳನ್ನು ಒಂದೇ ವೇದಿಕೆಯ ಅಡಿಯಲ್ಲಿ ತರುವುದಕ್ಕಾಗಿ ರಾಜ್ಯ ಸರ್ಕಾರದ ಅಧೀನದಲ್ಲಿ ಜಿಬಿಎನಂತಹ ಸಂಸ್ಥೆಯ ಅಗತ್ಯವಿದೆ ಎಂಬುದು ಅವರ ಪ್ರತಿಪಾದನೆ. ಆದರೆ, ಈ ಪ್ರಕ್ರಿಯೆಯಲ್ಲಿ ಅವರು 74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯು ಕಡ್ಡಾಯಗೊಳಿಸಿದ್ದ ಎಂಪಿಸಿಯನ್ನು ಮೂಲ ಜಿಬಿಜಿ ಮಸೂದೆಯಲ್ಲಿ ಸಂಪೂರ್ಣವಾಗಿ ದೂರವಿಟ್ಟಿದ್ದರು. 12ನೇ ಶೆಡ್ಯೂಲ್ ಒಂದು ಸೂಚಕ ಪಟ್ಟಿಯಷ್ಟೇ. ನಗರ ಸ್ಥಳೀಯ ಆಡಳಿತದಲ್ಲಿ, ರಾಜ್ಯ ಸರ್ಕಾರ ಅಗತ್ಯ ಎಂದು ಭಾವಿಸುವ ಕಾರ್ಯಚಟುವಟಿಕೆಗಳನ್ನು ಸೇರ್ಪಡಿಸುವುದನ್ನು ನಿರ್ಬಂಧಿಸುವುದಿಲ್ಲ ಎಂಬ ಸಂಗತಿ ಮಸೂದೆ ರೂಪಿಸಿದವರಿಗೆ ಗೊತ್ತಿಲ್ಲದಂತೆ ಕಾಣುತ್ತದೆ.

ಸಂವಿಧಾನಬದ್ಧವಾಗಿ ಇರಲೇಬೇಕಾಗಿದ್ದ ಎಂಪಿಸಿ ಸ್ಥಾಪನೆ ಪ್ರಸ್ತಾವವನ್ನು ಮೂಲ ಮಸೂದೆಯಲ್ಲಿ ಕೈಬಿಟ್ಟಿದ್ದಕ್ಕೆ ಟೀಕೆಗಳು ಬಂದಿದ್ದರಿಂದ ಜಂಟಿ ಸದನ ಸಮಿತಿಯು ಪರಿಷ್ಕೃತ ಜಿಬಿಜಿ ಮಸೂದೆಯಲ್ಲಿ ಎಂಪಿಸಿಯನ್ನು ಸೇರ್ಪಡೆಗೊಳಿಸಿತ್ತು. ಆದರೆ, ಅದನ್ನು ಜಿಬಿಎಗಿಂತಲೂ ಮೇಲ್ಮಟ್ಟದಲ್ಲಿ ಸ್ಥಾಪನೆ ಮಾಡುವ ಬಗ್ಗೆ ಪ್ರಸ್ತಾಪಿಸಿದೆ. ಈ ಎಂಪಿಸಿಗೂ ಮುಖ್ಯಮಂತ್ರಿಯೇ ಮುಖ್ಯಸ್ಥರು. ಮುಖ್ಯಮಂತ್ರಿ ನೇತೃತ್ವದಲ್ಲೇ ಇರುವ ಜಿಬಿಎ ರೂಪಿಸಿರುವ ಯೋಜನೆಗಳಿಗೆ ಎಂಪಿಸಿ ಅನುಮೋದನೆ ನೀಡಬೇಕಾಗುತ್ತದೆ. ಇದು ಹೇಗಿದೆ ಎಂದರೆ, ಮುಖ್ಯಮಂತ್ರಿ ನೇತೃತ್ವದ ಸಂಸ್ಥೆಯೊಂದು ರೂಪಿಸಿರುವ ಯೋಜನೆಗೆ ಒಪ್ಪಿಗೆ ಪಡೆಯುವುದಕ್ಕಾಗಿ ಅವರೇ ಮುಖ್ಯಸ್ಥರಾಗಿರುವ ಇನ್ನೊಂದು ಸಂಸ್ಥೆಗೆ ಕಳುಹಿಸಬೇಕು. ಇದರಲ್ಲಿ ಏನಾದರೂ ತರ್ಕವಿದೆಯೇ? ಇಂತಹ ಪರಿಸ್ಥಿತಿಯಲ್ಲಿ ಎಂಪಿಸಿ ಯಾವತ್ತೂ ಸಭೆಗಳನ್ನು ನಡೆಸದು ಮತ್ತು 31 ವರ್ಷಗಳಲ್ಲಿದ್ದಂತೆ ಮುಂದೆಯೂ ಅದು ಕಾಗದಲ್ಲಷ್ಟೇ ಉಳಿಯುವ ಸಂಸ್ಥೆಯಾಗಲಿದೆ.

ಜನರಿಗೆ ಹೆಚ್ಚು ಅಧಿಕಾರ ಬೇಕು: ಬಿಬಿಎಂಪಿಯನ್ನು ಅಂಕೆಯಲ್ಲಿಇಡಲು ಸಾಧ್ಯವಾಗದಿರುವುದಕ್ಕೆ ಪ್ರಮುಖ ಕಾರಣ ಎಂದರೆ, ವಾರ್ಡ್ ಸಮಿತಿಗಳ ಮೂಲಕ ನಾಗರಿಕರಿಗೆ ಹೆಚ್ಚು ಅಧಿಕಾರ ನೀಡಲು ರಾಜ್ಯ ಸರ್ಕಾರ ವಿಫಲವಾಗಿರುವುದು. ಈ ಸಮಿತಿಗಳ ಸದಸ್ಯರನ್ನು ಜನರು ತಮ್ಮೊಳಗೇ ಆಯ್ಕೆ ಮಾಡಿಕೊಳ್ಳಬೇಕಿತ್ತು. ಆದರೆ, ರಾಜ್ಯ ಸರ್ಕಾರವು ನಾಮನಿರ್ದೇಶನದ ಮೂಲಕ ಸದಸ್ಯರನ್ನು ಆಯ್ಕೆ ಮಾಡುವ ಮೂಲಕ ಆಯ್ಕೆ ಪ್ರಕ್ರಿಯೆಯನ್ನೇ ಹಾಳುಮಾಡಿತ್ತು. ಸರ್ಕಾರವು ಸಮಯಕ್ಕೆ ಸರಿಯಾಗಿ ವಾರ್ಡ್ ಸಮಿತಿಗಳನ್ನು ರಚಿಸುತ್ತಿರಲಿಲ್ಲ. ಅವುಗಳ ಸಭೆಯನ್ನೂ ನಿಯಮಿತವಾಗಿ ನಡೆಸುತ್ತಿರಲಿಲ್ಲ. ವಾರ್ಡ್ ಸಮಿತಿಗಳಿಗೆ ಹೆಚ್ಚು ಅಧಿಕಾರ ನೀಡಿದ್ದರೆ, ಸಾವಿರಾರು ಜನರು ತಮ್ಮ ಪ್ರದೇಶದ ಆಡಳಿತದ ಮೇಲೆ ನಿಗಾ ಇಡುತ್ತಿದ್ದರು. ಇದು, ಭ್ರಷ್ಟಾಚಾರ, ದುರಾಡಳಿತಕ್ಕೆ ಕಡಿವಾಣ ಹಾಕುತ್ತಿತ್ತು.

ಕೇಂದ್ರ ಸರ್ಕಾರವು ಏರಿಯಾ ಸಭಾಗಳನ್ನು ರಚಿಸುವಂತೆ 2011ರಲ್ಲಿ ರಾಜ್ಯ ಸರ್ಕಾರಕ್ಕೆ ಸೂಚಿಸಿತ್ತು. ತಮ್ಮ ಪ್ರದೇಶದ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನೆ ಮತ್ತು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಮತದಾರರ ಭಾಗವಹಿಸುವಿಕೆ ಬಲಪಡಿಸುವ ಉದ್ದೇಶ ಇದರಲ್ಲಿದೆ. ಆದರೆ, 14 ವರ್ಷಗಳಿಂದ ರಾಜ್ಯ ಸರ್ಕಾರವು ಏರಿಯಾ ಸಭಾಗಳನ್ನು ರಚಿಸಿ ಅಧಿಸೂಚನೆ ಹೊರಡಿಸಿಲ್ಲ. ಏರಿಯಾ ಸಭಾಗಳ ಪರಿಕಲ್ಪನೆಯನ್ನೂ ಮಸೂದೆ ಕೈಬಿಟ್ಟಿದೆ. ವಾರ್ಡ್ ಸಮಿತಿಗಳ ನಿರ್ಧಾರಗಳನ್ನು ಸಲಹಾ ರೂಪದಲ್ಲಿರುವಂತೆ ಮಾಡಿ, ಕೌನ್ಸಿಲರ್‌ಗಳಿಗೆ ವಿಟೊ ಅಧಿಕಾರದ ನೀಡುವ ಮೂಲಕ ಈಗಿನ ಪರಿಸ್ಥಿತಿಯನ್ನು ಮತ್ತಷ್ಟು ವಿಷಮಗೊಳಿಸಿದೆ.

ಎಲ್ಲಕ್ಕಿಂತ ಮಿಗಿಲಾಗಿ, ನಗರ ಪ್ರದೇಶಗಳ ನಾಗರಿಕರಿಗಾಗಿ ಜಾರಿಗೆ ತಂದಿರುವ ಮೂರು ಪ್ರತ್ಯೇಕ ಕಾನೂನುಗಳನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ರಿಟ್ ಅರ್ಜಿ (17766/2021) ಇತ್ಯರ್ಥಕ್ಕೆ ಬಾಕಿ ಇದೆ. ಪಟ್ಟಣ, ಸಣ್ಣ ನಗರ ಪ್ರದೇಶಗಳಿಗೆ ಮೀಸಲಾಗಿರುವ ಕರ್ನಾಟಕ ಪುರಸಭೆಗಳ ಕಾಯ್ದೆ, ನಗರ ಪಾಲಿಕೆಗಳಿಗೆ ಸಂಬಂಧಿಸಿದ ಕೆಎಂಸಿ ಕಾಯ್ದೆ ಮತ್ತು ಬೆಂಗಳೂರಿಗೆ ಸಂಬಂಧಿಸಿದಂತಹ ಪ್ರತ್ಯೇಕ ಕಾಯ್ದೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಹೈಕೋರ್ಟ್ ಸರ್ಕಾರಕ್ಕೆ ನೋಟಿಸ್ ನೀಡಿದ್ದು, ಅದಕ್ಕೆ ಸರ್ಕಾರ ಪ್ರತಿಕ್ರಿಯಿಸಿಲ್ಲ. ಈ ಪ್ರಕರಣ ಹೈಕೋರ್ಟ್‌ನಲ್ಲಿ ಬಾಕಿ ಇರುವಾಗ ರಾಜ್ಯಪಾಲರು ಜಿಬಿಜಿ ಮಸೂದೆಗೆ ಒಪ್ಪಿಗೆ ನೀಡಬಾರದು. ಈ ಮಸೂದೆಯು 74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಆಶಯವನ್ನು ಪೂರ್ಣವಾಗಿ ಉಲ್ಲಂಘಿಸುತ್ತದೆ. ಹಾಗಾಗಿ, ಈ ಮಸೂದೆಯನ್ನು ವಾಪಸ್ ಪಡೆಯಬೇಕು ಮತ್ತು ಕನಿಷ್ಠ ಮೂರು ತಿಂಗಳು ಸಾರ್ವಜನಿಕ ಅಭಿಪ್ರಾಯಗಳನ್ನು ವ್ಯಾಪಕವಾಗಿ ಸಂಗ್ರಹಿಸಿದ ಬಳಿಕ ಕರಡು ಮಸೂದೆಯನ್ನು ರೂಪಿಸುವ ಪ್ರಕ್ರಿಯೆಯನ್ನು ಮತ್ತೆ ಆರಂಭಿಸಬೇಕು.

ಲೇಖಕಿ: ಸಿವಿಕ್– ಬೆಂಗಳೂರು ಸಂಸ್ಥೆಯ ಕಾರ್ಯಕಾರಿ ಟ್ರಸ್ಟಿ



ಅಂಜಲಿ ಅನೀಶ್

ಕಡಲಾಳಕ್ಕೆ ಇಳಿಯದೇ ತೇಲುವ ಕಥೆ!

'ಮುಂಗಾರ ಮಳೆ' ನಿರ್ಮಾಪಕ, ನಿರ್ದೇಶಕ ಮತ್ತೆ ಒಂದಾಗಿ ಮಾಡಿದ ಚಿತ್ರ 'ಮನದ ಕಡಲು'. ಬಹುತೇಕ ಹಳೆ ತಾಂತ್ರಿಕ ತಂಡವೇ ಇರುವುದರಿಂದ ನಿರೀಕ್ಷೆ ತುಸು ಹೆಚ್ಚೇ ಇತ್ತು. 'ಮುಂಗಾರು ಮಳೆ' ಧಾಟಿಯದ್ದೇ ಹಾಡುಗಳು, ದೃಶ್ಯಗಳು ಇದ್ದರೂ ಈ ಕಡಲು ಮನದಾಳಕ್ಕೆ ಇಳಿಯುವುದಿಲ್ಲ. ಮುಖ್ಯ ಕಾರಣ ಮತ್ತದೇ ಹಳೆಯ ಪ್ರೇಮಕಥೆ ಮತ್ತು ಹೊಸತೆನಿಸದ ನಿರೂಪಣೆ.

ಯಾವುದನ್ನೂ ಗಂಭೀರವಾಗಿ ತೆಗೆದುಕೊಳ್ಳದ ಚಿತ್ರದ ನಾಯಕ ಸುಮುಖ. ವೈದ್ಯರ ಮೇಲೆ ನಂಬಿಕೆ ಕಳೆದುಕೊಂಡು ವೈದ್ಯಕೀಯ ಶಿಕ್ಷಣವನ್ನೇ ಬಿಟ್ಟುಬಂದವನು. ಕಡಲತೀರದಲ್ಲಿ ಆತನಿಗೆ ರಾಶಿಕಾ ಸಿಗುತ್ತಾಳೆ. ಅಲ್ಲಿಂದ ಪ್ರೇಮಕಥೆ ಪ್ರಾರಂಭ. ರಾಶಿಕಾಳ ಹಿಂದೆ ಬೀಳುವ ಸುಮುಖ, ಆಕೆಯನ್ನು ಹುಡುಕಿಕೊಂಡು ದೋಣಿ ದುರ್ಗ ಎಂಬ ಊರಿಗೆ ಬರುತ್ತಾನೆ. ನಾಯಕಿ ಜೊತೆ ಆಕೆಯ ಸ್ನೇಹಿತೆ ಅಂಜಲಿ ಪರಿಚಯವಾಗುತ್ತದೆ. ಅದು ಆದಿವಾಸಿಗಳಿರುವ ಜಾಗ. ರಂಗಾಯಣ ರಘು ಪಾತ್ರ ಪ್ರವೇಶವಾಗುತ್ತದೆ. ಅಲ್ಲಿಂದ ಒಂದು ರೀತಿ ತ್ರಿಕೋನ ಪ್ರೇಮಕಥೆ.

ಇದರ ಮಧ್ಯೆ ಸಮುದ್ರ, ಅಲೆ, ಹಾಡು, ಅರ್ಧಕ್ಕೆ ಬಿಟ್ಟ ಎಂಬಿಬಿಎಸ್ ಕೋರ್ಸ್, ನಾಟಿ ವೈದ್ಯ ದತ್ತಣ್ಣ, ಕಾಯಿಲೆ-ಕಸಾಲೆ ಮುಂತಾದ ಒಂದಷ್ಟು ಸನ್ನಿವೇಶಗಳು ಬರುತ್ತವೆ.

ರಂಗಾಯಣ ರಘು ಪಾತ್ರ, ಗಿಬ್ರಿಶ್ ಭಾಷೆ, ನಡೆಯುವ ಹಲವು ಸನ್ನಿವೇಶಗಳೆಲ್ಲ ಭಟ್ಟರ ಹಿಂದಿನ ಸಿನಿಮಾಗಳನ್ನು ನೆನಪಿಗೆ ತರುತ್ತವೆ. ಪಾತ್ರದ ಹೆಸರು ಮತ್ತು ಕಥೆ ನಡೆಯುವ ಸ್ಥಳವಷ್ಟೇ ಬದಲು! ಸಂತೋಷ್ ರೈ ಪತಾಜೆ ಛಾಯಾಚಿತ್ರಗ್ರಹಣ ಮತ್ತು ಅದಕ್ಕೆ ಸರಿಹೊಂದುವ ವಿ.ಹರಿಕೃಷ್ಣ ಹಿನ್ನೆಲೆ ಸಂಗೀತ ಚಿತ್ರದ ದೊಡ್ಡ ಶಕ್ತಿ. ಕಡಲು, ಕೋಟೆಯ ದೃಶ್ಯಗಳು ಕಣ್ಣಿಗೆ ಮುದ ನೀಡುತ್ತವೆ. ಹಾಸ್ಯದ ದೃಶ್ಯಗಳೊಂದಿಗೆ ನಗಿಸುವ ನಿರ್ದೇಶಕರ ಯತ್ನ ಫಲಿಸಿಲ್ಲ. ಸಾಕಷ್ಟು ಕಡೆ ಸುಮುಖ, ರಾಶಿಕಾ ನಟನೆಯಲ್ಲಿ ಇನ್ನಷ್ಟು ಪಳಗಬೇಕಿತ್ತು ಅನ್ನಿಸುತ್ತದೆ. ಅಂಜಲಿ ಇಷ್ಟವಾಗುತ್ತಾರೆ. ರಂಗಾಯಣ ರಘು ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.

ವಿನಾಯಕ ಕೆ.ಎಸ್


ನಾವು ನೋಡಿದ ಸಿನಿಮಾ

ಮನದ ಕಡಲು

- ನಿರ್ಮಾಣ: ಇ.ಕೃಷ್ಣಪ್ಪ
- ನಿರ್ದೇಶನ: ಯೋಗರಾಜ್ ಭಟ್
- ತಾರಾಗಣ: ಸುಮುಖ, ರಾಶಿಕಾ, ಅಂಜಲಿ ಅನೀಶ್, ರಂಗಾಯಣ ರಘು ಮತ್ತಿತರರು

ಪದಬಂಧ 5996

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

2.ಸಣ್ಣ ಸಣ್ಣ ಕಲ್ಲಿನ ಚೂರು (2)
4.ನೃತ್ಯವನ್ನು ಹೀಗೂ ಹೇಳುವರು (3)
5.ನೀರಿನಲ್ಲಿ ವಾಸಿಸುವ ಪ್ರಾಣಿ (4)
6.ನಾಮ ಹಚ್ಚಿಕೊಂಡವನ ಹೆಸರು (4)
7.ಕೊಳೆ ಇಲ್ಲಿ ಕಾಣುತ್ತಿದೆ (2)
9.ತಿರುಗಿ ಹೀಗೆ ಸಂತೋಷ ಪಡು (2)
13.ಇದು ಚರಿತ್ರೆಗೆ ಸಂಬಂಧಿಸಿದ್ದು (4)
14.ಸೈನ್ಯದ ಮುಖ್ಯಸ್ಥ (4)
15.ರಸದಲ್ಲಿರುವ ವೇಗ (3)
16.ಈತ ಬುದ್ಧಿವಂತ (2)

ಮೇಲಿಂದ ಕೆಳಕ್ಕೆ

1.ಕಾಡಿನ ದೊರೆ (4)
2.ಈತ ಮಂದಿಗೆಲ್ಲಾ ಒಡೆಯ (5)
3.ಮೋಸಕ್ಕೊಂದು ಪರ್ಯಾಯ ಪದ (3)
5.ಗೆಲುವನ್ನು ಪಡೆದವನು (4)
8.ಒಳ್ಳೆಯ ನಡತೆ (4)
10.ಹಳೆಯದನ್ನು ಪುನಃ ಹೊಸತು ಮಾಡುವಿಕೆ (5)
11.ಸರ ತರಲು ತೋರಿದ ಆತುರ (4)
12.ಮರದ ಹತ್ತಿರ ಹರಡಿರುವ ಉಸುಕು (3)

5995ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಾಯಸ 5.ಮಾವಟಿಗ
6.ತಿದ್ದುಪಡಿ 8.ನರಕ
11.ವಲ್ಲರಿ 13.ಪರಿಹಾರ
17.ಸಮುದಾಯ 18.ತಿರುಕ

ಮೇಲಿಂದ ಕೆಳಕ್ಕೆ:
1.ಪಾಮರ 2.ಸಮಾಧಾನ
3.ಸಂಗತಿ 4.ಪ್ರತಾಪ
7.ಡಿಕಾವು 9.ಕಕವ
10.ಬಳಪ 12.ರಿಯಾಯಿತಿ
14.ರಿಪೇರಿ 15.ರಸನ
16.ಸಿಡುಕ

ಸುಡೊಕು 6381

			4		3	9	6	
7		8						5
4			5		8	7		1
		9						7
	3	7	1		6	4	5	
8						2	1	
6		5		2			3	4
3						5		2
	8	2		5			7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6380 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶನಿವಾರ ಮಾರ್ಚ್ 29, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಅಮಾವಾಸ್ಯೆ ಗಂ. 16-28 ನಕ್ಷತ್ರ: ಉತ್ತರಾಭಾದ್ರ ಗಂ. 19-27 ಯೋಗ: ಬ್ರಹ್ಮ ಗಂ. 22-03 ಕರಣ: ಕಿಂಸ್ತುಘ್ನ ಗಂ. 06-14, ಮೀನ ಮಾಸದ 15 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 4.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-32 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 28 ರಂಜಾನ್
ಅದೃಷ್ಟ ಸಂಖ್ಯೆ : 6, 1

ಮೇಷ: ಪ್ರಯಾಣದ ನಂತರದ ಸುಸ್ತು ನಿಮ್ಮನ್ನು ಬಾಧಿಸಬಹುದು. ಊಟೋಪಚಾರದ ವಿಚಾರಗಳಲ್ಲಿ ಸ್ವಲ್ಪಮಟ್ಟಿಗೆ ನೀವೇ ಹೊಂದಾಣಿಕೆ ಮಾಡಿಕೊಳ್ಳಬೇಕಾಗುವುದು. ಎಣ್ಣೆ ಪದಾರ್ಥಗಳನ್ನು ಆದಷ್ಟು ಬಳಸದಿರಿ.

ವೃಷಭ: ನಿಮಲ್ಲಿ ಸ್ವಾಭಾವಿಕವಾಗಿ ಇರುವ ಇತರರನ್ನು ಶ್ಲಾಘಿಸುವ ಗುಣವು ಪ್ರಶಂಸನೀಯವಾಗುವುದು. ನಿಮ್ಮ ನಿತ್ಯದ ಔಷಧಿಯಲ್ಲಿ ಉಂಟಾದ ಬದಲಾವಣೆಗೆ ಹೊಂದಾಣಿಕೆ ಮಾಡಿಕೊಳ್ಳಲು ಸಮಯ ಹಿಡಿಯುವುದು.

ಮಿಥುನ: ನೀವು ಇತರರಿಗೆ ಸಹಾಯವನ್ನು ಮಾಡಿದರೂ ಕಷ್ಟಕಾಲಕ್ಕೆ ನಿಮಗೆ ಯಾರೂ ನೆರವಿಗೆ ಬರುವುದಿಲ್ಲವೆಂದು ಅನಿಸಲಿದೆ. ನಿಮ್ಮ ಸಂಸ್ಥೆಯ ಮುಖ್ಯಸ್ಥರೊಂದಿಗೆ ಮಾತನಾಡುವುದರಿಂದ ನಿಮ್ಮ ಆಕಾಂಕ್ಷೆಗಳು ಈಡೇರಬಹುದು.

ಕರ್ಕಾಟಕ : ಊರಿನಲ್ಲಿ ಶುರುವಾಗಲಿರುವ ಉತ್ಸವಗಳ ಕಾರಣದಿಂದಾಗಿ ನಿಮ್ಮ ದೈನಂದಿನ ಕೆಲಸಗಳು ಹೆಚ್ಚಾಗಲಿದೆ. ಮನೆಯಲ್ಲಿ ನಿಮ್ಮ ಜವಾಬ್ದಾರಿಯುತ ನಡವಳಿಕೆಯು ತಂದೆ ತಾಯಿಯರಿಗೆ ಸಂತೋಷ ತಂದುಕೊಡಲಿದೆ.

ಸಿಂಹ : ಹೊಸ ಮನೆಯಲ್ಲಿ ವಸ್ತುಗಳನ್ನು ಅದರದರ ಸ್ಥಾನಕ್ಕೆ ಜೋಡಿಸಿ ಇಡುವುದೇ ನಿಮಗೆ ಸವಾಲಿನ ಕೆಲಸವಾಗುವುದು. ಇತರ ವಿಷಯಗಳ ಚಿಂತೆಯಿಂದಾಗಿ ನಿಮಗೆ ನಿದ್ರಾಹೀನತೆ ಉಂಟಾಗುವುದು.

ಕನ್ಯಾ: ಮಕ್ಕಳ ಆರೋಗ್ಯದಲ್ಲಿನ ಏರುಪೇರುಗಳು ನಿಮಗೆ ಖೇದವನ್ನು ಉಂಟು ಮಾಡುವುದು. ಕಷ್ಟಗಳ ಪರಿಹಾರಕ್ಕಾಗಿ ದೇವರ ಸೇವೆಯನ್ನು ಮಾಡಿ. ಸಮೀಪವರ್ತಿಗಳಿಂದ ಸಮಯೋಚಿತ ಸಹಾಯ ಲಭಿಸುವುದು.

ತುಲಾ: ಹೊರ ಪ್ರಪಂಚಕ್ಕೆ ಕಾಲಿಟ್ಟ ನಿಮಗೆ ತಂದೆ ತಾಯಿಯರು ಈವರೆಗೆ ಹೇಳುತ್ತಿದ್ದ ಹಲವಾರು ಮಾತುಗಳು ಅರ್ಥವಾಗಲು ಶುರುವಾಗುವುದು. ಗೆಳೆಯರು ಹೇಳಿದ ಮಾತುಗಳನ್ನು ಪರಾಮರ್ಶಿಸದೇ ಒಪ್ಪಿಕೊಳ್ಳಬೇಡಿ.

ವೃಶ್ಚಿಕ: ತೋಟಕ್ಕೆ ಉಂಟಾಗಲಿರುವ ನೀರಿನ ಅಭಾವವನ್ನು ತಡೆಗಟ್ಟುವ ಸಲುವಾಗಿ ಮುಂಜಾಗ್ರತಾ ಕ್ರಮ ಅಗತ್ಯವಾಗಿರುತ್ತದೆ. ಪ್ರಯಾಣ ಕಾಲದಲ್ಲಿ ಹೊರಗಿನ ಆಹಾರ ಸೇವನೆಗಿಂತ ಮನೆಯಲ್ಲಿ ತಯಾರು ಮಾಡಿಕೊಂಡು ತೆರಳಿ.

ಧನು: ಪರೀಕ್ಷೆಗಳಿಗೆ ನೀವು ಮಾಡಿಕೊಳ್ಳುತ್ತಿರುವ ತಯಾರಿಯು ನಿರೀಕ್ಷಿತ ಫಲಿತಾಂಶ ಪಡೆಯಲು ಸಾಕಾಗುವುದಿಲ್ಲ ಎಂದು ಮನವರಿಕೆ ಆಗಲಿದೆ. ಖಜಾಂಚಿಗಳಿಗೆ ಕೆಲಸದ ಹೊರೆಯು ಅತ್ಯಂತ ಹೆಚ್ಚಾಗಲಿದೆ.

ಮಕರ: ಹಳೆಯ ವಸ್ತುಗಳನ್ನು ಬೇರೆ ತರಹದಲ್ಲಿ ಬಳಸಲು ಸಿದ್ಧರಾಗುವಿರಿ. ಗೊಂಬೆ ತಯಾರಿಕೆ ಹಾಗೂ ಮಾರಾಟವು ಲಾಭದಾಯಕವಾಗಲಿದೆ. ಹೆಣ್ಣುಮಕ್ಕಳಿಗೆ ತವರುಮನೆಗೆ ಹೋಗುವ ಅವಕಾಶ ದೊರೆಯುವುದು.

ಕುಂಭ: ಗೃಹ ಅಲಂಕಾರ ವಸ್ತುಗಳಿಗಾಗಿ ಹೆಚ್ಚು ಹಣ ಖರ್ಚು ಮಾಡುವುದು ಸಮಂಜಸವಲ್ಲ. ಮಕ್ಕಳ ಹಾಗು ಹೆಂಡತಿಯ ಆನಂದಕ್ಕಾಗಿ ಕೆಲವು ಕೆಲಸಗಳನ್ನು ಮಾಡುವಿರಿ. ತಾಯಿಯ ಬುದ್ಧಿಮಾತು ದಾರಿದೀಪವಾಗಲಿದೆ.

ಮೀನ: ಎಲೆಕ್ಟ್ರಾನಿಕ್ ವಸ್ತುಗಳಲ್ಲಿ ದೋಷ ಉಂಟಾಗಿ ಸಮಸ್ಯೆಗೆ ಸಿಲುಕುವಿರಿ. ಬಿಸಿಲಿನ ಸಮಯದಲ್ಲಿ ಆದಷ್ಟು ಹೊರಗೆ ಹೋಗುವುದನ್ನು ಕಡಿಮೆ ಮಾಡಿ. ಗರ್ಭಿಣಿಯರು ನಿಮ್ಮ ಆರೋಗ್ಯದ ಮೇಲೆ ಹೆಚ್ಚಿನ ಗಮನವಹಿಸಿ.

ಭೂಮಿಕಾ
ಮಹಿಳೆಯ ಆಪ್ತ ಸಂಗಾತಿ

ಹೊಸಿಲ ಹೊಕ್ಕಲಿ ಹೊಸತನ



ಪೂರ್ಣಿಮಾ ಭಟ್ಟ ಸಣ್ಣಕೇರಿ

'ಊರಿಂದ ಅಮ್ಮ ಬಂದಿದ್ದಾರೆ. ಹಾಗಾಗಿ ನಮ್ಮನೆಯಲ್ಲಿ ಹಬ್ಬ ಮಾಡೋಣ, ನಿನ್ನ ಕುಟುಂಬದ ಜತೆಗೆ' ಎಂದು ಮೆಸೇಜು ಕಳಿಸಿದ್ದಳು ಗೆಳತಿ. ಅದು ಕಳೆದ ವರ್ಷದ ಯುಗಾದಿಯ ತೇದಿ. 'ಖಂಡಿತ ಬರುತ್ತೇವೆ- ಮಾವಿನಕಾಯಿ ಚಿತ್ರಾನ್ನ ನಾನೇ ತರುವೆ' ಎಂದು ಮರು ಮೆಸೇಜಿಸಿದ್ದೆ ನಾನು.

ಆ ಯುಗಾದಿಯ ನಸುಕು ದಿನಕ್ಕಿಂತಲೂ ಭಿನ್ನ.

ಬಾಕೀ ರಜಾ ದಿನದಂತೆ ಸೋಫಾಗೆ ಒರಗಿ, ಕಾಫೀ ಲೋಟ ಹಿಡಿದು, ಐದು ನಿಮಿಷ ಪೇರಪಲ್ಲೂ ಮತ್ತೈದು ನಿಮಿಷ ಮೊಬೈಲಿನಲ್ಲೂ ಕಳೆದು ಹೋಗುವ ಮನೆಯವ ಇಂದು ಅಡುಗೆ ಮನೆಯಲ್ಲಿ ಮಾವಿನಕಾಯಿ ತುರಿಯುತ್ತ ನಿಂತಿದ್ದಾನೆ. ಈಗಷ್ಟೇ ಪರೀಕ್ಷೆ ಮುಗಿಸಿದ ಮಕ್ಕಳು 'ರಜೆಯ ದಿನವಾದರೂ ಮಲಗಲು ಬಿಡು ಅಮ್ಮಾ' ಎಂದು ಮೂತಿಯುಬ್ಬಿಸುತ್ತಿಲ್ಲ. ಕರೆದಾಗ ಬಂದು ಒಗ್ಗರಣೆಯವಲಕ್ಕಿ ತಿಂದು ಅಭ್ಯಂಗ ಸ್ನಾನಕ್ಕೆ ರೆಡಿಯಾಗುತ್ತಿದ್ದಾರೆ. 'ಗೆಳತಿಯ ಮನೆಯಲ್ಲಿ ಹೊಸಫಲದ ಚಿತ್ರಾನ್ನ ಚೆನ್ನಾಗಿದೆ ಅಂದರೆ ಅದರ ಪೂರ್ತಿ ಕ್ರೆಡಿಟ್ಟು ನನಗೇ... ಮಾವಿನಕಾಯಿ ತುರಿದು ಕೊಟ್ಟವರಿಗೆ ಹಬ್ಬದಡಿಗೆಯಷ್ಟೇ ಬೋನಸ್ಸು, ಹೊಗಳಿಕೆ ಸಿಗುವುದಿಲ್ಲ' ಎಂದು ಕಾಲೆಳೆಯುತ್ತ ಖುಷಿಯಾಗಿ ಚಿತ್ರಾನ್ನವನ್ನು ಹಾಟ್ ಬಾಕ್ಸಿಗೆ ತುಂಬುತ್ತೇನೆ.

ಅಲ್ಲೇ ಒಂದು ಪ್ರಶ್ನೆ ತಲೆಯಲ್ಲಿ ರಂಧ್ರ ಕೊರೆಯತೊಡಗಿ ನಿಂತು ಯೋಚಿಸುತ್ತೇನೆ. ಗೆಳತಿ ತನ್ನ ಮನೆಗೆ ಹಬ್ಬದೂಟಕ್ಕೆ ಕರೆಯದಿದ್ದರೆ ನಾನು ಹಬ್ಬ ಮಾಡುವ ಈ ಉತ್ಸಾಹ ತೋರಿಸುತ್ತಿದ್ದೆನೇ? ಗೆಳತಿಯ ಮನೆಗೆ ಅವಳಮ್ಮ ಬರದೇ ಇದ್ದರೆ ಅವಳ ದಿನನಿತ್ಯದ ಗೌಜಿನಲ್ಲಿ ನಮ್ಮನ್ನು ಮನೆಗೆ ಕರೆಯುವ ಸಾಹಸವನ್ನು ಮಾಡುತ್ತಿದ್ದಳೇ? ಇಂದಿನ ದಿನವೊಂದು, ವಾರವೊಂದು, ತಿಂಗಳೊಂದು ಅಚ್ಚುಕಟ್ಟಾಗಿ ಕಳೆದರೆ ಸಾಕು - ಹಬ್ಬ ಹುಣ್ಣಿಮೆ, ತಿಥಿ ತೇದಿಗಳ ಲೆಕ್ಕಾಚಾರ ಆಮೇಲೆ ನೋಡುವ ಅಂದುಕೊಂಡು ದಿನಗಳೆಯುತ್ತಿದ್ದೇವಾ ನಾವೆಲ್ಲ..? ಇಂಥದ್ದೆಲ್ಲ ತಾತ್ವಿಕ ಪ್ರಶ್ನೆಗಳನ್ನು ಅಡ್ಡಾದಿಡ್ಡಿಯಾಗಿ ಕೇಳಿಕೊಂಡು ಸುಂದರವಾಗಿ ಅರಳಿರುವ ಈ ಹಬ್ಬದ ಮುಂಜಾವನ್ನು ಸುಖಾಸುಮ್ಮನೇ ಗೊಂದಲಗೊಳಿಸಲಾರೆ ಅಂದುಕೊಳ್ಳುತ್ತ ಸೀರೆಯುಟ್ಟು ಹೊರಡಲು ಅನುವಾಗಿದ್ದೆ ಆ ದಿನ.

ಆದರೆ ಈ ಪ್ರಶ್ನೆಗಳನ್ನು ಪೂರ್ತಿ ಮರೆಯುವಂತಿಲ್ಲ. ಒಂದಿಲ್ಲೊಂದು ಸಂದರ್ಭದಲ್ಲಿ ಮನೆಯ ಗೃಹಿಣಿಗೇ ಆಗಲಿ ಗೃಹಸ್ಥನಿಗೇ ಆಗಲಿ ಈ ಜಿಜ್ಞಾಸೆ ಏಳುವುದು ಇಂದಿನ ಧಾವಂತದಲ್ಲಿ ಸರಿಯೂ ಕೂಡಾ.

ಹಬ್ಬವೆಂದರೆ ಹೊಸತನವಷ್ಟೇ; ಮಾಮೂಲನ್ನು ಮೀರುವುದಷ್ಟೇ; ದಿನವನ್ನು ಎಂದಿನಂತಿಡದೆ ವಿಶೇಷವಾಗಿ ಕಳೆಯುವುದಷ್ಟೇ; ಆವತ್ತಿನ ಪಾಲಿನ ಕೆಲಸ ಬೊಗಸೆಗಳನ್ನು ಉತ್ಸಾಹದಿಂದ ನೆರವೇರಿಸುವುದಷ್ಟೇ; ಸಕಲ ದೂರು ದುಮ್ಮಾನ ಕಲಹ ವೈಷಮ್ಯವನ್ನೂ ಬುದ್ಧ್ಯಾಪೂರ್ವಕ ಬದಿಗೊತ್ತಿ ಲವಲವಿಕೆಯಿಂದ ಇರುವುದಷ್ಟೇ. ಇದನ್ನೇ ಅಲ್ಲವೆ ನಾವು ಎಳೆತನದಿಂದಲೂ ನೋಡಿಕೊಂಡು ಬಂದಿದ್ದು? ಇದೇ ಅಲ್ಲವೆ ನಮ್ಮಲ್ಲಿನ ಹಿರೀಕರು ಅವರ ಸರೀಕರು ಮಾಡಿಕೊಂಡು ಬಂದದ್ದು? ಹೀಗೇ ಅಲ್ಲವೆ ನಮ್ಮ ಪುಸ್ತಕಗಳು, ಸುತ್ತಲಿನ ಸಮಾಜ ನಮಗೆ ತಿಳುವಳಿಕೆ ನೀಡಿದ್ದು?

ಹಾಗದರೆ ಎಲ್ಲವೂ ನಿಂತಿತೆಲ್ಲಿ? ನಿಜಕ್ಕೂ ಕೂತು ಆಲೋಚಿಸಿದರೆ ಯಾವುದೂ ಪೂರ್ತಿ ನಿಂತಿಲ್ಲ. ಸಂಭ್ರಮದ, ಆಚರಣೆಯ ರೂಪ ಬೇರೆಯಾಗಿದೆ ಅಷ್ಟೇ. ಈ ರೂಪ ಪರಿವರ್ತನೆಯ ಹಾದಿಯಲ್ಲಿ ಗೃಹಿಣಿಯ - ಗೃಹಸ್ಥನ ಪಾತ್ರಗಳೂ ತುಸು ಸ್ಥಾನ ಪಲ್ಲಟವಾದವಲ್ಲ, ಹಾಗಾಗಿ ಈ ಎಲ್ಲ ಹಬ್ಬಗಳ ಆಶಯಗಳೇ ಬದಲಾಗಿವೆ ಎಂದುಕೊಳ್ಳುತ್ತೇವೆ.

ಹಳ್ಳಿಬೀಡಿನಲ್ಲಿ ಗಂಡಸರಿಗೆ ಹೆಂಗಸರಿಗೆ ಸಮ ಸಮ ಕೆಲಸ. ಅಡುಗೆಯೊಲೆಯಲ್ಲಿ ಹೆಂಗಳೆಯರು ಲಟ್ಟಿಸಿದ ಹೋಳಿಗೆ ಬೇಯುವ ಸಮಯದಲ್ಲಿ ತೋರಣ, ಪಂಚಾಂಗ ಪೂಜೆ, ಪಂಚಾಂಗ ಶ್ರವಣ ಇವೆಲ್ಲವೂ ಗಂಡಸರ ಹೆಗಲೇರುವ ಜವಾಬ್ದಾರಿಗಳು. ಚಿತ್ತಾರದ ಪಾತ್ರೆಯಲ್ಲಿ ಅಮ್ಮ ಮಾಡಿದ ಬೇವು-ಬೆಲ್ಲ ಸಮರಸವಾಗುತ್ತಿರುವಾಗ ಶುರುಸಂಜೆಯಲ್ಲಿ ಆಗಬೇಕಿರುವ ಪಾನಕ ಸಮಾರಾಧನೆಯ ಯೋಜನೆ ಅಪ್ಪನದ್ದು.

ಆದರೆ ಪಟ್ಟಣಗಳ ಇಂದಿನ ಪರಿಸ್ಥಿತಿ ಕೊಂಚ ಬೇರೆ. ಬೆಳಗಿಂಜಾವ ಆರರಿಂದ ಶುರುವಾಗುವ ಡಬ್ಬಿ ಕಟ್ಟು, ದೋಸೆ ಹುಯ್ಯಿ, ಕೆಲಸಕ್ಕೆ ಓಡು, ಟ್ರಾಫಿಕ್ಕಿಗೊಂದಷ್ಟು ಹಿಡಿಶಾಪ ಹಾಕು, ಮನೆ ಮೆಟ್ಟಿಲು ಹತ್ತಿದಾಕ್ಷಣ ಎದುರುಗೊಳ್ಳುವ ಮನೆವಾರ್ತೆ ನೋಡು, ಮಗಳ ಕ್ರಿಕೆಟ್ ಕ್ಲಾಸು - ಮಗನ ಪರೀಕ್ಷೆ... ಇದೆಲ್ಲದರ ನಡುವೆ ಹೋಳಿಗೆ, ಪಾಯಸ, ಹಬ್ಬದೂಟ, ಸಂತೋಷ ಕೂಟವನ್ನೆಲ್ಲ ಮುಂದಿನ ವರ್ಷ ನೋಡಿಕೊಂಡರಾಯಿತು ಅನ್ನಿಸಿದರೆ ಅದು ಅತಿಶಯವಲ್ಲ.

ಧಾವಂತವೂ ದಿನಚರಿಯೇ ಆಗಿಹೋದ ಈ ಹೊತ್ತಿನಲ್ಲಿ ಯಜಮಾನ ಕಾಯಿ ತುರಿದು ಕೊಡಲಿ, ಕೋಸಂಬರಿಗೆ ಹಿಡಿ ತುಂಬ ಸೌತೆಕಾಯಿ ಹೆಚ್ಚಿಡಲಿ, ಅಡುಗೆ ಮುಗಿದು ಉಡಬೇಕಾದ ಸೀರೆಯನ್ನು ಅವನೇ ಕಪಾಟಿನಿಂದ ಎತ್ತಿಡಲಿ ಎಂದು ಹೆಂಗಳೆಯರು ಅಂದುಕೊಂಡರೆ - ಅಂದುಕೊಂಡಂತೆಯೇ ನಡೆದರೆ ಅದು ಹಬ್ಬವನ್ನು ನಿಜಕ್ಕೂ ಹೊಸತಾಗಿಸೀತು ಅಲ್ಲವೆ? ❖

ಹೊಸತನವನ್ನು ಹೀಗೆ ಹಸೆಗೆ ಕರೆಯುವ ಬನ್ನಿ:

- ದಶಕದ ಕೆಳಗೆ, ನೆನಪಿಗಾಗಿ ಶೇಖರಿಸಿಟ್ಟ ಮಕ್ಕಳ ಕುಂಚಿಗೆ, ಸ್ವೆಟರ್, ಮೊದಲ ಯೂನಿಫಾರ್ಮ್, ಕೆಂಪನೆಯ ಫ್ರಾಕ್, ಛೋಟಾ ಭೀಮ್ ಟೀಶರ್ಟನ್ನು ಒಟ್ಟಾಗಿಸಿ ಹಬ್ಬದ ಮರುದಿನವೇ ಒಂದು ಕೌದಿ ಮಾಡುವ
- ಮೂರು ವರ್ಷದ ಹಿಂದೆ ಪುಸ್ತಕದಂಗಡಿಯಲ್ಲಿ ಕೊಂಡ `ಪಾಕಕ್ರಾಂತಿ' ಪುಸ್ತಕವನ್ನು ಓದಿಯೇ ತೀರುವ
- ಸಣ್ಣದೊಂದು ಮನಸ್ತಾಪವಾಗಿ ವರ್ಷಾನುಗಟ್ಟಲೆಯಿಂದ ಫೋನಿನಲ್ಲೂ ಮಾತಾಡದ ಆ ಕಝಿನ್ನಿನ ನಂಬರ್ ಡಯಲ್ ಮಾಡುವ
- ಹಬ್ಬದ ಸಂಜೆ ಮಕ್ಕಳೊಡನೆ ಕೂತು ಹಾವು ಏಣಿಯಾಟ ಆಡುವ; ಆಡುವಾಗ ಉದ್ದನೆಯ ಹಾವು ಕಚ್ಚಿದರೂ ನಾನೇ ಗೆಲ್ಲುವೆ ನೋಡು ಅಂತಂದು ಮಕ್ಕಳ ಕಣ್ಣಲ್ಲಿ ಅಚ್ಚರಿ ಮೂಡಿಸುವ
- ಬೇವಿನ ಕಹಿಯುಂಡರೆ ಮಾತ್ರ ಬೆಲ್ಲದ ಸಿಹಿಯನ್ನು ಮನಸಾ ಶ್ಲಾಘಿಸಲು ಸಾಧ್ಯವಂತೆ. 'ಇದ್ಯಾವ ಲಾಜಿಕ್ಕು...' ಅಂತ ರೊಚ್ಚಿಗೇಳದೆ ಸಮಾಧಾನದಲ್ಲಿ ಕೂತು ಯೋಚಿಸುವ.

ರುಚಿ ರುಚಿ ಜ್ಯೂಸು

ಬೇಸಿಗೆಯ ಬೇಗೆ ನೀಗಿಸುವ ಬಗೆಗಳು ಹಲವು. ಮನೆಯಲ್ಲಿ ಮಕ್ಕಳಿದ್ದರಂತೂ ಬಗೆಬಗೆಯ ಪಾನಕ, ಪಾನೀಯಗಳ ಸಮಾರಾಧನೆ ನಡೆದೇ ಇರುತ್ತದೆ. ಆರೋಗ್ಯಕರ ಮತ್ತು ಸುಲಭವಾಗಿ ತಯಾರಿಸಬಹುದಾದ ಕೆಲವು ಪಾನಕಗಳು ಇಲ್ಲಿವೆ. ಹೊಟ್ಟೆಗೆ ಹಿತವಾಗಿರುವ ಈ ಪಾನೀಯಗಳು ಈ ಸಲದ ಬೇಸಿಗೆಯಲ್ಲಿ ಸೇವಿಸಿ ನೋಡಿ



ಪುದೀನ ಜ್ಯೂಸ್

ಬೇಕಾಗುವ ಸಾಮಗ್ರಿಗಳು: ಪುದೀನ ಸೊಪ್ಪು ಒಂದು ಕಪ್, ಶುಂಠಿ ಸಣ್ಣ ತುಂಡು, ನಿಂಬೆರಸ 1/2ಚಮಚ, ಚಿಟುಕಿ ಕಪ್ಪು ಉಪ್ಪು (ಕಾಲ ನಮಕ್) **ಮಾಡುವ ವಿಧಾನ:** ಪುದೀನ ಸೊಪ್ಪು, ಶುಂಠಿ, ನಿಂಬೆರಸಕ್ಕೆ ಒಂದು ಕಪ್ ನೀರು ಸೇರಿಸಿ ಅರೆದು, ಸೋಸಿಕೊಳ್ಳಿ. ನಂತರ ಉಪ್ಪು ಬೆರೆಸಿ, ಮಿಶ್ರಣ ಮಾಡಿದರೆ ಹಚ್ಚ ಹಸಿರು ಪುದಿನ ಜ್ಯೂಸು ರೆಡಿ.



ಕಾಯಿ ಹಾಲು

ಬೇಕಾಗುವ ಸಾಮಗ್ರಿಗಳು: ತಾಜಾ ತೆಂಗಿನತುರಿ 1 ಕಪ್, ಸಕ್ಕರೆ 1/2 ಚಮಚ, ಬಾದಾಮಿ,ಗೋಡಂಬಿ ತುಂಡುಗಳು 1 ಚಮಚ, ಏಲಕ್ಕಿ ಪುಡಿ 1/4 ಚಮಚ ಮಾಡುವ ವಿಧಾನ: ತೆಂಗಿನತುರಿಯನ್ನು ಒಂದು ಕಪ್ ನೀರು ಸೇರಿಸಿ ಚೆನ್ನಾಗಿ ಅರೆದು, ಹಾಲು ಬಸಿದುಕೊಳ್ಳಿ. (ಸಾಂದ್ರತೆಗೆ ತಕ್ಕಂತೆ ಹೆಚ್ಚುವರಿ ನೀರು ಸೇರಿಸಿಕೊಳ್ಳಬಹುದು) ಈ ಹಾಲಿಗೆ ಏಲಕ್ಕಿಪುಡಿ, ಸಕ್ಕರೆ ಸೇರಿಸಿ ಮಿಶ್ರಣ ಮಾಡಿ, ಬಾದಾಮಿಗೋಡಂಬಿ ಉದುರಿಸಿದರೆ ಪರಿಮಳಭರಿತ ಕಾಯಿಹಾಲು ಸಿದ್ಧ.



ಸೌತೆಕಾಯಿ ಜ್ಯೂಸ್

ಬೇಕಾಗುವ ಸಾಮಗ್ರಿಗಳು: ಎಳೆ ಸೌತೆಕಾಯಿ 1, ಜೀರಿಗೆ ಪುಡಿ 1/4 ಚಮಚ, ಚಿಟಿಕೆ ಉಪ್ಪು ಮಾಡುವ ವಿಧಾನ: ಸೌತೆಕಾಯಿಯ ಸಿಪ್ಪೆ ತೆಗೆದು, ದೊಡ್ಡ ಕಣ್ಣಿನ ತುರೇಮಣೆಯಲ್ಲಿ ತುರಿದುಕೊಳ್ಳಿ. ಇದಕ್ಕೆ ಜೀರಿಗೆ, ಉಪ್ಪು ಸೇರಿಸಿ ಜ್ಯೂಸರ್ ಅಥರ್ ಮಿಕ್ಸಿಜಾರ್‌ನಲ್ಲಿ ಅರೆದು ಸೋಸಿದರೆ ಆರೋಗ್ಯಕರ ಸೌತೆ ಜ್ಯೂಸು ರೆಡಿ.



ಸೋರೆಕಾಯಿ ಜ್ಯೂಸ್

ಬೇಕಾಗುವ ಸಾಮಗ್ರಿಗಳು: ಸೋರೆಕಾಯಿ ಅರ್ಧ ಹೋಳು, ನಿಂಬೆರಸ 1 ಚಮಚ, ರುಚಿಗೆ ತಕ್ಕಷ್ಟು ಕಂದು ಸಕ್ಕರೆ. **ಮಾಡುವ ವಿಧಾನ:** ಸೋರೆಕಾಯಿಯ ಸಿಪ್ಪೆ ತೆಗೆದು ಬೀಜರಹಿತ ತಿರುಳನ್ನು ತುರಿದುಕೊಳ್ಳಿ. ಇದಕ್ಕೆ ಒಂದು ಚಮಚ ನಿಂಬೆರಸ ಸೇರಿಸಿ ಅರೆದು ಶೋದಿಸಿ, ನಂತರ ರುಚಿಗೆ ತಕ್ಕಷ್ಟು ಕಂದು ಸಕ್ಕರೆ ಸೇರಿಸಿ ಸವಿಯಿರಿ.

ಬೇಸಿಗೆಯಲ್ಲಿ ಮಕ್ಕಳ ಉಡುಪು

ಅಂದಕ್ಕಿಂತ ಆರಾಮಕ್ಕಿರಲಿ ಆದ್ಯತೆ



ಮಂಜುಶ್ರೀ ಎಂ. ಕಡಕೋಳ

ಕೂಸು ಇದ್ದ ಮನೀಗ ಬೀಸಣಿಕೆ ಯಾತಕ
ಕೂಸು ಕಂದಮ್ಮ ಒಳಹೊರಗ ಅಡಿದರ
ಬೀಸಣಿಕೆ ಗಾಳಿ ಸುಳಿದಾವ...

ಎನ್ನುವುದು ಜನಪದರ ನುಡಿ. ನೆತ್ತಿ ಸುಡುವ ಬಿರು ಬಿಸಿಲಿನಲ್ಲೂ ಮಕ್ಕಳು ತಂಪಾಗಿ ಆಟವಾಡಿಕೊಂಡಿರುವಲ್ಲಿ ಅವರು ಧರಿಸುವ ಉಡುಪಿನ ಪಾತ್ರ ಮುಖ್ಯ. ಬೇಸಿಗೆಯ ರಜೆಯೊಂದಿಗೇ ಬರುವ ಸಾಲು ಸಾಲು ಹಬ್ಬ, ಜಾತ್ರೆಗಳಲ್ಲಿ ತಮ್ಮ ಮಕ್ಕಳನ್ನು ಚೆನ್ನಾಗಿ ಕಾಣುವಂತೆ ಸಿಂಗರಿಸಬೇಕೆನ್ನುವುದು ತಾಯಂದಿರ ಆಸೆ. ಆದರೆ, ಈ ಆಸೆಗೆ ಸೂರ್ಯದೇವನದ್ದೇ ಅಡ್ಡಿ. ಅವನ ಅಡ್ಡಿಯನ್ನೂ ಮೀರುವಂತೆ ಮಕ್ಕಳನ್ನು ಸಿಂಗರಿಸುವಲ್ಲಿ ಅಮ್ಮಂದಿರೇನೂ ಹಿಂದೆ ಬಿದ್ದಿಲ್ಲ. ಆದರೆ, ಬೇಸಿಗೆಯಲ್ಲಿ ಮಕ್ಕಳಿಗೆ ಅಂದದ ಉಡುಪುಗಳಿಗಿಂತ ಆರಾಮದಾಯಕ ಉಡುಪುಗಳು ಮುಖ್ಯ ಅನ್ನುವುದು ಆದ್ಯತೆಯಾಗಿರಲಿ.

ಸದಾ ಕಾಲಕ್ಕೂ ಸಲ್ಲುವ ಕಾಟನ್

ಫ್ಯಾಷನ್ ಉದ್ಯಮ ಎಷ್ಟೇ ವೇಗದ ದಾಪುಗಾಲು ಹಾಕುತ್ತಿರಲಿ, ಅಂದಿಗೂ ಇಂದಿಗೂ ಎಂದೆಂದಿಗೂ ಕಾಟನ್ ಬಟ್ಟೆಗಳು ತಮ್ಮ ಪಾರುಪತ್ಯವನ್ನು ಬಿಟ್ಟುಕೊಟ್ಟಿಲ್ಲ. ಅದರಲ್ಲೂ ಬಿರು ಬೇಸಿಗೆಯಲ್ಲಿ ಹತ್ತಿಯ ಬಟ್ಟೆಗಳಿಗೆ ಎಲ್ಲಿಲ್ಲದ ಮಹತ್ವ. ಹಸುಗೂಸುಗಳಿಂದ ಹಿಡಿದು ವಯೋವೃದ್ಧರ ತನಕ ಹತ್ತಿಯ ಬಟ್ಟೆಗಳಿಗೆ ಸದಾ ಬೇಡಿಕೆ ಇದ್ದದ್ದೇ.

ಬಿಸಿಲಿನ ತಾಪ ತಡೆಯುವಲ್ಲಿ ಹತ್ತಿಯ ಬಟ್ಟೆಗಳ ಪಾತ್ರ ದೊಡ್ಡದು. ಹತ್ತಿಯ ಬಟ್ಟೆ ಧರಿಸುವುದರಿಂದ ಒಳಹೊರಗೆ ಗಾಳಿಯ ಸಂಚಾರ ಸುಗಮವಾಗುತ್ತದೆ. ಹಾಗಾಗಿ, ಮಕ್ಕಳಿಗೆ ಹತ್ತಿಯ ಬಟ್ಟೆಗಳಿಗೇ ಆದ್ಯತೆ ನೀಡುವುದು ಒಳ್ಳೆಯದು. ಅದರಲ್ಲೂ ತಿಳಿ ಬಣ್ಣಗಳ ಆಯ್ಕೆ ನಿಮ್ಮದಾಗಿದ್ದಲ್ಲಿ ಅವು ಕಣ್ಣಿಗೆ ನೋಡಲಷ್ಟೇ ಅಲ್ಲ, ದೇಹಕ್ಕೂ ತಂಪನೀಯುತ್ತವೆ. ತೆಳುಬಣ್ಣದ ಹತ್ತಿಯ ಉಡುಪುಗಳು ಶಾಖವನ್ನು ಹೀರಿಕೊಳ್ಳುವುದರಿಂದ ಮಕ್ಕಳಿಗೆ ಕಿರಿಕಿರಿಯಾಗುವುದಿಲ್ಲ.

ಹತ್ತಿಯ ಬಟ್ಟೆಗಳಲ್ಲಿ ನಿತ್ಯ ಧರಿಸುವ ಉಡುಪುಗಳ ಜತೆಗೆ ಫ್ಯಾಷನೇಬಲ್ ಆಗಿರುವ ಉಡುಪುಗಳೂ ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಕಾಟನ್ ಫ್ರಾಕ್, ಸ್ಲೀವ್‌ಲೆಸ್ ಟಾಪ್, ಲಾಂಗ್ ಗೌನ್, ಕಾಟನ್, ಲಿನನ್ ಶರ್ಟ್, ಕಾಟನ್ ಕುರ್ತಾಗಳ ಆಯ್ಕೆಯೂ ಇದೆ. ಇದರ ಜತೆಗೆ ಶಾರ್ಟ್ಸ್, ಸ್ಕರ್ಟ್‌ಗಳನ್ನೂ ಹಾಕಬಹುದು. ಬೇಸಿಗೆಯಲ್ಲಿ ಲೆಗ್ಗಿಂಗ್ಸ್, ಜೀನ್ಸ್ ಪ್ಯಾಂಟುಗಳಿಗಿಂತ ಕಾಲಿಗೆ ಗಾಳಿಯಾಡುವಂಥ ಉಡುಪುಗಳೇ ಆರಾಮದಾಯಕ.

ಹಗುರವಾಗಿರಲಿ ಉಡುಪು

ಮಕ್ಕಳು ಚಂದ ಕಾಣಲಿ ಎಂದು ಭಾರವಾದ ಉಡುಪುಗಳನ್ನು ಹಾಕಬೇಡಿ. ಭಾರವಾದ ಉಡುಪುಗಳು ಮಕ್ಕಳ ಚಟುವಟಿಕೆಗಳಿಗೆ ಅಡ್ಡಿಯಾಗುವುದಷ್ಟೇ ಅಲ್ಲ, ಬೇಸಿಗೆಯ ತಾಪವನ್ನೂ ಹೆಚ್ಚಿಸಿ ಅವರಿಗೆ ಕಿರಿಕಿರಿ ಮಾಡಬಲ್ಲವು.

ಕೈಕಾಲಿಗೆ ಸಿಲುಕುವಂಥ ಉಡುಪುಗಳನ್ನು ಹಾಕದಿರಿ. ತುಂಬುತೋಳಿನ ಬಟ್ಟೆಗಳಿಗಿಂತ ಅರ್ಧ ತೋಳಿನ, ತೋಳಿಲ್ಲದ ಉಡುಪು, ಕಾಟನ್ ಬನಿಯನ್‌ಗಳನ್ನು ಹಾಕಬಹುದು.

ಸೂಕ್ತ ಅಳತೆ ಇರಲಿ

ಮಕ್ಕಳಿಗೆ ಹಾಕುವ ಉಡುಪುಗಳು ಅವರ ದೇಹದ ಅಳತೆಗೆ ತಕ್ಕಂತಿರುವುದು ಮುಖ್ಯ. ತೀರಾ ಸಡಿಲ ಇಲ್ಲವೇ ತೀರಾ ಮೈಗಂಟಿಕೊಂಡಂತಿರುವ ಬಿಗಿಯಾದ ಉಡುಪುಗಳನ್ನು ಆಯ್ಕೆ ಮಾಡಬೇಡಿ. ಗಾಳಿಯ ಸಂಚಾರಕ್ಕೆ ಅನುಕೂಲವಾಗುವಂತೆ, ಮಕ್ಕಳಿಗೆ ಆರಾಮವಾಗಿ ಕೈಕಾಲು ಆಡಿಸಲು ಅನುವಾಗುವಂಥ ಉಡುಪುಗಳನ್ನೇ ಹಾಕಿ. ಕಾಲರ್ ನೆಕ್ ಉಡುಪುಗಳನ್ನು ಹಾಕುವಾಗ ಅವು ತೀರಾ ಕುತ್ತಿಗೆಗೆ ಬಿಗಿಯುವಂತೆ ಇರದಿರಲಿ.

ಸರಳ ವಿನ್ಯಾಸವಿರಲಿ

ಮಕ್ಕಳಿಗೆ ಆದಷ್ಟು ಭಾರಿ ವಿನ್ಯಾಸದ ಕಣ್ಣಿಗೆ ರಾಚುವಂಥ ವಿನ್ಯಾಸಕ್ಕಿಂತ ಸರಳ ವಿನ್ಯಾಸದ ಬಟ್ಟೆಗಳನ್ನೇ ಆಯ್ಕೆ ಮಾಡಿಕೊಳ್ಳುವುದು ಉತ್ತಮ. ಹಬ್ಬ- ಜಾತ್ರೆಗಳ ಸಂದರ್ಭದಲ್ಲಿ ಮಣಿಗಳು, ಮುತ್ತು, ಗಾಜು ಇತ್ಯಾದಿಗಳ ಅಲಂಕಾರಿಕ ಉಡುಪುಗಳು ಮಕ್ಕಳ ಅಂದ ಹೆಚ್ಚಿಸುವುದಕ್ಕಿಂತ ಚುಚ್ಚುವ ಅನುಭವದ ಕಾರಣಕ್ಕಾಗಿಯೇ ಅವರಿಗೆ ಕಿರಿಕಿರಿ ಉಂಟು ಮಾಡುತ್ತವೆ.

ಅಲಂಕಾರಕ್ಕಿರಲಿ ಇರಲಿ ಮಿತಿ

ಹಬ್ಬ, ಶುಭ ಕಾರ್ಯ ಅಥವಾ ಇತರ ಸಮಾರಂಭಗಳಲ್ಲಿ ಹೆಣ್ಣುಮಕ್ಕಳಿಗೆ ಉದ್ದನೆಯ ಗೌನ್‌ಗಳ ಬದಲು ಫ್ರಾಕ್‌ನಂಥ ಸರಳವಾದ ಉಡುಪುಗಳನ್ನೇ ಹಾಕಿ. ಮಕ್ಕಳು ಚಂದ ಕಾಣಲಿ ಎಂದು ಅಮ್ಮಂದಿರು ಬಗೆಬಗೆಯ ಕಿವಿಯೋಲೆ, ಸರ, ಹೇರ್ ಕ್ಲಿಪ್, ಬಳೆ ಇತ್ಯಾದಿಗಳನ್ನು ಹಾಕುವುಂಟು. ಆದರೆ, ಬೇಸಿಗೆಯಲ್ಲಿ ಇಂಥ ಅಲಂಕಾರಗಳು ಮಕ್ಕಳಿಗೆ ಕಿರಿ ಅನ್ನಿಸಬಹುದು. ಬೆಲೆಬಾಳುವ ಆಭರಣವನ್ನು ಮಕ್ಕಳು ಕಿತ್ತೊಗೆಯುವ ಸಾಧ್ಯತೆಯೂ ಇರುತ್ತದೆ. ಹಾಗಾಗಿ, ಅಂಥ ಅಲಂಕಾರ ಮಿತವಾಗಿದ್ದರೆ ಒಳಿತು.

ಬಿಸಿಲಿನಲ್ಲಿ ಪ್ರಯಾಣಿಸುವ ಇಲ್ಲವೇ ನಡೆಯುವಂಥ ಸಂದರ್ಭಗಳಲ್ಲಿ ಮಕ್ಕಳಿಗೆ ಆದಷ್ಟು ಸೂರ್ಯನ ಕಿರಣಗಳಿಂದ ರಕ್ಷಿಸಲು ಸನ್ ಗ್ಲಾಸ್, ಟೋಪಿ ಹಾಕುವುದರ ಜತೆಗೆ ಮಕ್ಕಳಿಗೆ ಆಗಾಗ ನೀರು ಇಲ್ಲವೇ ಹಣ್ಣಿನ ರಸ ಕುಡಿಸುವುದನ್ನು ಮರೆಯದಿರಿ. ಬೇಸಿಗೆಯಲ್ಲಿ ಮಕ್ಕಳು ಧರಿಸುವ ಉಡುಪುಗಳು ಅವರ ಅಂದ ಹೆಚ್ಚಿಸುವುದಕ್ಕಿಂತ ಆರಾಮದಾಯಕವಾಗಿದ್ದರೆ ಕ್ಷೇಮ. ❖

'ಬಯೋಗ್ರೋ' ಹಿಂದಿನ ನಿಶ್ಚಲ

ರೂಪಾ ಕೆ.ಎಂ.



ವಾಯುಮಾಲಿನ್ಯವನ್ನು ನೋಡಿದಾಗೆಲ್ಲ ಆತಂಕದ ಜತೆಗೆ ಅದನ್ನು ಕಡಿಮೆ ಮಾಡುವ ದಾರಿ ಯಾವುದು ಎಂಬ ಪ್ರಶ್ನೆ ತೀವ್ರವಾಗಿ ಕಾಡುತ್ತದೆ. ಅದನ್ನೇ ಸ್ಫೂರ್ತಿಯಾಗಿ ತೆಗೆದುಕೊಂಡ ದುಬೈನಲ್ಲಿ ವಾಸಿಸುತ್ತಿರುವ ಕನ್ನಡತಿ ನಿಶ್ಚಲ ದೊಡ್ಡಮನಿ ಮತ್ತು ಅವರ ತಂಡ ಹೊಸದೊಂದು ದಾರಿಯನ್ನು ಕಂಡುಕೊಂಡಿದೆ.

ಸ್ವಚ್ಛಗಾಳಿಯನ್ನು ಪಸರಿಸುವ ಉದ್ದೇಶದಿಂದ 'ಬಯೋಗ್ರೋ' ಎನ್ನುವ ಉತ್ಪನ್ನವನ್ನು ಈ ತಂಡ ರೂಪಿಸಿದೆ. ವಾತಾವರಣದಲ್ಲಿ ಹೇರಳವಾಗಿ ಲಭ್ಯವಿರುವ ಕಾರ್ಬನ್ ಡೈ ಆಕ್ಸೈಡ್ ಮತ್ತು ಅಮೋನಿಯಾವನ್ನು ಸಂಯೋಜಿಸಿ ತಯಾರಿಸಿದ ರಸಗೊಬ್ಬರವೇ 'ಬಯೋಗ್ರೋ' . ಇದರ ಬಳಕೆಯಿಂದ ಬೆಳೆಯುವ ಸಸ್ಯಗಳು ಮಾಲಿನ್ಯವನ್ನು ತೊಡೆದುಹಾಕುವಲ್ಲಿ ಮಹತ್ತರ ಪಾತ್ರವನ್ನು ವಹಿಸುವುದರ ಜತೆಗೆ ಸುಸ್ಥಿರ ಕೃಷಿಗೂ ಸಹಕಾರಿಯಾಗಿದೆ ಎಂಬುದು ತಂಡದ ನಿಶ್ಚಿತ ಅಭಿಪ್ರಾಯ.

ಆಕ್ಸ್‌ಫರ್ಡ್ ಬ್ಯುಸಿನೆಸ್ ಸ್ಕೂಲ್ ಗುರುಶೀಲ್ಸ್ ಹೋಲ್ಡಿಂಗ್ಸ್ ಸಹಯೋಗದೊಂದಿಗೆ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಸುಮಾರು 47 ದೇಶಗಳ 600 ತಂಡಗಳು ಭಾಗವಹಿಸಿದ್ದವು. ಅಂತಿಮ ಸುತ್ತಿಗೆ ಐದು ತಂಡಗಳು ಮಾತ್ರ ಆಯ್ಕೆಯಾದವು. ಆ ಐದು ತಂಡಗಳು ಅಬುಧಾಬಿಯಲ್ಲಿ ನಡೆದ ವಿಚಾರಸಂಕಿರಣದಲ್ಲಿ ತಮ್ಮ ಯೋಜನೆಗಳನ್ನು ಪ್ರಸ್ತುತ ಪಡಿಸಿದವು. ಕೊನೆಗೆ ಭಾರತ, ಯುಇ ಹಾಗೂ ಕೊರಿಯಾ ಮೂರು ತಂಡಗಳು ಆಯ್ಕೆಯಾದವು.

ಕರ್ನಾಟಕದಲ್ಲಿಯೇ ಹುಟ್ಟಿದ್ದರೂ, ಬೆಳೆದಿದ್ದೆಲ್ಲ ದುಬೈನಲ್ಲಿಯೇ. ದೆಹಲಿಯ ವಾಯುಮಾಲಿನ್ಯವೇ ಈ ಯೋಜನೆಯ ರೂಪುಗೊಳ್ಳಲು ಸ್ಫೂರ್ತಿ. ನಮ್ಮ ತಂಡದಲ್ಲಿ ಐದು ಮಂದಿ ಇದ್ದು, ಉಳಿದವರು ಕೇರಳ ಹಾಗೂ ಕೋಲ್ಕತ್ತ ಮೂಲದವರು. ಇಬ್ಬರಿಗೆ ವಿಜ್ಞಾನದಲ್ಲಿ ಆಸಕ್ತಿ ಇದ್ದು, ರಾಸಾಯನಿಕಗಳ ಸಂಯೋಜನೆ ಬಗ್ಗೆ ಹಲವು ಮೂಲಗಳಿಂದ ಮಾಹಿತಿ ಪಡೆದು, ಸಿದ್ಧ ಮಾಡಲಾಯಿತು. ವಾಣಿಜ್ಯ ಬಳಕೆಗೂ ಈ ರಸಗೊಬ್ಬರ ಸಿಗುವಂತೆ ಮಾಡಲು ಉಳಿದವರು ಯೋಜನೆ ಹಾಕಿದರು. ಸದ್ಯಕ್ಕೆ ಇದು ಪ್ರಾಯೋಗಿಕ ಹಂತದಲ್ಲಿಯೇ ಇದೆ. 12ನೇ ತರಗತಿಯ ಬೋರ್ಡ್ ಎಕ್ಸಾಂ ಬರೆಯುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಈ ಉತ್ಪನ್ನವನ್ನು ಇನ್ನಷ್ಟು ರೈತಸ್ನೇಹಿಯಾಗಿ ಮಾಡುವ ಉದ್ದೇಶವಿದೆ ಎನ್ನುತ್ತಾರೆ ನಿಶ್ಚಲ ದೊಡ್ಡಮನಿ.

ಈ ರಾಸಾಯನಿಕಗಳ ಸಂಯೋಜನೆ ಬಹಳ ಸರಳವಾಗಿದೆ. ಆದರೆ, ಅದನ್ನು ನಾವು ರಸಗೊಬ್ಬರ ತಯಾರಿಕೆಯಲ್ಲಿ ಬಳಸಿದ್ದೇವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ವಿಸ್ತರಿಸುವ ಯೋಜನೆ ಇದೆ ಎನ್ನುತ್ತಾರೆ ಅವರು. ❖

ಮುಟ್ಟು ಮುಂದೂಡುವುದು ಅಪಾಯವೇ?

ಸ್ಪಂದನ



ಡಾ. ವೀಣಾ ಎಸ್. ಭಟ್

- **ಪ್ರಜ್ಞಾ 29 ವರ್ಷಗಳು, ಶಿಕ್ಷಕಿ, ಮದುವೆಯಾಗಿ ಒಂದು ವರ್ಷವಾಯಿತು. ಮದುವೆಯ ಸಮಯದಲ್ಲಿ ಮುಟ್ಟು ಮುಂದೆ ಹೋಗುವ ಮಾತ್ರೆಯನ್ನು ಡಾಕ್ಟರ್ ಸಲಹೆಯ ಮೇರೆಗೆ ತೆಗೆದುಕೊಂಡಿದ್ದೆ. ಈಗ ಮುಟ್ಟು ತಡವಾಗಿ ಬರುತ್ತಿದೆ. ಅತಿಯಾದ ರಕ್ತಸ್ರಾವವೂ ಆಗುತ್ತಿದೆ. ಒಂದು ವರ್ಷವಾದರೂ ಗರ್ಭ ನಿಲ್ಲುತ್ತಿಲ್ಲ. ಮಕ್ಕಳಾಗಲು ತೊಂದರೆಯೇ?**

ಪ್ರಜ್ಞಾ ಅವರೇ ಭಯ ಬೇಡ, ನೀವು ಒಂದೆರಡು ಬಾರಿ ಮುಟ್ಟು ಮುಂದೆ ಹೋಗುವ ಮಾತ್ರೆ ತೆಗೆದುಕೊಂಡರೆ ಗರ್ಭಧಾರಣೆಯಾಗಲು ತೊಂದರೆಯೇನೂ ಆಗಲಿಕ್ಕಿಲ್ಲ. ಆದರೆ ನಿಮ್ಮ ತೂಕವು ಹೆಚ್ಚಾಗುತ್ತಿದೆ ಎಂದು ತಿಳಿಸಿರುವುದರಿಂದ ನಿಮಗೆ ಹೈಪೋಥೈರಾಯಿಡಿಸಂ ಇರುವ ಸಾಧ್ಯತೆಯೂ ಇದೆ. ಈ ಬಗ್ಗೆ ನೀವು ತಜ್ಞರಿಂದ ಪರೀಕ್ಷಿಸಿಕೊಳ್ಳಿ. ಆದರೆ ನೀವು ಪದೇ ಪದೇ ಮುಟ್ಟನ್ನು ಹಿಂದೆ ಮುಂದೆ ಮಾಡಲು ಮಾತ್ರೆ ತೆಗೆದುಕೊಳ್ಳುವ ಅಗತ್ಯವಿಲ್ಲ. ಈ ಮಾತ್ರೆ ತೆಗೆದುಕೊಂಡ ಋತುಚಕ್ರದ ಅವಧಿಯಲ್ಲಿಯೇ ಏನಾದರೂ ನಿಮಗೆ ಗರ್ಭಧಾರಣೆಯಾದಲ್ಲಿ ಮಾತ್ರೆಯಿಂದ ತೊಂದರೆಯಾಗುತ್ತೇನೋ ಎಂದು ಗೊಂದಲ ಉಂಟಾಗಬಹುದು. ಎಷ್ಟೋ ಬಾರಿ ಗರ್ಭಪಾತ ಮಾಡಿ ಎನ್ನುವ ಮಹಿಳೆಯರು ಸಾಕಷ್ಟಿದ್ದಾರೆ.

ನೀವಷ್ಟೇ ಅಲ್ಲ ಮುಟ್ಟನ್ನು ಮುಂದೆ ಹಿಂದೆ ಮಾಡಿಕೊಳ್ಳಲು ಬಯಸುವ ಪ್ರತಿಯೊಬ್ಬ ಸಂತಾನೋತ್ಪತ್ತಿ ವಯಸ್ಸಿನ ಮಹಿಳೆಯೂ ಮುಟ್ಟು ಹೇಗೆ ಮುಂದೂಡಲಾಗುತ್ತದೆ ಎಂಬ ಬಗ್ಗೆ ಮಾಹಿತಿ ತಿಳಿದಿರಬೇಕು. ಮಾಸಿಕಋತುಚಕ್ರ ಸಂಪೂರ್ಣವಾಗಿ ಹಾರ್ಮೋನುಗಳ ನಿಯಂತ್ರಣದಲ್ಲಿರುವ ಪ್ರಕ್ರಿಯೆ. ನಾಲ್ಕು ದಿನಗಳ ಋತುಸ್ರಾವದ ನಂತರ ಅಂಡಾಶಯದಿಂದ ಅಂಡೋತ್ಪತ್ತಿಯಾಗುವ ಹಾಗೆ ಪ್ರಚೋದನೆಯಾಗಿ ಇಸ್ಟ್ರೋಜನ್ ಹಾರ್ಮೋನಿನ ಹೆಚ್ಚಳವಾಗುತ್ತದೆ. ಅಂಡಾಣು ಉತ್ಪತ್ತಿಯಾದ ನಂತರ ಪ್ರೊಜೆಸ್ಟಿರಾನ್ ಹಾರ್ಮೋನ್ ಹೆಚ್ಚಾಗುತ್ತದೆ. ಈ ಎರಡೂ ಹಾರ್ಮೋನುಗಳ ಹೆಚ್ಚಳವನ್ನು ಮೆದುಳು ಗ್ರಹಿಸುವುದರಿಂದ ಇವುಗಳ ಉತ್ಪಾದನಾ ಹಾರ್ಮೋನುಗಳು ಕಡಿಮೆಯಾಗಿ ಇದರಿಂದ ಗರ್ಭಕೋಶದಲ್ಲಿ ಭ್ರೂಣಾಗಮನಕ್ಕೆ ಸಿದ್ಧಗೊಳ್ಳಲು ಬೆಳೆಯುತ್ತಿರುವ ಒಳಪದರವು ಕಳಚಿ ಹೊರಬರುವುದೇ ಮಾಸಿಕ ಋತುಸ್ರಾವ. ಒಮ್ಮೆ ಈ ಋತುಚಕ್ರದಲ್ಲೇನಾದರೂ ಅಂಡೋತ್ಪತ್ತಿಯಾದ ನಂತರ ಅದು ವೀರ್ಯಾಣುಗಳ ಜೊತೆಗೆ ಮಿಲಿತವಾದರೆ ಗರ್ಭಧಾರಣೆಯಾಗಿ ಹೆರಿಗೆಯವರೆಗೆ ಮುಟ್ಟಾಗುವುದೇ ಇಲ್ಲ. ಇವಿಷ್ಟು ವೈಜ್ಞಾನಿಕ ಸತ್ಯವನ್ನು ತಿಳಿದ ಮೇಲೆ ಈ ಪ್ರೀ-ಪೋನ್ ಮಾತ್ರೆಗಳ ಬಗ್ಗೆಯೂ ತಿಳಿಯಬೇಕು.

ಈ ಮಾತ್ರೆಗಳಲ್ಲಿ ಕೃತಕವಾದ ಇಸ್ಟ್ರೋಜನ್ ಅಥವಾ ಪ್ರೊಜೆಸ್ಟಿರಾನ್ ಮಾತ್ರೆಗಳನ್ನೇ ಸೇವಿಸಿ ಹಾರ್ಮೋನು ಮಟ್ಟ ಹೆಚ್ಚಾಗಿಯೇ ಇದೆ ಎಂದು ಮೆದುಳು ಅರ್ಥೈಸಿ ಮುಟ್ಟಾಗದಂತೆ ತಡೆಯುತ್ತದೆ. ಆದ್ದರಿಂದ ಇವುಗಳನ್ನು ತೆಗೆದುಕೊಳ್ಳುತ್ತಿರುವಾಗ ಮುಟ್ಟಾಗುವುದಿಲ್ಲ. ನಿಲ್ಲಿಸಿದ ಮೇಲೆ ಹಾರ್ಮೋನು ಮಟ್ಟ ಕಡಿಮೆಯಾಗಿ, ಮೆದುಳಿನ ಸಂದೇಶ ನಿಂತುಹೋಗಿ ಋತುಚಕ್ರ ಪುನಃ ಆರಂಭವಾಗುತ್ತದೆ. ಮೆದುಳಿಗೆ ತಾತ್ಕಾಲಿಕವಾಗಿ ಕೃತಕ ಮಾತ್ರೆಗಳನ್ನು ಸೇವಿಸುವುದರ ಮೂಲಕ ಮೋಸದ ಸಂದೇಶ ಉಂಟುಮಾಡಿ ಮುಟ್ಟನ್ನು ಮುಂದು ಹಾಕುತ್ತಿದ್ದೇವೆಂದು ಪ್ರತಿಯೊಬ್ಬ ಹೆಣ್ಣಿಗೂ ತಿಳಿದಿರಬೇಕು. ಸಂತಾನ ನಿರೋಧಕ ಮಾತ್ರೆಗಳಲ್ಲಿಯೂ, ಹಾರ್ಮೋನು ಮಾತ್ರೆಗಳಲ್ಲಿಯೂ ಈ ತತ್ವವನ್ನು ಅಳವಡಿಸಲಾಗಿದೆ. ಆದ್ದರಿಂದ ಅತಿ ಅವಶ್ಯವಿದ್ದರೆ ಮಾತ್ರ ವೈದ್ಯರ ಸಲಹೆಯ ಮೇರೆಗೆ ಅನಿವಾರ್ಯವಾದಲ್ಲಿ ಮಾತ್ರ ಮುಟ್ಟು ಮುಂದೂಡುವ ಮಾತ್ರೆಗಳನ್ನು ತೆಗೆದುಕೊಳ್ಳಬೇಕು. ಸುಮ್ಮ ಸುಮ್ಮನೇ ಸಣ್ಣಪುಟ್ಟ ನೆವಕ್ಕೆಲ್ಲಾ ಹಿಂದೆ ಮುಂದೆ ಮಾಡಲು ಹೋಗದೇ ನಿಸರ್ಗ ಸಹಜವಾದ ವೈಜ್ಞಾನಿಕ ಕ್ರಿಯೆಯಾದ ಮುಟ್ಟನ್ನು ಇದ್ದ ಹಾಗೆಯೇ ಒಪ್ಪಿಕೊಂಡು ನಿರ್ವಹಿಸಲು ಕಲಿಯಬೇಕು. ಮುಟ್ಟು ಹಿಂದೆ ಮಾಡುವುದರಲ್ಲಿಯೂ ಇದೇ ತತ್ವ ಅಡಗಿದೆ. ಆದ್ದರಿಂದ ನೀವು ಚಿಂತಿಸದೇ ಭಯ ಬೀಳದೇ ತಜ್ಞರನ್ನು ಸಂಪರ್ಕಿಸಿ. ❖

ಪ್ರತಿ ದಿನ ಇಂಡಿಯಿಂದ ಬೆಂಗಳೂರಿಗೆ ತೆರಳಿ ಮಾರಾಟ • 20 ಮಹಿಳೆಯರೀಗ ಉದ್ಯಮಿಗಳು

ಶಕ್ತಿ ಯೋಜನೆ: ಬದುಕು ಕೊಟ್ಟ ಹೋಳಿಗೆ

• ಎ.ಸಿ.ಪಾಟೀಲ



ಬರ್ತ್ವ ಹೋಳಿಗೆ ಮಾಡುವುದು... ತಂಡವಾಗಿ ಹೋಳಿಗೆ ತಯಾರಿಸುವ ವೈಖರಿ

ಇಂಡಿ (ವಿಜಯಪುರ ಜಿಲ್ಲೆ): ರಾಜ್ಯ ಸರ್ಕಾರದ ಶಕ್ತಿ ಯೋಜನೆಯ ಉಚಿತ ಬಸ್ ಪ್ರಯಾಣ ಸೌಲಭ್ಯ ಬಳಸಿಕೊಂಡು ತಾಲ್ಲೂಕಿನ ಬಬಲಾದ ಗ್ರಾಮದ 20 ಮಹಿಳೆಯರು ಉದ್ಯಮಿಗಳಾಗಿದ್ದಾರೆ. 'ಒಡಲ ಧ್ವನಿ' ಎಂಬ ಮಹಿಳಾ ಸಂಘ ರಚಿಸಿಕೊಂಡಿರುವ ಅವರು ಹೋಳಿಗೆ ತಯಾರಿಸಿ, ಬೆಂಗಳೂರಿಗೆ ಬಸ್‌ನಲ್ಲಿ ತೆರಳಿ, ವ್ಯಾಪಾರ ಮಾಡುತ್ತಾರೆ.

ಬರಗಾಲದ ಸಂದರ್ಭದಲ್ಲಿ ಬೇರೆ ಊರುಗಳಿಗೆ ವಲಸೆ ಹೋಗದೇ, ಮಹಿಳೆಯರು ಸಾವಯವ ಶೇಂಗಾ, ಬೆಲ್ಲ, ಗೋಧಿಯ ಹೋಳಿಗೆ ತಯಾರಿಸಿದರು. ಬಸ್‌ನಲ್ಲಿ ಉಚಿತವಾಗಿ ಬೆಂಗಳೂರಿಗೆ ಪ್ರಯಾಣಿಸಿ, ಅಲ್ಲಿ ವ್ಯಾಪಾರ ಆರಂಭಿಸಿ ದರು. ಸಾವಯವ ಧಾನ್ಯಗಳಿಂದ ಹೋಳಿಗೆ ಎಂಬುದಕ್ಕೆ 'ರಾಗಿ ಕಣ' ಸಂಸ್ಥೆಯು ಪ್ರಮಾಣೀಕರಿಸಿತು.

'ಆರಂಭದಲ್ಲಿ 20 ಮಹಿಳೆಯರು ಸೇರಿ ಪ್ರತಿ ದಿನ 200 ಹೋಳಿಗೆ ತಯಾರಿಸಿದೆವು. ಇಬ್ಬರು ಮಹಿಳೆಯರು ಬಸ್‌ನಲ್ಲಿ ಬೆಂಗಳೂರಿಗೆ ತೆರಳಿ, ಹೋಳಿಗೆ ಮಾರಿದರು. ಬೆಂಗಳೂರಿನಲ್ಲಿ ದೊಡ್ಡ ಅಂಗಡಿ, ಖಾನಾವಳಿ, ಹೋಟೆಲ್‌ಗಳಿಗೆ ಭೇಟಿ ನೀಡಿದ್ದು, ವ್ಯಾಪಾರ ಮಾಡಲು ಅನುಕೂಲವಾಯಿತು' ಎಂದು ಸಂಘದ ಕಾರ್ಯದರ್ಶಿ ಭುವನೇಶ್ವರಿ ಕಾಂಬಳೆ ತಿಳಿಸಿದರು.

'ಸದ್ಯ ಸಾವಯವ ಹೋಳಿಗೆಗೆ ಬೆಂಗಳೂರಿನಲ್ಲಿ ಬೇಡಿಕೆ ಹೆಚ್ಚಾಗಿದ್ದು, ಪ್ರತಿ ದಿನ 200 ಬದಲು ಈಗ ಒಂದು ಸಾವಿರ ಹೋಳಿಗೆ ಬೆಂಗಳೂರಿಗೆ ಒಯ್ಯುತ್ತೇವೆ. ₹ 20ರ ದರದಲ್ಲಿ ಒಂದು ಹೋಳಿಗೆ ಮಾರುತ್ತೇವೆ. ತಿಂಗಳಿಗೆ ತಲಾ ₹20 ಸಾವಿರ ಆದಾಯ ಬರುತ್ತದೆ. ಶೇಂಗಾ, ಬೆಲ್ಲ ಮತ್ತು ಗೋಧಿ ಸ್ಥಳೀಯ ರೈತರಿಂದ ಸಿಗುತ್ತದೆ. ಹೀಗಾಗಿ ಅದರ ಖರ್ಚು ಕಡಿಮೆ. ಬೆಂಗಳೂರಿಗೆ ಹೋಗಿ ಬರಲು ನಾವೇ ಒಂದು ಪಾಳಿ ವ್ಯವಸ್ಥೆ ಮಾಡಿಕೊಂಡಿದ್ದೇವೆ' ಎಂದರು.

'ಗ್ರಾಮದಲ್ಲೇ ಇನ್ನೊಂದು ಮಹಿಳಾ ಸಂಘ ಸ್ಥಾಪಿಸಿ, ಅವರಿಗೆ ತರಬೇತಿ ನೀಡಿ ವ್ಯಾಪಾರ ಆರಂಭಿಸುವ ಉದ್ದೇಶವಿದೆ. ಉದ್ಯಮದ ಬಗ್ಗೆ ಜಾಗೃತಿ ಮೂಡಿಸಲು ಬಯಸಿದ್ದೇವೆ' ಎಂದರು.

ಶೇಂಗಾ ಹಿಂಡಿ, ಸಜ್ಜೆ ರೊಟ್ಟಿ, ಜೋಳದ ಕಡಕ್ ರೊಟ್ಟಿ, ಉಪ್ಪಿನಕಾಯಿ, ನಿಂಬೆ ಪುಡಿ ಮುಂತಾದವು ಕಳುಹಿಸುತ್ತೇವೆ. ಸಂಘಸಂಸ್ಥೆಗಳಿಗೆ ಭೇಟಿ ನೀಡಿ ವ್ಯಾಪಾರ ಮತ್ತು ಗುಣಮಟ್ಟದ ಮಾಹಿತಿ ಪಡೆಯುತ್ತೇವೆ.
ಭುವನೇಶ್ವರಿ ಕಾಂಬಳೆ, ಕಾರ್ಯದರ್ಶಿ, 'ಒಡಲ ಧ್ವನಿ' ಸಂಘ





ಇಂಡಿ ತಾಲ್ಲೂಕಿನ ಬಬಲಾದದಿಂದ ಬೆಂಗಳೂರಿಗೆ ಸಾಗಿಸಲು ನಿತ್ಯವೂ ಶೇಂಗಾ ಹೋಳಿಗೆಯನ್ನು ಸಿದ್ಧಪಡಿಸಲಾಗುತ್ತದೆ

ನೆರೆ ರಾಜ್ಯಗಳ ತೆರಿಗೆ ವ್ಯವಸ್ಥೆ ಮೇಲೆ ವ್ಯತಿರಿಕ್ತ ಪರಿಣಾಮ

ರಾಷ್ಟ್ರಪತಿ ಅಂಗಳಕ್ಕೆ ಖನಿಜ ತೆರಿಗೆ ಮಸೂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ ಅಧಿವೇಶನದಲ್ಲಿ ಅಂಗೀಕಾರವಾಗಿದ್ದ ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ಮಸೂದೆ–2024ನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಷ್ಟ್ರಪತಿ ಒಪ್ಪಿಗೆಗೆ ಕಾಯ್ದಿರಿಸಿದ್ದರು.

'ರಾಜ್ಯ ಸರ್ಕಾರ ಸಿದ್ಧಪಡಿಸಿ, ಎರಡೂ ಸದನಗಳಲ್ಲಿ ಅಂಗೀಕಾರವಾಗಿದ್ದ ಈ ಮಸೂದೆಯು ಸಂವಿಧಾನದ ಕೆಲ ನಿಯಮಗಳನ್ನು ಉಲ್ಲಂಘಿಸುತ್ತದೆ. ಮಸೂದೆ ಅಂಗೀಕಾರವಾದರೆ ನೆರೆಯ ರಾಜ್ಯಗಳ ತೆರಿಗೆ ವ್ಯವಸ್ಥೆಯ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ' ಎಂದು ಉಲ್ಲೇಖಿಸಿದ್ದಾರೆ.

'ಅರಣ್ಯಗಳು, ಗಣಿಗಳು ಮತ್ತು ಖನಿಜ ವಿಷಯಗಳು ಕೇಂದ್ರ ಕಾನೂನುಗಳಾದ ಅರಣ್ಯ ಸಂರಕ್ಷಣಾ ಕಾಯ್ದೆ, ಪರಿಸರ ಸಂರಕ್ಷಣಾ ಕಾಯ್ದೆ, ಗಣಿ ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆಯಡಿ ನಿಯಂತ್ರಿಸಲ್ಪಡುತ್ತವೆ. ಮಸೂದೆಗೆ ಅಂಗೀಕಾರ ನೀಡಿದರೆ ಸಂಸತ್ ವ್ಯಾಪ್ತಿಯ ಕ್ಷೇತ್ರಗಳಲ್ಲಿ ಹಸ್ತಕ್ಷೇಪ ನಡೆಸಿದಂತೆ ಆಗುತ್ತದೆ' ಎಂದಿದ್ದಾರೆ.

'ಸಮುದಾಯದ ಭೌತಿಕ ಸಂಪನ್ಮೂಲಗಳ ಮಾಲೀಕತ್ವ ಮತ್ತು ನಿಯಂತ್ರಣವನ್ನು ಜನರ ಒಳಿತಿಗಾಗಿ ವಿತರಿಸಲಾಗಿದೆ. ಆರ್ಥಿಕ ವ್ಯವಸ್ಥೆಯ ಕಾರ್ಯಾಚರಣೆಯು ಸಂಪತ್ತಿನ ಕೇಂದ್ರೀಕರಣಕ್ಕೆ ಕಾರಣವಾಗದು' ಎಂಬ ರಾಜ್ಯನೀತಿ ನಿರ್ದೇಶಕ ತತ್ವಗಳ ಆಶಯಕ್ಕೂ ವಿರುದ್ಧವಾಗಿದೆ.



ದ್ರೌಪದಿ ಮುರ್ಮು, ರಾಷ್ಟ್ರಪತಿ

ಆದರೆ, ರಾಜ್ಯ ಸರ್ಕಾರ ಕೇವಲ ಹೆಚ್ಚಿನ ತೆರಿಗೆ ಸಂಗ್ರಹಕ್ಕಾಗಿಯೇ ಇಂತಹ ಮಸೂದೆ ರೂಪಿಸಿದೆ' ಎಂದು ದೂರಿದ್ದಾರೆ.

ಈ ಮಸೂದೆಯು ಸಂಸತ್ ನಡಾವಳಿ ಹಾಗೂ ಸುಪ್ರೀಂಕೋರ್ಟ್ ತೀರ್ಪಿಗೆ ಪೂರಕವಾಗಿಲ್ಲ ಎಂದಿರುವ ಅವರು, ಸಮಾಜ ಪರಿವರ್ತನಾ ಸಮುದಾಯ ಮತ್ತು ಕರ್ನಾಟಕ ರಾಜ್ಯ ಸರ್ಕಾರದ ನಡುವಿನ ಪ್ರಕರಣದಲ್ಲಿ ಕೋರ್ಟ್ ನೀಡಿರುವ ತೀರ್ಪನ್ನು ಉಲ್ಲೇಖಿಸಿದ್ದಾರೆ.

'2005ರ ಏಪ್ರಿಲ್ 1ಕ್ಕೂ ಹಿಂದಿನಿಂದ ಜಾರಿಗೆ ಬರುವಂತೆ ಖನಿಜ ಹೊಂದಿರುವ ಭೂಮಿ ಮತ್ತು ಗಣಿಗಾರಿಕೆ ಹಕ್ಕುಗಳ ಮೇಲೆ ರಾಜ್ಯಗಳು ತೆರಿಗೆ ಸಂಗ್ರಹಿಸಬಹುದು' ಎಂಬ ಸುಪ್ರೀಂಕೋರ್ಟ್ ತೀರ್ಪಿಗೆ ಅನುಗುಣವಾಗಿ ಈ ಮಸೂದೆ ಸಿದ್ಧಪಡಿಸಲಾಗಿದೆ' ಎಂದು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಹೇಳಿತ್ತು.

ಮಸೂದೆಯ ಅಂಶಗಳ ಪ್ರಕಾರ ಎಲ್ಲಾ ವರ್ಗದ ಗಣಿಗಳಲ್ಲಿನ ಪ್ರತಿ ಟನ್ ಖನಿಜಕ್ಕೆ ₹20ರಿಂದ ₹100 ತೆರಿಗೆ ಸಂಗ್ರಹಿಸಲು ಅವಕಾಶ ಮಾಡಿಕೊಡುತ್ತದೆ. ಆ ಮೂಲಕ ಸರ್ಕಾರ ₹4,713 ಕೋಟಿ ಆದಾಯ ಸಂಗ್ರಹಿಸುವ ಗುರಿ ಹೊಂದಿತ್ತು.

ಗ್ರಾಮೀಣಾಭಿವೃದ್ಧಿ ವಿವಿ ಮಸೂದೆ ಒಪ್ಪಿಗೆ

ಬೆಂಗಳೂರು: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ(ತಿದ್ದುಪಡಿ) ಮಸೂದೆ 2025 ಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಈ ವಿಶ್ವವಿದ್ಯಾಲಯವನ್ನು ಇನ್ನು ಮುಂದೆ 'ಮಹಾತ್ಮಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ' ಎಂಬುದಾಗಿ ಹೆಸರಿಸಲು ಒಪ್ಪಿಗೆ ಸಿಕ್ಕಿದೆ.

ಪೊನ್ನಂಪೇಟೆ: ಬಾಲಕಿ ಸೇರಿ ಒಂದೇ ಕುಟುಂಬದ ನಾಲ್ವರ ಕೊಲೆ

ಗೋಣಿಕೊಪ್ಪಲು (ಕೊಡಗು ಜಿಲ್ಲೆ): ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ಬೇಗೂರಿನ ಸಮೀಪ ಒಂಟಿ ಮನೆಯಲ್ಲಿ ವಾಸವಿದ್ದ ಬಾಲಕಿ ಸೇರಿದಂತೆ ನಾಲ್ವರನ್ನು ಭೀಕರವಾಗಿ ಕೊಲೆ ಮಾಡಲಾಗಿದೆ.

ಕರಿಯ (75), ಅವರ ಪತ್ನಿ ಗೌರಿ (75), ಮೊಮ್ಮಗಳು ನಾಗಿ (30) ಹಾಗೂ ಮರಿ ಮೊಮ್ಮಗಳು ಕಾವೇರಿ (5) ಕೊಲೆಯಾದವರು.


'ನಾಗಿ ತನ್ನ ಪುತ್ರಿ ಕಾವೇರಿಯೊಂದಿಗೆ ಜೋಪಡಿಯಲ್ಲಿ ವಾಸವಿದ್ದು, ಸಮೀಪದ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ವರ್ಷದ ಹಿಂದೆ ಕೇರಳ ಮೂಲದ ಗಿರೀಶ (40) ಎಂಬಾತನ ಜತೆ 3ನೇ ವಿವಾಹವಾಗಿದ್ದರು. ಇತ್ತೀಚೆಗೆ ಆತ ಪತ್ನಿಯೊಂದಿಗೆ ಜಗಳವಾಡುತ್ತಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಶುಕ್ರವಾರ ಮಧ್ಯಾಹ್ನವಾದರೂ ಕೆಲಸಕ್ಕೆ ಬಾರದಿರುವುದನ್ನು ಗಮನಿಸಿದ ಕಾರ್ಮಿಕರು ಹುಡುಕಿಕೊಂಡು ಬಂದಾಗ ಕೊಲೆ ವಿಚಾರ ಗೊತ್ತಾಗಿದೆ. ಗಿರೀಶನೇ ಕೊಲೆ ಮಾಡಿರಬಹುದು ಎಂಬ ಶಂಕೆ ಇದೆ. ಮಲಗಿರುವಾಗಲೇ ಕತ್ತಿಯಿಂದ ಕಡಿದು ಕೊಲೆ ಮಾಡಿರಬಹುದು ಎಂದು ಮೇಲ್ನೋಟಕ್ಕೆ ಕಂಡುಬಂದಿದೆ' ಎಂದಿದ್ದಾರೆ.

ಸ್ಥಳಕ್ಕೆ ಡಿಐಜಿಪಿ ಬೋರಲಿಂಗಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಸ್ಥಳಕ್ಕೆ ಭೇಟಿ ನೀಡಿದ್ದರು. ಆರೋಪಿ ಗಿರೀಶನನ್ನು ಪೊಲೀಸರು ಕೇರಳದಲ್ಲಿ ವಶಕ್ಕೆ ಪಡೆದಿದ್ದಾರೆ.

ರಾಯಚೂರು: ಸಾವಿನಲ್ಲೂ ಒಂದಾದ ದಂಪತಿ

ಪ್ರಜಾವಾಣಿ ವಾರ್ತೆ



ಬಿ.ರಾಜಶೇಖರ



ಬಿ.ಅಮರಮ್ಮ

ಮಾನ್ವಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ಕಪಗಲ್ ಗ್ರಾಮದಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದ ಪತ್ನಿ ಮೃತಪಟ್ಟ ಕೆಲವೇ ಗಂಟೆಗಳಲ್ಲಿ ಪತಿಯೂ ಮೃತಪಟ್ಟ ಘಟನೆ ಶುಕ್ರವಾರ ನಡೆದಿದೆ.

ಬಿ.ಅಮರಮ್ಮ (57) ಹಾಗೂ ಬಿ.ರಾಜಶೇಖರ (60) ಮೃತ ದಂಪತಿ.

ಕೆಲ ತಿಂಗಳುಗಳಿಂದ ಪಾರ್ಶ್ವವಾಯುನಿಂದ ಬಳಲುತ್ತಿದ್ದ ಬಿ.ಅಮರಮ್ಮ ಗುರುವಾರ ರಾತ್ರಿ ನಿಧನರಾದರು. ಪತ್ನಿಯ ಅಗಲಿಕೆಯಿಂದ ಆತ್ಮಸ್ಥೈರ್ಯ ಕಳೆದುಕೊಂಡಿದ್ದ ಪತಿ ರಾಜಶೇಖರ ಶುಕ್ರವಾರ ಬೆಳಗ್ಗೆ ಕೊನೆಯುಸಿರೆಳೆದಿದ್ದಾರೆ. ಮೃತ ದಂಪತಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ
ಐ.ಎಫ್.ಟಿ.ಸಂಖ್ಯೆ:28/2024–25
ದಿನಾಂಕ:24.03.2025

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–4 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಮೊತ್ತ ರೂ.400.17 ಲಕ್ಷಗಳು ಟೆಂಡರ್ ಸಲ್ಲಿಸುವ ಕಡೆಯ ದಿ: 01.04.2025 ಸಮಯ 17.00 ಗಂಟೆಯವರೆಗೆ, ಹೆಚ್ಚಿನ ವಿವರಗಳಿಗಾಗಿ ಕೆಪಿಪಿ–ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/1102/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ GOVERNMENT OF KARNATAKA
ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.
Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979 &Endst. No.MCI-37(1)(Recog.-18)(UG)/2017-Med./109629,Dt: 06/05/2019
DIRECTOR: 8147796529 PRINCIPAL :8147796527
CAO:8147796526 PA : 8147796539. e-mail-ids:directorbmcrcballari@gmail.com, website :https://bmcrcballari.karnataka.gov.in principal: bmcrcballari@gmail.com
ಸಂ:ಬಿಎಂಸಿಆರ್‌ಸಿ/ಸರಬರಾಜು/ಟೆಂಡರ್/ಗ್ರಂಥಲಯಪಿಠೋಪಕರಣ/18/2024–25/1336
ದಿನಾಂಕ:27.03.2025
ಇ–ಟೆಂಡರ್ ಅಧಿಸೂಚನೆ

ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ, ಬಳ್ಳಾರಿಯಲ್ಲಿ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ನಿರ್ಮಿಸಿರುವ ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಅವಶ್ಯವಿರುವ ಪಿಠೋಪಕರಣಗಳ ಪೂರೈಕೆಗಾಗಿ ಅರ್ಹ ಟೆಂಡರ್ ದಾರರಿಂದ ಪೂರೈಸಲು ಕೆ.ಟಿ.ಪಿ.ಪಿ ಅಧಿನಿಯಮ–1999–2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಪೋರ್ಟಲ್ https://kppp.karnataka.gov.in ಮೂಲಕ ಇ–ಟೆಂಡರ್‌ನ್ನು ರೂ.4.20 ಕೋಟಿಗೆ ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್‌ದಾರರು ಮೇಲಿನ ಪೋರ್ಟಲ್ ನಲ್ಲಿ ಟೆಂಡರನ್ನು ದಿನಾಂಕ: 28.04.2025 ಸಂಜೆ 5.00 PM ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಮತ್ತು ಸಂಸ್ಥೆಯ ವೆಬ್ ಸೈಟ್ www.vims.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ಡೀನ್ ಹಾಗು ನಿರ್ದೇಶಕರು, ಬಿಎಂಸಿ ಆರ್ ಸಿ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/1085/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು
ಡಾ. ಬಾಬು ಜಗಜೀವನ್‌ರಾಮ್ ಭವನ ಕಟ್ಟಡ, ಆದಿಪಂಪ ರಸ್ತೆ, ನಾರಾಯಣಸ್ವಾಮಿ ಬ್ಲಾಕ್, ವಿನಾಯಕನಗರ, ಮೈಸೂರು
E-mail- dswomysore9@gmail.com ದೂ.: 0821–2344661
ಸಂಖ್ಯೆ:ನಿಪಕೇ.ಮೈ/ಆಡಳಿತ/ಸಿಆರ್–1/2024–25 ದಿನಾಂಕ : 28–03–2025
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

2025–26ನೇ ಸಾಲಿಗೆ ಮೈಸೂರು ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಹೊರಸಂಪನ್ಮೂಲದಿಂದ ಮಾನವ ಸಿಬ್ಬಂದಿ ಸೇವೆಯನ್ನು ಪಡೆಯಲು ನೊಂದಾಯಿತ ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ htpp//.kppp.karnataka.gov.in ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.

1) ಇ–ಟೆಂಡರ್ ನಮೂನೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ : 28–03–2025 ರಿಂದ 11–04–2025 ರ ಬೆಳಿಗ್ಗೆ 11.00 ಗಂಟೆಯವರೆಗೆ
2) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್‌ಗೆ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 11–04–2025ರ ಸಂಜೆ 04.00 ಗಂಟೆಯವರೆಗೆ
3) Prebid ಸಭೆ ದಿನಾಂಕ : 05–04–2025ರ ಬೆಳಿಗ್ಗೆ 11.00 ಗಂಟೆಯ ನಂತರ. (ಇದಕ್ಕೆ ಯಾವುದೇ ಸೂಚನ ಪತ್ರ ಕಳುಹಿಸುವುದಿಲ್ಲ)
4) ಇ–ಟೆಂಡರ್ ತೆರೆಯುವ ದಿನಾಂಕ: 15–04–2025ರ ಬೆಳಿಗ್ಗೆ 11.00 ಗಂಟೆಯ ನಂತರ.

ಸಹಿ/– ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಹಾಗೂ ಕಾರ್ಯದರ್ಶಿ, ನಿರಾಶ್ರಿತರ ಪರಿಹಾರ ಕೇಂದ್ರ, ಮೈಸೂರು

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ,
ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
(Ph. No: 0821-2979772 E-mail:khsdrp.divmys@gmail.com)
ಸಂಖ್ಯೆ: ಆಕುಕ/ಇಂ.ವಿ./ಕಾ.ಅ/ಮೈ/ಸಇ–4/ಟೆಂಡರ್–32/2024–25
ದಿ: 26.03.2025
ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವ್ಯಾಪ್ತಿಗೆ ಒಳಪಡುವ Providing Patients waiting Lounge, Vehicle Parking Shed and other allied works to TLH K.R.Nagar, Mysuru (ರೂ.100.00 ಲಕ್ಷಗಳು) ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಮೂರನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 15.04.2025 ರಂದು 16.00 ಗಂಟೆಯವರೆಗೆ. 2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 16.04.2025 ರಂದು 16.30 ಗಂಟೆಗೆ. ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp. karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸೂಚನೆ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (www.eproc.karnataka.gov.in.) ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.
DIPR-DD-MYS/1506/KSMCA-1133/2024-25

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್, ಬೆಂಗಳೂರು ವಿಭಾಗ,
2ನೇ ಮಹಡಿ, ಲೋ.ಇ.ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01.
ದೂರವಾಣಿ: 080–22133370, ವೆಬ್‌ಸೈಟ್: www.kpwd.karnataka.gov.in
ಟೆಂಡರ್ ಪ್ರಕಟಣೆ ಸಂಖ್ಯೆ: 52/2024–25
ದಿನಾಂಕ: 27.03.2025

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ನಂ. 2 ಉತ್ತರ & ನೆಲಮಂಗಲ ಉಪವಿಭಾಗಗಳಿಗೆ** ಸಂಬಂಧಿಸಿದಂತೆ 03 ಸಂಖ್ಯೆಯ (ರೂ. 3.30 ರಿಂದ ರೂ. 100.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಕೆ.ಪಿ.ಪಿ.ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: **04.04.2025 ಸಂಜೆ 4.00 ಗಂಟೆಯವರೆಗೆ.**
2. ಟೆಂಡರ್‌ಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ತೆರೆಯುವ ದಿನಾಂಕ **05.04.2025 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/ - ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಉನಿ–ಸಿ.ಪಿ/5969/ಕೆಎಸ್‌ಎಂಸಿಎ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗೋವಿಂದರಾಜನಗರ ವಿಭಾಗ,
2ನೇ ಮಹಡಿ, ಶಕ್ತಿ ಸೌಧ, 13ನೇ ಅಡ್ಡರಸ್ತೆ, 4ನೇ ಬಿ ಮುಖ್ಯರಸ್ತೆ,
ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು – 560040.
ಸಂಖ್ಯೆ: ಕಾಅ(ಜಿಆರ್‌ಎನ್)/ಟೆಂಡರ್/ಜಿಎಲ್–14/2024–25 ದಿನಾಂಕ: 28–03–2025
ಅಲ್ಪಾವಧಿ ಟೆಂಡರ್ ಅಧಿಸೂಚನೆ
(ದ್ವಿ–ಲಕೋಟೆ ಪದ್ಧತಿ) (ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗೆ ಬಿಬಿಎಂಪಿಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
	ದ್ವಿ–ಲಕೋಟೆ ಕಾಮಗಾರಿಗಳು
1	ಗೋವಿಂದರಾಜನಗರ ವಿಧಾನಸಭಾ ಮತಕ್ಷೇತ್ರದ ರಸ್ತೆಗಳು, ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು ಹಾಗೂ ರಸ್ತೆಗಳಿಗೆ ಇತರೆ ಅಭಿವೃದ್ಧಿ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 200.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 2,40,000.00**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **05–04–2025 ರಂದು 16.00 ಗಂಟೆವರೆಗೆ.** 3) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **07–04–2025 ರಂದು 16.30 ಗಂಟೆಯ ನಂತರ.** 4) ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **ತಾಂತ್ರಿಕ ಪ್ರಸ್ತಾವನೆಗಳ ಅನುಮೋದನೆಯ ನಂತರ ಕೆಪಿಪಿ ಪೋರ್ಟಲ್ ಮೂಲಕ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಗೋವಿಂದರಾಜನಗರ ವಿಭಾಗ, ಬಿಬಿಎಂಪಿ.

ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ, ತಿಪಟೂರು
ಸಂಖ್ಯೆ:ಸಾಆತಿ/ನಾನ್ ಕ್ಲಿನಿಕಲ್/ಟೆಂಡರ್/01/2024–25 ದಿನಾಂಕ: 27.03.2025
ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

1. ಸಾರ್ವಜನಿಕ ಆಸ್ಪತ್ರೆ ತಿಪಟೂರು ಇಲ್ಲಿಗೆ 2025–26ನೇ ಸಾಲಿಗೆ ನಾನ್ ಕ್ಲಿನಿಕಲ್ ಗ್ರೂಪ್ ಡಿ ಮತ್ತು ಅರೆವೈದ್ಯಕೀಯ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಭರ್ತಿ ಇ–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ.
2. ಟೆಂಡರ್ ಫಾರಂನ್ನು ವಿತರಿಸುವ ದಿನಾಂಕ: **27/03/2025 ರಿಂದ 09/04/2025** ರವರೆಗೆ.
3. ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: **09/04/2025** ರಂದು ಸಂಜೆ 4 ಘಂಟೆಗೆ.
4. ದಿನಾಂಕ: **11/04/2025** ರಂದು ಬೆಳಿಗ್ಗೆ 11 ಘಂಟೆಗೆ ದಾಖಲಾತಿ ಲಕೋಟೆಯನ್ನು ತೆರೆಯಲಾಗುವುದು.
5. ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ ಪಡೆಯಬಹುದು. ಪೊ.ನಂ.08134–252765 ವೆಬ್‌ಸೈಟ್ ಸಂಖ್ಯೆ :https://www.kppp.karnataka.gov.in
6. ಟೆಂಡರ್ ಅಪ್‌ಲೋಡ್ ಮಾಡುವಾಗ ದಿನಾಂಗಳು ಬದಲಿಯಾದಲ್ಲಿ ವೆಬ್‌ಸೈಟ್ https://www.kppp.karnataka.gov.in ನಲ್ಲಿ ನಮೂದಿಸಿರುವ ದಿನಾಂಕಗಳಿಗೆ ಬದ್ದರಾಗಿರತಕ್ಕದ್ದು.

ಸಹಿ/– ಮುಖ್ಯ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ತಿಪಟೂರು
DIPR/TUM/742/KSMCA/2024-25

(ಕರ್ನಾಟಕ ಸರ್ಕಾರ)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:20/2024–25
ದಿನಾಂಕ:28.03.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನದ ಬೇಲೂರು ತಾಲ್ಲೂಕು ವ್ಯಾಪ್ತಿಗೆ 2024–25ನೇ ಸಾಲಿನ ನರೇಗಾ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ಬೂದು ನೀರು ನಿರ್ವಹಣಾ ಘಟಕ ನಿರ್ಮಾಣ ಕಾಮಗಾರಿಗಳಿಗೆ ಸಾಮಗ್ರಿಗಳನ್ನು ಹಾಗೂ ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಸಾಮಾಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಪೂರೈಸಲು ನೊಂದಣೀಯಾಗಿರುವ ಮಾರಾಟದಾರರಿಂದ & ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿಸಿರುವ ಅರ್ಹ ಗುತ್ತಿಗೆದಾರರಿಂದ ಸ್ಪರ್ಧಾತ್ಮಕ ಟೆಂಡರ್‌ಅನ್ನು ಕೆ.ಪಿ.ಪಿ.ಪಿ ಅಂತರ್ಜಾಲದಲ್ಲಿ ದಿನಾಂಕ:05.04.2025ರ ಸಂಜೆ 4.00ಘಂಟೆಯವರೆಗೆ ಟೆಂಡರ್‌ನ್ನು ನಿಗಧಿತ ನಮೂನೆಗಳನ್ನು https://kppp.Karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:05.04.2025ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿನಾಂಕ 04.04.2025 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ:07.04.2025ರಂದು ಸಂಜೆ 4.00 ಗಂಟೆಗೆ ಗುತ್ತಿಗೆದಾರರ ತಾಂತ್ರಿಕ ಬಿಡ್ಡ್‌ನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್ಡ್ ಅನುಮೋದನೆಯಾದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು ಇ–ಪ್ರಕ್ಯೂರ್‌ಮೆಂಟ್‌ನ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಲಭ್ಯವಿರುತ್ತವೆ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನಿಯರ್,
ಪ.ರಾಜ್.ಇಂ. ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/1106/ಕೆಎಸ್‌ಎಂಸಿಎ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ರಸ್ತೆ ಮೂಲಸೌಕರ್ಯ- ಬೊಮ್ಮನಹಳ್ಳಿ ವಿಭಾಗ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ಕಾರು ನಿಲ್ದಾಣದ ಹಿಂದೆ, ಆರ್‌ಟಿಓ ಕಚೇರಿ ಎದುರು, ಬಿಟಿಎಂ ಲೇಔಟ್, 4ನೇ ಹಂತ, 2ನೇ ಬ್ಲಾಕ್, ದೇವರಚಿಕ್ಕನಹಳ್ಳಿ, ಬೆಂಗಳೂರು-560068.
ಸಂಖ್ಯೆ:ಬೃಬೆಂಮಪಾ/ಕಾಪಾಅ/ರಮೂ-ಬೊವಿ/ಟೆಂಡರ್-04/2024-25 ದಿನಾಂಕ: 28-03-2025
ಅಲ್ಪಾವಧಿ ಟೆಂಡರ್‌ಗೆ ಆಹ್ವಾನ (ಐಎಫ್‌ಟಿ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ ಲಕೋಟೆ ಪದ್ಧತಿ)

ವೆಬ್‌ಸೈಟ್ https://kppp.karnataka.gov.in ಮೂಲಕ ಮಾತ್ರ.

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ- ಬೊಮ್ಮನಹಳ್ಳಿ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಬಿ.ಬಿ.ಎಂ.ಪಿ / ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ / ಬಿಡಬ್ಲ್ಯೂಎಸ್‌ಎಸ್‌ಬಿ / ರೈಲ್ವೆ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಇತರೆ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1.	**ಕನಕಪುರ ಮುಖ್ಯ ರಸ್ತೆಯಿಂದ ಬನ್ನೇರುಘಟ್ಟ ಮುಖ್ಯ ರಸ್ತೆ (24 ಮೀಟರ್ ರಸ್ತೆ) ವರೆಗಿನ ಅಸ್ತಿತ್ವದಲ್ಲಿರುವ ರಸ್ತೆ ಅಗಲದ ಮರು ಡಾಂಬರೀಕರಣ, ಆರ್‌ಎಂಪಿ–2015 ರಸ್ತೆಯ ಅಗಲೀಕರಣ, ಡಿಪಿಆರ್ ತಯಾರಿಕೆ ಸೇರಿದಂತೆ ವೆಚ್ಚದ ಭೂಸ್ವಾಧೀನ, ಮತ್ತು ಸ್ಟ್ರಕ್ಚರ್‌ಗಳ ಉರುಳಿಸುವಿಕೆ ಕಾಮಗಾರಿ.** ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ): **ರೂ.588.25.** ಇಎಂಡಿ: (ಲಕ್ಷ ರೂ.ಗಳಲ್ಲಿ) **ರೂ.9.00 ಲಕ್ಷ (ರೂ.1 ಲಕ್ಷ ಕೆಪಿಪಿ ಪೋರ್ಟಲ್ ಮೂಲಕ ಉಳಿದ ರೂ.8.00 ಲಕ್ಷ ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ).**

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ದಾಖಲೆಗಳು ದೊರೆಯುವ ದಿನಾಂಕ: **29.03.2025.** 2. ಪೂರ್ವ ಬಿಡ್ ಸಭೆಯು **ದಿನಾಂಕ: 05.04.2025 ರಂದು ಸಂಜೆ 4:00 ಗಂಟೆಯವರೆಗೆ** ಬಿಬಿಎಂಪಿಯ ಮುಖ್ಯ ಅಭಿಯಂತರರ ಕಚೇರಿ, ಕೊಠಡಿ ಸಂಖ್ಯೆ 108, ಅನೆಕ್ಸ್–2 ಕಟ್ಟಡ, ಎನ್‌ಆರ್ ಚೌಕ, ಬೆಂಗಳೂರು ಇಲ್ಲಿ ನಡೆಯಲಿದೆ. 3. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **11.04.2025 ಸಂಜೆ 4:00 ಗಂಟೆಗೆ.** 4. ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 15.04.2025 ರ ಸಂಜೆ 4:30 ಗಂಟೆಗೆ.** 5. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅರ್ಹವಾದ ಗುತ್ತಿಗೆದಾರ ಯಶಸ್ವಿ ಬಿಡ್ದಾರರಿಗೆ ತಿಳಿಸಲಾಗುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ರಸ್ತೆ ಮೂಲಸೌಕರ್ಯ- ಬೊಮ್ಮನಹಳ್ಳಿ ವಿಭಾಗ, ಬೃಬೆಂಮಪಾ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, 1ನೇ ಮಹಡಿ,
ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. ದೂ: 08022122856
E-Portal : https://kppp.karnataka.gov.in/#/portal/portal-home
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 17/2024–25
ದಿನಾಂಕ: 26–03–2025

ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅದಿನಿಯಮ–2000ರನ್ವಯ ಕೆಡಬ್ಲ್ಯೂ–1 & ಕೆಡಬ್ಲ್ಯೂ–2 ನಿಯಮಗಳಂತೆ ಬೆಂಗಳೂರಿನ **SDS TRC & RGICD ,Regional Institute of English, South India, Jnanabharathi Campus, Kowshalya Bhavan, Bannerughhatta Road,** ಮತ್ತು **Kaveri guest house** ಕಟ್ಟಡಗಳ ಕಾಮಗಾರಿಗಳಿಗಾಗಿ (ಮೀಸಲಾತಿ ಹಂಚಿಕೆ ಕ್ರ ಸಂ: 1 ಮತ್ತು 2 ರ ವರೆಗೆ ಪರಿಶಿಷ್ಟ ಜಾತಿ, ಕ್ರ ಸಂ: 3ನೇ ಕಾಮಗಾರಿಯನ್ನು ಪರಿಶಿಷ್ಟ ಪಂಗಡ, ಕ್ರಮ ಸಂ:4ನೇ ಕಾಮಗಾರಿಯನ್ನು **CAT-I,** 05 ರಿಂದ 06 ನೇ ಕಾಮಗಾರಿಯನ್ನು **CAT-II(A)** ಹಾಗೂ 07 ರಿಂದ 17 ರ ವರೆಗೆ (ಇತರೆ) ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **(https://kppp.karnataka.gov.in/)** ಪಿಡಬ್ಲ್ಯೂಡಿಯಲ್ಲಿ ನೊಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರೋಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1. ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ಯಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ :26.03.2025 ರಿಂದ 02.04.2025 ಸಂಜೆ 4.30 ಗಂಟೆಯವರೆಗೆ
2. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 02.04.2025 ಸಂಜೆ 4.30 ಗಂಟೆಯವರೆಗೆ.
3. ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ: 04.04.2025 ರಂದು ಸಂಜೆ 4.30 ಕ್ಕೆ ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕರ್ನಾಟಕದ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **(https://kppp.karnataka.gov.in/)** ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.
DIPR/CP/5960/Zen/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಘ.ಬ.ದಂ.ಕಾ.ನಿ. ವಿಭಾಗ–4, ಚಿಕ್ಕೋಡಿ
ಫೋನ ನಂ:08338–272485 Email: ee_knnlgrbc4ckd@rediffmail.com
ಅಲ್ಪಾವಧಿ ಟೆಂಡರ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)
ಟೆಂಡರ ಪ್ರಕಟಣೆ ಸಂಖ್ಯೆ : KNNL/GRBCC -4/Tender/2024-25/ 31
Date:- 25-03-2025

ವ್ಯವಸ್ಥಾಪಕ ನಿರ್ದೇಶಕರು,ಕನೀನಿನಿ ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಾಲ್ (https://kppp.karnataka.gov.in) 4701 ಅಡಿಯಲ್ಲಿನ 6 ಕಾಮಗಾರಿಗಳಿಗೆ ಮೇಲ್ಕಾಣಿಸಿದ ಪ್ರಕಟಣೆಯಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಕರೆಯಲಾಗಿರುತ್ತದೆ (Two cover system).ವಿವರ:

ಟೆಂಡರ ಪ್ರಕಟಣೆ ಸಂ: 31 dtd 25-03-2025, ಕೆ.ಪಿ.ಪಿ. ಪೋರ್ಟಾಲ್ ಇಂಡೆಂಟ ಸಂಖ್ಯೆ:Two Cover System:General:Indent No. 2704/CALL-2, 2705/CALL-2, 2708/CALL-2, 2745/CALL-2 ST reserved:Indent No. 2753/CALL-2, ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ.:42.31/– to 152.33 lakhs, ಇಎಂಡಿ ಮೊತ್ತ ರೂ.:42,400/– to 2,28,500/–, ಟೆಂಡರ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯ:29–03–2025, Up to 17.00 hrs.,Pre-bid meeting in the office of the Executive Engineer, KNNL GRBCC Divn No.4 CHIKODI:.01-04-2025, at 11.30 hrs., ಭರ್ತಿ ಮಾಡಿದ ಟೆಂಡರಗಳನ್ನು ಇ–ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ & ಸಮಯ:03-04-2025 Up to 16.00 hrs., ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:04-04-2025 Up to 16.30 hrs., ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 05-04-2025 Up to 16.30 hrs.

ಕಾಮಗಾರಿಗಳ ಹೆಸರು/ ಗುತ್ತಿಗೆದಾರರ ಅರ್ಹತೆ/ ಟೆಂಡರಿನ ನಿಯಮ/ಟೆಂಡರ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರು,
ಕನೀನಿನಿ, ಘಬದಂಕಾನಿ ವಿಭಾಗ–4, ಚಿಕ್ಕೋಡಿ
DIPR/BGM/RO-NO-2038/KSMCA/2024-25

ಚಕ್ರವ್ಯೂಹ ಹೆಣೆದ 'ಮಧುಬಲೆ': ಯಾರು ಗುರಿ?

● ವೈ.ಗ. ಜಗದೀಶ್

ರಾಜಕೀಯ ವಿಶ್ಲೇಷಣೆ





ರಾಜ್ಯದಲ್ಲಿ ನಾಯಕತ್ವಕ್ಕಾಗಿ ನಡೆಯುತ್ತಿರುವ ಚದುರಂಗದಾಟವು ತಿಂಗಳಿಗೊಮ್ಮೆ ಹೊಸ ತಿರುವು ಪಡೆದುಕೊಳ್ಳುತ್ತಲೇ ಇದೆ. ಕೆಲವು ದಿನ ಭಾರಿ ಸದ್ದು ಮಾಡಿದ 'ಮಧುಬಲೆ'ಯ ಪ್ರಸಂಗವೂ ಅಧಿಕಾರಕ್ಕಾಗಿ ನಾಯಕರೊಳಗೆ ನೇಯ್ದ ಚಕ್ರವ್ಯೂಹದ ಭಾಗವೇ?

ಮಧುಬಲೆ ಯತ್ನ, ಅದನ್ನು ಬಹಿರಂಗಗೊಳಿಸಿದ ಬಗೆ, ಬಳಿಕ ನಡೆಯುತ್ತಿರುವ ವಿದ್ಯಮಾನಗಳನ್ನು ಜೋಡಿಸಿ ನೋಡಿದರೆ, ಈ ಪ್ರಕರಣದ ಹಿಂದೆ ನಿಪುಣ ತಂತ್ರಗಾರಿಕೆ ಇರುವುದನ್ನು ಅಲ್ಲಗಳೆಯಲಾಗದು. ತಮ್ಮನ್ನು ಮಧುಬಲೆಗೆ ಸಿಲುಕಿಸುವ ಪ್ರಯತ್ನ ಮೂರು ಬಾರಿ ನಡೆದಿತ್ತು ಎಂದು ವಿಧಾನಸಭೆಯಲ್ಲಿ ಹೇಳಿದ್ದ ಸಹಕಾರ ಸಚಿವ ಕೆ.ಎನ್. ರಾಜಣ್ಣ, ಗೃಹ ಸಚಿವರಿಗೆ ಸಾಕ್ಷ್ಯವನ್ನು ಕೊಡುವುದಾಗಿ ತಿಳಿಸಿದ್ದರು. ಕೇಂದ್ರ, ರಾಜ್ಯಗಳ 48 ನಾಯಕರು 'ಮಧುಬಲೆ'ಗೆ ಸಿಲುಕಿರುವ ಪೆನ್ ಡ್ರೈವ್‌ಗಳಿವೆ ಎಂದಿದ್ದರು. ವಿಧಾನ ಪರಿಷತ್ ಸದಸ್ಯರೂ ಆಗಿರುವ ಅವರ ಮಗ ಆರ್.ರಾಜೇಂದ್ರ, 'ನನ್ನನ್ನು ಮತ್ತು ನನ್ನ ತಂದೆಯನ್ನು ಮಧುಬಲೆಗೆ ಕೆಡವುವ ಪ್ರಯತ್ನ ನಡೆದಿತ್ತು' ಎಂದು ಅಪ್ಪನ ಮಾತನ್ನು ದೃಢೀಕರಿಸಿದ್ದರು.

ರಾಜಣ್ಣ ಹಾಗೂ ರಾಜೇಂದ್ರ ಅವರ ಮಾತಿನ ವರಸೆ ಬದಲಾಗುತ್ತಲೇ ಇದೆ. 'ಸಾಕ್ಷ್ಯವಿಲ್ಲ' ಎಂದು ರಾಜಣ್ಣ ಹೇಳಿದರೆ, 'ಅಂತಹ ಯತ್ನ ನಡೆದಿಲ್ಲ; ನಡೆದಿದ್ದು ಕೊಲೆ ಯತ್ನ' ಎಂದು ರಾಜೇಂದ್ರ ಹೇಳಿದ್ದಾರೆ. ಚುನಾಯಿತ ಜನಪ್ರತಿನಿಧಿಗಳಾಗಿರುವ ಅಪ್ಪ–ಮಗ ಈವರೆಗೂ ಪೊಲೀಸ್ ಠಾಣೆಗೆ ಹೋಗಿ ದೂರು ನೀಡುವ ಧೈರ್ಯ ಮಾಡಿಲ್ಲ. ದೂರು ಸಲ್ಲಿಸದಂತೆ ಇವರನ್ನು ತಡೆದಿರುವುದು 'ಭಯ' ಅಥವಾ 'ಭ್ರಷ್ಟ' ಯಾವುದು?

'ಇದರ ವಿಶ್ಲೇಷಣೆ ಮುನ್ನ, ರಾಜಕೀಯ ಘಟನೆಗಳ ಬಗ್ಗೆಯೂ ಕಣ್ಣುಹಾಯಿಸುವುದು ಸೂಕ್ತವಾದೀತು. ನಾಯಕತ್ವ ಬದಲಾವಣೆ ವಿಚಾರ ಕೆಲವು ತಿಂಗಳಿಂದ ಸದ್ದು ಮಾಡುತ್ತಿದೆ. ಎರಡೂವರೆ ವರ್ಷಗಳ ಬಳಿಕ ಅಧಿಕಾರ ಹಸ್ತಾಂತರ ನಡೆಯಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬೆಂಬಲಿಗರು ಹೇಳುತ್ತಿದ್ದಾರೆ. ಐದು ವರ್ಷ ತಾವೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಪ್ರತಿಪಾದಿಸುತ್ತಿದ್ದಾರೆ. ಈ ಹಗ್ಗಜಗ್ಗಾಟದ ಮಧ್ಯೆಯೇ, ಸಿದ್ದರಾಮಯ್ಯ ಅವರು ಕುರ್ಚಿಯಿಂದ ಇಳಿಯುವ ಸನ್ನಿವೇಶ ಬಂದರೆ, ಮುಖ್ಯಮಂತ್ರಿ ಹುದ್ದೆಯನ್ನು ದಲಿತ ಸಮುದಾಯದವರಿಗೆ ಬಿಟ್ಟುಕೊಡಬೇಕು ಎಂಬ ಬೇಡಿಕೆಯನ್ನು ಹಲವು ಸಚಿವರು ಮಂಡಿಸುತ್ತಿದ್ದಾರೆ. ಸಚಿವರ ಈ ಗುಂಪು, ಡಿ.ಕೆ. ಶಿವಕುಮಾರ್ ಅವರು ನಿರ್ವಹಿಸುತ್ತಿರುವ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೇಲೂ ಕಣ್ಣಿಟ್ಟಿದೆ. ಭೋಜನ ಕೂಟದ ಹೆಸರಿನಲ್ಲಿ ಒಟ್ಟಿಗೆ ಕೂಡಿ ಚರ್ಚಿಸುವುದು, ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ತಮ್ಮ ಹಕ್ಕೊತ್ತಾಯ ಮಂಡಿಸುವುದು, ದಲಿತರ ಸಮಾವೇಶದ ಪ್ರಸ್ತಾವಗಳು ಇದ್ದವು. ಸಿದ್ದರಾಮಯ್ಯ ಅವರ ಬಣದಲ್ಲಿ ಗುರುತಿಸಿಕೊಂಡಿರುವ ಈ ಬಣದ ಪ್ರಭಾವಿಯೊಬ್ಬರು ಮುಖ್ಯಮಂತ್ರಿ ಹುದ್ದೆಯ ಮೇಲೆ ತಮ್ಮ ಹಕ್ಕನ್ನು ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಈ ಬಣದ ವಿರುದ್ಧವಾಗಿ ಡಿ.ಕೆ. ಶಿವಕುಮಾರ್ ಅವರು ತಮ್ಮದೇ ಆದ ಕಾರ್ಯತಂತ್ರವನ್ನು ಹೊಸೆಯುತ್ತಲೇ ಬಂದಿದ್ದಾರೆ. ತೆರೆಮರೆಯಲ್ಲಿ ನಡೆಯುತ್ತಿರುವ ಚಟುವಟಿಕೆ ಬೆನ್ನಲ್ಲೇ, ಚಿನ್ನ ಕಳ್ಳ ಸಾಗಣೆ ಪ್ರಕರಣ ಸದ್ದು ಮಾಡಿತು.

'ಮಧುಬಲೆ'ಯ ಯತ್ನ ಸ್ಫೋಟವಾಗುವ ಕೆಲ ದಿನಗಳ ಮೊದಲಷ್ಟೇ, ಚಿನ್ನ ಕಳ್ಳ ಸಾಗಣೆಯ ಪ್ರಕರಣ ಪತ್ತೆಯಾಯಿತು. ವಿದೇಶದಿಂದ ಚಿನ್ನ ಸಾಗಣೆ ಪ್ರಕರಣದಲ್ಲಿ ನಟಿ ಹಾಗೂ ಐಪಿಎಸ್ ಅಧಿಕಾರಿ ರಾಮಚಂದ್ರರಾವ್ ಮಲಮಗಳು ರನ್ಯಾ ರಾವ್ ಅವರನ್ನು ರೆವಿನ್ಯೂ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಬಂಧಿಸಿತ್ತು. ಈ ಪ್ರಕರಣದ ಹಿಂದೆ ದೊಡ್ಡ ಜಾಲ ಇರುವ ಬಗ್ಗೆ ಶಂಕೆ ವ್ಯಕ್ತಪಡಿಸಿದ್ದ ತನಿಖಾ ಸಂಸ್ಥೆಗಳು, ಪ್ರಭಾವಿ ಸಚಿವರೊಬ್ಬರ ನಂಟು ಇದೆ ಎಂದಿದ್ದವು. ಸರ್ಕಾರದಲ್ಲಿ ಇದು ಕಂಪನವನ್ನೇ ಎಬ್ಬಿಸಿದೆ ಎಂಬಷ್ಟರಮಟ್ಟಿಗೆ ಇದರ ಪ್ರಭಾವ ಇತ್ತು ಎನ್ನಲಾಗಿತ್ತು.

ಅದೇ ವೇಳೆ ಅಧಿವೇಶನವೂ ನಡೆಯುತ್ತಿತ್ತು. ಚಿನ್ನ ಕಳ್ಳ ಸಾಗಣೆ ಪ್ರಕರಣವನ್ನು ವಿರೋಧ ಪಕ್ಷದ ನಾಯಕರು ಸದನದಲ್ಲಿ ಪ್ರಸ್ತಾಪಿಸಿದ್ದರು. ಕೇಂದ್ರದ ತನಿಖಾ ಸಂಸ್ಥೆಗಳು ಪ್ರಕರಣದ ತನಿಖೆ ಕೈಗೊಂಡಿರುವುದರಿಂದಾಗಿ ತಮಗೆ ಮಾಹಿತಿ ಇಲ್ಲ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿಕೆ ನೀಡಿದ್ದರು.

'ಇದೇ ವೇಳೆ, ಸಚಿವರೊಬ್ಬರನ್ನು ಮಧುಬಲೆಗೆ ಕೆಡವಲು ಯತ್ನಿಸಿದ ವಿಷಯ ಮಾಧ್ಯಮಗಳಲ್ಲಿ ಹರಿದಾಡಿತು. ಸಚಿವ ರಾಜಣ್ಣ ಅವರ ಆಪ್ತರೂ ಆಗಿರುವ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಸುದ್ದಿಗಾರರ ಜತೆ ಮಾತನಾಡುತ್ತಾ ಇದನ್ನು ದೃಢಪಡಿಸಿದರು.

ಸದನದಲ್ಲಿ ಇದನ್ನು ಪ್ರಸ್ತಾಪಿಸಿದ ಬಿಜೆಪಿಯ ವಿ.ಸುನಿಲ್ ಕುಮಾರ್ ಸರ್ಕಾರದಿಂದ ಸ್ಪಷ್ಟನೆ ಬಯಸಿದರು. ಆಡಳಿತ–ವಿರೋಧ ಪಕ್ಷದ ಸದಸ್ಯರು ಈ ಬಗ್ಗೆ ಚರ್ಚೆ ನಡೆಸುತ್ತಿರುವಾಗಲೇ, ಆಡಳಿತ ಪಕ್ಷದ ಕಡೆಯಿಂದ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಚೀಟಿಯೊಂದು ಬಂದಿತು. ಅವರು ಸಚಿವ ರಾಜಣ್ಣ ಹೆಸರು ಹೇಳಿಯೇ ಬಿಟ್ಟರು. ರಾಜಣ್ಣ ಕೂಡ ಅದನ್ನು ಖಚಿತಪಡಿಸಿದರು. ಬಳಿಕ ಸದನಕ್ಕೆ ಬಂದ, ಮುಖ್ಯಮಂತ್ರಿ ಸಿದ್ದರಾಮಯ್ಯ 'ಪರಿಶಿಷ್ಟ ಪಂಗಡದ ನಾಯಕರಾದ ರಾಜಣ್ಣ ಈ ವಿಚಾರವನ್ನು ಮೊದಲೇ ತಮಗೆ ತಿಳಿಸಿದ್ದರು' ಎಂದರು. ಮಧುಬಲೆ ಯತ್ನದ ಕುರಿತು ಪ್ರತಿಕ್ರಿಯಿಸಿದ ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಹನಿಟ್ರ್ಯಾಪ್ ಮಾಡುವವರು ಸುಮ್ಮನೆ ನಿಮ್ಮ ಹತ್ತಿರಕ್ಕೆ ಬರುತ್ತಾರೆಯೇ? ನೀವು ಹಲೋ ಎಂದರೆ ಅವರೂ ಹಲೋ ಎನ್ನುತ್ತಾರೆ' ಎಂದು ಹೇಳಿದ್ದಕ್ಕೆ, ಸಿದ್ದರಾಮಯ್ಯ ಅವರ ಬಣದ ಶಾಸಕರು ತಿರುಗೇಟು ಕೊಟ್ಟಿದ್ದೂ ನಡೆಯಿತು.


ಆದರೆ, ಇಲ್ಲಿಯವರೆಗೂ ದೂರು ಕೊಡಲಿಲ್ಲ. ಸಚಿವರೊಬ್ಬರ ಮೇಲೆ ನಡೆದ ಪ್ರಕರಣ ಸದನದಲ್ಲೇ ಪ್ರಸ್ತಾಪವಾದರೂ ಮುಖ್ಯಮಂತ್ರಿ, ಸಭಾಧ್ಯಕ್ಷರಾಗಲಿ ತನಿಖೆಗೆ ಆದೇಶ ಹೊರಡಿಸಲಿಲ್ಲ. ಮೌಖಿಕ ಸೂಚನೆ ಮೇರೆಗಷ್ಟೇ ತನಿಖೆ ಆರಂಭವಾಗಿದೆ.

'ಇದನ್ನು ನೋಡಿದರೆ, ಮಧುಬಲೆಯ ಯತ್ನವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು, ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಿ 'ಇಂತಹ ಹೀನಕೃತ್ಯಗಳು ನಡೆಯಗೊಡದಂತೆ ಮಾಡುವ ಇಚ್ಛಾಶಕ್ತಿ ಯಾರಿಗೂ ಇದ್ದಂತಿಲ್ಲ. ಈ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದರೆ, ಮಧುಬಲೆಯ ಯತ್ನದ ವಿಷಯ ಎಲ್ಲ ನಾಯಕರಿಗೂ ತಿಳಿದಿತ್ತು, ನಿರ್ದಿಷ್ಟ ಸನ್ನಿವೇಶದಲ್ಲಿ ಅದು ಹೊರಗೆ ಬಂತು. ಅದಕ್ಕೊಂದು ಉದ್ದೇಶವಿತ್ತು ಎಂಬುದು ಸ್ಪಷ್ಟ. ಈ ಪ್ರಕರಣದಲ್ಲಿ ಪ್ರಭಾವಿ ನಾಯಕರೊಬ್ಬರ ಜತೆಗೆ ಗುರುತಿಸಿಕೊಂಡ ಯುವ ನಾಯಕರೊಬ್ಬರ 'ಕೈ'ವಾಡ ಇದೆ ಎಂದು ಹೇಳಲಾಗುತ್ತಿದ್ದು, ಹೆಚ್ಚಿಂದರೆ ಅವರನ್ನು ಪಕ್ಕಕ್ಕೆ ಸರಿಸುವ ಪ್ರಭಾವಿಯ ಮುಂಚಾಲಿಸುವ ಚಕ್ರವ್ಯೂಹ ನಿರ್ಮಿಸುವ ಉದ್ದೇಶ ಇದ್ದಂತೆ ಕಾಣಿಸುತ್ತದೆ.

ಸುದ್ದಿ 2 ನಿಮಿಷ

'ಉಚಿತ ಎಂಬುದೇ ಅಪಾಯಕಾರಿ'

ದಾಂಡೇಲಿ (ಉತ್ತರ ಕನ್ನಡ ಜಿಲ್ಲೆ): 'ಜನರಿಗೆ ಯಾವುದನ್ನೂ ಉಚಿತವಾಗಿ ನೀಡಬಾರದು. ಉಚಿತ ಎಂಬ ಪದವೇ ಅಪಾಯಕಾರಿ. ಯಾವುದೇ ಸೇವೆಯಾದರೂ ಅದಕ್ಕೆ ಶುಲ್ಕ ನಿಗದಿಪಡಿಸಬೇಕು' ಎಂದು ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಹೇಳಿದರು.



ತಾಲ್ಲೂಕಿನ ಅಂಬಿಕಾನಗರದಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ಗ್ಯಾರಂಟಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಅವಕಾಶ ಒದಗಿಸಲಾಗಿದೆ. ಪುರುಷರೂ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸುವಂತೆ ಬೇಡಿಕೆ ಇತ್ತು. ಎಲ್ಲವನ್ನೂ ಉಚಿತ ನೀಡಿದರೆ, ಸಂಸ್ಥೆ ನಿರ್ವಹಣೆ ಸಾಧ್ಯವಾಗದು' ಎಂದರು.

'ಸಾರಿಗೆ ಸಂಸ್ಥೆ ಪ್ರತಿ ವರ್ಷ ಹೊಸ ಬಸ್ ಖರೀದಿ, ಸಿಬ್ಬಂದಿ ನೇಮಿಸಿಕೊಳ್ಳುವುದು ಅನಿವಾರ್ಯ. ಪ್ರಯಾಣ ದರ ಹೆಚ್ಚಿಸಿದರೆ ವಿರೋಧ ವ್ಯಕ್ತವಾಗುತ್ತದೆ. ಉಚಿತವಾಗಿ ಅವಕಾಶ ನೀಡಿದರೆ ಸಂಸ್ಥೆ ನಿರ್ವಹಣೆ ಕಷ್ಟವಾಗುತ್ತದೆ. ಇದು ನನ್ನ ವೈಯಕ್ತಿಕ ಅಭಿಪ್ರಾಯ' ಎಂದರು.

ದರ ಏರಿಕೆ ವಿರುದ್ಧ ಯುಗಾದಿ ಬಳಿಕ ಹೋರಾಟ: ಅಶೋಕ

ಬೆಂಗಳೂರು: 'ಗ್ಯಾರಂಟಿ ಯೋಜನೆಗಳನ್ನು ಕೊಟ್ಟು, ಬಳಿಕ ಬೆಲೆ ಏರಿಕೆ ಮಾಡಿ ಜನರ ಕೈಗಳಿಂದ ಬಾಚಿಕೊಳ್ಳುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಯುಗಾದಿ ಹಬ್ಬದ ಬಳಿಕ ಹೋರಾಟ ರೂಪಿಸಲಾಗುವುದು' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.


ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸಿದ ಬಳಿಕ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿದ್ದಾರೆ. ವಿದ್ಯುತ್, ನೀರು, ಹಾಲಿನ ದರ ಏರಿಸಿ ಜನಸಾಮಾನ್ಯರಿಗೆ ಶಾಕ್ ನೀಡಿದ್ದಾರೆ' ಎಂದರು.

'ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಹಾಲಿನ ದರ ಮೂರು ಬಾರಿ ಏರಿಸಿ ಒಟ್ಟು ₹ 9 ಹೆಚ್ಚಿಸಿ ಜನರನ್ನು ಲೂಟಿ ಮಾಡಲಾಗಿದೆ. ಬಜೆಟ್‌ನಲ್ಲಿ ಯಾವುದೇ ತೆರಿಗೆಗಳನ್ನು ಹಾಕದೆ, ಗುಪ್ತ ಕಾರ್ಯಸೂಚಿ ಮಾಡಿ ಬಳಿಕ ತೆರಿಗೆ, ದರ ಏರಿಸಲಾಗಿದೆ. ಸರ್ಕಾರ ದಿವಾಳಿ ಆಗಿಲ್ಲವೆಂದರೆ ಯಾಕಿಷ್ಟು ದರ ಏರಿಸಲಾಗಿದೆ' ಎಂದು ಪ್ರಶ್ನಿಸಿದರು.

ಪಿಂಚಣಿ ಕೊಡುವ ಯೋಗ್ಯತೆ ಇಲ್ಲ: 'ವಿದ್ಯುತ್ ದರ ನಾವು ಏರಿಸಿಲ್ಲ, ಕೋರ್ಟ್ ಆದೇಶ ಎಂದು ಸರ್ಕಾರ ಹೇಳುತ್ತಿದೆ. ಆದಾಗ್ಯೂ ಪಿಂಚಣಿ ಮತ್ತು ಗ್ರಾಚ್ಯುಟಿಗೆ ಸರ್ಕಾರ ಕೊಡದೆ, ಜನರಿಂದ ಕೊಡಿಸುತ್ತಿದ್ದಾರೆ. ಪಿಂಚಣಿ ಕೊಡುವ ಯೋಗ್ಯತೆ ಈ ಸರ್ಕಾರಕ್ಕಿಲ್ಲ' ಎಂದು ಟೀಕಿಸಿದರು.

ಎ.ಕೆ, ಎ.ಡಿ ಗೊಂದಲ ನಿವಾರಣೆಗೆ ಮನವಿ

ಪ್ರಜಾವಾಣಿ ವಾರ್ತೆ



ಮಂದ ಕೃಷ್ಣ ಮಾದಿಗ

ಬೆಂಗಳೂರು: 'ಕರ್ನಾಟಕದ ಬೇರೆ–ಬೇರೆ ಜಿಲ್ಲೆಗಳಲ್ಲಿ ಆದಿ ಕರ್ನಾಟಕ (ಎ.ಕೆ), ಆದಿ ದ್ರಾವಿಡ (ಎ.ಡಿ) ಮತ್ತು ಆದಿ ಆಂಧ್ರ (ಎ.ಎ) ಸಮುದಾಯಗಳನ್ನು ಬೇರೆ–ಬೇರೆ ಜಾತಿ ಸಮುದಾಯಗಳ ಅಡಿಯಲ್ಲಿ ಗುರುತಿಸುತ್ತಿದ್ದು, ಆ ಸಮಸ್ಯೆಯನ್ನು ಬಗೆಹರಿಸಬೇಕು' ಎಂದು ಮಾದಿಗ ಮೀಸಲಾತಿ ಹೋರಾಟ ಸಮಿತಿ ಒತ್ತಾಯಿಸಿದೆ.

ಎಂಆರ್‌ಎಸ್‌ಪಿ ರಾಷ್ಟ್ರೀಯ ಅಧ್ಯಕ್ಷ ಮಂದ ಕೃಷ್ಣ ಮಾದಿಗ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶುಕ್ರವಾರ ಭೇಟಿ ಮಾಡಿ ಈ ಸಂಬಂಧ ಮನವಿ ಸಲ್ಲಿಸಿದರು.

'12 ಜಿಲ್ಲೆಗಳಲ್ಲಿ ಈ ಮೂರೂ ಸಮುದಾಯಗಳನ್ನು ಬೇರೆ–ಬೇರೆ ಜಾತಿಗಳ ಅಡಿಯಲ್ಲಿ ಗುರುತಿಸುವ ತಪ್ಪಾಗಿದೆ. ಇದನ್ನು ಸರಿಪಡಿಸಬೇಕು. ಒಂದೇ ನಿರ್ದಿಷ್ಟ ಜಾತಿಯ ಉಪಜಾತಿಗಳು ಎಂದು ಇವುಗಳನ್ನು ಪರಿಗಣಿಸಬೇಕು' ಎಂದು ಮಂದ ಕೃಷ್ಣ ಮಾದಿಗ ಕೋರಿದರು.

'ಎ.ಜೆ.ಸದಾಶಿವ ಆಯೋಗದ ವರದಿಯಲ್ಲಿ ನಿರ್ದಿಷ್ಟವಾದ ಅಂಕಿಅಂಶಗಳು ಇದ್ದವು. ಸರ್ಕಾರವು ಅದನ್ನೇ ಬಳಸಬಹುದಿತ್ತು. ಆದರೆ ಸಮೀಕ್ಷೆ ನಡೆಸಿ, ದತ್ತಾಂಶ ಸಂಗ್ರಹಿಸುವಂತೆ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಅವರ ಆಯೋಗದ ಶಿಫಾರಸನ್ನು ಸರ್ಕಾರ ಒಪ್ಪಿದೆ. ಆದರೆ ಇದನ್ನು ಗಡುವಿನೊಳಗೇ ಮುಗಿಸಬೇಕು' ಎಂದು ಒತ್ತಾಯಿಸಿದರು.

'ಜಾತಿ ವರ್ಗೀಕರಣದ ಸಮಸ್ಯೆ ಮತ್ತು ದತ್ತಾಂಶ ಸಂಗ್ರಹದ ನಂತರವೇ ಒಳಮೀಸಲಾತಿಗೆ ಕ್ರಮ ತೆಗೆದುಕೊಳ್ಳಬೇಕು' ಎಂದು ಈ ವೇಳೆ ಕೋರಿದರು.



ಪ್ರಶಸ್ತಿ ಪ್ರದಾನ..

ಕನ್ನಡ ಸಾಹಿತ್ಯ ಪರಿಷತ್ತಿನ ವಿವಿಧ ದತ್ತಿ ಪ್ರಶಸ್ತಿಗಳಿಗೆ ಭಾಜನರಾದ ರವೀಂದ್ರ ಭಟ್ಟ, ಪ್ರವೀಣ್ ಕುಮಾರ್ ಶೆಟ್ಟಿ, ಸಾಕಮ್ಮ ಪಡಸಲಹಟ್ಟಿ, ಬಾನಂದೂರು ಬೋರಮ್ಮ, ಎಂ.ಜಿ. ಬಾಲಕೃಷ್ಣ, ಸಾ.ತಿ. ಸದಾನಂದ ಗೌಡ ಅವರಿಗೆ ಬೆಂಗಳೂರಿನಲ್ಲಿ ಶುಕ್ರವಾರ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪದ್ಮಿನಿ ನಾಗರಾಜ, ಬಿ.ಎಂ. ಪಟೇಲ್‌ಪಾಂಡು, ಎನ್.ಕೆ ರಮೇಶ್, ರುದ್ರಣ್ಣ ಹರ್ತಿಕೋಟೆ, ಚನ್ನಪ್ಪ ಕಟ್ಟಿ, ಮಹೇಶ ಜೋಶಿ, ಎಂ.ವಿ. ವೆಂಕಟೇಶ್, ಪಿ. ಮಹೇಶ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010.
ಟೆಲಿಫ್ಯಾಕ್ಸ್: 080–22024000 ಇ–ಮೇಲ್: mdkrdcl@gmail.com, cekrdcl@gmail.com ವೆಬ್‌ಸೈಟ್: http://www.krdcl.in
ಸಂಖ್ಯೆ: ಕರಅನಿನಿ/ಐಎಫ್‌ಬಿ/ಇಓಐ/2024–25/33 ದಿನಾಂಕ: 28–03–2025

ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ ಆಹ್ವಾನ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ (ಕ.ರ.ಅ.ನಿ.ನಿ) ವತಿಯಿಂದ **ಕರ್ನಾಟಕ ರಾಜ್ಯದಲ್ಲಿ ದೇವನಹಳ್ಳಿ–ವೇಮಗಲ್–ಕೋಲಾರ ರಾಜ್ಯ ಹೆದ್ದಾರಿ–96 ರ ಕಿ.ಮೀ 0.000 ರಿಂದ ಕಿಮೀ 49.284 ವರೆಗಿನ** (ವಿನ್ಯಾಸಿತ ಉದ್ದ 48.20 ಕಿ.ಮೀ) **ಉದ್ದದ ರಸ್ತೆಯನ್ನು ಪಿಪಿಪಿ–ಡಿ.ಬಿ.ಎಫ್.ಓ.ಎಂ.ಟಿ–ಹೈಬ್ರಿಡ್ ವರ್ಷಾಸನ ಯೋಜನೆಯಡಿಯಲ್ಲಿ (HAM) ರಸ್ತೆ ಅಭಿವೃದ್ಧಿ, ನಿರ್ವಹಣೆ ಹಾಗೂ ಮೇಲ್ವಿಚಾರಣೆಯನ್ನು** ಕೈಗೊಳ್ಳಲು ಕರ್ನಾಟಕ ಸರ್ಕಾರವು ನಿರ್ಧರಿಸಿದೆ. ಅಂದಾಜು ಯೋಜನಾ ಮೊತ್ತ : **ರೂ. 762.86 ಕೋಟಿಗಳು** (ಜಿಎಸ್‌ಟಿ ಹೊರತುಪಡಿಸಿ). ರಿಯಾಯಿತಿ ಅವಧಿ: **15 ವರ್ಷಗಳು** (24 ತಿಂಗಳುಗಳ ನಿರ್ಮಾಣ ಅವಧಿ ಸೇರಿದಂತೆ).
ಈ ಯೋಜನೆಗಾಗಿ ಈಗ ಕೆಆರ್‌ಡಿಸಿಎಲ್ **ಸ್ವತಂತ್ರ ಇಂಜಿನಿಯರ್ ಸೇವೆಗಳ ಆಯ್ಕೆಗಾಗಿ** ಆಸಕ್ತಿ ವ್ಯಕ್ತಪಡಿಸುವಿಕೆ (ಇಓಐ) ಅನ್ನು ಆಹ್ವಾನಿಸುತ್ತಿದೆ. ಇಓಐ ಪ್ರಸ್ತಾವನೆಯಲ್ಲಿ ಸೂಚಿಸಲಾದ ಕಾರ್ಯಕ್ಷಮತೆಯ ಆಧಾರದ ಮೇಲೆ ಅರ್ಜಿದಾರರನ್ನು ಶಾರ್ಟ್‌ಲಿಸ್ಟ್ ಮಾಡಲಾಗುತ್ತದೆ. ಸಮಾಲೋಚಕರು ಈ ಯೋಜನೆಗೆ ಆಸಕ್ತಿಯ ವ್ಯಕ್ತಪಡಿಸುವಿಕೆಯನ್ನು (ಇಓಐ) ಸಲ್ಲಿಸಬಹುದು.
ಸಮಾಲೋಚಕರು ತಮ್ಮ ಅರ್ಹತಾ ವೃದ್ಧಿಗಾಗಿ ಇತರೆ ಸಂಸ್ಥೆಗಳ ಜೊತೆ ಜಂಟಿ ಪಾಲುದಾರಿಕೆ(ಗಳು) ಮಾಡಿಕೊಳ್ಳಬಹುದು. ಆಸಕ್ತ ಸಮಾಲೋಚಕರು ಅಗತ್ಯವಿದ್ದಲ್ಲಿ ಹೆಚ್ಚಿನ ಮಾಹಿತಿಯನ್ನು ಕೆಲಸದ ದಿನಗಳಲ್ಲಿ ಕಛೇರಿ ಸಮಯದಲ್ಲಿ ಪಡೆದುಕೊಳ್ಳಬಹುದು.
ಆಸಕ್ತ ಅರ್ಜಿದಾರರು ಇಓಐ ಪ್ರಸ್ತಾವನೆಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಕೆಪಿಪಿಪಿ) ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಕೆಪಿಪಿಪಿ) ಮೂಲಕ ಮಾತ್ರ ದಿನಾಂಕ: **23.04.2025ರ ಸಂಜೆ 5:30 ಗಂಟೆಗೆ ಅಥವಾ ಮುಂಚಿತವಾಗಿ** ಸಲ್ಲಿಸಬೇಕು. ಇಓಐ ಪ್ರಸ್ತಾವನೆಗಳನ್ನು ದಿನಾಂಕ: **25.04.2025 ರಂದು ಬೆಳಿಗ್ಗೆ 11:30 ಗಂಟೆಗೆ** ತೆರೆಯಲಾಗುವುದು.
ಸೂಚನೆ: ಈ ಸಂಬಂಧ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಮುಂದಿನ ಬದಲಾವಣೆಗಳನ್ನು ಕೇವಲ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್/ಕೆ.ಆರ್.ಡಿ.ಸಿ.ಎಲ್ ವೆಬ್‌ಸೈಟ್: http://www.krdcl.in ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.
ಸಹಿ/– ಮುಖ್ಯ ಇಂಜಿನಿಯರ್
ಕರಅನಿನಿ ಬೆಂಗಳೂರು
DIPR/CP/YC/5967/2024-25

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಡಿಪಿಆರ್–02/1142/2024–25 ದಿನಾಂಕ: 28.03.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಯೋಜನೆಗಳಿಗೆ ವಿವರವಾದ ಯೋಜನಾ ವರದಿ (ಡಿಪಿಆರ್)ಯನ್ನು ಸಿದ್ಧಪಡಿಸುವುದಕ್ಕಾಗಿ ಇದೇ ರೀತಿಯ ಕಾಮಗಾರಿಯನ್ನು ನಿರ್ವಹಿಸಿದ ದಾಖಲೆಯುಳ್ಳ ಮತ್ತು ಹೆಚ್ಚಿನ ಅನುಭವವಿರುವ, ಬೆಂಗಳೂರಿನಲ್ಲಿ ಕಛೇರಿಯುಳ್ಳ ಪ್ರತಿಷ್ಠಿತ ಅರ್ಹ ಸಮಾಲೋಚಕರು/ಸಂಸ್ಥೆಗಳಿಂದ ದ್ವಿ–ಲಕೋಟೆ ಬಿಡ್ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಿದೆ.
ಕಾಮಗಾರಿ ಹೆಸರು : ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಪ್ರಸ್ತಾಪಿತ ಜಂಗಮಕೋಟೆ ಕೈಗಾರಿಕಾ ಪ್ರದೇಶ ರಚನೆಗಾಗಿ ಆರ್ಥಿಕ ವಿಶ್ಲೇಷಣೆ, ಸಮೀಕ್ಷೆ, ಬಡಾವಣೆ ನಕ್ಷೆ, ವಿನ್ಯಾಸ, ಅಂದಾಜು ಪಟ್ಟಿ, ವೆಚ್ಚದ ರಚನೆಗಳು ಇತ್ಯಾದಿ ಸೇರಿದಂತೆ ವಿವರವಾದ ಯೋಜನಾ ವರದಿ (ಡಿಪಿಆರ್) ಅನ್ನು ಸಿದ್ಧಪಡಿಸುವುದಕ್ಕಾಗಿ ಸಲಹಾ ಸೇವೆಗಳನ್ನು ಒದಗಿಸುವುದು. (ವಿಸ್ತೀರ್ಣ 2823.12 ಎ). (2ನೇ ಕರೆ).
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 16.04.2025 ಸಂಜೆ 4.00 ಗಂಟೆಯವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/5975/Zen/2024-25

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಿಂಧನೂರು
ಸಂಖ್ಯೆ:ಕೃಮಾಇ: ಕೃಉಮಾಸ/ಸಿಂ/ಅಭಿವಿ:ಟೆಂ/ 798/2024–25 ದಿನಾಂಕ:–27–03–2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಿಂಧನೂರು ವತಿಯಿಂದ ಕರ್ನಾಟಕ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ 2024–25ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ ಹಾಗೂ ನಿಯಮಗಳು 1999–2000ರನ್ವಯ Standard Tender Document KW-3 ಪ್ರಕಾರ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿಗಳ ಹೆಸರು (1) ಕೃಷಿ ಉತ್ಪನ್ನ ಮಾರುಕಟ್ಟೆ ಸಿಂಧನೂರು ಸಮಿತಿಯ 2024–25ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಮಂಜೂರಾದ 2 ಸಂಖ್ಯೆ ಪ್ಯಾಕೇಜ್ ಕಾಮಗಾರಿಗಳು 1. ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಹಕಾರ ಮಾರಾಟ ಮಂಡಳಿ ಪಕ್ಕದಲ್ಲಿ 1 ಸಂಖ್ಯೆ 250 ಮೆ.ಟನ್ ಗೋದಾಮು ನಿರ್ಮಾಣ ಕಾಮಗಾರಿ 2. ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ಹಳೆಯ ಸಿಬ್ಬಂದಿ ವಸತಿ ಗೃಹಗಳಿಗೆ ಸಂಪ್ ನಿರ್ಮಿಸಿ ಸುಧಾರಣೆ ಮಾಡುವುದು ಹಾಗೂ ಸಿಸ್ಟರ್ನ್‌ನೊಂದಿಗೆ ನೀರು ಸರಬರಾಜು ಮಾಡುವ ಕಾಮಗಾರಿ. ಟೆಂಡರಗಿಟ್ಟ ಮೊತ್ತ: ರೂ.57,05,467.45 ಇಎಂಡಿ ಮೊತ್ತ ರೂ.1,14,109.35 ಕಾಮಗಾರಿಯ ಅವಧಿ : 175 ದಿನ (ಮಳೆಗಾಲ ಹೊರತುಪಡಿಸಿ) ಇಂಡೆಂಟ್ ನಂಬರ್: APMC/2024-25/OW/WORK_INDENT499 (2) ಕೃಷಿ ಉತ್ಪನ್ನ ಮಾರುಕಟ್ಟೆ ಸಿಂಧನೂರು ಸಮಿತಿಯ 2024–25ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಮುಖ್ಯ ಮಾರುಕಟ್ಟೆ ಹಾಗೂ ವಿಸ್ತೃತ ಮಾರುಕಟ್ಟೆ ಪ್ರಾಂಗಣದ ಸುತ್ತಗೋಡೆಯನ್ನು ನವೀಕರಿಸಿ ಸಾಲಿಡ್ ಕಾಂಕ್ರೀಟ್ ಬ್ಲಾಕ್ಸ್‌ನೊಂದಿಗೆ ಎತ್ತರಗೊಳಿಸುವ ಕಾಮಗಾರಿ ಟೆಂಡರಗಿಟ್ಟ ಮೊತ್ತ ರೂ.60,95,372.00 ಇಎಂಡಿ ಮೊತ್ತ ರೂ.1,21,907.00 ಕಾಮಗಾರಿಯ ಅವಧಿ : 90 ದಿನ (ಮಳೆಗಾಲ ಹೊರತುಪಡಿಸಿ) ಇಂಡೆಂಟ್ ನಂಬರ್: APMC/2024-25/OW/WORK_INDENT500
ಈ ಮೇಲಿನ ಎರಡು ಕಾಮಗಾರಿಗಳ ಭರ್ತಿಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿ:15/04/2025. ಸಮಯ 16.00 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿ:17/04/2025 ಸಮಯ 16.00 ಗಂಟೆ ಆರ್ಥಿಕ ಬಿಡ್ ತೆರೆಯುವ ದಿ:22/04/2025 ಸಮಯ 11.00 ಗಂಟೆಗೆ
ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಭೇಟಿ ನೀಡಿ ಪಡೆಯತಕ್ಕದ್ದು ಹಾಗೂ ಕೆಪಿಪಿಪಿ ಸಹಾಯವಾಣಿ ಸಂಖ್ಯೆ 8046010000 ಗೆ ಮಾಹಿತಿಗಾಗಿ ಸಂಪರ್ಕಿಬಹುದು.
ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ, ಸಿಂಧನೂರು.
ಸಹಿ/– ಅಧ್ಯಕ್ಷರು, ಕೃ.ಉ.ಮಾ.ಸ, ಸಿಂಧನೂರು.
DIP/RCR/864/KSMC&A/868/2024-25

ಕಿದ್ವಾಯಿ: ಕ್ಯಾನ್ಸರ್ ಪೀಡಿತರ ಅಲೆದಾಟ ತಪ್ಪಿಸಲು ಕ್ರಮ

ನೋಂದಾಯಿಸಿದ ತಕ್ಷಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಭೇಟಿ ನೀಡುವ ರೋಗಿಗಳು ನೋಂದಣಿ ಮಾಡಿಸಿಕೊಂಡ ಕೂಡಲೇ ಒಳರೋಗಿಯಾಗಿ ದಾಖಲಿಸಿಕೊಳ್ಳಬೇಕು ಎಂದು ಸಂಸ್ಥೆಯ ಆಡಳಿತಾಧಿಕಾರಿ ಸುತ್ತೋಲೆ ಹೊರಡಿಸಿದ್ದಾರೆ.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಅವರು ಶುಕ್ರವಾರ ಸಂಸ್ಥೆಗೆ ಭೇಟಿ ನೀಡಿ ವ್ಯವಸ್ಥೆಯನ್ನು ಪರಿಶೀಲಿಸಿದರು. ರೋಗಿಗಳ ಅಲೆದಾಟ ತಪ್ಪಿಸಲು, ನೋಂದಣಿಯಾದ ಕೂಡಲೇ ಒಳರೋಗಿಯಾಗಿ ದಾಖಲಿಸಲು ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.



ಶರಣಪ್ರಕಾಶ ಪಾಟೀಲ ಅವರು ಕಿದ್ವಾಯಿ ಸಂಸ್ಥೆಯಲ್ಲಿನ ವೈದ್ಯಕೀಯ ವ್ಯವಸ್ಥೆ ಬಗ್ಗೆ ರೋಗಿಗಳ ಕುಟುಂಬಸ್ಥರ ಬಳಿ ವಿಚಾರಿಸಿದರು

ಪರಿಶೀಲನೆಯ ವೇಳೆ, 'ರೋಗಿಗಳ ಸಂಖ್ಯೆ ಹೆಚ್ಚಾಗಿದ್ದರೂ ಸಂಸ್ಥೆಯಲ್ಲಿನ ಬೆಡ್‌ಗಳು ಶೇ 70ಕ್ಕಿಂತ ಕಡಿಮೆ ಭರ್ತಿಯಾಗಿರುವುದು ಏಕೆ' ಎಂದು ಸಚಿವರು ವೈದ್ಯಾಧಿಕಾರಿಗಳನ್ನು ಪ್ರಶ್ನಿಸಿದರು.

'ಕ್ಯಾನ್ಸರ್ ಖಚಿತತೆ ಬಗ್ಗೆ ವರದಿ ಬಂದು, ರೋಗ ದೃಢಪಟ್ಟ ಬಳಿಕವೇ ಒಳರೋಗಿಯನ್ನಾಗಿ ದಾಖಲಿಸಿಕೊಳ್ಳಲಾಗುತ್ತಿದೆ' ಎಂದು ವೈದ್ಯಾಧಿಕಾರಿಗಳು ತಿಳಿಸಿದರು. ಆಗ ಸಚಿವರು, 'ಸಂಸ್ಥೆಯು ತನ್ನ ನೀತಿಯನ್ನು ಬದಲಾಯಿಸಿಕೊಂಡು, ರೋಗಿಗಳು ನೋಂದಣಿಯಾದ ಕೂಡಲೇ ವಾರ್ಡ್‌ಗಳಲ್ಲಿ ಇರಿಸಿಕೊಳ್ಳಬೇಕು' ಎಂದು ಸೂಚನೆ ನೀಡಿದರು.

'ಅನೇಕ ರೋಗಿಗಳು ಆರ್ಥಿಕವಾಗಿ ದುರ್ಬಲರಾಗಿರುತ್ತಾರೆ. ಅಂತಿಮ ವರದಿ ಬರುವವರೆಗೂ ಬೆಂಗಳೂರಿನಲ್ಲಿ ಖಾಸಗಿ ವಸತಿ ಸೌಕರ್ಯ ಪಡೆಯಲು ಸಾಧ್ಯವಾಗುವುದಿಲ್ಲ. ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುವವರಿಗೆ ಈ ವ್ಯವಸ್ಥೆ ಅಗತ್ಯವಿಲ್ಲದಿರಬಹುದು, ದೂರದ ಪ್ರದೇಶಗಳಿಂದ ಬರುವ ರೋಗಿಗಳಿಗೆ ಈ ಕ್ರಮ ಅತ್ಯಗತ್ಯ' ಎಂದು ಸಚಿವರು ಹೇಳಿದರು.

'ಕಿದ್ವಾಯಿ ಸಂಸ್ಥೆಗೆ ಬರುವ ಶೇ 90ಕ್ಕಿಂತ ಹೆಚ್ಚು ರೋಗಿಗಳು ಬಿಪಿಎಲ್ ಕುಟುಂಬದವರಾಗಿರುವುದರಿಂದ, ವಿಶೇಷ ವಾರ್ಡ್, ಶಾಂತಿಧಾಮ ಮತ್ತು ಅನಿಕೇತನ, ಅರೆ ವಿಶೇಷ ವಾರ್ಡ್ ಅನ್ನು ಸಾಮಾನ್ಯ ವಾರ್ಡ್‌ಗಳಾಗಿ ಪರಿವರ್ತಿಸಬೇಕು' ಎಂದು ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ಕಿದ್ವಾಯಿ ಸಂಸ್ಥೆಯ ಆಡಳಿತಾಧಿಕಾರಿ ವೈ. ನವೀನ್ ಭಟ್ ಮತ್ತು ನಿರ್ದೇಶಕ ಡಾ.ನವೀನ್ ಉಪಸ್ಥಿತರಿದ್ದರು.

ಬಗರ್ ಹುಕುಂ ಜಮೀನು ಮಂಜೂರು: 6 ತಿಂಗಳ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಗರ್‌ಹುಕುಂ ಅಡಿಯಲ್ಲಿ ಅರ್ಹ ರೈತರಿಗೆ ಭೂ ಮಂಜೂರು ಮಾಡುವ ಕೆಲಸ ನಿರೀಕ್ಷೆ ಮಟ್ಟದಲ್ಲಿ ನಡೆಯುತ್ತಿಲ್ಲ. ಆರು ತಿಂಗಳಲ್ಲಿ ಎಲ್ಲ ಅರ್ಹರಿಗೂ ಜಮೀನು ಮಂಜೂರು ಮಾಡಬೇಕು' ಎಂದು ತಹಶೀಲ್ದಾರ್‌ಗಳಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸೂಚನೆ ನೀಡಿದರು.

ತಹಶೀಲ್ದಾರ್‌ಗಳ ಜೊತೆ ಶುಕ್ರವಾರ ವಿಡಿಯೊ ಸಂವಾದ ನಡೆಸಿದ ಅವರು, 'ಬಗರ್ ಹುಕುಂ ಬಡವರ ಕೆಲಸ. ಕೆಲ ಅಧಿಕಾರಿಗಳು ಅಸಡ್ಡೆ ತೋರುತ್ತಿದ್ದಾರೆ. 15 ದಿನಗಳಿಗೊಮ್ಮೆ ಶಾಸಕರ ನೇತೃತ್ವದಲ್ಲಿ ಸಭೆ ನಡೆಸಿ, ಅರ್ಹರಿಗೆ ಜಮೀನು ಮಂಜೂರು ಮಾಡಬೇಕು' ಎಂದು ಸೂಚಿಸಿದರು.

'ರೈತರು ತಮ್ಮ ಪಾಲಿನ ಜಮೀನು ಇದ್ದರೂ ಪೋಡಿಯಾಗದೆ ಸರ್ಕಾರಿ ಕಚೇರಿಗಳಿಗೆ ಸುತ್ತುತ್ತಿದ್ದಾರೆ. ತಹಶೀಲ್ದಾರರು ನಿಗದಿತ ಜಮೀನಿಗೆ ಸಂಬಂಧಿಸಿದ ನಮೂನೆ 1-5 ದಾಖಲೆಯನ್ನು ಸಿದ್ದಪಡಿಸಿ ಮುಂದಿನ ಹಂತದ ನಮೂನೆ 6-10 ಕೆಲಸಕ್ಕೆ ಭೂ ಮಾಪನ ಇಲಾಖೆಗೆ ಕಡತ ಕಳುಹಿಸಬೇಕು. ಆದರೆ, ಬಹುತೇಕ ಜಿಲ್ಲೆಗಳಲ್ಲಿ ಈ ಕಾರ್ಯ ಸಮಾಧಾನಕರ ಆಗಿಲ್ಲ' ಎಂದು ಸಚಿವರು ಅಸಮಾಧಾನ ಹೊರಹಾಕಿದರು.

'ಮುಂದಿನ ತಿಂಗಳು ಮಂಗಳೂರಿಗೆ ಮುಖ್ಯಮಂತ್ರಿ ಭೇಟಿ ನೀಡಲಿದ್ದು, ಅಷ್ಟರಲ್ಲಿ 10 ಸಾವಿರ ಪ್ರಕರಣಗಳು ದುರಸ್ತಿಗೊಂಡು ರೈತರಿಗೆ ದಾಖಲೆ ನೀಡಬೇಕು' ಎಂದು ದಕ್ಷಿಣ ಕನ್ನಡ ಜಿಲ್ಲೆಯ ತಹಶೀಲ್ದಾರರಿಗೆ ಸಚಿವರು ಗುರಿ ನಿಗದಿಪಡಿಸಿದರು. 'ತಹಶೀಲ್ದಾರ್ ಕಚೇರಿಗಳಲ್ಲಿ ಭೂ ದಾಖಲೆಗಳನ್ನು ಅಭಿಯಾನದಂತೆ ಸ್ಕ್ಯಾನ್ ಮಾಡಿ ಡಿಜಿಟಲೀಕರಣಗೊಳಿಸಲಾಗುತ್ತಿದೆ. ಈ ಕೆಲಸದಲ್ಲೂ ಕೆಲವು ತಹಶೀಲ್ದಾರರು ಅಸಡ್ಡೆ ತೋರಿಸುತ್ತಿದ್ದಾರೆ. ಅಂಥವರಿಗೆ ನೋಟಿಸ್ ನೀಡಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಪ್ರತಿ ತಹಶೀಲ್ದಾರ್ ಕಚೇರಿಗೂ ದಿನಕ್ಕೆ 6 ಸಾವಿರ ಪುಟಗಳನ್ನು ಸ್ಕ್ಯಾನ್ ಮಾಡುವ ಗುರಿ ನೀಡಲಾಗಿತ್ತು. ಚಳ್ಳಕೆರೆ, ಮೊಳಕಾಲ್ಮೂರು, ಕೊಪ್ಪ, ಕೊಪ್ಪಳ, ಹೊನ್ನಾವರ ಕಚೇರಿಗಳಲ್ಲಿ 9 ಸಾವಿರ ಪುಟ ಸ್ಕ್ಯಾನ್ ಮಾಡಲಾಗುತ್ತಿದೆ. ಉಳಿದವರಿಗೆ ಆಗುತ್ತಿಲ್ಲ ಎಂದರೆ ಏನರ್ಥ' ಎಂದು ಸಚಿವರು ಆಕ್ರೋಶ ಹೊರಹಾಕಿದರು.

ಅಂಬೇಡ್ಕರ್ ಜಯಂತಿಗೆ ರಜೆ ಘೋಷಿಸಿದ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನದ ಅಂಗವಾಗಿ ಏ.14ರಂದು ಸಾರ್ವತ್ರಿಕ ರಜೆ ಘೋಷಿಸಿ ಕೇಂದ್ರ ಸರ್ಕಾರ ಪ್ರಕಟಣೆ ಹೊರಡಿಸಿದೆ.

'ದೇಶದಾದ್ಯಂತ ಕೈಗಾರಿಕಾ ಸಂಸ್ಥೆಗಳು ಸೇರಿದಂತೆ ಕೇಂದ್ರ ಸರ್ಕಾರದ ಎಲ್ಲ ಕಚೇರಿಗಳಿಗೆ ಏ.14ರಂದು ರಜೆ ಘೋಷಿಸಲಾಗಿದೆ' ಎಂದು ತಿಳಿಸಿದೆ.

ಮಧುಬಲೆ: ಗಡ್ಡಧಾರಿಗಾಗಿ ಹುಡುಕಾಟ

ಒಂದನೇ ಪುಟದಿಂದ...

ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ಅವರ ಸೂಚನೆ ಮೇರೆಗೆ ಪ್ರಕರಣದ ಕುರಿತು ಸಿಐಡಿ ಪೊಲೀಸರು ವಿಚಾರಣೆ ಆರಂಭಿಸಿದ್ದಾರೆ. ಸಿಐಡಿ ವಿಭಾಗದ ಐಜಿಪಿ ವಂಶಿಕೃಷ್ಣ ನೇತೃತ್ವದಲ್ಲಿ ಎಸ್‌ಪಿ ರಾಘವೇಂದ್ರ ಹೆಗಡೆ, ಡಿವೈಎಸ್‌ಪಿ ಕೇಶವಮೂರ್ತಿ ಅವರ ತಂಡವು ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಮಾಹಿತಿ ಕಲೆಹಾಕಿದೆ ಎಂದು ಮೂಲಗಳು ತಿಳಿಸಿವೆ.

ಡೈರಿ ಕೊಂಡೊಯ್ದ ತಂಡ: ಜಯ ಮಹಲ್‌ನಲ್ಲಿರುವ ಸರ್ಕಾರಿ ನಿವಾಸದಲ್ಲಿರುವ ಎಲ್ಲ ಸಿಬ್ಬಂದಿಯ ಮಾಹಿತಿ ಪಡೆಯಲಾಗಿದೆ. ಮನೆ ಕೆಲಸದವರನ್ನು ವಿಚಾರಣೆಗೆ ಒಳಪಡಿಸಲಾಗಿದೆ. ನಾಲ್ಕು ತಿಂಗಳಲ್ಲಿ ನಿವಾಸಕ್ಕೆ ಭೇಟಿ ನೀಡಿದವರ ಮಾಹಿತಿ ಪಡೆಯಲಾಗಿದೆ.

ನಿವಾಸದ ಭದ್ರತಾ ಅಧಿಕಾರಿ ಬಳಿಯಿದ್ದ ಡೈರಿ ಪಡೆದುಕೊಳ್ಳಲಾಗಿದೆ. ಅದರಲ್ಲಿ ನಮೂದಾಗಿರುವ ಹೆಸರು, ಮೊಬೈಲ್ ಸಂಖ್ಯೆ ಆಧರಿಸಿ ತನಿಖೆ ಚುರುಕುಗೊಳಿಸಲಾಗಿದೆ. ಎರಡು ದಿನ ನಡೆದ ತನಿಖೆಯ ವಿವರವನ್ನು ಡಿಜಿಪಿಯವರಿಗೆ ತನಿಖಾ ತಂಡವು ನೀಡಿದೆ ಎಂದ ಮೂಲಗಳು ತಿಳಿಸಿವೆ.

'ವಿಧೇಯಕಕ್ಕೆ ಒಪ್ಪಿಗೆ ಕೊಡಬೇಡಿ'

ರಾಜ್ಯಪಾಲರಿಗೆ ಮನವಿ ಸಲ್ಲಿಸಿದ ವಿಶ್ವ ಹಿಂದೂ ಪರಿಷತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಗಾರಿಗಳ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ನೀಡುವ ರಾಜ್ಯ ಸರ್ಕಾರದ ವಿಧೇಯಕಕ್ಕೆ ಒಪ್ಪಿಗೆ ನೀಡದಂತೆ ಒತ್ತಾಯಿಸಿ ವಿಶ್ವ ಹಿಂದೂ ಪರಿಷತ್, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಮಾಡಿದೆ.

ಸರ್ಕಾರದ ಕಾಮಗಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡುವ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಲಾಗಿದೆ. ಕೆಟಿಪಿಪಿ ಕಾಯ್ದೆಯಲ್ಲಿನ ತಿದ್ದುಪಡಿಯು ₹2 ಕೋಟಿವರೆಗೆ ಸಿವಿಲ್ ಗುತ್ತಿಗೆ ಮತ್ತು ₹1 ಕೋಟಿವರೆಗೆ ಸರಕು ಮತ್ತು ಸೇವಾ ಗುತ್ತಿಗೆಗಳಿಗೆ ಶೇ 4ರಷ್ಟು ಮೀಸಲಾತಿಗೆ ಅನುಮತಿ ನೀಡುವುದಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.



ವಿಎಚ್‌ಪಿ ನಿಯೋಗವು ರಾಜ್ಯಪಾಲರಿಗೆ ಮನವಿ ಸಲ್ಲಿಸಿತು

ಧರ್ಮ ಮತ್ತು ಜಾತಿಯ ಆಧಾರದ ಮೇಲೆ ನಾಗರಿಕರ ನಡುವೆ ತಾರತಮ್ಯ ಮಾಡುವುದಕ್ಕೆ ಸಂವಿಧಾನ ಅವಕಾಶ ನೀಡುವುದಿಲ್ಲ. ಸಂವಿಧಾನ ರಚಿಸುವಾಗಲೇ ಅಂಬೇಡ್ಕರ್ ಅವರು ಧರ್ಮಾಧಾರಿತ ಮೀಸಲಾತಿ ವಿರೋಧಿಸಿದ್ದರು ಎಂದು ಹೇಳಿದೆ.

ನಿಯೋಗದಲ್ಲಿ ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ದೀಪಕ್ ರಾಜಗೋಪಾಲ್, ಕಾರ್ಯದರ್ಶಿ ಜಗನ್ನಾಥ ಶಾಸ್ತ್ರಿ ಮತ್ತು ಬಜರಂಗ ದಳದ ಸಹ ಸಂಯೋಜಕ ಗೋವರ್ಧನ್ ಇದ್ದರು.

ಎಸ್‌ಇಪಿ ಆಯೋಗ ಅವಧಿ ವಿಸ್ತರಣೆ

ಬೆಂಗಳೂರು: ಅಂತಿಮ ವರದಿ ಸಲ್ಲಿಸಲು ಮೇ ಅಂತ್ಯದವರೆಗೆ ಗಡುವು ವಿಸ್ತರಿಸುವಂತೆ ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಆಯೋಗ ಸರ್ಕಾರಕ್ಕೆ ಮನವಿ ಮಾಡಿದೆ.

ಚುನಾವಣಾ ವೇಳೆ ನೀಡಿದ್ದ ಭರವಸೆಯಂತೆ ರಾಷ್ಟ್ರೀಯ ಶಿಕ್ಷಣ ನೀತಿ ಬದಲು ರಾಜ್ಯ ಶಿಕ್ಷಣ ನೀತಿ ರೂಪಿಸಲು ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಲಾಗಿತ್ತು. ಸೆಪ್ಟೆಂಬರ್ 2024ಕ್ಕೆ ಕೊನೆಗೊಳ್ಳಬೇಕಿದ್ದ ಅವಧಿಯನ್ನು ಅದೇ ವರ್ಷದ ಡಿಸೆಂಬರ್‌ವರೆಗೆ ವಿಸ್ತರಿಲಾಗಿತ್ತು. ಅವಧಿ ಮುಗಿದು ಮೂರು ತಿಂಗಳಾದರೂ ಅಂತಿಮ ವರದಿ ಸಲ್ಲಿಸಿಲ್ಲ.

'ವರದಿ ಸಿದ್ಧವಾಗಿದೆ. ಆದರೆ, ಅನುವಾದ ಕಾರ್ಯ (ಇಂಗ್ಲಿಷ್‌ನಿಂದ ಕನ್ನಡಕ್ಕೆ) ಸಮಯ ತೆಗೆದುಕೊಳ್ಳುತ್ತಿದೆ. 2025–26ನೇ ಸಾಲಿನ ಶೈಕ್ಷಣಿಕ ವರ್ಷ ಸಮೀಪಿಸುತ್ತಿರುವ ಕಾರಣ ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರು ಪ್ರತಿಕ್ರಿಯಿಸಿದರು.

ನಿವೃತ್ತ ಡಿಜಿಪಿ, ಟ್ರಾಫಿಕ್ ಸಿಗ್ನಲ್ ಹರಿಕಾರ ಗರುಡಾಚಾರ್ ನಿಧನ

ಬೆಂಗಳೂರು: ನಿವೃತ್ತ ಪೊಲೀಸ್ ಮಹಾನಿರ್ದೇಶಕ, ನಗರದ ಟ್ರಾಫಿಕ್ ಸಿಗ್ನಲ್ ಹರಿಕಾರ ಬಿ.ಎನ್.ಗರುಡಾಚಾರ್ (96) ಅವರು ವಯೋಸಹಜ ಕಾರಣದಿಂದ ಶುಕ್ರವಾರ ಮುಂಜಾನೆ ತಮ್ಮ ನಿವಾಸದಲ್ಲಿ ನಿಧನರಾದರು.

ಮೃತರಿಗೆ ಬೆಂಗಳೂರಿನ ಚಿಕ್ಕಪೇಟೆ ಕ್ಷೇತ್ರದ ಶಾಸಕ ಬಿ.ಉದಯ್ ಗರುಡಾಚಾರ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ.

ಬಸವನಗುಡಿ ಅಂಚೆ ಕಚೇರಿಯ ಹಿಂಭಾಗದ ಕೃಷ್ಣ ರಸ್ತೆಯಲ್ಲಿರುವ ಅವರ ನಿವಾಸದಲ್ಲಿ ಶುಕ್ರವಾರ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು. ವಿವಿಧ ಕ್ಷೇತ್ರಗಳ ಮುಖಂಡರು, ಪೊಲೀಸ್ ಇಲಾಖೆಯ ಸಿಬ್ಬಂದಿ ಹಾಗೂ ಸಾರ್ವಜನಿಕರು ಅಂತಿಮ ದರ್ಶನ ಪಡೆದರು.

ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಶನಿವಾರ ಸಂಜೆ 4ಕ್ಕೆ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಬಿ.ಎನ್. ಗರುಡಾಚಾರ್

ಗರುಡಾಚಾರ್ ಅವರು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆ ಗ್ರಾಮದವರು. ಪೊಲೀಸ್ ಇಲಾಖೆಗೆ ಸೇರಿದ ಬಳಿಕ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದರು.

'ಬಡತನದಲ್ಲೇ ಶಿಕ್ಷಣ ಪೂರೈಸಿದರು. ಹಾಸನ, ಗೊರೂರು, ಮೈಸೂರಿನ ಪರಿಚಯಸ್ಥರ ಮನೆಯಲ್ಲಿ ಆಶ್ರಯ ಪಡೆದು ಸ್ನಾತಕೋತ್ತರ ಪದವಿ ಪಡೆದಿದ್ದರು. ಭೂಮಾಪಕರಾಗಿ ವೃತ್ತಿ ಜೀವನ ಆರಂಭಿಸಿದ್ದರು. ನಂತರ, ಅಬಕಾರಿ ಇನ್‌ಸ್ಪೆಕ್ಟರ್ ಕೆಲಸಕ್ಕೆ ಸೇರಿದ್ದರು. 1953ರಲ್ಲಿ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಐಪಿಎಸ್ ಅಧಿಕಾರಿ ಆದರು' ಎಂದು ಅವರ ಆತ್ಮೀಯರು ಹೇಳಿದರು.

ರಾಜ್ಯದ ಕೊಪ್ಪಳ, ತುಮಕೂರು, ಬಳ್ಳಾರಿ ಸೇರಿದಂತೆ ವಿವಿಧೆಡೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಕೆಲಸ ಮಾಡಿದ್ದರು. ಬೆಂಗಳೂರು ನಗರದ ಡಿಸಿಪಿಯಾಗಿ (ಎಂಟು ವರ್ಷ), ನಗರ ಪೊಲೀಸ್ ಕಮಿಷನರ್ ಆಗಿ (ನಾಲ್ಕು ವರ್ಷ, ಎರಡು ತಿಂಗಳು), ರಾಜ್ಯ ಪೊಲೀಸ್ ಮಹಾನಿರ್ದೇಶಕರಾಗಿ (ಡಿಜಿಪಿ) (ಮೂರು ವರ್ಷ, ಎಂಟು ತಿಂಗಳು) ಕೆಲಸ ಮಾಡಿದ್ದರು.

ಬೆಂಗಳೂರು ನಗರದ ಮೊದಲ ಪೊಲೀಸ್ ಕಮಿಷನರ್ ಆಗಿದ್ದ ಸಿ.ಚಾಂಡಿ ಅವರ ಕಾಲದಲ್ಲಿ ಬೆಂಗಳೂರು ಸಂಚಾರ ಪೊಲೀಸ್ ವಿಭಾಗದ ಡಿಸಿಪಿ ಆಗಿದ್ದ ಗರುಡಾಚಾರ್ ಅವರು, 1963ರಲ್ಲಿ ಎನ್.ಆರ್.ಜಂಕ್ಷನ್‌ಲ್ಲಿ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಸಿಗ್ನಲ್ ಅಳವಡಿಸಿದ್ದರು. ಇದು ಬೆಂಗಳೂರಿನ ಮೊದಲ ಟ್ರಾಫಿಕ್ ಸಿಗ್ನಲ್ ಆಗಿದೆ. ಇದರ ನೆನಪಿಗೆ ಟ್ರಾಫಿಕ್ ಸಿಗ್ನಲ್ ಅಳವಡಿಕೆ ಮಾಹಿತಿಯ ಫಲಕವನ್ನು 2021ರಲ್ಲಿ ಗರುಡಾಚಾರ್ ಅವರೇ ಅಂದಿನ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರ ಸಮ್ಮುಖದಲ್ಲಿ ಉದ್ಘಾಟಿಸಿದ್ದರು.

ಗರುಡಾಚಾರ್ ಅವರು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆ.ಎ.ಟಿ) ಸದಸ್ಯರಾಗಿ ಕೆಲಸ ಮಾಡಿದ್ದರು. ಐಪಿಎಸ್ ಅಧಿಕಾರಿ ಅನ್ನು ಕೆಎಟಿಗೆ ನೇಮಿಸಿದ್ದು ಅದೇ ಮೊದಲು. ಗರುಡಾಚಾರ್ ಅವರು ಕೇಂದ್ರ, ರಾಜ್ಯ ಸರ್ಕಾರ ವಿವಿಧ ಪುರಸ್ಕಾರಗಳಿಗೆ ಪಾತ್ರರಾಗಿದ್ದರು.

ಸಂಸದ ಇಮ್ರಾನ್ ಪ್ರತಾಪಗಢಿ ವಿರುದ್ಧದ ಎಫ್‌ಐಆರ್ ರದ್ದುಗೊಳಿಸಿದ ಸುಪ್ರೀಂ ಕೋರ್ಟ್

‘ಕವಿತೆ, ಹಾಸ್ಯ ದ್ವೇಷಕ್ಕೆ ಕಾರಣವಾಗದು’

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪೊಲೀಸರ ಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್, ‘ಕೇವಲ ಕವಿತೆ ವಾಚನ, ಹಾಸ್ಯ, ಯಾವುದೇ ರೀತಿಯ ಕಲೆ ಅಥವಾ ಮನರಂಜನೆಯು ಸಮುದಾಯಗಳ ನಡುವೆ ದ್ವೇಷ ಬಿತ್ತಲು ಕಾರಣವಾಗುತ್ತದೆ ಎನ್ನಲಾಗದು’ ಎಂದು ಶುಕ್ರವಾರ ಹೇಳಿದೆ.

ಕಾಂಗ್ರೆಸ್ ಸಂಸದ ಇಮ್ರಾನ್ ಪ್ರತಾಪಗಢಿ ವಿರುದ್ಧದ ಎಫ್‌ಐಆರ್ ರದ್ದುಗೊಳಿಸಿದ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಉಜ್ವಲ್ ಭುಯಾನ್ ಅವರ ಪೀಠವು, ‘ಕಾವ್ಯ, ನಾಟಕ, ಚಲನಚಿತ್ರ ಮತ್ತು ಸ್ಟ್ಯಾಂಡ್-ಅಪ್ ಕಾಮಿಡಿ, ವಿಡಂಬನ ಸಾಹಿತ್ಯ ಹಾಗೂ ಕಲೆ ಸೇರಿದಂತೆ ವೇದಿಕೆ ಕಾರ್ಯಕ್ರಮಗಳು ಮಾನವನ ಜೀವನವನ್ನು ಹೆಚ್ಚು ಅರ್ಥಪೂರ್ಣವನ್ನಾಗಿಸಿದೆ’ ಎಂದು ಹೇಳಿತು.

‘ಯೆ ಖೂನ್ ಸೆ ಪ್ಯಾಸೆ ಬಾತ್ ಸುನೋ...’ ಎಂಬ ಕವಿತೆಯನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಕ್ಕಾಗಿ ಗುಜರಾತ್‌ನ ಜಾಮ್ ನಗರದಲ್ಲಿ ಇಮ್ರಾನ್ ವಿರುದ್ಧ ಜನವರಿ 3ರಂದು ಪ್ರಕರಣ ದಾಖಲಾಗಿತ್ತು.

ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ಗುಜರಾತ್ ಹೈಕೋರ್ಟ್‌ನ ಜ.17ರ ಆದೇಶವನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಪೀಠವು, ‘ಈ ಕವಿತೆಗೆ ಯಾವುದೇ ಧರ್ಮ, ಜಾತಿ, ಸಮುದಾಯ ಅಥವಾ ನಿರ್ದಿಷ್ಟ ಗುಂಪಿನ ಜತೆ ಸಂಬಂಧವಿಲ್ಲ’ ಎಂದು ಹೇಳಿತು.

‘ಕವಿತೆಯ ಸಾಲುಗಳು ದ್ವೇಷದ ಭಾವನೆ ಉಂಟುಮಾಡದು ಅಥವಾ ಉತ್ತೇಜಿಸದು. ಇದು ಆಡಳಿತಗಾರ ಮಾಡಿದ ಅನ್ಯಾಯವನ್ನು ಪ್ರಶ್ನಿಸುವಂತೆ ಕೋರುತ್ತದೆ. ಮೇಲ್ಮನವಿದಾರರು ಬಳಸಿರುವ ಪದಗಳು ಸಾರ್ವಜನಿಕ ಶಾಂತಿಯನ್ನು ಭಂಗಗೊಳಿಸುವ ಸಾಧ್ಯತೆಯಿದೆ ಎಂದು ಹೇಳಲು ಆಗದು’ ಎಂದು ಪೀಠ ಹೇಳಿದೆ.

ಕಾಮ್ರಾಗೆ ಮಧ್ಯಂತರ ನಿರೀಕ್ಷಣಾ ಜಾಮೀನು

ಚೆನ್ನೈ (ಪಿಟಿಐ): ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಅವರನ್ನು ಉದ್ದೇಶಿಸಿ ಆಡಿದ ಮಾತುಗಳಿಗೆ ಸಂಬಂಧಿಸಿ ದಾಖಲಾದ ಪ್ರಕರಣದಲ್ಲಿ ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಅವರಿಗೆ ಮದ್ರಾಸ್ ಹೈಕೋರ್ಟ್ ಶುಕ್ರವಾರ ಮಧ್ಯಂತರ ನಿರೀಕ್ಷಣಾ ಜಾಮೀನು ನೀಡಿದೆ.

ಶಿಂದೆ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ ಆರೋಪದಲ್ಲಿ ಶಿವಸೇನಾ ಶಾಸಕ ಮುರ್ಜಿ ಪಟೇಲ್ ಅವರು ನೀಡಿದ ದೂರಿನ ಮೇರೆಗೆ ಮುಂಬೈನ ಖಾರ್ ಪೊಲೀಸ್ ಠಾಣೆಯಲ್ಲಿ ಕಾಮ್ರಾ ವಿರುದ್ಧ ಪ್ರಕರಣ ದಾಖಲಾಗಿದೆ. ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ಕಾಮ್ರಾಗೆ ಎರಡು ಸಲ ಸಮನ್ಸ್ ನೀಡಿದ್ದಾರೆ.

ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ ನ್ಯಾಯಮೂರ್ತಿ ಸುಂದರ್ ಮೋಹನ್ ಅವರು, ಎರಡನೇ ಪ್ರತಿವಾದಿಗೆ (ಖಾರ್ ಠಾಣೆಯ ಪೊಲೀಸರು) ನೋಟಿಸ್ ಜಾರಿಗೊಳಿಸಿ ಮುಂದಿನ ವಿಚಾರಣೆಯನ್ನು ಏ. 7ಕ್ಕೆ ನಿಗದಿಪಡಿಸಿದರು.

‘ನಾನು 2021ರಲ್ಲೇ ಮುಂಬೈನಿಂದ ತಮಿಳುನಾಡಿಗೆ ವಾಸ ಬದಲಿಸಿದ್ದು, ಅಂದಿನಿಂದ ಈ ರಾಜ್ಯದ ನಿವಾಸಿ ಆಗಿದ್ದೇನೆ. ಮುಂಬೈ ಪೊಲೀಸರಿಂದ ಬಂಧನಕ್ಕೆ ಒಳಗಾಗುವ ಭೀತಿಯಲ್ಲಿದ್ದೇನೆ’ ಎಂದು ಹೇಳಿ ಕಾಮ್ರಾ ಅವರು ಹೈಕೋರ್ಟ್ ಮೊರೆ ಹೋಗಿದ್ದರು.

‘ಪಾಕ್‌ನ ಮತಾಂಧ ಮನಸ್ಥಿತಿ ಬದಲಿಸಲಾಗದು’

ನವದೆಹಲಿ (ಪಿಟಿಐ): ನೆರೆಯ ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳಲ್ಲಿ ಅಲ್ಪಸಂಖ್ಯಾತರ ಮೇಲಿನ ದಾಳಿಗಳಿಗೆ ಸಂಬಂಧಿಸಿದಂತೆ ಶುಕ್ರವಾರ ಕಳವಳ ವ್ಯಕ್ತಪಡಿಸಿದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ‘ಪಕ್ಕದ ದೇಶಗಳ ಮತಾಂಧ ಮತ್ತು ಧರ್ಮಾಂಧ ಮನಸ್ಥಿತಿಯನ್ನು ಬದಲಿಸಲು ಸಾಧ್ಯವಿಲ್ಲ’ ಎಂದು ಹೇಳಿದರು.

ಲೋಕಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡಿದ ಅವರು, ’ಈ ದೇಶಗಳಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದಾಳಿಗಳನ್ನು ಭಾರತವು ನಿರಂತರವಾಗಿ ಗಮನಿಸುತ್ತಿದೆ‘ ಎಂದು ತಿಳಿಸಿದರು.

‘ಪಾಕಿಸ್ತಾನದಲ್ಲಿ ಫೆಬ್ರುವರಿಯಲ್ಲಿ 10 ಬಾರಿ ಹಿಂದೂಗಳ ಮೇಲೆ ದಾಳಿಗಳು ನಡೆದಿವೆ. ಈ ಪೈಕಿ ಏಳು ಪ್ರಕರಣಗಳು ಅಪಹರಣ ಮತ್ತು ಬಲವಂತದ ಮತಾಂತರಕ್ಕೆ ಸಂಬಂಧಿಸಿದ್ದಾಗಿದ್ದರೆ, ಎರಡು ಪ್ರಕರಣಗಳು ಅಪಹರಣ ಕುರಿತಾಗಿವೆ. ಹೋಳಿ ಆಚರಿಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೊಲೀಸರು ಕ್ರಮ ಕೈಗೊಂಡಿದ್ದು ಮತ್ತೊಂದು ಘಟನೆಯಾಗಿದೆ‘ ಎಂದು ಅವರು ವಿವರಿಸಿದರು.

ಸಿಖ್ ಸಮುದಾಯದ ಸದಸ್ಯರ ವಿರುದ್ಧದ ದೌರ್ಜನ್ಯ ಕುರಿತ ಮೂರು ಪ್ರಕರಣಗಳಿವೆ. ಅಹ್ಮದೀಯ ಸಮುದಾಯದ ಇಬ್ಬರ ವಿರುದ್ಧ ಮತ್ತು ಕ್ರಿಶ್ಚಿಯನ್ ಸಮುದಾಯದ ಒಬ್ಬರ ವಿರುದ್ಧ ದೌರ್ಜನ್ಯ ನಡೆದಿದೆ. ಕ್ರಿಶ್ಚಿಯನ್ ವ್ಯಕ್ತಿ ವಿರುದ್ಧ ಧರ್ಮನಿಂದನೆಯ ಆರೋಪ ಹೊರಿಸಲಾಗಿದೆ ಎಂದು ಅವರು ಹೇಳಿದರು.

ಈ ರೀತಿಯ ಪ್ರಕರಣಗಳನ್ನು ಭಾರತ ಅಂತರ-ರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಪ್ರಸ್ತಾಪಿಸಲಿದೆ ಎಂದು ವಿವರಿಸಿದರು.

2024ರಲ್ಲಿ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲಿನ ದಾಳಿಗೆ ಸಂಬಂಧಿಸಿದಂತೆ 2,400 ಘಟನೆಗಳು ನಡೆದಿವೆ. 2025ರಲ್ಲಿ ಇಲ್ಲಿಯವರೆಗೆ 72 ಘಟನೆಗಳು ನಡೆದಿವೆ ಎಂದು ಅವರು ಮಾಹಿತಿ ನೀಡಿದರು.

7ನೇ ತರಗತಿ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರಪ್ರದೇಶದ ಬರೇಲಿ ನಗರ ರೈಲು ನಿಲ್ದಾಣದಲ್ಲಿ ಏಳನೇ ತರಗತಿ ವಿದ್ಯಾರ್ಥಿನಿ ಮೇಲೆ ಅತ್ಯಾಚಾರವೆಸಗಿದ ಪ್ರಕರಣ ಗುರುವಾರ ರಾತ್ರಿ ನಡೆದಿದೆ.

ಎಟಾ ಜಿಲ್ಲೆಯ ನಿವಾಸಿಯಾದ ಸಂತ್ರಸ್ತೆ ತಮ್ಮ ತಂದೆ-ತಾಯಿ ಜೊತೆಗೆ ಉತ್ತರಾಖಂಡ ರಾಜ್ಯದಲ್ಲಿರುವ ಪೂರ್ಣಗಿರಿ ದೇವಸ್ಥಾನಕ್ಕೆ ಭೇಟಿ ನೀಡಿ ಮನೆಗೆ ಹಿಂತಿರುಗುವ ವೇಳೆ ಈ ಘಟನೆ ನಡೆದಿದೆ.



ಪ್ರತಿಭಟನೆ... ಪಂಜಾಬ್‌ನ ಪಟಿಯಾಲಾದ ಮಿನಿ ಸೆಕ್ರೆಟರಿಯೇಟ್‌ನಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಎದುರು ವಿವಿಧ ರೈತ ಸಂಘಟನೆಗಳ ಸದಸ್ಯರು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಶುಕ್ರವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಆಕ್ಸ್‌ಫರ್ಡ್ ವಿ.ವಿ: ಮಮತಾ ಭಾಷಣಕ್ಕೆ ಅಡ್ಡಿ



ಮಮತಾ ಬ್ಯಾನರ್ಜಿ

ಲಂಡನ್ (ಪಿಟಿಐ): ಇಂಗ್ಲೆಂಡ್‌ನ ಪ್ರತಿಷ್ಠಿತ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಕಾಲೇಜಿನಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಗುರುವಾರ ಭಾಷಣ ಮಾಡುವಾಗ, ಚುನಾವಣಾ ಹಿಂಸಾಚಾರ ಮತ್ತು ಆರ್‌.ಜಿ.ಕರ್ ವೈದ್ಯಕೀಯ ಕಾಲೇಜಿನಲ್ಲಿನ ಅತ್ಯಾಚಾರ ಪ್ರಕರಣ ವಿರೋಧಿ ಭಿತ್ತಿಪತ್ರ ಪ್ರದರ್ಶಿಸಿ ಗುಂಪೊಂದು ಅವರ ಭಾಷಣಕ್ಕೆ ಅಡ್ಡಿಪಡಿಸಿದ ಘಟನೆ ನಡೆದಿದೆ.

ಬ್ರಿಟನ್‌ನಲ್ಲಿರುವ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಪ್ರತಿಭಟನೆಯ ದೃಶ್ಯವನ್ನು ಸಾಮಾಜಿಕ ಜಾಲತಾಣದಲ್ಲಿನ ತನ್ನ ಖಾತೆಯಲ್ಲಿ ಹಂಚಿಕೊಂಡಿದೆ.

ಆಕ್ಸ್‌ಫರ್ಡ್ ವಿವಿಯ ಕೆಲಾಗ್ ಕಾಲೇಜಿನಲ್ಲಿ ಮಮತಾ ಬ್ಯಾನರ್ಜಿ ಅವರು ‘ಸಾಮಾಜಿಕ ಬೆಳವಣಿಗೆ– ಪಶ್ಚಿಮ ಬಂಗಾಳದಲ್ಲಿ ಬಾಲಕಿಯರು ಮತ್ತು ಮಹಿಳಾ ಸಬಲೀಕರಣ’ ವಿಷಯದ ಕುರಿತು ಮಾತನಾಡುತ್ತಿದ್ದಾಗ ಸಭಿಕರೊಬ್ಬರು, ಸಿಂಗೂರ್‌ನಿಂದ ಟಾಟಾ ನ್ಯಾನೊ ಘಟಕ ಸ್ಥಳಾಂತರಿಸಿದ್ದನ್ನು ನೆನಪಿಸಿದರು.

ಇದಕ್ಕೆಪ್ರತಿಕ್ರಿಯಿಸಿದಮಮತಾ,‘ಟಾಟಾಕಂಪನಿ ವಾಪಸ್ ಬಂದು ಖಡಗ್‌ಪುರ್ ಮತ್ತು ರಾಜಾರ್ ಹಾಟ್‌ನಲ್ಲಿ ಕೈಗಾರಿಕೆ ಸ್ಥಾಪಿಸಿದೆ. ಆರ್‌.ಜಿ.ಕರ್ ಪ್ರಕರಣ ನ್ಯಾಯಾಂಗದ ವ್ಯಾಪ್ತಿಯಲ್ಲಿದೆ. ಕೇಂದ್ರ ಸರ್ಕಾರದ ಸಂಸ್ಥೆ ತನಿಖೆ ನಡೆಸುತ್ತಿದೆ’ ಎಂದರು.

ಚುನಾವಣಾ ಹಿಂಸಾಚಾರ ಕುರಿತ ಪ್ರಶ್ನೆಗೆ, ‘ಈ ವೇದಿಕೆಯಲ್ಲಿ ರಾಜಕಾರಣ ಮಾಡಬೇಡಿ, ನೀವು ರಾಜ್ಯಕ್ಕೆ ಬಂದು ನಿಮ್ಮ ಪಕ್ಷವನ್ನು (ಸಿಪಿಎಂ) ಕಟುವಾಗಿ ಪ್ರಶ್ನಿಸಿ’ ಎಂದ ಮಮತಾ, ತಾವು ಗಾಯಗೊಂಡಿದ್ದ ಫೋಟೊವೊಂದನ್ನು ತೋರಿಸಿ ‘ನನ್ನ ಕೊಲೆಗೆ ಯತ್ನ ನಡೆದಿತ್ತು’ ಎಂದರು. ಸಭಿಕರ ಸಾಲಿನಲ್ಲಿ ಹಿಂದೆ ಕುಳಿತಿದ್ದ ಕೆಲವರು ತಕ್ಷಣ ಎದ್ದು ನಿಂತು, ಭಿತ್ತಿಪತ್ರ ಪ್ರದರ್ಶಿಸಿ ಘೋಷಣೆ ಕೂಗಿದರು. ಈ ಗದ್ದಲದ ನಡುವೆಯೂ ಅರ್ಧ ಗಂಟೆಗೂ ಹೆಚ್ಚು ಕಾಲ ಭಾಷಣ ಮಾಡಿದರು.

‘ಡಲ್ಲೇವಾಲ್ ಅಪ್ಪಟ ರೈತ ನಾಯಕ’

ನವದೆಹಲಿ (ಪಿಟಿಐ): ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರೈತ ನಾಯಕ ಜಗಜಿತ್ ಸಿಂಗ್ ಡಲ್ಲೇವಾಲ್ ಅವರು ನಾಲ್ಕು ತಿಂಗಳುಗಳಿಂದ ನಡೆಸುತ್ತಿದ್ದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ಅಂತ್ಯಗೊಳಿಸಿದ್ದಾರೆ ಎಂದು ಸುಪ್ರೀಂ ಕೋರ್ಟ್‌ಗೆ ಪಂಜಾಬ್ ಸರ್ಕಾರವು ಶುಕ್ರವಾರ ತಿಳಿಸಿದೆ.

ಈ ಸಂದರ್ಭದಲ್ಲಿ ರೈತರ ವಿವಿಧ ಬೇಡಿಕೆಗಳಿಗಾಗಿ ನಾಲ್ಕು ತಿಂಗಳಿನಿಂದ ನಿರಶನ ಕೈಗೊಂಡ ಜಗಜಿತ್ ಸಿಂಗ್ ಡಲ್ಲೇವಾಲ್ ಅವರು ಯಾವುದೇ ರಾಜಕೀಯ ಕಾರ್ಯಸೂಚಿ ಹೊಂದಿಲ್ಲದ ಅಪ್ಪಟ ರೈತ ನಾಯಕ ಎಂದು ಸುಪ್ರೀಂ ಕೋರ್ಟ್ ಬಣ್ಣಿಸಿದೆ.

ಈ ಸಂಬಂಧ ಶುಕ್ರವಾರ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್‌.ಕೋಟಿಶ್ವರ್ ಸಿಂಗ್ ಅವರು ವಿಚಾರಣೆ ನಡೆಸಿದರು. ಈ ಸಂದರ್ಭದಲ್ಲಿ ಪಂಜಾಬ್ ವಕೀಲ (ಎ.ಜಿ) ಗುರ್ಮಿಂದರ್ ಸಿಂಗ್, ಶಂಭು ಮತ್ತು ಖನೌರಿ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರನ್ನು ಚದುರಿಸಲಾಗಿದೆ. ಎಲ್ಲ ರಸ್ತೆಗಳು ಮತ್ತು ಹೆದ್ದಾರಿಗಳನ್ನು ವಾಹನಗಳ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಲ್ಲೇವಾಲ್ ಅವರನ್ನು ಕೊಂಡಾಡಿದ ಸುಪ್ರೀಂ ಕೋರ್ಟ್, ‘ಯಾವುದೇ ರಾಜಕೀಯ ಉದ್ದೇಶವಿಲ್ಲದೆ ಕೃಷಿಕ ಸಮಾಜ ಎದುರಿಸುತ್ತಿರುವ ನಿಜವಾದ ಸಮಸ್ಯೆಗಳ ಪರವಾಗಿ ಧ್ವನಿ ಎತ್ತಿದ ಪ್ರಾಮಾಣಿಕ ರೈತ ನಾಯಕ. ನಾವೇನು ದಂತ ಗೋಪುರದಲ್ಲಿ ಕುಳಿತಿಲ್ಲ. ನಮಗೆ ಎಲ್ಲ ವಿಚಾರವೂ ಗೊತ್ತಾಗುತ್ತದೆ’ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.



ನ್ಯಾಯಾಂಗ ನಿಂದನೆ ಅರ್ಜಿ ತಿರಸ್ಕರಿಸಿದ ‘ಸುಪ್ರೀಂ’: ಶಂಭು ಮತ್ತು ಖನೌರಿ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರನ್ನು ಇದೇ ವರ್ಷದ ಮಾರ್ಚ್ 19-20ರಂದು ಬಲವಂತವಾಗಿ ಹೊರದಬ್ಬಿದ ಸಂಬಂಧ ಪಂಜಾಬ್ ಸರ್ಕಾರದ ವಿರುದ್ಧ ದಾಖಲಾದ ಅರ್ಜಿಯನ್ನು ನ್ಯಾಯಾಂಗ ನಿಂದನೆ ಎಂದು ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಇದರಿಂದ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಸರ್ಕಾರ ನಿರಾಳವಾಗಿದೆ.

‘ಹೆದ್ದಾರಿಗಳನ್ನು ಸಂಚಾರಕ್ಕೆ ಮುಕ್ತಗೊಳಿಸುವಂತೆ ನಾವು ಅವರಿಗೆ (ಪಂಜಾಬ್ ಮತ್ತು ಹರಿಯಾಣ) ಹೇಳುತ್ತಲೇ ಇದ್ದೇವೆ. ಹೆದ್ದಾರಿಗಳನ್ನು ಶಾಶ್ವತವಾಗಿ ಮುಚ್ಚಲಾಗದು. ಹೀಗಾಗಿ, ಪಂಜಾಬ್ ಸರ್ಕಾರದ ವಿರುದ್ಧದ ನ್ಯಾಯಾಂಗ ನಿಂದನೆ ಅರ್ಜಿಯನ್ನು ಪರಿಗಣಿಸಲಾಗದು’ ಎಂದು ಅರ್ಜಿದಾರ ಸೆಹಾಜ್‌ಪ್ರೀತ್ ಸಿಂಗ್ ಅವರಿಗೆ ಸುಪ್ರೀಂ ಕೋರ್ಟ್ ಹೇಳಿತು.

ರಾಣಾ ಸಂಗಾ ಅವಹೇಳನ; ಕ್ಷಮೆಯಾಚನೆಗೆ ಬಿಜೆಪಿ ಪಟ್ಟು

ರಾಜ್ಯಸಭೆ ಕಲಾಪದಲ್ಲಿ ಗದ್ದಲ

ನವದೆಹಲಿ (ಪಿಟಿಐ): ರಜಪೂತ ದೊರೆ ರಾಣಾ ಸಂಗಾ ಕುರಿತಾಗಿ ಸಮಾಜವಾದಿ ಪಕ್ಷದ ಸಂಸದ ರಾಮ್‌ಜಿ ಲಾಲ್ ಸುಮನ್ ಅವರು ಆಕ್ಷೇಪಾರ್ಹ ಹೇಳಿಕೆ ನೀಡಿದ್ದು, ಬೇಷರತ್ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿ ಬಿಜೆಪಿ ಸಂಸದರು ಶುಕ್ರವಾರ ರಾಜ್ಯಸಭೆಯಲ್ಲಿ ಧರಣಿ ನಡೆಸಿದರು.

ಬೆಳಿಗ್ಗೆ ಸದನ ಆರಂಭವಾಗುತ್ತಿದ್ದಂತೆಯೇ, ಬಿಜೆಪಿ ಸಂಸದರು ಎದ್ದುನಿಂತು ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್, ಕೇಂದ್ರ ಸಚಿವರು, ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು ಈ ವಿಷಯದ ಬಗ್ಗೆ ಚರ್ಚಿಸಿದರು. ಆದರೆ, ಬಿಜೆಪಿ ಸದಸ್ಯರು ಕ್ಷಮೆಗೆ ಪಟ್ಟುಹಿಡಿದು ಘೋಷಣೆ ಕೂಗಿದರು.

ಧನಕರ್ ಅವರೇ ಪದೇ ಪದೇ ಮನವಿ ಮಾಡಿದರೂ ಕೂಡ ಘೋಷಣೆ ಕೂಗುವುದು ನಿಲ್ಲಲಿಲ್ಲ. ಹೀಗಾಗಿ, ಅಧಿವೇಶನವನ್ನು ಮಧ್ಯಾಹ್ನ 12ಕ್ಕೆ ಮುಂದೂಡಿದರು.

‘ರಾಣಾ ಸಂಗಾ ಅವರು ಶೌರ್ಯ, ದೇಶಭಕ್ತಿ ಹಾಗೂ ರಾಷ್ಟ್ರೀಯತೆಯ ಸಂಕೇತವಾಗಿದ್ದಾರೆ. ಸುಮನ್ ಅವರ ಹೇಳಿಕೆಯು ಅವಹೇಳನಕಾರಿಯಾಗಿದ್ದು, ನೋವುಂಟು ಮಾಡಿದೆ’ ಎಂದು ಧನ್‌ಕರ್ ತಿಳಿಸಿದರು.


ಸಚಿವ ಕಿರಣ್ ರಿಜಿಜು ಕೂಡ ಹೇಳಿಕೆಯನ್ನು ಕಟುವಾಗಿ ಖಂಡಿಸಿದರು. ಮಧ್ಯಪ್ರವೇಶಿಸಿ ಮಾತನಾಡಿದ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ‘ದೇಶಕ್ಕಾಗಿ ಮಡಿದ ಪ್ರತಿಯೊಬ್ಬ ದೇಶಭಕ್ತರನ್ನು ಗೌರವಿಸುತ್ತೇವೆ. ಇದೇ ಕಾರಣಕ್ಕೆ, ಕಾನೂನನ್ನು ಕೈಗೆತ್ತಿಕೊಂಡು, ಆಸ್ತಿಪಾಸ್ತಿ ನಷ್ಟ ಉಂಟುಮಾಡುವ ಮೂಲಕ ದಲಿತ ವಿರೋಧಿ ಕ್ರಮಗಳನ್ನು ಸಹಿಸಲು ಸಾಧ್ಯವಿಲ್ಲ’ ಎಂದರು.

ಇದಕ್ಕೆ ತಿರುಗೇಟು ನೀಡಿದ ಬಿಜೆಪಿ ಸಂಸದ ರಾಧಾ ಮೋಹನ ದಾಸ್,‘ ಈ ವಿಷಯದಲ್ಲಿ ದಲಿತ ರಾಜಕೀಯ ಬೆರೆಸುತ್ತಿದ್ದು, ಕಾಂಗ್ರೆಸ್ ಪಕ್ಷವು ದೇಶದ್ರೋಹಿಗಳನ್ನು ಬೆಂಬಲಿಸುತ್ತಿದೆ’ ಎಂದು ಆರೋಪಿಸಿದರು.

ಮಧ್ಯಾಹ್ನದ ನಂತರ ಮತ್ತೆ ಸುಮನ್ ಮಾತನಾಡಲು ಎದ್ದುನಿಂತ ವೇಳೆ ಆಡಳಿತ ಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗಿದರು. ಈ ವೇಳೆ ಖರ್ಗೆ, ಡಿಎಂಕೆಯ ತಿರುಚ್ಚಿಶಿವ, ಆಮ್‌ಆದ್ಮಿ ಪಕ್ಷದ ಸಂಜಯ್ ಸಿಂಗ್ ಬೆಂಬಲಕ್ಕೆ ಧಾವಿಸಿದರು. ಮಾತನಾಡಲು ಅವಕಾಶ ಸಿಗದ ಕಾರಣ, ಪ್ರತಿಪಕ್ಷದ ಸದಸ್ಯರು ಸದನದಿಂದ ಹೊರನಡೆದರು.

ಮನೆ ಮೇಲೆ ದಾಳಿ: ಸಂಗಾ ಅವರನ್ನು ‘ದೇಶದ್ರೋಹಿ’ ಎಂದು ಕರೆದ ಸುಮನ್ ಅವರ ಹೇಳಿಕೆಯನ್ನು ಖಂಡಿಸಿ ಕರ್ಣಿಸೇನಾದ ಕಾರ್ಯಕರ್ತರು ಆಗ್ರಾದಲ್ಲಿರುವ ಸಂಸದ ಸುಮನ್ ಮನೆಯನ್ನು ಜಖಂಗೊಳಿಸಿದರು.

ಸಭೆಯಿಂದ ಹೊರನಡೆದ ಧನಕರ್



ಜಗದೀಪ್ ಧನ್‌ಕರ್

ಶುಕ್ರವಾರ ಇಲ್ಲಿ ನಡೆದ ಕಲಾಪ ಸಲಹಾ ಸಮಿತಿ (ಬಿಎಸಿ) ಸಭೆಯಲ್ಲಿ ವಿರೋಧ ಪಕ್ಷಗಳು ಸದಸ್ಯರ ‘ಅನುಚಿತ ನಡವಳಿಕೆ’ ಪ್ರದರ್ಶಿಸಿದ್ದರಿಂದ ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್ ಅವರು ಸಭೆಯಿಂದ ಹೊರನಡೆದರು.

ಮೂಲಗಳ ಪ್ರಕಾರ, ಮತದಾರರ ಗುರುತಿನ ಚೀಟಿಗಳು ಒಂದೇ ರೀತಿಯ ಸಂಖ್ಯೆಗಳನ್ನು ಹೊಂದಿರುವ ವಿಷಯದ ಕುರಿತು ಕೂಡಲೇ ಚರ್ಚೆಯಾಗಬೇಕು ಎಂದು ವಿರೋಧ ಪಕ್ಷಗಳ ಸದಸ್ಯರು ಒತ್ತಾಯಿಸಿದರು. ಈ ವಿಚಾರದಲ್ಲಿ ಸಂಸದರ ನಡುವಿನ ಭಿನ್ನಾಭಿಪ್ರಾಯ ಬಗೆಹರಿಯದ ಕಾರಣ, ಧನಕರ್ ಅವರು ಅರ್ಧದಿಂದಲೇ ಸಭೆಯಿಂದ ಹೊರನಡೆದರು’ ಎಂದು ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

‘ಎಐ ಆ್ಯಪ್‌ಗಳೆಲ್ಲ ಸುರಕ್ಷಿತ ಎನ್ನಲಾಗದು’

ನವದೆಹಲಿ (ಪಿಟಿಐ): ‘ಕೃತಕ ಬುದ್ಧಿಮತ್ತೆಯ (ಎಐ) ಅಪ್ಲಿಕೇಷನ್‌ಗಳೆಲ್ಲ ಸುರಕ್ಷಿತವಾಗಿವೆ ಎಂದು ಹೇಳಲಾಗದು. ಹೀಗಾಗಿ ಬಳಕೆದಾರರು ಎಚ್ಚರದಿಂದ ಇರಬೇಕು’ ಎಂದು ಭಾರತದ ಸೈಬರ್ ಭದ್ರತಾ ಸಂಸ್ಥೆ ಸಲಹೆ ನೀಡಿದೆ.

ರಾಷ್ಟ್ರೀಯ ತಂತ್ರಜ್ಞಾನ ವಿಭಾಗವಾದ ಭಾರತದ ಕಂಪ್ಯೂಟರ್ ತುರ್ತು ಪ್ರತಿಕ್ರಿಯೆ ತಂಡವು (ಸಿಇಆರ್‌ಟಿ), ‘ಎಐಗಳ ವಿನ್ಯಾಸ, ತರಬೇತಿ ಮತ್ತು ಸಂವಹನ ಕಾರ್ಯ ವಿಧಾನಗಳಲ್ಲಿ ದುರ್ಬಲತೆಗಳಿವೆ’ ಎಂದು ಹೇಳಿದೆ.

ಎಐ ಸರ್ವವ್ಯಾಪಿ ಆಗುತ್ತಿದ್ದಂತೆ ಸಂಬಂಧಿತ ಅಪಾಯಗಳೂ ಹೆಚ್ಚಾಗುತ್ತಿವೆ. ದತ್ತಾಂಶ ಸಂಸ್ಕರಣ, ಯಂತ್ರ ಕಲಿಕೆ ಮಾದರಿಗಳಲ್ಲಿನ ನ್ಯೂನತೆಗಳ ಲಾಭವನ್ನು ಪಡೆಯಲು ಎಐ ಆ್ಯಪ್‌ಗಳನ್ನು ಗುರಿಯಾಗಿಸಿ ದಾಳಿಗಳು ನಡೆಯುತ್ತಿವೆ ಎಂದರು.

ಈ ರೀತಿಯ ದಾಳಿಗಳು ವಿವಿಧ ಕ್ಷೇತ್ರಗಳಲ್ಲಿ ಎಐ ಆ್ಯಪ್‌ಗಳ ಸುರಕ್ಷತೆ, ವಿಶ್ವಾಸಾರ್ಹತೆಗೆ ಗಮನಾರ್ಹ ಬೆದರಿಕೆಗಳನ್ನು ಒಡ್ಡುತ್ತವೆ ಎಂದು ಸಲಹಾ ಸಂಸ್ಥೆ ತಿಳಿಸಿದೆ.

ನ್ಯಾ. ವರ್ಮಾ ಪ್ರಕರಣ ಎಫ್‌ಐಆರ್‌ಗೆ ಕೋರಿದ್ದ ಅರ್ಜಿ ತಿರಸ್ಕಾರ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ನ್ಯಾಯಮೂರ್ತಿ ಯಶವಂತ ವರ್ಮಾ ಅವರ ಮನೆಯಲ್ಲಿ ಸುಟ್ಟಿರುವ ಸ್ಥಿತಿಯಲ್ಲಿ ನಗದು ಕಂತೆ ಪತ್ತೆಯಾದ ಪ್ರಕರಣ ಕುರಿತಂತೆ ಎಫ್‌ಐಆರ್ ದಾಖಲಿಸಲು ಪೊಲೀಸರಿಗೆ ಸೂಚಿಸಬೇಕು ಎಂದು ಕೋರಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತಿರಸ್ಕರಿಸಿತು.

‘ಘಟನೆ ಕುರಿತು ಆಂತರಿಕ ತನಿಖೆ ನಡೆಯುತ್ತಿದೆ. ಇದು, ಮುಗಿದ ಬಳಿಕ ಮುಂದಿನ ಕ್ರಮಗಳನ್ನು ಕುರಿತು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರ ಎದುರು ಹಲವು ಆಯ್ಕೆಗಳಿವೆ. ಹೀಗಾಗಿ, ಈ ಅರ್ಜಿ ಸಂದರ್ಭೋಚಿತವಲ್ಲ’ ಎಂದು ಸುಪ್ರೀಂ ಕೋರ್ಟ್‌ನ ಪೀಠ ಅಭಿಪ್ರಾಯಪಟ್ಟಿತು.

ವಕೀಲ ಮ್ಯಾಥ್ಯೂ ಜೆ. ನೆಡುಂಪರ ಮತ್ತು ಇತರ ಮೂವರು ಈ ಸಂಬಂಧ ಸಲ್ಲಿಸಿದ್ದ ಅರ್ಜಿಗಳನ್ನು ವಿಚಾರಣೆಗೆ ಪರಿಗಣಿಸಲು ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಮತ್ತು ಉಜ್ಜಲ್ ಭುಯಾನ್ ಅವರಿದ್ದ ನ್ಯಾಯಪೀಠವು ನಿರಾಕರಿಸಿತು.

‘ಅರ್ಜಿಯನ್ನು ನೀವು ಜನ ಸಾಮಾನ್ಯರ ಪ್ರತಿನಿಧಿಯಾಗಿ ಸಲ್ಲಿಸಿದ್ದರೆ, ಕೋರ್ಟ್‌ನಲ್ಲಿ ಹಾಲಿ ಇರುವ ವ್ಯವಸ್ಥೆಯನ್ನು ಕುರಿತು ಜನ ಸಾಮಾನ್ಯರಲ್ಲಿ ಜಾಗೃತಿಯನ್ನು ಮೂಡಿಸಲು ಯತ್ನಿಸಿ’ ಎಂದು ಪೀಠ ಅರ್ಜಿದಾರ ವಕೀಲರಿಗೆ ಸಲಹೆ ಮಾಡಿತು.

ನ್ಯಾ.ವರ್ಮಾ ವರ್ಗಾವಣೆಗೆ ಕೇಂದ್ರ ಅನುಮೋದನೆ

ನವದೆಹಲಿ: ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ವರ್ಗಾವಣೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದ್ದು, ಅವರಿಗೆ ನ್ಯಾಯಾಂಗದ ಯಾವುದೇ ಜವಾಬ್ದಾರಿ ವಹಿಸದಂತೆ ಅಲಹಾಬಾದ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಶುಕ್ರವಾರ ಸೂಚಿಸಿದ್ದಾರೆ.

‘ನ್ಯಾ.ವರ್ಮಾ ಅವರು ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಳ್ಳುವಾಗ ಅವರಿಗೆ ನ್ಯಾಯಾಂಗದ ಯಾವುದೇ ಕಾರ್ಯವನ್ನು ವಹಿಸದಂತೆ ಅಲಹಾಬಾದ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಸದ್ಯಕ್ಕೆ ಸೂಚಿಸಲಾಗಿದೆ’ ಎಂದು ಸುಪ್ರೀಂ ಕೋರ್ಟ್ ಪ್ರಕಟಣೆಯಲ್ಲಿ ತಿಳಿಸಿದೆ.

ದಂಪತಿ ಖಾತೆಯಲ್ಲಿ ₹15 ಕೋಟಿ: ಇ.ಡಿ. ದಾಳಿ

ನವದೆಹಲಿ (ಪಿಟಿಐ): ರೂಪದರ್ಶಿಯರ ಅಶ್ಲೀಲ ಚಿತ್ರಗಳನ್ನು ವೆಬ್ ಕ್ಯಾಮೆರಾದಲ್ಲಿ ಚಿತ್ರೀಕರಿಸಿ, ಅದನ್ನು ಅಶ್ಲೀಲ ವೆಬ್‌ಸೈಟ್‌ಗಳಲ್ಲಿ ಪೋಸ್ಟ್ ಮಾಡಲು ವಿದೇಶಿ ಕಂಪನಿಗೆ ಮಾರಾಟ ಮಾಡಿದ ದಂಪತಿಗೆ ಸೇರಿದ ನೋಯ್ಡಾದ ಕಂಪನಿ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶುಕ್ರವಾರ ದಾಳಿ ನಡೆಸಿದ್ದಾರೆ. ಈ ವೇಳೆ ದಂಪತಿ ಬ್ಯಾಂಕ್ ಖಾತೆಯಲ್ಲಿ ₹15 ಕೋಟಿ ಪತ್ತೆಯಾಗಿದೆ.


‘ಸುಬ್ದಿಗಿ ವೆಂಚರ್ಸ್ ಪ್ರೈವೆಟ್ ಲಿಮಿಟೆಡ್’ ಹೆಸರಿನ ಕಂಪನಿ ಹೊಂದಿದ್ದ ದಂಪತಿ ತಮ್ಮ ಮನೆಯಲ್ಲಿ ದೃಶ್ಯಗಳನ್ನು ಚಿತ್ರೀಕರಿಸುತ್ತಿದ್ದರು. ದಾಳಿ ಸಂದರ್ಭದಲ್ಲಿ ರೂಪದರ್ಶಿಯರು ಮನೆಯಲ್ಲಿ ಇದ್ದರು. ಈ ದಂಪತಿಯು ತಮ್ಮ ಮನೆಯಲ್ಲೇ ವೆಬ್‌ಕ್ಯಾಮ್ ಸ್ಟುಡಿಯೊ ಹೊಂದಿದ್ದರು. ಸಿಪ್ರಸ್ ಮೂಲದ ಟೆಕ್ನಿಯಸ್ ಲಿಮಿಟೆಡ್ ಕಂಪನಿಯು ಇವರಿಂದ ವಿಡಿಯೊಗಳನ್ನು ಖರೀದಿಸುತ್ತಿತ್ತು. ಇವುಗಳು ಎಕ್ಸ್‌ಹ್ಯಾಮಸ್ಟರ್ ಹಾಗೂ ಸ್ಟ್ರಿಪ್ ಚಾಟ್‌ನಲ್ಲಿ ಪ್ರಸಾರ ಮಾಡಲಾಗುತ್ತಿತ್ತು ಎಂದು ಮೂಲಗಳು ಹೇಳಿವೆ.





ಷೇರುಪೇಟೆ ವಹಿವಾಟು

191



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,591
ಇಂದಿನ ಅಂತ್ಯ	23,519
▼	72
ದಿನದ ಕನಿಷ್ಠ	23,450

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹495
12 ಕ್ಕೆ	₹65
ಮೈಸೂರು	
100ಕ್ಕೆ	₹495

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹270-688
ದ್ವಿತಳಿ (ಬಿ.ವಿ)	₹350-733

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹201.50
ಆರ್‌ಎಸ್‌ಎಸ್-5	₹195.50
ಗುಡ್ ಲಾಟ್	₹187

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹27400
ಎಸಿ	₹16660
ಆರ್‌ಪಿ	₹22500
ಆರ್‌ಸಿ	₹12630

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹9200-15000
ಬೆಂಗಳೂರು	₹16500-18000
ಹುಣಸೂರು	₹10500-10500

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

5ನೇ ವರ್ಷದ ಪುಣ್ಯ ಸ್ಮರಣೆ



ಹೆಚ್.ಎಂ. ಸುಮಿತ್ರಮ್ಮ
ದಿವಂಗತ ಎಂ. ಬಿ. ಸಿದ್ದಪ್ಪನವರ ಧರ್ಮ ಪತ್ನಿ, ನಿವೃತ್ತ ಮುಖ್ಯ ಇಂಜಿನಿಯರ್, ಪಿಡಬ್ಲ್ಯೂಡಿ.
ನೀವು ನಮ್ಮನ್ನು ಅಗಲಿ ಇಂದಿಗೆ ಐದು ವರ್ಷ ಕಳೆದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ.
ನಿಮ್ಮನ್ನು ಸದಾ ಸ್ಮರಿಸುವ
ಮಕ್ಕಳು, ಕುಟುಂಬವರ್ಗ ಮತ್ತು ಸ್ನೇಹಿತರು

30ನೇ ವರ್ಷದ ಪುಣ್ಯತಿಥಿ



ಶ್ರೀಮತಿ ಎಂ.ಸರೋಜಮ್ಮ
(ದಿವಂಗತ ಶ್ರೀ ಎನ್. ಸೋಮಣ್ಣ ಮಾಂಬಳ್ಳಿ ಇವರ ಪತ್ನಿ)
ನಾವು ಪ್ರತಿದಿನ ಮೌನವಾಗಿ ನಿಮ್ಮನ್ನು ನೆನಪಿಸಿಕೊಳ್ಳುತ್ತೇವೆ. ನೀವು ತೋರಿಸಿಕೊಟ್ಟ ಆದರ್ಶಗಳನ್ನು ಪಾಲಿಸಲು ನಮ್ಮನ್ನು ನಾವು ಸಮರ್ಪಿಸಿಕೊಳ್ಳುತ್ತೇವೆ.
ಸದಾ ನಿಮ್ಮ ನೆನಪಿನಲ್ಲಿರುವ
ಕುಟುಂಬ ವರ್ಗದವರು

ಸಣ್ಣ ಉಳಿತಾಯದ ಬಡ್ಡಿದರ ಯಥಾಸ್ಥಿತಿ

ನವದೆಹಲಿ (ಪಿಟಿಐ): ಏಪ್ರಿಲ್ 1ರಿಂದ ಆರಂಭವಾಗುವ 2025–26ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿದರದಲ್ಲಿ ಕೇಂದ್ರ ಸರ್ಕಾರವು ಯಥಾಸ್ಥಿತಿ ಕಾಯ್ದುಕೊಂಡಿದೆ.

2024–25ನೇ ಆರ್ಥಿಕ ವರ್ಷದ ನಾಲ್ಕು ತ್ರೈಮಾಸಿಕಗಳಲ್ಲಿ ಬಡ್ಡಿದರ ಬದಲಾವಣೆ ಮಾಡಿರಲಿಲ್ಲ. ಮಾರ್ಚ್ ತ್ರೈಮಾಸಿಕದಲ್ಲಿದ್ದ ಬಡ್ಡಿದರವು ಜೂನ್ ತ್ರೈಮಾಸಿಕಕ್ಕೂ ಅನ್ವಯವಾಗಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಶುಕ್ರವಾರ ತಿಳಿಸಿದೆ.

ಪ್ರಸ್ತುತ ಸುಕನ್ಯಾ ಸಮೃದ್ಧಿ ಶೇ 8.2, ಪಿಪಿಎಫ್ ಶೇ 7.1, ಅಂಚೆ ಕಚೇರಿಯ ಉಳಿತಾಯ ಠೇವಣಿ ಶೇ 4, ಕಿಸಾನ್ ವಿಕಾಸ್ ಪತ್ರ ಶೇ 7.5, ಎನ್‌ಎಸ್‌ಸಿ ಶೇ 7.7 ಹಾಗೂ ಮಾಸಿಕ ಉಳಿತಾಯ ಯೋಜನೆಗೆ ಶೇ 7.4ರಷ್ಟು ಬಡ್ಡಿದರ ನಿಗದಿಪಡಿಸಲಾಗಿದೆ.

ಈರುಳ್ಳಿ

(ಕ್ವಿಂಟಲ್‌ಗೆ)

ದಪ್ಪ	₹1,200-2,200
ಮಧ್ಯಮ	₹800-1,200
ಸಣ್ಣ	₹400-800

ಡೊನಾಲ್ಡ್ ಟ್ರಂಪ್ ಬರೆ ತಪ್ಪಿಸಿಕೊಳ್ಳಲು ಕೇಂದ್ರ ಸರ್ಕಾರ ಕಸರತ್ತು

ಕೃಷಿ ಉತ್ಪನ್ನಕ್ಕೆ ಸುಂಕ ಕಡಿತ?

ನವದೆಹಲಿ (ರಾಯಿಟರ್ಸ್): ಕೃಷಿ ಉತ್ಪನ್ನಗಳ ಮೇಲಿನ ಸುಂಕ ಕಡಿತಗೊಳಿಸುವ ಬಗ್ಗೆ ಅಮೆರಿಕದ ವ್ಯಾಪಾರ ಪ್ರತಿನಿಧಿಗಳಿಗೆ ಭಾರತವು ಭರವಸೆ ನೀಡಿದೆ.

ಭಾರತದ ಸರಕುಗಳ ಮೇಲೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿರುವ ಪ್ರತಿ ಸುಂಕ ನೀತಿಯು ಮುಂದಿನ ವಾರದಿಂದ ಜಾರಿಗೆ ಬರಲಿದೆ. ಇದರಿಂದ ತಪ್ಪಿಸಿಕೊಳ್ಳಲು ಕೇಂದ್ರ ಸರ್ಕಾರ ಕಾರ್ಯತಂತ್ರ ಹೆಣೆಯುತ್ತಿದೆ. ಇದರ ಭಾಗವಾಗಿ ಸುಂಕ ಕಡಿತದತ್ತ ಹೆಜ್ಜೆ ಇಟ್ಟಿದೆ ಎಂದು ಹೇಳಲಾಗಿದೆ.

ಚೀನಾ, ಕೆನಡಾ ಮತ್ತು ಯೂರೋಪ್ ಒಕ್ಕೂಟವು ಅಮೆರಿಕದ ಸುಂಕ ನೀತಿಗೆ ಮಣಿದಿಲ್ಲ. ಆದರೆ, ಕೇಂದ್ರವು ಟ್ರಂಪ್ ಆಡಳಿತವನ್ನು ಸಮಾಧಾನಪಡಿಸಲು ಕಸರತ್ತು ನಡೆಸಿದೆ. ಹಾಗಾಗಿ, ಅಲ್ಲಿಂದ ಆಮದಾಗುವ ಅರ್ಧಕ್ಕಿಂತ ಹೆಚ್ಚು (ಶೇ 55) ಸರಕುಗಳ ಮೇಲಿನ ಸುಂಕ ಕಡಿತಗೊಳಿಸಲು ಮುಂದಾಗಿದೆ. ಇದರ ಒಟ್ಟು ಮೌಲ್ಯ ₹1.96 ಲಕ್ಷ ಕೋಟಿ ಆಗಲಿದೆ ಎಂದು ಅಂದಾಜಿಸಲಾಗಿದೆ.



ಸುಂಕ ಎಷ್ಟು?

ಕೇಂದ್ರ ಸರ್ಕಾರವು ಕಳೆದ ತಿಂಗಳು ಅಮೆರಿಕದಿಂದ ಆಮದು ಮಾಡಿಕೊಳ್ಳುವ ಬಾರ್ಬನ್ ವಿಸ್ಕಿ ಮೇಲಿನ ಸುಂಕವನ್ನು ಶೇ 150ರಿಂದ ಶೇ 100ಕ್ಕೆ ತಗ್ಗಿಸಿದೆ.

ಕ್ರ್ಯಾನ್‌ಬೆರಿ, ಬಾದಾಮಿ, ವಾಲ್‌ನಟ್ ಮೇಲೆ ಶೇ 30ರಿಂದ ಶೇ 100ರಷ್ಟು ಹಾಗೂ ಚೆನ್ನಂಗಿ ಬೇಳೆ ಮೇಲೆ ಶೇ 10ರಷ್ಟು ಸುಂಕ ವಿಧಿಸಲಾಗುತ್ತಿದೆ.

ಉಭಯ ರಾಷ್ಟ್ರಗಳ ನಡುವಿನ ವ್ಯಾಪಾರ ಒಪ್ಪಂದದ ಭಾಗವಾಗಿ ದಕ್ಷಿಣ ಮತ್ತು ಸೆಂಟ್ರಲ್ ಏಷ್ಯಾದ ಪ್ರತಿನಿಧಿಯಾದ ಬ್ರೆಂಡನ್ ಲಿಂಚ್ ಜೊತೆಗೆ ಕೇಂದ್ರ ಕೈಗಾರಿಕಾ ಮತ್ತು ವಾಣಿಜ್ಯ ಸಚಿವಾಲಯವು ಸರಣಿ ಸಭೆಗಳನ್ನು ನಡೆಸಿದೆ. ಈ ವೇಳೆ ಬಾದಾಮಿ, ವಾಲ್‌ನಟ್, ಕ್ರ್ಯಾನ್‌ಬೆರಿ, ಪಿಸ್ತಾ ಮತ್ತು ಚೆನ್ನಂಗಿ ಬೇಳೆ ಮೇಲಿನ ಸುಂಕ ಕಡಿತಗೊಳಿಸುವುದಾಗಿ ಮನವರಿಕೆ ಮಾಡಿಕೊಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅಂಕಿ ಅಂಶಗಳು

₹47,000 ಕೋಟಿ
2024ರಲ್ಲಿ ಅಮೆರಿಕಕ್ಕೆ ಭಾರತ ರಫ್ತು ಮಾಡಿರುವ ಕೃಷಿ ಉತ್ಪನ್ನಗಳ ಮೌಲ್ಯ

₹17,000 ಕೋಟಿ
ಅಮೆರಿಕದಿಂದ ದೇಶಕ್ಕೆ ಆಮದಾಗಿರುವ ಕೃಷಿ ಉತ್ಪನ್ನಗಳ ಮೌಲ್ಯ

55%
ಅಮೆರಿಕದ ಸರಕುಗಳ ಮೇಲಿನ ಸುಂಕ ಕಡಿತಕ್ಕೆ ಭಾರತ ನಿರ್ಧಾರ

ಕೃಷಿ ವಲಯ ಸೇರಿ ಇತರೆ ವಲಯಗಳ ಸರಕುಗಳ ಮೇಲೆ ವಿಧಿಸುತ್ತಿರುವ ಸುಂಕವನ್ನೂ ಕಡಿತಗೊಳಿಸುವ ಬಗ್ಗೆ ಸರ್ಕಾರ ಒಲವು ತೋರಿದೆ ಎಂದು ಹೇಳಿವೆ.

ಆದರೆ, ಈ ಬಗ್ಗೆ ಕೇಂದ್ರ ವ್ಯಾಪಾರ ಸಚಿವಾಲಯವು ಯಾವುದೇ ಅಧಿಕೃತ ಮಾಹಿತಿಯನ್ನು ಬಹಿರಂಗಪಡಿಸಿಲ್ಲ.

ಹೈನು ಉತ್ಪನ್ನ, ಅಕ್ಕಿ, ಗೋಧಿ, ಮೆಕ್ಕೆಜೋಳದ ಮೇಲೆ ಕಡಿಮೆ ಪ್ರಮಾಣದಲ್ಲಿ ಸುಂಕ ನಿಗದಿಪಡಿಸಿರುವ ಬಗ್ಗೆ ಸರ್ಕಾರಿ ವಲಯದಲ್ಲಿಯೇ ಅಸಮಾಧಾನವಿದೆ ಎಂದು ಮೂಲಗಳು ಹೇಳಿವೆ. ಮತ್ತೊಂದೆಡೆ ಅಮೆರಿಕಕ್ಕೆ ಅಕ್ಕಿ ಪೂರೈಸುವ ಬದಲಿಗೆ ದಾಳಿಂಬೆ ಹಾಗೂ ದ್ರಾಕ್ಷಿಗೆ ಅಲ್ಲಿನ ಮಾರುಕಟ್ಟೆಯಲ್ಲಿ ಅವಕಾಶ ಕಲ್ಪಿಸಿಕೊಳ್ಳುವ ಬಗ್ಗೆ ಎದುರು ನೋಡುತ್ತಿದೆ ಎಂದು ಹೇಳಿವೆ.

ಈ ಕುರಿತು ಎರಡು ರಾಷ್ಟ್ರಗಳ ನಡುವೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಚೌಕಟ್ಟು ರೂಪಿಸಲಾಗುತ್ತದೆ. ಸೆಪ್ಟೆಂಬರ್ ವೇಳೆಗೆ ಇದು ಅಂತಿಮಗೊಳ್ಳುವ ನಿರೀಕ್ಷೆಯಿದೆ ಎಂದು ತಿಳಿಸಿವೆ.

ಸುದ್ದಿ 2 ನಿಮಿಷ

ರಸಗೊಬ್ಬರ ಸಬ್ಸಿಡಿಗೆ ಅಸ್ತು

ನವದೆಹಲಿ (ಪಿಟಿಐ): ಮುಂಗಾರು ಅವಧಿಗೆ ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಪಿ ಆ್ಯಂಡ್ ಕೆ (ಫಾಸ್ಪೆಟಿಕ್ ಮತ್ತು ಪೊಟ್ಯಾಸಿಕ್) ರಸಗೊಬ್ಬರಕ್ಕೆ ಸಬ್ಸಿಡಿ ಮುಂದುವರಿಸಲು ₹37,216 ಕೋಟಿ ಅನುದಾನಕ್ಕೆ ಕೇಂದ್ರ ಸಚಿವ ಸಂಪುಟ ಸಭೆಯು ಶುಕ್ರವಾರ ಒಪ್ಪಿಗೆ ನೀಡಿದೆ.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಂವಹನ ಸಚಿವ ಅಶ್ವಿನಿ ವೈಷ್ಣವ್, ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರಸಗೊಬ್ಬರದ ಸಹಾಯಧನ ವಿಸ್ತರಣೆಗೆ (ಏಪ್ರಿಲ್ 1ರಿಂದ ಸೆಪ್ಟೆಂಬರ್ 30ರ ವರೆಗೆ) ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದರು.

ಇದರಿಂದ ರೈತರಿಗೆ ಕೈಗೆಟಕುವ ಬೆಲೆಯಲ್ಲಿ ರಸಗೊಬ್ಬರ ದೊರೆಯಲಿದೆ. ಡಿಎಪಿ ರಸಗೊಬ್ಬರದ ಬೆಲೆ ಏರಿಕೆ ಮಾಡುವುದಿಲ್ಲ ಎಂದರು.



ಎಲೆಕ್ಟ್ರಾನಿಕ್ ಬಿಡಿಭಾಗಗಳ ತಯಾರಿಕಾ ಯೋಜನೆ: ಎಲೆಕ್ಟ್ರಾನಿಕ್ ಬಿಡಿಭಾಗಗಳ ತಯಾರಿಕೆಯಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ₹22,919 ಕೋಟಿ ಯೋಜನೆಗೆ ಸಭೆಯು ಅನುಮೋದನೆ ನೀಡಿದೆ.

ಈ ವಲಯದಲ್ಲಿ ಜಾಗತಿಕ ಮತ್ತು ದೇಶೀಯವಾಗಿ ಬಂಡವಾಳ ಆಕರ್ಷಿಸಲು ಎಲೆಕ್ಟ್ರಾನಿಕ್ ಬಿಡಿಭಾಗಗಳ ತಯಾರಿಕಾ ಯೋಜನೆಗೆ ಒಪ್ಪಿಗೆ ನೀಡಿದೆ.

'ಈ ಯೋಜನೆಯಡಿ ₹59,350 ಕೋಟಿ ಬಂಡವಾಳವನ್ನು ನಿರೀಕ್ಷಿಸಲಾಗಿದೆ. ಜೊತೆಗೆ, 91,600 ಉದ್ಯೋಗಗಳು ಸೃಷ್ಟಿಯಾಗಲಿವೆ' ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಎಟಿಎಂ ವಹಿವಾಟು ಶುಲ್ಕ ಹೆಚ್ಚಳ

ಮುಂಬೈ (ಪಿಟಿಐ): ಗ್ರಾಹಕರು ಎಟಿಎಂನಿಂದ ಹಣ ಪಡೆಯುವುದಕ್ಕೆ ನಿಗದಿಪಡಿಸಿರುವ ಶುಲ್ಕ ಹೆಚ್ಚಿಸಲು ಬ್ಯಾಂಕ್‌ಗಳಿಗೆ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಅನುಮತಿ ನೀಡಿದೆ.

ಹಾಗಾಗಿ, ಮಾಸಿಕ ಉಚಿತ ವಹಿವಾಟು ಮಿತಿ ದಾಟಿದರೆ ಪ್ರತಿ ವಹಿವಾಟಿಗೆ ಗ್ರಾಹಕರು ₹2 ಹೆಚ್ಚುವರಿ ಶುಲ್ಕ ಭರಿಸಬೇಕಿದೆ. ಮೇ 1ರಿಂದ ಈ ನಿಯಮ ಜಾರಿಗೆ ಬರಲಿದೆ.

ಗ್ರಾಹಕರು ತಮ್ಮ ಖಾತೆ ಇರುವ ಬ್ಯಾಂಕ್‌ನ ಎಟಿಎಂಗಳಿಂದ ಪ್ರತಿ ತಿಂಗಳು ಉಚಿತವಾಗಿ 5 ಬಾರಿ ವಹಿವಾಟು (ಹಣಕಾಸು–ಹಣಕಾಸುಯೇತರ) ನಡೆಸಬಹುದಾಗಿದೆ. ಇತರೆ ಬ್ಯಾಂಕ್‌ನ ಎಟಿಎಂಗಳಲ್ಲಾದರೆ ಮಹಾನಗರ ವ್ಯಾಪ್ತಿಯಲ್ಲಿ ಮೂರು ಮತ್ತು ಇತರೆ ಪ್ರದೇಶಗಳಲ್ಲಿ 5 ವಹಿವಾಟುಗಳನ್ನು ಉಚಿತವಾಗಿ ನಡೆಸಬಹುದಾಗಿದೆ.

ಪ್ರಸ್ತುತ ಪ್ರತಿ ವಹಿವಾಟಿಗೆ ₹21 ಶುಲ್ಕ ವಿಧಿಸಲಾಗುತ್ತಿದ್ದು, ಇದನ್ನು ಗರಿಷ್ಠ ₹23ಕ್ಕೆ ಹೆಚ್ಚಳವಾಗಲಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ		ಶಿರಸಿ			
ಅಪಿ	50600-51000	ರಾಶಿ	50100-50500	ಚಾಲಿ	33108-39211
ಬೆಟ್ಟೆ	24600-25000	ಬೆಟ್ಟೆ	28621-39639	ಕೆಂಪುಗೋಟು	10999-24021
ಕೆಂಪುಗೋಟು	19600-20000	ಬಿಳಿಗೋಟು	15299-30299	ರಾಶಿ	40299-48899

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1300 (1285)
ಸೂರ್ಯಕಾಂತಿ (ರಿಫೈನ್ಡ್)	₹1410 (1390)
ಪಾಮೋಲಿನ್	₹1350 (1340)

ವಿನಿಮಯ ದರ

$ ಡಾಲರ್	85.50
£ ಪೌಂಡ್	110.68
€ ಯುರೊ	92.07
¥ ಯೆನ್ (100ಕ್ಕೆ)	57

ಮುಂಬೈ ಧಾರಣೆ

ಶೇಂಗಾ

28-03-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7500-7600
ದಪ್ಪ ಗುಜರಾತ್(ಹೊಸ)	7800-7900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1390 (1390)
ಒಂದು ವಾರದ ಡೆಲಿವರಿ	1385 (1385)
ಪಾಮ್ ವಾರದ ಡೆಲಿವರಿ	1348 (1338)
ಸೂರ್ಯಕಾಂತಿ ಎಣ್ಣೆ ಕಚ್ಚಾ	1355 (1340)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹88,650 (87,850)
ಬೆಳ್ಳಿ ಕೆ.ಜಿ ₹1,00,600 (99,650)
ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಚಿನ್ನದ ದರ ಶೇ 35ರಷ್ಟು ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನದ ಧಾರಣೆ ಏರಿಕೆಯಾಗಿದ್ದು, ಹೊಸ ದಾಖಲೆ ಬರೆದಿದೆ.



10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹1,100 ಏರಿಕೆಯಾಗಿದ್ದು, ₹92,150 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ದರವು ಇಷ್ಟೇ ಪ್ರಮಾಣದಲ್ಲಿ ಹೆಚ್ಚಳವಾಗಿದ್ದು, ₹91,700 ಆಗಿದೆ.

ಕಳೆದ ವರ್ಷದ ಏಪ್ರಿಲ್ 1ರಂದು 10 ಗ್ರಾಂ ಬೆಲೆಯು ₹68,420 ಇತ್ತು. 2024–25ನೇ ಆರ್ಥಿಕ ವರ್ಷದಲ್ಲಿ ₹23,730 (ಶೇ 35ರಷ್ಟು) ಏರಿಕೆಯಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ನೀತಿಯಿಂದಾಗಿ ಜಾಗತಿಕ ಮಟ್ಟದಲ್ಲಿ ವ್ಯಾಪಾರ ಸಮರ ಶುರುವಾಗುವ ಆತಂಕವಿದೆ. ಇದು ಆರ್ಥಿಕತೆ ಬೆಳವಣಿಗೆ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಈ ಅನಿಶ್ಚಿತ ಸ್ಥಿತಿಯಿಂದಾಗಿ ಹಳದಿ ಲೋಹದ ಬೆಲೆಯು ಏರಿಕೆ ಪಥದಲ್ಲಿ ಸಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ತಿಳಿಸಿದ್ದಾರೆ.

ಪ್ರತಿ ಕೆ.ಜಿ. ಬೆಳ್ಳಿ ಬೆಲೆಯು ₹1,300 ಏರಿಕೆಯಾಗಿದ್ದು, ₹1.03 ಲಕ್ಷ ಆಗಿದೆ.

ಜಾಗತಿಕ ಮಾರುಕಟ್ಟೆಯಲ್ಲೂ ಹಳದಿ ಲೋಹದ ಬೆಲೆಯು ಏರಿಕೆಯಾಗಿದೆ. ಒಂದು ಔನ್ಸ್‌ಗೆ (28.34 ಗ್ರಾಂ) 3,086 ಡಾಲರ್ (₹2.63 ಲಕ್ಷ) ಆಗಿದೆ.

ಅಮೆರಿಕವು ಆಟೊಮೊಬೈಲ್ ಆಮದು ಸುಂಕ ಹೆಚ್ಚಿಸಿದೆ. ಅಲ್ಲದೆ, ಕೆನಡಾ ಮತ್ತು ಯುರೋಪಿಯನ್ ಒಕ್ಕೂಟದ ಮೇಲೆ ಮತ್ತಷ್ಟು ಸುಂಕದ ಬರೆ ಎಳೆಯುವುದಾಗಿ ಟ್ರಂಪ್ ಪ್ರಕಟಿಸಿದ್ದಾರೆ. ಇದರಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನದತ್ತ ಹೊರಳಿದ್ದಾರೆ ಎಂದು ಕೋಟಕ್ ಸೆಕ್ಯುರಿಟೀಸ್ ಹೇಳಿದೆ.

ಜಾಗತಿಕ ಮಟ್ಟದಲ್ಲಿನ ಅನಿಶ್ಚಿತ ಸ್ಥಿತಿಯಿಂದಾಗಿ ಮಾರ್ಚ್ ತಿಂಗಳಿನಲ್ಲಿ ಚಿನ್ನದ ಬೆಲೆಯು ಶೇ 8.2ರಷ್ಟು ಹೆಚ್ಚಳವಾಗಿದೆ. ಕೇಂದ್ರೀಯ ಬ್ಯಾಂಕ್‌ಗಳ ಚಿನ್ನದ ಮೀಸಲು ಸಂಗ್ರಹ ಹೆಚ್ಚಳವು ಇದರ ಮೇಲೆ ಪರಿಣಾಮ ಬೀರಿದೆ ಎಂದು ಹೇಳಿದೆ.

ಸುಂಕ ನೀತಿಯು ಆರ್ಥಿಕತೆ ಬೆಳವಣಿಗೆಯ ಕುಂಠಿತಕ್ಕೆ ಕಾರಣವಾಗುವ ಸಾಧ್ಯತೆಯಿದೆ. ಇದರಿಂದ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆಯು ಏರಿಳಿತವಾಗಲಿದೆ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

42 ಮೆಟ್ರೊ ರೈಲು ಬೋಗಿ ಪೂರೈಕೆ: ಬಿಇಎಂಎಲ್‌ಗೆ ಗುತ್ತಿಗೆ

ಬೆಂಗಳೂರು (ಪಿಟಿಐ): ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್ ಲಿಮಿಟೆಡ್‌ಗೆ (ಬಿಎಂಆರ್‌ಸಿಎಲ್) 42 ಹೊಸ ಬೋಗಿಗಳನ್ನು ಪೂರೈಸಲು ಹೆಚ್ಚುವರಿಯಾಗಿ ₹405 ಕೋಟಿ ಮೊತ್ತದ ಆರ್ಡರ್ ಪಡೆಯಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ಶುಕ್ರವಾರ ತಿಳಿಸಿದೆ.



ಬಿಎಂಆರ್‌ಸಿಎಲ್‌ಗೆ ಒಟ್ಟು 7 ರೈಲುಗಳನ್ನು ಪೂರೈಸಲಾಗುವುದು. ಪ್ರತಿ ರೈಲು 6 ಬೋಗಿಗಳನ್ನು ಒಳಗೊಂಡಿದ್ದು, ಮೆಟ್ರೊ ರೈಲುಗಳ ಸಂಖ್ಯೆ 53ರಿಂದ 60ಕ್ಕೆ ಹೆಚ್ಚಲಿದೆ ಎಂದು ಹೇಳಿದೆ.

ಬೋಗಿಗಳ ವಿನ್ಯಾಸವನ್ನು ಬಿಇಎಂಎಲ್‌ನ ಎಂಜಿನಿಯರಿಂಗ್ ವಿಭಾಗವೇ ಮಾಡಲಿದೆ ಎಂದು ತಿಳಿಸಿದೆ.

ಕಡಲೆಕಾಳು ಆಮದಿಗೆ ಶೇ 10ರಷ್ಟು ಸುಂಕ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಕಡಲೆಕಾಳು ಆಮದು ಮೇಲೆ ಶೇ 10ರಷ್ಟು ಸುಂಕ ಹೆಚ್ಚಿಸಿದ್ದು, ಏಪ್ರಿಲ್ 1ರಿಂದ ಜಾರಿಗೆ ಬರಲಿದೆ.

ದೇಶೀಯ ಮಾರುಕಟ್ಟೆಯಲ್ಲಿ ಪೂರೈಕೆ ಹೆಚ್ಚಿಸಲು ಮತ್ತು ದರ ನಿಯಂತ್ರಣದ ಉದ್ದೇಶದಿಂದ ಕಳೆದ ವರ್ಷದ ಮೇ ತಿಂಗಳಲ್ಲಿ ಸರ್ಕಾರವು ಆಮದು ಸುಂಕವನ್ನು ರದ್ದುಪಡಿಸಿತ್ತು. ಮಾರ್ಚ್ 31ಕ್ಕೆ ಈ ಆದೇಶ ಮುಕ್ತಾಯವಾಗಲಿದೆ. ಹಾಗಾಗಿ, ಸುಂಕ ಹೆಚ್ಚಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

2024–25ನೇ ಸಾಲಿನಡಿ 11.5 ದಶಲಕ್ಷ ಟನ್ ಕಡಲೆಕಾಳು ಉತ್ಪಾದನೆಯ ಗುರಿ ಹೊಂದಲಾಗಿದೆ. ಕಳೆದ ಆರ್ಥಿಕ ವರ್ಷದಲ್ಲಿ 11 ದಶಲಕ್ಷ ಟನ್ ಉತ್ಪಾದನೆಯಾಗಿತ್ತು.

3 ದಿನ ಸಿಜಿಎಸ್‌ಟಿ ಕಚೇರಿ ಕಾರ್ಯ ನಿರ್ವಹಣೆ

ನವದೆಹಲಿ (ಪಿಟಿಐ): ತೆರಿಗೆದಾರರಿಗೆ ಅನುಕೂಲ ಕಲ್ಪಿಸಲು ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಸಿಜಿಎಸ್‌ಟಿ) ಕಚೇರಿಗಳು ಮಾರ್ಚ್ 29ರಿಂದ 31ರ ವರೆಗೆ ಕಾರ್ಯ ನಿರ್ವಹಿಸಲಿವೆ ಎಂದು ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ (ಸಿಬಿಐಸಿ) ಶುಕ್ರವಾರ ತಿಳಿಸಿದೆ.

2024–25ನೇ ಆರ್ಥಿಕ ವರ್ಷವು ಮಾರ್ಚ್ 31ಕ್ಕೆ ಮುಕ್ತಾಯವಾಗಲಿದೆ. ಹೀಗಾಗಿ, ಈ ಮೂರು ದಿನಗಳಂದು ಕಚೇರಿಗಳು ಸಾಮಾನ್ಯ ದಿನದಂತೆ ಕಾರ್ಯ ನಿರ್ವಹಿಸಬೇಕು ಎಂದು ನಿರ್ದೇಶನ ನೀಡಿದೆ.

ಕರ್ನಾಟಕದಲ್ಲೂ ಕಾರ್ಯ ನಿರ್ವಹಣೆ: ಕರ್ನಾಟಕದಲ್ಲೂ ಮಾರ್ಚ್ 30 ಮತ್ತು 31ರಂದು ವಾಣಿಜ್ಯ ತೆರಿಗೆ ಇಲಾಖೆಯ ಕಚೇರಿಗಳು ಕಾರ್ಯ ನಿರ್ವಹಿಸಲಿವೆ ಎಂದು ಇಲಾಖೆಯ ಆಯುಕ್ತ ವಿಪುಲ್ ಬನ್ಸಾಲ್ ತಿಳಿಸಿದ್ದಾರೆ.





ಮ್ಯಾನ್ಮಾರ್‌ನ ಮ್ಯಾಂಡಲೆಯಲ್ಲಿ ಭೂಕಂಪದಿಂದ ಕುಸಿದ ಕಟ್ಟಡದಿಂದ ಜನರು ಸುರಕ್ಷಿತ ಸ್ಥಳದತ್ತ ಧಾವಿಸಿದರು—ಎಎಫ್‌ಪಿ ಚಿತ್ರ (ಎಡಚಿತ್ರ). ಬ್ಯಾಂಕಾಕ್‌ನಲ್ಲಿರುವ ಹಾವೇರಿ ಯುವಕರು

ಭೂಕಂಪ: ಮ್ಯಾನ್ಮಾರ್, ಥಾಯ್ಲೆಂಡ್ ತತ್ತರ

7.7ರಷ್ಟು ತೀವ್ರತೆ • ನೂರಾರು ಮಂದಿ ಸಾವು • ನೆಲಕ್ಕುರುಳಿದ ಗಗನಚುಂಬಿ ಕಟ್ಟಡ

ಬ್ಯಾಂಕಾಕ್ (ಎ.ಪಿ): ಥಾಯ್ಲೆಂಡ್ ಮತ್ತು ಮ್ಯಾನ್ಮಾರ್ ದೇಶಗಳಲ್ಲಿ ಶುಕ್ರವಾರ 7.7ರಷ್ಟು ತೀವ್ರತೆಯ ಭೂಕಂಪನ ಸಂಭವಿಸಿದ್ದು, ಜನರನ್ನು ಬೆಚ್ಚಿಬೀಳಿಸಿದೆ.

ಪ್ರಾಥಮಿಕ ಮಾಹಿತಿ ಪ್ರಕಾರ, ಮ್ಯಾನ್ಮಾರ್‌ನಲ್ಲಿ ನೂರಾರು ಮಂದಿ ಮೃತ ಪಟ್ಟಿದ್ದಾರೆ. ಹಲವರು ನಾಪತ್ತೆಯಾಗಿದ್ದಾರೆ.

ಥಾಯ್ಲೆಂಡ್ ರಾಜಧಾನಿ ಬ್ಯಾಂಕಾಕ್‌ನಲ್ಲಿ ನಿರ್ಮಾಣ ಹಂತದ 30 ಮಹಡಿಯ ಸರ್ಕಾರಿ ಕಟ್ಟಡ ನೆಲಕ್ಕುರುಳಿದೆ. ಮ್ಯಾನ್ಮಾರ್ ಸರ್ಕಾರವು 6 ವಲಯಗಳಲ್ಲಿ ತುರ್ತುಸ್ಥಿತಿ ಘೋಷಿಸಿದೆ. ಮ್ಯಾನ್ಮಾರ್‌ನ 2ನೇ ಅತಿದೊಡ್ಡ ನಗರವಾಗಿರುವ ಮ್ಯಾಂಡಲೆ ಭೂಕಂಪದ ಕೇಂದ್ರಬಿಂದುವಾಗಿದೆ.

ಅಮೆರಿಕದ ಭೂವಿಜ್ಞಾನ ಕೇಂದ್ರದ ಪ್ರಕಾರ, ಕೇಂದ್ರ ಬಿಂದುವಿನಲ್ಲಿ ಸುಮಾರು 10 ಕಿ.ಮೀ ಆಳದಲ್ಲಿ ಭೂಕಂಪನವಾಗಿದೆ. ಅದರ ತೀವ್ರತೆಯು ಕೇಂದ್ರಬಿಂದುವಿನಿಂದ 10 ಕಿ.ಮೀ ಪರಿಧಿಯಲ್ಲಿ ವ್ಯಕ್ತವಾಗಿದೆ ಎಂದು ಅಂದಾಜು ಮಾಡಿದೆ.

ಮೊದಲಿಗೆ 7.7 ತೀವ್ರತೆಯ ಭೂಕಂಪನವಾಗಿದ್ದು, 11 ನಿಮಿಷದ ತರುವಾಯ ಮತ್ತೆ 6.4 ತೀವ್ರತೆಯ ಭೂಕಂಪ ಸಂಭವಿಸಿರುವುದು ದಾಖಲಾಗಿದೆ. 7.7 ತೀವ್ರತೆಯು ಹೆಚ್ಚು ಪ್ರಬಲವಾದುದು ಎಂದು ಕೇಂದ್ರವು ವಿಶ್ಲೇಷಿಸಿದೆ.

ಭೂಕಂಪದ ಅನುಭವವಾದಂತೆ ಬ್ಯಾಂಕಾಕ್ ನಗರದಲ್ಲಿ ಎಚ್ಚರಿಕೆ ಗಂಟೆಯನ್ನು ಮೊಳಗಿಸಲಾಯಿತು. ಬ್ಯಾಂಕಾಕ್‌ನ ಒಟ್ಟು ಜನಸಂಖ್ಯೆ 1.7 ಕೋಟಿಗೂ ಹೆಚ್ಚಿದ್ದು, ಹೆಚ್ಚಿನವರು ಬಹುಮಹಡಿ ವಸತಿ ಸಂಕೀರ್ಣಗಳಲ್ಲಿಯೇ ವಾಸವಿದ್ದಾರೆ.

ಇತ್ತ, ಮ್ಯಾನ್ಮಾರ್‌ನಲ್ಲಿ ಸೇನಾ ಸರ್ಕಾರವು ರಾಜಧಾನಿ ನೈಪಿತಾವ್, ಮ್ಯಾಂಡಲೆ ಸೇರಿ ಆರು ವಲಯಗಳಲ್ಲಿ ತುರ್ತು ಸ್ಥಿತಿಯನ್ನು ಘೋಷಿಸಿದೆ. ನಾಗರಿಕ ಯುದ್ಧ ನಡೆದಿರುವ ದೇಶದಲ್ಲಿ ಹೇಗೆ ಬಾಧಿತ ಪ್ರದೇಶಗಳಿಗೆ ನೆರವಾಗಲಿದೆ ಎಂಬುದು ಸದ್ಯ ಸ್ಪಷ್ಟವಾಗಿಲ್ಲ.

'ಭೂಕಂಪ ಬಾಧಿತ ಪ್ರದೇಶಗಳಲ್ಲಿ ವಿದ್ಯುತ್ ತಂತಿಗಳು ಕಡಿತಗೊಂಡಿವೆ. ಇದು ರಕ್ಷಣಾ ಕಾರ್ಯಗಳಿಗೆ ಸವಾಲಾಗಿದೆ. ಪ್ರಾಥಮಿಕ ಮಾಹಿತಿ ಪ್ರಕಾರ, ಗಂಭೀರ ಸ್ವರೂಪದ ಪರಿಣಾಮ ಉಂಟಾಗಿದೆ' ಎಂದು ರೆಡ್‌ಕ್ರಾಸ್ ಪ್ರತಿಕ್ರಿಯಿಸಿದೆ.

ಕಟ್ಟಡದಡಿ ಸಿಲುಕಿದ ಜನ: ಬ್ಯಾಂಕಾಕ್‌ನಲ್ಲಿ ನಿರ್ಮಾಣಹಂತದಲ್ಲಿದ್ದ 30 ಮಹಡಿಯ ಗಗನಚುಂಬಿ ಕಟ್ಟಡ ನೆಲಕ್ಕುರುಳಿದೆ. ಹಿಂದೆಯೇ ದೊಡ್ಡ ಪ್ರಮಾಣದ ಹೊಗೆ ವಾತಾವರಣವನ್ನು ಆವರಿಸಿತು. ತಕ್ಷಣದ ಮಾಹಿತಿ ಪ್ರಕಾರ, ಒಬ್ಬ ಕಾರ್ಮಿಕ ಮೃತಪಟ್ಟಿದ್ದಾರೆ.

'ಕಟ್ಟಡದ ಅವಶೇಷಗಳ ಕೆಳಗಿದ್ದ ಎರಡು ಲಾರಿಗಳು ತೀವ್ರ ಜಖಂಗೊಂಡಿವೆ. ಅವಶೇಷಗಳಡಿ ಹಲವರು ಸಿಲುಕಿದ್ದು, ರಕ್ಷಿಸುವ ಕಾರ್ಯಾಚರಣೆ ನಡೆದಿದೆ' ಎಂದು ದೇಶದ ರಕ್ಷಣಾ ಸಚಿವರೂ ಆದ ಉಪಪ್ರಧಾನಿ ಫುಮ್‌ತಮ್ ವೆಚಾಯಾಚಿ ತಿಳಿಸಿದ್ದಾರೆ.

ಕಟ್ಟಡ ಕುಸಿದಂತೆಯೇ ವಾತಾವರಣವನ್ನು ದೊಡ್ಡಮಟ್ಟದ ಹೊಗೆ ಮತ್ತು ಬೂದಿ ಆವರಿಸಿತು. ಕಟ್ಟಡ ಕುಸಿಯುವ ಸೂಚನೆ ದೊರೆತಂತೆ ಆತಂಕಭರಿತ ಜನರು ದಿಕ್ಕಾಪಾಲಾಗಿ ಓಡಿದ್ದಾರೆ.

ಉಳಿದಂತೆ, ಬ್ಯಾಕಾಂಕ್‌ನ ವಿವಿಧೆಡೆ ಜನರನ್ನು ಬಹುಮಹಡಿ ಕಟ್ಟಡಗಳಿಂದ ಹೊರಗೆ ಬರಲು ಸೂಚಿಸಿದ್ದು, ಆದಷ್ಟು ಹೊರಗೆ ಬಯಲು ಪ್ರದೇಶದಲ್ಲಿ ಇರಬೇಕು. ಮುನ್ನೆಚ್ಚರಿಕೆ ವಹಿಸಬೇಕು ಎಂದು ಸೂಚಿಸಲಾಗಿದೆ.

ಹಾವೇರಿಯ ಐವರು ಸುರಕ್ಷಿತ

ಪ್ರಜಾವಾಣಿ ವಾರ್ತೆ

ಹಾವೇರಿ: ಬ್ಯಾಂಕಾಕ್‌ನಲ್ಲಿ ಭೂಕಂಪ ಸಂಭವಿಸಿದ್ದು, ಅಲ್ಲಿ ಪ್ರವಾಸದಲ್ಲಿರುವ ಹಾವೇರಿ ಜಿಲ್ಲೆಯ ಶಂಕರ ಪಾಟೀಲ ಸೇರಿ ಐವರು ಸುರಕ್ಷಿತವಾಗಿದ್ದಾರೆ.

ಬೆಂಗಳೂರಿನಿಂದ ಮಾರ್ಚ್ 23ರಂದು ಐವರು ಬ್ಯಾಂಕಾಕ್ ಪ್ರವಾಸಕ್ಕೆ ತೆರಳಿದ್ದಾರೆ. ಗುರುವಾರ ರಾತ್ರಿ ಬ್ಯಾಂಕಾಕ್‌ನಲ್ಲಿ ಉಳಿದು, ಶುಕ್ರವಾರ ಬೆಳಿಗ್ಗೆ 11ಕ್ಕೆ ಸಫಾರಿ ವಾರ್ಡ್ ಪ್ರದೇಶಕ್ಕೆ ಹೋದಾಗ ಭೂಕಂಪವಾಗಿದೆ.

'ಬ್ಯಾಂಕಾಕ್ ಪ್ರವಾಸದಲ್ಲಿರುವ ನಾವು ಸದ್ಯ ಸಫಾರಿ ವಾರ್ಡ್ ಬಳಿಯಿದ್ದೇವೆ. ಎಲ್ಲರೂ ಬೆಂಗಳೂರಿಗೆ ಬರಲು ಪ್ರಯತ್ನಿಸುತ್ತಿದ್ದೇವೆ. ವಿಮಾನಗಳ ವೇಳಾಪಟ್ಟಿ ಬದಲಾಗಿದ್ದು, ತಡವಾಗಿ ವಿಮಾನ ಬರಲಿದೆ ಎಂಬುದು ಗೊತ್ತಾಗಿದೆ' ಎಂದು ಯುವಕರು ಸ್ನೇಹಿತರಿಗೆ ತಿಳಿಸಿದ್ದಾರೆ.

ಕೋಲ್ಕತ್ತ, ಇಂಫಾಲ್‌ನಲ್ಲಿ ಕಂಪನದ ಅನುಭವ

ಕೋಲ್ಕತ್ತ (ಪಿಟಿಐ): ಥಾಯ್ಲೆಂಡ್‌ನ ಬ್ಯಾಂಕಾಕ್‌ನಲ್ಲಿ 7.7 ತೀವ್ರತೆಯ ಭೂಕಂಪ ಸಂಭವಿಸಿದ ಹಿಂದೆಯೇ, ದೇಶದ ಕೋಲ್ಕತ್ತ, ಇಂಫಾಲ್ ಮತ್ತು ಮೇಘಾಲಯದ ಪೂರ್ವ ಗಾರೊ ಜಿಲ್ಲೆಯ ಕೆಲವೆಡೆಯೂ ಭೂಕಂಪನದ ಅನುಭವವಾಗಿದೆ.

ಅಧಿಕೃತ ಮೂಲಗಳ ಪ್ರಕಾರ, ಎಲ್ಲಿಯೂ ಯಾವುದೇ ರೀತಿಯ ಹಾನಿ ಸಂಭವಿಸಿಲ್ಲ. ಮಣಿಪುರದಲ್ಲಿ ಹಳೆಯ ಕಟ್ಟಡಗಳು ಇರುವ ಥಾಂಗಲ್ ಬಜಾರ್ ವಲಯದಲ್ಲಿ ಭೂಕಂಪನದ ಅನುಭವವಾಗಿದೆ.

ಅಗತ್ಯ ನೆರವು: ಪ್ರಧಾನಿ ಮೋದಿ ಅಭಯ

ನವದೆಹಲಿ (ಪಿಟಿಐ): ಮ್ಯಾನ್ಮಾರ್, ಥಾಯ್ಲೆಂಡ್‌ನಲ್ಲಿ ತೀವ್ರ ಭೂಕಂಪ ಸಂಭವಿಸಿರುವುದಕ್ಕೆ ಕಳವಳ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ, 'ರಕ್ಷಣಾ ಕಾರ್ಯಗಳಿಗೆ ಎಲ್ಲ ನೆರವು ನೀಡಲಾಗುವುದು' ಎಂದು ಭರವಸೆ ನೀಡಿದ್ದಾರೆ. ಭೂಕಂಪದಿಂದ ಮೂಡಿರುವ ಪರಿಸ್ಥಿತಿ ಕುರಿತು ಆತಂಕವಿದೆ. ಎಲ್ಲ ಸುರಕ್ಷತೆ ಮತ್ತು ಆರೋಗ್ಯಕ್ಕಾಗಿ ಪ್ರಾರ್ಥಿಸುತ್ತೇವೆ. ಭಾರತ ಎಲ್ಲ ಅಗತ್ಯ ನೆರವು ಒದಗಿಸಲಿದೆ' ಎಂದು ಮೋದಿ 'ಎಕ್ಸ್' ಮೂಲಕ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಭೂಕಂಪನದ ಪರಿಣಾಮ ಥಾಯ್ಲೆಂಡ್‌ನ ರಾಜಧಾನಿ ಬ್ಯಾಂಕಾಕ್ ಸೇರಿ ವಿವಿಧ ನಗರಗಳಲ್ಲಿ ಉಂಟಾಗಿದೆ. ಬ್ಯಾಂಕಾಕ್‌ನಲ್ಲಿ ಮುಂದಿನ ವಾರ 'ಬಿಮ್‌ಸ್ಟೆಕ್' ಸದಸ್ಯ ರಾಷ್ಟ್ರಗಳ ಶೃಂಗಸಭೆ ಮುಂದಿನ ವಾರ ನಡೆಯಬೇಕಿತ್ತು.

'ಬಿಮ್‌ಸ್ಟೆಕ್' ಪ್ರಾದೇಶಿಕ ಶೃಂಗದಲ್ಲಿ ಭಾರತ, ಥಾಯ್ಲೆಂಡ್ ಹೊರತುಪಡಿಸಿ ಶ್ರೀಲಂಕಾ, ಬಾಂಗ್ಲಾದೇಶ, ಮ್ಯಾನ್ಮಾರ್, ನೇಪಾಳ ಮತ್ತು ಭೂತಾನ್ ಸದಸ್ಯ ರಾಷ್ಟ್ರಗಳಾಗಿವೆ.

ಬಾಂಗ್ಲಾದೇಶ, ಚೀನಾದಲ್ಲೂ ಕಂಪನ

ಢಾಕಾ/ಬೀಜಿಂಗ್ (ಪಿಟಿಐ): ಬಾಂಗ್ಲಾದೇಶ ಮತ್ತು ಚೀನಾದ ದಕ್ಷಿಣ ಭಾಗದಲ್ಲಿಯೂ ಭೂಕಂಪನದ ಅನುಭವವಾಗಿದೆ.

ಬಾಂಗ್ಲಾದೇಶದ ರಾಜಧಾನಿ ಢಾಕಾ ಮತ್ತು ಚಟ್ಟೋಗ್ರಾಮ್‌ನಲ್ಲಿಯೂ ಭೂಕಂಪನದ ಅನುಭವವಾಗಿದೆ.

'ಚೀನಾದಲ್ಲಿ ಯುನ್ನಾನ್ ಪ್ರಾಂತ್ಯದ ಕೆಲವೆಡೆ ಭೂಕಂಪದ ಅನುಭವವಾಗಿದೆ' ಎಂದು ಸರ್ಕಾರದ ಮಾಧ್ಯಮ ತಿಳಿಸಿದೆ.

'ಸಿಲಿಂಡರ್ ಪೂರೈಕೆಗೆ ಅಡ್ಡಿಯಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರಿಗೆ ಯಾವುದೇ ತೊಂದರೆಯಾಗದಂತೆ ನಿರಂತರವಾಗಿ ಅಡುಗೆ ಅನಿಲ ಸಿಲಿಂಡರ್ ಪೂರೈಸಲಾಗುವುದು ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಾದ ಐಒಸಿಎಲ್, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ತಿಳಿಸಿವೆ.

ದಕ್ಷಿಣ ಭಾಗದ ಎಲ್‌ಪಿಜಿ ಸಾರಿಗೆ ಮಾಲೀಕರ ಸಂಘದೊಟ್ಟಿಗೆ ಸಂಯೋಜಿತಗೊಂಡಿರುವ ಸಾಗಣೆದಾರರು ಮುಷ್ಕರ ನಡೆಸುತ್ತಿದ್ದಾರೆ. ಇದರಿಂದ ಪೂರೈಕೆಗೆ ತೊಂದರೆಯಾಗುವುದಿಲ್ಲ. ಕಂಪನಿಗಳಿಗೆ ಸೇರಿದ ಸ್ಥಾವರಗಳಲ್ಲಿ ಎಲ್‌ಪಿಜಿ ದಾಸ್ತಾನು ಸಾಕಷ್ಟಿದೆ. ವಿತರಕರು ಎಂದಿನಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿವೆ.

ಸರ್ಕಾರದ ಮಾರ್ಗಸೂಚಿ ಅನ್ವಯ ಪಾರದರ್ಶಕವಾಗಿ ಟೆಂಡರ್ ಕರಾರು ಸಿದ್ಧಪಡಿಸಲಾಗಿದೆ. ಸಾರ್ವಜನಿಕರ ಸುರಕ್ಷತೆಗಾಗಿ ಇದನ್ನು ಜಾರಿಗೆ ತರಲಾಗಿದೆ. ಹೊಸ ಟೆಂಡರ್ ನಿಯಮಗಳು ಎಲ್‌ಪಿಜಿ ಸಾಗಣೆಯ ಸುರಕ್ಷತೆ ಮತ್ತು ದಕ್ಷತೆ ಹೆಚ್ಚಿಸುತ್ತವೆ ಎಂದು ಹೇಳಿವೆ.

ಈ ಪ್ರಯತ್ನದ ಹೊರತಾಗಿಯೂ ಸಾಗಣೆದಾರರ ಒಂದು ವಿಭಾಗವು ಮುಷ್ಕರಕ್ಕೆ ಕರೆ ನೀಡಿದೆ. ಪ್ರಾಥಮಿಕವಾಗಿ ಸುರಕ್ಷತಾ ಕ್ರಮಗಳ ಉಲ್ಲಂಘನೆ ಮತ್ತು ಇತರೆ ವಿಷಯಗಳಿಗೆ ಸಂಬಂಧಿಸಿದ ದಂಡದ ಷರತ್ತು ಹಿಂಪಡೆಯುವಂತೆ ಒತ್ತಾಯಿಸುತ್ತಿದೆ ಎಂದು ತಿಳಿಸಿವೆ.

ಮುಷ್ಕರದಿಂದ ಸಾರ್ವಜನಿಕರಿಗೆ ಅನನುಕೂಲವಾಗಲಿದೆ. ಹಾಗಾಗಿ, ಮುಷ್ಕರ ಹಿಂಪಡೆಯಬೇಕು ಎಂದು ದಕ್ಷಿಣ ವಿಭಾಗದ ಮುಖ್ಯ ಪ್ರಧಾನ ವ್ಯವಸ್ಥಾಪಕರು ಕೋರಿದ್ದಾರೆ.

'ಸಹಕಾರ್ ಟ್ಯಾಕ್ಸಿ' ಸೇವೆಗೆ ಸಿದ್ಧತೆ

ನವದೆಹಲಿ (ಪಿಟಿಐ): ಓಲಾ, ಉಬರ್ ಮಾದರಿಯಲ್ಲೇ, ದೇಶದಾದ್ಯಂತ ಸಹಕಾರ ವ್ಯವಸ್ಥೆಯಡಿಯಲ್ಲಿ 'ಸಹಕಾರ್ ಟ್ಯಾಕ್ಸಿ' ಸೇವೆ ಜಾರಿಗೆ ತರಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಈ ವಿಷಯ ತಿಳಿಸಿರುವ ಅವರು, 'ಹೊಸ ಸೇವೆಯಡಿ ದ್ವಿಚಕ್ರ ವಾಹನ, ತ್ರಿ ಚಕ್ರ ವಾಹನ, ನಾಲ್ಕು ಚಕ್ರದ ವಾಹನಗಳನ್ನು ನೋಂದಣಿ ಮಾಡಿಕೊಳ್ಳಲು ಅವಕಾಶವಿದ್ದು, ಪ್ರಯಾಣಿಕರು ಪಾವತಿಸುವ ಹಣವು ನೇರವಾಗಿ ಚಾಲಕರಿಗೆ ಖಾತೆಗೆ ಸೇರಲಿದೆ' ಎಂದು ತಿಳಿಸಿದರು.

ಈಗ ಸೇವೆ ಒದಗಿಸುತ್ತಿರುವ ಖಾಸಗಿ ಸಂಸ್ಥೆಗಳು ಲಾಭ ಪಡೆಯುತ್ತಿದ್ದು, 'ಸಹಕಾರ್ ಟ್ಯಾಕ್ಸಿ' ವ್ಯವಸ್ಥೆಯಲ್ಲಿ ಚಾಲಕರಿಗೆ ಲಾಭದ ಹಣವೂ ವರ್ಗಾವಣೆಯಾಗಲಿದೆ.

ವಿಶ್ವದ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶದಲ್ಲಿ ಭವಿಷ್ಯದಲ್ಲಿ ಆ್ಯಪ್ ಆಧರಿತ ಟ್ಯಾಕ್ಸಿ ಸೇವೆಗಳ ಬಳಕೆ ಹೆಚ್ಚಲಿದ್ದು, ಖಾಸಗಿ ಸಂಸ್ಥೆಗಳು ಈ ಕ್ಷೇತ್ರದಲ್ಲಿ ಪಾರಮ್ಯ ಹೊಂದಿವೆ. ಹೆಚ್ಚಿನ ದರ ವಿಧಿಸುವ ಮೂಲಕ ಚಾಲಕ– ಪ್ರಯಾಣಿಕರಿಗೂ ಹೆಚ್ಚಿನ ತೊಂದರೆ ಉಂಟಾಗುತ್ತಿದೆ. ಈ ಸಮಸ್ಯೆ ತಪ್ಪಿಸುವ ನಿಟ್ಟಿನಲ್ಲಿ ಸರ್ಕಾರವು 'ಸಹಕಾರ್ ಟ್ಯಾಕ್ಸಿ' ಸೇವೆ ಆರಂಭಿಸಲು ನಿರ್ಧರಿಸಿದೆ ಎಂದು ಹೇಳಲಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರವಾಸ
Travel

21.04.2025 10ದಿನಗಳು ದೆಹಲಿ,ಅಗ್ರ,ಅಲಹಾಬಾದ್, ಕಾಶಿ,ಗಯಾ,ಅಯೋಧ್ಯಾ ಹರಿದ್ವಾರ,ಇತ್ಯಾದಿ (ಕೆಲವೇ`ಸೀಟುಗಳಿವೆ). 12.05.2025 6ದಿನಗಳು ಕಾಶಿ,ಗಯಾ`ಅಯೋಧ್ಯಾ ಅಲಹಾಬಾದ್.9.06.2025 ಮತ್ತು`16.09.2025 13/17ದಿನಗಳು`ರೈಲು ವಿಮಾನದಲ್ಲಿ ಚಾರ್‌ಧಾಮ್ ಯಾತ್ರೆ. 12.07.2025 13/17ದಿನಗಳು ಅಮರನಾಥ್ ವೈಷ್ಣೋದೇವಿ`ಕಾಶ್ಮೀರ ದೆಹಲಿ`ಇತ್ಯಾದಿ. ಏಪ್ರಿಲ್/ಮೇನಲ್ಲಿ ಅಂಡಮಾನ್`ಹವಳದ್ವೀಪ. ''ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

8.4.2025 ಪುರಿ ಜಗನ್ನಾಥ, ಕಲ್ಕತ್ತಾ 22.4.2025 ಜಾರ್ಖಂಡ್ ವೈದ್ಯನಾಥ ಕಾಶಿ ಗಯ ಅಯೋಧ್ಯೆ: 3.5.2025 ಶ್ರೀಶೈಲ ಮಂತ್ರಾಲಯ ಹೈದರಾಬಾದ್: 13.5.2025 ಶಿರಡಿ ಮೂರು ಜ್ಯೋತಿರ್ಲಿಂಗ: 28.5.2025: ತಮಿಳುನಾಡು ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

ಸುಸಜ್ಜಿತವಾದ ಊಟ,ತಿಂಡಿ ವಸತಿಯೊಂದಿಗೆ 14.6.2025 ರಿಂದ ರೈಲಿನಲ್ಲಿ 8 ದಿನಗಳ ಕಾಶಿಯಾತ್ರೆ. ಪ್ರಯಾಗ್`ರಾಜ್ ಅಯೋಧ್ಯ,ಕಾಶಿ,ಇತ್ಯಾದಿ. ಸಂಪರ್ಕಿಸಿ: ಕೆ.ಪಿ.ಟೂರ್ಸ್ ಅಂಡ್ ಟ್ರಾವೆಲ್ಸ್.9741024122, 9740311411.

ರಿಯಾಯಿತಿ ದರದಲ್ಲಿ ಪ್ರವಾಸಗಳು 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 6 ದಿನಗಳ ಇಂಡೋನೇಷ್ಯಾ,ಬಾಲಿ ಪ್ರವಾಸಗಳು. 8 ದಿನಗಳ ನೇಪಾಳ (ಶ್ರೀಮುಕ್ತಿನಾಥ).9 ದಿನಗಳ ಕಾಶಿ ಅಯೋಧ್ಯೆ,ಗಯಾ ಪ್ರವಾಸಗಳು. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9900099252 9900080793

7ದಿನಗಳ ಕಾಶಿ ಅಯೋಧ್ಯಾ ಗಯಾ,ಬುದ್ಧಗಯಾ. 13 ದಿನಗಳ ಚಾರ್ಧಾಮಯಾತ್ರೆ. 7 ದಿನಗಳ ಅಮರನಾಥ್. 10 ದಿನಗಳ ನೇಪಾಳ ಮುಕ್ತಿನಾಥ,ಅಯೋಧ್ಯಾ. ಸಂಪರ್ಕಿಸಿ: ನಂದಿ ಹಾಲಿಡೇಸ್ ಗಾಂಧಿಬಜಾರ್ ಬಸವನಗುಡಿ ಬೆಂಗಳೂರು-04. 9740228186 9980270467

ಉದ್ಯೋಗಾವಕಾಶ
General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
*Conditions apply
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164

17 ವರ್ಷಗಳ ನಂತರ ಚೆಪಾಕ್‌ನಲ್ಲಿ ಗೆಲುವು ● ರಜತ್ ಪಾಟೀದಾರ್ ಅರ್ಧಶತಕ ● ಬೌಲರ್‌ಗಳ ಸಾಂಘಿಕ ಪ್ರದರ್ಶನ

ಚೆನ್ನೈನಲ್ಲಿ ಗೆದ್ದು ಸಂಭ್ರಮಿಸಿದ ಆರ್‌ಸಿಬಿ

ಚೆನ್ನೈ (ಪಿಟಿಐ): ಐಪಿಎಲ್ ಮೊದಲ ಬಾರಿ (2008) ನಡೆದಾಗ ಚೆನ್ನೈನಲ್ಲಿ ಜಯಗಳಿಸಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, 17 ವರ್ಷಗಳ ದೀರ್ಘ ಅವಧಿಯ ನಂತರ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಅದರದೇ ತವರಿನಲ್ಲಿ ಸೋಲಿಸಿ ಸಂಭ್ರಮಿಸಿತು. ಶುಕ್ರವಾರ ನಡೆದ ಪಂದ್ಯದಲ್ಲಿ ಸಂಘಟಿತ ಆಟವಾಡಿದ ಆರ್‌ಸಿಬಿ 50 ರನ್‌ಗಳಿಂದ ಋತುರಾಜ್ ಗಾಯಕವಾಡ ಪಡೆಯನ್ನು ಸೋಲಿಸಿ ಸತತ ಎರಡನೇ ಗೆಲುವಿನೊಡನೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿಯಿತು.

ಚೆಪಾಕ್ ಕ್ರೀಡಾಂಗಣದಲ್ಲಿ ಈ ಪಂದ್ಯ ನಿರೀಕ್ಷೆಗೆ ಮೀರಿ ಏಕಪಕ್ಷೀಯವಾಯಿತು. ಟಾಸ್ ಸೋತು ಬ್ಯಾಟ್ ಮಾಡಿದ್ದ ಆರ್‌ಸಿಬಿ ಆರಂಭದಿಂದಲೇ ಆಕ್ರಮಣದ ಆಟಕ್ಕೆ ಒತ್ತು ನೀಡಿ 20 ಓವರುಗಳಲ್ಲಿ 7 ವಿಕೆಟ್‌ಗೆ 196 ರನ್‌ಗಳ ಉತ್ತಮ ಮೊತ್ತ ದಾಖಲಿಸಿತು. ರಜತ್ ಪಾಟೀದಾರ್ ಅರ್ಧಶತಕದ ಮೂಲಕ ಮಧ್ಯಮ ಹಂತದಲ್ಲಿ ಆಸರೆಯಾದರೆ, ಟಿಮ್ ಡೇವಿಡ್ (ಔಟಾಗದೇ 22, 8ಎಸೆತ, 6x3) ಕೊನೆಯಲ್ಲಿ ಮಿಂಚಿನ ಆಟವಾಡಿದ್ದರು.

ಈ ಸವಾಲಿನ ಎದುರು ಚೆನ್ನೈ ಆರಂಭದಿಂದಲೇ ಆಘಾತ ಅನುಭವಿಸಿತು. ತಂಡವು ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ಆರ್‌ಸಿಬಿಯ ವೇಗ–ಸ್ಪಿನ್ ದಾಳಿಗೆ ಸಿಲುಕಿ 8 ವಿಕೆಟ್‌ಗೆ 146 ರನ್ ಗಳಿಸಲಷ್ಟೇ ಶಕ್ತವಾಯಿತು.

ಆರಂಭ ಆಟಗಾರ ರಚಿನ್ ರವೀಂದ್ರ (41, 31ಎಸೆತ) ಬಿಟ್ಟರೆ ಉಳಿದವರು ಪ್ರತಿರೋಧ ತೋರಲಿಲ್ಲ. ವೃತ್ತಿಜೀವನದಲ್ಲಿ ಎರಡನೇ ಬಾರಿ ಒಂಬತ್ತನೇ ಕ್ರಮಾಂಕದಲ್ಲಿ ಆಡಲು ಬಂದ ಧೋನಿ (ಔಟಾಗದೇ 30, 16ಎ) ಬಿರುಸಿನ ಆಟವಾಡಿದರೂ ಗುರಿ ಬಹಳ ದೂರವಿತ್ತು.

ವೇಗದ ಬೌಲರ್‌ಗಳಾದ ಜೋಶ್ ಹ್ಯಾಜಲ್‌ವುಡ್ (21ಕ್ಕೆ3), ಭುವನೇಶ್ವರ ಕುಮಾರ್ (20ಕ್ಕೆ1), ಯಶ್ ದಯಾಳ್ (18ಕ್ಕೆ2) ಮತ್ತು ಆಫ್ ಸ್ಪಿನ್ನರ್ ಲಿವಿಂಗ್‌ಸ್ಟೋನ್ (28ಕ್ಕೆ2) ಅವರು ಎದುರಾಳಿ ತಂಡಕ್ಕೆ ಕಡಿವಾಣ ಹಾಕಿದರು.



ರಜತ್ ಪಾಟೀದಾರ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ



ಯಶ್ ದಯಾಳ್ ಜೋಶ್ ಹ್ಯಾಜಲ್‌ವುಡ್

ರಜತ್ ಅರ್ಧಶತಕ: ಇದಕ್ಕೆ ಮೊದಲು, ರಾಯಲ್ ಚಾಲೆಂಜರ್ಸ್ ತಂಡಕ್ಕೆ ಫಿಲ್ ಸಾಲ್ಟ್ (32, 16ಎ, 4x5, 6x1) ಮತ್ತು ದೇವದತ್ತ ಪಡಿಕ್ಕಲ್ (27, 14 ಎಸೆತ) ಉತ್ತಮ ಆರಂಭ ನೀಡಿದ್ದರು. ಅವರ ವೇಗದ ಆಟದಿಂದಾಗಿ ವಿರಾಟ್ ಕೊಹ್ಲಿ (31, 30ಎ, 4x2, 6x1) ಅವರ ಪರದಾಟ ಎದ್ದುಕಾಣಲಿಲ್ಲ. ಸಾಲ್ಟ್ ಮತ್ತು ಕೊಹ್ಲಿ ಮೊದಲ ವಿಕೆಟ್‌ಗೆ ಐದು ಓವರುಗಳಲ್ಲಿ 45 ರನ್ ಸೇರಿಸಿದರು. ಈ ಹಂತದಲ್ಲಿ ಸಾಲ್ಟ್, ಎಡಗೈ ಸ್ಪಿನ್ನರ್ ನೂರ್ ಅಹ್ಮದ್ ಬೌಲಿಂಗ್‌ನಲ್ಲಿ ಧೋನಿ ಅವರಿಂದ ಮಿಂಚಿನ ಸ್ಟಂಪಿಂಗ್‌ಗೆ ಒಳಗಾದರು. ಪಡಿಕ್ಕಲ್ (27, 14 ಎ) ಕೂಡ ಬಂದ ಹಾಗೇ ಆಕ್ರಮಣಕ್ಕೆ ತೊಡಗಿದರು.

ಪಡಿಕ್ಕಲ್ ನಿರ್ಗಮನದ ನಂತರ ಆಡಲಿಳಿದ ನಾಯಕ ರಜತ್ ಪಾಟೀದಾರ್ ಅವರಿಗೆ ಅದೃಷ್ಟವೂ ಕೈಹಿಡಿಯಿತು. ಒಂದು ಸುಲಭ ಕ್ಯಾಚಿನ ಜೊತೆಗೆ ಎರಡು ಅರೆ ಜೀವದಾನಗಳೂ ದೊರೆತವು. ಪಾಟೀದಾರ್ ನಂತರ ಆಕರ್ಷಕ ಹೊಡೆತಗಳನ್ನು ಪ್ರದರ್ಶಿಸಿದರು. ವೇಗ, ಸ್ಪಿನ್ ಬೌಲರ್‌ಗಳನ್ನು ದಂಡಿಸಿದರು.

13ನೇ ಓವರಿನಲ್ಲಿ ನೂರ್ ಅಹ್ಮದ್, ಕೊಹ್ಲಿ ಅವರ ವಿಕೆಟ್ ಕೂಡ ಪಡೆದರು. ಪಾಟೀದಾರ್ ಒಂದೆಡೆ ರನ್ ವೇಗ ಕುಸಿಯದಂತೆ ನೋಡಿಕೊಂಡರೂ, ಇನ್ನೊಂದು ಕಡೆ ವಿಕೆಟ್‌ಗಳು ಬೀಳತೊಡಗಿದವು. 19ನೇ ಓವರಿನ ನಂತರ 177 ರನ್‌ಗಳಾಗುಷ್ಟರಲ್ಲಿ 7 ವಿಕೆಟ್ ಕಳೆದುಕೊಂಡಿತು. ಆ ಓವರ್‌ನಲ್ಲಿ ಪಥಿರಾಣ ಒಂದು ವೈಡ್ ಮಾತ್ರ ಕೊಟ್ಟು 2 ವಿಕೆಟ್ ಪಡೆದಿದ್ದರು. ಆದರೆ ಅಂತಿಮ ಓವರಿನಲ್ಲಿ ಟಿಮ್ ಡೇವಿಡ್ ಪ್ರತ್ಯಾಕ್ರಮಣ ನಡೆಸಿದರು. ಸ್ಯಾಮ್ ಕರನ್ ಬೌಲಿಂಗ್‌ನಲ್ಲಿ ಹ್ಯಾಟ್ರಿಕ್ ಸಿಕ್ಸರ್‌ಗಳನ್ನು ಸಿಡಿಸಿದರು.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 7ಕ್ಕೆ 197 (20 ಓವರ್‌ಗಳಲ್ಲಿ)
ಸಾಲ್ಟ್ ಸ್ಟಂಪ್ ಧೋನಿ ಬಿ ಅಹ್ಮದ್ 32 (16ಎ, 4x5, 6x1)
ವಿರಾಟ್ ಸಿ ರವೀಂದ್ರ ಬಿ ಅಹ್ಮದ್ 31 (30ಎ, 4x2, 6x1)
ಪಡಿಕ್ಕಲ್ ಸಿ ಗಾಯಕವಾಡ್ ಬಿ ಅಶ್ವಿನ್ 27 (14ಎ, 4x2, 6x2)
ಪಾಟೀದಾರ್ ಸಿ ಸ್ಯಾಮ್ ಬಿ ಪಥಿರಾಣ 51 (32ಎ, 4x4, 6x3)
ಲಿವಿಂಗ್‌ಸ್ಟೋನ್ ಬಿ ಅಹ್ಮದ್ 10 (9ಎ, 6x1)
ಜಿತೇಶ್ ಸಿ ಜಡೇಜ ಬಿ ಖಲೀಲ್ 12 (6ಎ, 4x1, 6x1)
ಟಿಮ್ ಔಟಾಗದೇ 22 (8ಎ, 4x1, 6x3)
ಕೃಣಾಲ್ ಸಿ ಹೂಡ ಬಿ ಪಥಿರಾಣ 0 (3ಎ)
ಭುವನೇಶ್ವರ ಕುಮಾರ್ ಔಟಾಗದೇ 0 (2ಎ)
ಇತರೆ: 11 (ಲೆಗ್‌ಬೈ 3, ವೈಡ್ 8)
ವಿಕೆಟ್ ಪತನ: 1-45 (ಫಿಲ್ ಸಾಲ್ಟ್, 4.6), 2-76 (ದೇವದತ್ತ ಪಡಿಕ್ಕಲ್, 7.5), 3-117 (ವಿರಾಟ್ ಕೊಹ್ಲಿ, 12.2), 4-145 (ಲಿಯಾಮ್ ಲಿವಿಂಗ್‌ಸ್ಟೋನ್, 15.3), 5-172 (ಜಿತೇಶ್ ಶರ್ಮಾ, 17.4), 6–176 (ಪಾಟೀದಾರ್, 18.1), 7-177 (ಕೃಣಾಲ್ ಪಾಂಡ್ಯ, 18.4)
ಬೌಲಿಂಗ್: ಖಲೀಲ್ ಅಹ್ಮದ್ 4–0–28–1, ಆರ್.ಅಶ್ವಿನ್ 2–0–22–1, ಸ್ಯಾಮ್ ಕರನ್ 3–0–34–0, ನೂರ್ ಅಹಮ್ಮದ್ 4–0–36–3, ಜಡೇಜ 3–0–37–0, ಮಥೀಶ ಪಥಿರಾಣ 4–0–36–2

ಚೆನ್ನೈ ಸೂಪರ್ ಕಿಂಗ್ಸ್ 8ಕ್ಕೆ 146 (20 ಓವರ್‌ಗಳಲ್ಲಿ)
ರಚಿನ್ ಬಿ ದಯಾಳ್ 41 (31ಎ, 4x5)
ತ್ರಿಪಾಠಿ ಸಿ ಸಾಲ್ಟ್ ಬಿ ಹ್ಯಾಜಲ್‌ವುಡ್ 5 (3ಎ, 4x1)
ಋತುರಾಜ್ ಸಿ ಭಾಂಡಗೆ ಬಿ ಹ್ಯಾಜಲ್‌ವುಡ್ 0 (4ಎ)
ದೀಪಕ್ ಸಿ ಶರ್ಮಾ ಬಿ ಭುವನೇಶ್ವರ 4 (9ಎ, 4x1)
ಸ್ಯಾಮ್ ಸಿ ಕೃಣಾಲ್ ಬಿ ಲಿವಿಂಗ್‌ಸ್ಟೋನ್ 8 (13ಎ)
ಶಿವಂ ಬಿ ದಯಾಳ್ 19 (15ಎ, 4x2, 6x1)
ಜಡೇಜ ಸಿ ಸಾಲ್ಟ್ ಬಿ ಹ್ಯಾಜಲ್‌ವುಡ್ 25 (19ಎ, 4x2, 6x1)
ಅಶ್ವಿನ್ ಸಿ ಸಾಲ್ಟ್ ಬಿ ಲಿವಿಂಗ್‌ಸ್ಟೋನ್ 11 (8ಎ, 4x1)
ಧೋನಿ ಔಟಾಗದೇ 30 (16ಎ, 4x3, 6x2)
ನೂರ್ ಅಹ್ಮದ್ ಔಟಾಗದೇ 0 (2ಎ)
ಇತರೆ: 3 (ಬೈ 1, ವೈಡ್ 2)
ವಿಕೆಟ್ ಪತನ: 1-8 (ರಾಹುಲ್ ತ್ರಿಪಾಠಿ, 1.2), 2-8 (ಋತುರಾಜ್ ಗಾಯಕವಾಡ, 1.6), 3-26 (ದೀಪಕ್ ಹೂಡಾ, 4.4), 4-52 (ಸ್ಯಾಮ್ ಕರನ್, 8.5), 5-75 (ರಚಿನ್ ರವೀಂದ್ರ, 12.1), 6-80 (ಶಿವಂ ದುಬೆ, 12.5), 7-99 (ಆರ್. ಅಶ್ವಿನ್, 15.2), 8-130 (ಜಡೇಜ, 18.4)
ಬೌಲಿಂಗ್: ಭುವನೇಶ್ವರ ಕುಮಾರ್ 3-0-20-1, ಜೋಶ್ ಹ್ಯಾಜಲ್‌ವುಡ್ 4–0–21–3, ಯಶ್ ದಯಾಳ್ 3-0-18-2, ಲಿಯಾಮ್ ಲಿವಿಂಗ್‌ಸ್ಟೋನ್ 4-0-28-2, ಸುಯೇಶ್ ಶರ್ಮಾ 4-0-32-0, ಕೃಣಾಲ್ ಪಾಂಡ್ಯ 2-0-26-0,
ಪಂದ್ಯದ ಆಟಗಾರ: ರಜತ್ ಪಾಟೀದಾರ್

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 50 ರನ್‌ಗಳ ಜಯ

ಮುಂಬೈಗೆ ಗುಜರಾತ್ ಸವಾಲು

ಅಹಮದಾಬಾದ್ (ಪಿಟಿಐ): ಮುಂಬೈ ಇಂಡಿಯನ್ಸ್ ಮತ್ತು ಗುಜರಾತ್ ಟೈಟನ್ಸ್ ತಂಡಗಳು ಶನಿವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿದ್ದು, ಮೊದಲ ಗೆಲುವಿಗೆ ಪಡೆಯಲು ತುದಿಗಾಲಲ್ಲಿವೆ. ಒಂದು ಪಂದ್ಯ ನಿಷೇಧದ ನಂತರ ನಾಯಕ ಹಾರ್ದಿಕ್ ಪಾಂಡ್ಯ ತಂಡಕ್ಕೆ ಮರಳುತ್ತಿರುವುದು ಮುಂಬೈ ಇಂಡಿಯನ್ಸ್‌ಗೆ ಅಗತ್ಯವಿದ್ದ ಸಮತೋಲನ ನೀಡಲಿದೆ.

ಮುಂಬೈ ತಂಡ ಐಪಿಎಲ್‌ನಲ್ಲಿ ತನ್ನ ಮೊದಲ ಪಂದ್ಯದಲ್ಲಿ ಸೋಲುವುದು ಸಂಪ್ರದಾಯವೇ ಆದಂತಿದೆ. ಈ ಬಾರಿ ಅದು ಚೆನ್ನೈ ಸೂಪರ್ ಕಿಂಗ್ಸ್ ಎದುರು ನಾಲ್ಕು ವಿಕೆಟ್‌ಗಳಿಂದ ಸೋತಿದೆ. ದೊಡ್ಡ ಮೊತ್ತದ ಇನ್ನೊಂದು ಪಂದ್ಯದಲ್ಲಿ ಗುಜರಾತ್ ಟೈಟನ್ಸ್ 11 ರನ್‌ಗಳಿಂದ ಪಂಜಾಬ್ ಕಿಂಗ್ಸ್ ಎದುರು ಸೋಲನುಭವಿಸಿದೆ.

ಅಗ್ರ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರ ಗೈರು ಮುಂಬೈ ತಂಡವನ್ನು ಕಾಡುತ್ತಿದೆ. ಸಾಲದ್ದಕ್ಕೆ ಹಾರ್ದಿಕ್ ಅವರ ಅನುಪಸ್ಥಿತಿ ಹಿನ್ನಡೆ ಉಂಟುಮಾಡಿತ್ತು. ವೇಗದ ಬೌಲಿಂಗ್ ಆಲ್‌ರೌಂಡರ್ ಆಗಿರುವ ಅವರು ಬ್ಯಾಟಿನಿಂದಾಗಲಿ, ಚೆಂಡಿನಿಂದಾಗಲಿ ಪಂದ್ಯದ ಗತಿ ಬದಲಾಯಿಸುವ ಸಾಮರ್ಥ್ಯ ಹೊಂದಿದ್ದಾರೆ.

ಟೈಟನ್ಸ್‌ಗೆ ಕಳವಳದ ವಿಷಯವೆಂದರೆ ಅನುಭವಿ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಪರಿಣಾಮ ಬೀರದಿರುವುದು. ಮೊದಲ ಪಂದ್ಯದಲ್ಲಿ ಅವರನ್ನು ಪಂಜಾಬ್ ಬ್ಯಾಟರ್‌ಗಳು ದಂಡಿಸಿದ್ದು, 54 ರನ್ ತೆತ್ತಿದ್ದರು. ಇದು ಕೋಚ್ ಆಶಿಶ್ ನೆಹ್ರಾ ಅವರ ಚಿಂತೆಗೆ ಕಾರಣವಾಗಿದೆ. ಹೀಗಾಗಿ ದಕ್ಷಿಣ ಆಫ್ರಿಕಾ ಕಗಿಸೊ ರಬಾಡ ಮತ್ತು ಅಫ್ಗನ್ ಸ್ಪಿನ್ನರ್ ರಶೀದ್ ಖಾನ್ ಅವರ ಮೇಲೆ ಹೆಚ್ಚು ಒತ್ತಡವಿದೆ.

ಸೂರ್ಯಕುಮಾರ್ ಯಾದವ್ ಉತ್ತಮ ಲಯದಲ್ಲಿಲ್ಲ. ರೋಹಿತ್ ಶರ್ಮಾ ಕೂಡ ಪರದಾಡುತ್ತಿದ್ದಾರೆ. ಹೀಗಾಗಿ ಪಾಂಡ್ಯ ಸೇರ್ಪಡೆ ಮುಂಬೈ ತಂಡಕ್ಕೆ ಬಲ ನೀಡಲಿದೆ.

ಆರಂಭ: ರಾತ್ರಿ 7.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಏ.8ಕ್ಕೆ ಕೆಕೆಆರ್–ಎಲ್‌ಎಸ್‌ಜಿ ಪಂದ್ಯ

ಕೋಲ್ಕತ್ತ (ಪಿಟಿಐ): ರಾಮನವಮಿ ಉತ್ಸವದ ಮೆರವಣಿಗೆಗಳ ಕಾರಣ, ಏಪ್ರಿಲ್ 6ರಂದು ಇಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಲಖನೌ ಸೂಪರ್ ಜೈಂಟ್ಸ್ ತಂಡಗಳ ನಡುವೆ ನಡೆಯಬೇಕಾಗಿದ್ದ ಐಪಿಎಲ್ ಪಂದ್ಯವನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಏಪ್ರಿಲ್ 8ಕ್ಕೆ ಮುಂದೂಡಿದೆ. ಇದರಿಂದ 8ರಂದು (ಮಂಗಳವಾರ) ಎರಡು ಪಂದ್ಯಗಳು ಇರಲಿವೆ. ಕೆಕೆಆರ್–ಎಲ್‌ಎಸ್‌ಜಿ ಪಂದ್ಯ ಅಂದು ಮಧ್ಯಾಹ್ನ ಆರಂಭವಾಗಲಿದೆ. ಚಂಡೀಗಢದಲ್ಲಿ ಪಂಜಾಬ್ ಕಿಂಗ್ಸ್–ಚೆನ್ನೈ ಸೂಪರ್ ಕಿಂಗ್ಸ್ ಪಂದ್ಯ ಈ ಮೊದಲೇ ನಿಗದಿಯಾದಂತೆ ಸಂಜೆ ಆರಂಭವಾಗಲಿದೆ.

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಆರ್‌ಸಿಬಿ	2	2	0	4	2.266
2	ಎಲ್‌ಎಸ್‌ಜಿ	2	1	1	2	0.963
3	ಪಿಬಿಕೆಎಸ್	1	1	0	2	0.550
4	ಡಿಸಿ	1	1	0	2	0.371
5	ಕೆಕೆಆರ್	2	1	1	2	-0.308
6	ಎಸ್‌ಆರ್‌ಎಚ್	2	1	1	2	-0.128
7	ಸಿಎಸ್‌ಕೆ	2	1	1	2	-1.013
8	ಎಂಐ	1	0	1	0	-0.493
9	ಜಿಟಿ	1	0	1	0	-0.550
10	ಆರ್‌ಆರ್	2	0	2	0	-1.882

ಆರೇಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 145 ರನ್

ಪರ್ಪಲ್ ಕ್ಯಾಪ್
ನೂರ್ ಅಹ್ಮದ್ (ಸಿಎಸ್‌ಕೆ) 7 ವಿಕೆಟ್

ಐಎಸ್‌ಎಲ್: ಬಿಎಫ್‌ಸಿಗೆ ಇಂದು ಮುಂಬೈ ಎದುರಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಎಂಟು ತಿಂಗಳ ಅವಧಿಯ ಲೀಗ್ ಪಂದ್ಯಗಳ ನಂತರ ಬೆಂಗಳೂರು ಎಫ್‌ಸಿ ತಂಡಕ್ಕೆ ಈಗ ನಿಜವಾದ ಸತ್ವಪರೀಕ್ಷೆ ಎದುರಾಗಿದೆ. ಸುನೀಲ್ ಚೆಟ್ರಿ ಪಡೆ ಇಂಡಿಯನ್ ಸೂಪರ್ ಲೀಗ್ ಸೆಮಿಫೈನಲ್ ಸ್ಥಾನ ಪಡೆಯಲು ಇಲ್ಲಿನ ಶ್ರೀಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ಪ್ಲೇ ಆಫ್ ಪಂದ್ಯದಲ್ಲಿ ಶನಿವಾರ ಮುಂಬೈ ಸಿಟಿ ಎಫ್‌ಸಿ ತಂಡವನ್ನು ಎದುರಿಸಲಿದೆ.

ಕೊನೆಯ ಪಂದ್ಯ ಆಡಿದ ನಂತರ ಇವೆರಡೂ ತಂಡಗಳಿಗೆ ನಿರ್ಣಾಯಕ ಪ್ಲೇ ಆಫ್ ಪಂದ್ಯಕ್ಕೆ ತಯಾರಿ ನಡೆಸಲು ಎರಡು ವಾರಗಳ ಬಿಡುವೂ ಲಭಿಸಿತ್ತು.

ತವರಿನಲ್ಲಿ ಆಡುತ್ತಿರುವ ಕಾರಣ ಬೆಂಗಳೂರು ತಂಡ ಉತ್ಸಾಹದಲ್ಲಿದೆ. ತಂತ್ರಗಾರಿಕೆ ಮತ್ತು ಕೌಶಲ ಗಮನದಲ್ಲಿಟ್ಟುಕೊಂಡರೆ ಬಿಎಫ್‌ಸಿ ತಂಡ ಎರಡರಲ್ಲೂ ಉತ್ತಮವಿದೆ. ಆದರೆ ಶನಿವಾರದ ಪಂದ್ಯದಲ್ಲಿ ಇದರ ಸಮರ್ಪಕ ಬಳಕೆಯಾಗಬೇಕಿದೆ.

ಸದಾ ಲವಲವಿಕೆಯಿಂದ ಆಡುವ ಅನುಭವಿ ತಾರೆ ಸುನೀಲ್ ಚೆಟ್ರಿ ಸಾಮರ್ಥ್ಯವನ್ನು ಬಿಎಫ್‌ಸಿ ನೆಚ್ಚಿಕೊಂಡಿದೆ. ಚೆಟ್ರಿ ಈ ಹಿಂದೆ ಐಎಸ್‌ಎಲ್‌ನ ಪ್ಲೇ ಆಫ್ ಪಂದ್ಯಗಳಲ್ಲಿ ಎಂಟು ಗೋಲುಗಳನ್ನು ಗಳಿಸಿದ್ದಾರೆ. ಈ ಲೀಗ್‌ನ ಇತಿಹಾಸದಲ್ಲಿ ಇದು ಅತ್ಯಧಿಕವಾಗಿದೆ. ಈ ಋತುವಿನಲ್ಲಿ ನಾಲ್ಕು 'ಪೆನಾಲ್ಟಿ'ಗಳನ್ನು ಪರಿವರ್ತಿಸಿರುವ ಅವರು, ಮುಂಬೈ ವಿರುದ್ಧ ಐಎಸ್‌ಎಲ್‌ನಲ್ಲಿ ಹತ್ತು ಗೋಲು ಗಳಿಸಿದ ಮೊದಲ ಆಟಗಾರ ಎನಿಸುವ ಹೊಸ್ತಿಲಲ್ಲಿದ್ದಾರೆ.

ಇನ್ನೊಂದು ಕಡೆ, ಮುಂಬೈ ಸಿಟಿ ತಂಡ ಕಳೆದ ನಾಲ್ಕು ಪಂದ್ಯಗಳಿಂದ ಬಿಎಫ್‌ಸಿ ವಿರುದ್ಧ ಅಜೇಯವಾಗುಳಿದಿದೆ. ಈ ತಿಂಗಳ 11ರಂದು ಉದ್ಯಾನನಗರಿಯಲ್ಲೇ ನಡೆದ ನಿರ್ಣಾಯಕ ಪಂದ್ಯದಲ್ಲಿ 2–0 ಯಿಂದ ಗೆದ್ದು ಪ್ಲೇ ಆಫ್ ಸ್ಥಾನವನ್ನು ಖಚಿತಪಡಿಸಿಕೊಂಡಿತ್ತು. ಇದೂ ಸೇರಿ ಕೊನೆಯ ನಾಲ್ಕು ಮುಖಾಮುಖಿಗಳಲ್ಲೂ ಮುಂಬೈ ಎಫ್‌ಸಿ ಜಯಗಳಿಸಿದೆ.



ಸುನೀಲ್ ಚೆಟ್ರಿ

ಒತ್ತಡದಲ್ಲೂ ಉತ್ತಮ ಆಟವಾಡುವ ತಮ್ಮ ತಂಡದ ಸಾಮರ್ಥ್ಯದ ಬಗ್ಗೆ ಬೆಂಗಳೂರು ಎಫ್‌ಸಿ ಹೆಡ್ ಕೋಚ್ ಜೆರಾರ್ಡ್ ಝಾರ್ಗೋಝಾ ವಿಶ್ವಾಸ ಹೊಂದಿದ್ದಾರೆ. 'ಇದು ಪೂರ್ಣವಾಗಿ ಭಿನ್ನ ಸ್ವರೂಪದ ಪಂದ್ಯ. ಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ಪ್ಲೇ ಆಫ್. ನಮ್ಮನ್ನು ನಂಬಿ, ಇಂಥ ಪರಿಸ್ಥಿತಿಯಲ್ಲಿ ಹೇಗೆ ಆಡಬೇಕೆಂಬುದು ನಮಗೆ ಗೊತ್ತಿದೆ' ಎಂದು ಹೇಳಿದರು.

ಮುಖಾಮುಖಿ: ಇವೆರಡು ತಂಡಗಳು ಐಎಸ್‌ಎಲ್‌ನಲ್ಲಿ 18 ಬಾರಿ ಎದುರಾಳಿಗಳಾಗಿವೆ. ಬೆಂಗಳೂರು ಎಫ್‌ಸಿ ಆರು ಬಾರಿ ಜಯಗಳಿಸಿದರೆ, 'ಐಲ್ಯಾಂಡರ್ಸ್' 10 ಬಾರಿ ಗೆಲುವು ಕಂಡಿದೆ. ಎರಡು ಪಂದ್ಯಗಳು ಡ್ರಾ ಆಗಿವೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಜಿಯೊ ಹಾಟ್‌ಸ್ಟಾರ್

ಕೆಎಸ್‌ಎಲ್‌ಟಿಎ ಸ್ಟೇಡಿಯಂಗೆ ಕೃಷ್ಣ ಹೆಸರು

ವಿಮಾನ ನಿಲ್ದಾಣದ ಸಮೀಪ ವಿಶ್ವದರ್ಜೆಯ ಟೆನಿಸ್ ಕ್ರೀಡಾಂಗಣ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಕ್ರೀಡಾಂಗಣವು ಶುಕ್ರವಾರ ಭಾವನಾತ್ಮಕ ಕ್ಷಣಗಳಿಗೆ ಸಾಕ್ಷಿಯಾಯಿತು. ಕಬ್ಬನ್ ಪಾರ್ಕ್‌ನಲ್ಲಿರುವ ಸಂಸ್ಥೆಯ ಸ್ಟೇಡಿಯಂಗೆ ಗಣ್ಯರ ಸಮ್ಮುಖದಲ್ಲಿ ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಅವರ ಹೆಸರನ್ನು ಇಡಲಾಯಿತು.

ಸಂಸ್ಥೆಯನ್ನು ಎರಡು ದಶಕಗಳ ಕಾಲ ಮುನ್ನಡೆಸಿದ್ದ ಕೃಷ್ಣ ಅವರ ಕೊಡುಗೆಯನ್ನು ಶಾಶ್ವತವಾಗಿ ಸ್ಮರಿಸುವ ಉದ್ದೇಶದಿಂದ ಕೆಎಸ್‌ಎಲ್‌ಟಿಎ ಈ ನಿರ್ಧಾರ ಕೈಗೊಂಡಿದೆ. ಕೃಷ್ಣ ಅವರ ಪತ್ನಿ ಪ್ರೇಮಾ ಕೃಷ್ಣ, ಪುತ್ರಿಯರಾದ ಮಾಳವಿಕಾ ಮತ್ತು ಶಾಂಭವಿ ಅವರ ಸಮ್ಮುಖದಲ್ಲಿ 'ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣ ಬೆಂಗಳೂರು' ಎಂದು ನಾಮಕರಣ ಮಾಡಲಾಯಿತು.

'ಕೃಷ್ಣ ಅವರ ದೂರದೃಷ್ಟಿಯಿಂದಾಗಿ ರಾಜಧಾನಿಯ ಕೇಂದ್ರಭಾಗದಲ್ಲೇ ಸುಸಜ್ಜಿತ ಟೆನಿಸ್ ಕ್ರೀಡಾಂಗಣ 26 ವರ್ಷಗಳ ಹಿಂದೆ ನಿರ್ಮಾಣಗೊಂಡಿದೆ. ಅವರು ಈ ಸಂಸ್ಥೆಯ ಅಭಿವೃದ್ಧಿಯ ರೂವಾರಿಯಾಗಿದ್ದು, ಅವರ ಹೆಸರನ್ನು ಸ್ಟೇಡಿಯಂಗೆ ಒಮ್ಮತದಿಂದ ಇಡಲಾಗಿದೆ' ಎಂದು ಕೆಎಸ್‌ಎಲ್‌ಟಿಎ ಅಧ್ಯಕ್ಷ, ವಿಧಾನಸಭೆಯ ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದರು.

'ಬೆಂಗಳೂರಿನಲ್ಲಿ ಮತ್ತೊಂದು ವಿಶ್ವ ದರ್ಜೆಯ ಟೆನಿಸ್ ಕ್ರೀಡಾಂಗಣ ನಿರ್ಮಿಸುವ ಗುರಿಯನ್ನು ಕೆಎಸ್‌ಎಲ್‌ಟಿಎ ಸಂಸ್ಥೆ ಹೊಂದಿದೆ. ಇದಕ್ಕಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಏಳು ಎಕರೆ ಜಾಗ ಮಂಜೂರಾಗಿದೆ. ಅಲ್ಲದೆ, ಈ ವರ್ಷದಿಂದ ಎಸ್.ಎಂ.ಕೃಷ್ಣ ಅವರ ಹೆಸರಿನಲ್ಲಿ ಕ್ರೀಡಾಪಟುಗಳಿಗೆ ವಿದ್ಯಾರ್ಥಿವೇತನ ನೀಡಲು ನಿರ್ಧರಿಸಲಾಗಿದೆ' ಎಂದು ತಿಳಿಸಿದರು.

ಟ್ರೋಫಿ ಅನಾವರಣ: ಎಸ್.ಎಂ.ಕೃಷ್ಣ ಅವರ ಸ್ಮರಣಾರ್ಥ ಐಟಿಎಫ್ ವಿಶ್ವ ಟೆನಿಸ್ ಟೂರ್ ಪುರುಷರ ಎಂ25 ಟೂರ್ನಿ ಇದೇ 31ರಿಂದ ಏ.6ರವರೆಗೆ ನಡೆಯಲಿದ್ದು, ಇದರ ಟ್ರೋಫಿಯನ್ನು ಆರ್.ಅಶೋಕ ಅನಾವರಣ ಮಾಡಿದರು.


ಇದೇ ವೇಳೆ ಅರ್ಹ ಕ್ರೀಡಾಪಟುಗಳಿಗೆ ಒಟ್ಟು ₹12 ಲಕ್ಷ ವಿದ್ಯಾರ್ಥಿ ವೇತನ ವಿತರಿಸಲಾಯಿತು.



ಕಬ್ಬನ್ ಪಾರ್ಕ್‌ನಲ್ಲಿರುವ ಕೆಎಸ್‌ಎಲ್‌ಟಿಎ ಸ್ಟೇಡಿಯಂಗೆ 'ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣ ಬೆಂಗಳೂರು' ಎಂದು ಶುಕ್ರವಾರ ನಾಮಕರಣ ಮಾಡಲಾಯಿತು. (ಎಡದಿಂದ) ಕೆಎಸ್‌ಎಲ್‌ಟಿಎ ಜಂಟಿ ಕಾರ್ಯದರ್ಶಿ ಸುನಿಲ್ ಯಜಮಾನ್, ಕರ್ನಾಟಕ ರಾಜ್ಯ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಕೆ.ಗೋವಿಂದರಾಜ್, ಕೆಎಸ್‌ಎಲ್‌ಟಿಎ ಅಧ್ಯಕ್ಷ ಆರ್.ಅಶೋಕ, ಪ್ರೇಮಾ ಕೃಷ್ಣ, ನಳಿನಿ ಗೌಡ, ಕೆಎಸ್‌ಎಲ್‌ಟಿಎ ಹಿರಿಯ ಉಪಾಧ್ಯಕ್ಷ, ಸಚಿವ ಪ್ರಿಯಾಂಕ್ ಖರ್ಗೆ, ಕೃಷ್ಣ ಅವರ ಪುತ್ರಿ ಶಾಂಭವಿ, ಕೆಎಸ್‌ಎಲ್‌ಟಿಎ ಉಪಾಧ್ಯಕ್ಷ, ಟೆನಿಸ್ ತಾರೆ ರೋಹನ್ ಬೋಪಣ್ಣ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್

ಏಷ್ಯನ್ ಕುಸ್ತಿ: ಮನೀಶಾಗೆ ಚಿನ್ನ

ಅಮ್ಮಾನ್ (ಪಿಟಿಐ): ಭಾರತದ ಕುಸ್ತಿಪಟು ಮನೀಶಾ ಭನ್ವಾಲಾ ಅವರು ಶುಕ್ರವಾರ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನ ಮಹಿಳೆಯರ 62 ಕೆ.ಜಿ ವಿಭಾಗದಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಯುವ ಕುಸ್ತಿಪಟು ಅಂತಿಮ್ ಪಂಘಲ್ ಕಂಚಿನ ಪದಕ ಗೆದ್ದರು.



ಮನೀಶಾ ಭನ್ವಾಲಾ

ಈ ಮೂಲಕ ಭಾರತದ ಪದಕಗಳ ಸಂಖ್ಯೆ ಎಂಟಕ್ಕೆ ಏರಿಕೆಯಾಗಿದೆ. ಅದರಲ್ಲಿ ಒಂದು ಚಿನ್ನ, ಒಂದು ಬೆಳ್ಳಿ ಮತ್ತು ಆರು ಕಂಚು ಸೇರಿವೆ.

2022ರಿಂದ ಸತತ ಮೂರು ಕಂಚಿನ ಪದಕ ಗೆದ್ದಿರುವ 25 ವರ್ಷ ವಯಸ್ಸಿನ ಮನೀಶಾ ಫೈನಲ್ ಹಣಾಹಣಿಯಲ್ಲಿ 8-7 ಅಂತರದಿಂದ ಕೊರಿಯಾದ ಓಕೆ ಜೆ ಕಿಮ್ ಅವರನ್ನು ಮಣಿಸಿದರು. ಇದರೊಂದಿಗೆ 2021ರ ಆವೃತ್ತಿಯ ನಂತರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಮೊದಲ ಚಿನ್ನದ ಪದಕ ಗೆದ್ದುಕೊಟ್ಟರು.

ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಮನೀಶಾ ಒಂದು ಹಂತದಲ್ಲಿ 2-7 ಅಂಕಗಳಿಂದ ಹಿನ್ನಡೆ ಅನುಭವಿಸಿದ್ದರು. ನಂತರ ಸತತ ಆರು ಅಂಕಗಳನ್ನು ಕಲೆಹಾಕಿ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಚೊಚ್ಚಲ ಚಿನ್ನದ ಸಾಧನೆ ಮಾಡಿದರು.

ಇದಕ್ಕೂ ಮೊದಲು ಮನೀಶಾ ಕಜಕಿಸ್ತಾನದ ಟೈನಿಸ್ ಡುಬೆಕ್ ವಿರುದ್ಧ ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಗೆಲುವು ದಾಖಲಿಸಿ ಶುಭಾರಂಭ ಮಾಡಿದ್ದರು. ನಂತರ ದಕ್ಷಿಣ ಕೊರಿಯಾದ ಹ್ಯಾನ್ಬಿಟ್ ಲೀ ಅವರನ್ನು ಸೋಲಿಸಿದ್ದರು. ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಭಾರತದ ಸ್ಪರ್ಧಿ 5–1ಯಿಂದ ಕಜಕಿಸ್ತಾನದ ಕಲ್ಮಿರಾ ಬಿಲಿಂಬೆಕ್ ಅವರನ್ನು ಮಣಿಸಿದ್ದರು.

20 ವರ್ಷ ವಯಸ್ಸಿನ ಅಂತಿಮ್ (ಮಹಿಳೆಯರ 53 ಕೆ.ಜಿ ವಿಭಾಗ) ಕಂಚಿನ ಪ್ಲೇ ಆಫ್‌ನಲ್ಲಿ ಚೀನಾ ತೈಪೆಯ ಮೆಂಗ್ ಎಚ್ ಹ್ಸಿಹ್ ವಿರುದ್ಧ ಪ್ರಾಬಲ್ಯ ಸಾಧಿಸಿದರು. ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಜಯ ಸಾಧಿಸಿದರು. ಇದಕ್ಕೂ ಮೊದಲು ಕ್ವಾರ್ಟರ್ ಫೈನಲ್‌ನಲ್ಲಿ ಚೀನಾದ ಜಿನ್ ಜಾಂಗ್ ಅವರನ್ನು ಸೋಲಿಸಿದ್ದ ಅವರು, ಸೆಮಿಫೈನಲ್‌ನಲ್ಲಿ 0-5ರಿಂದ ಜಪಾನ್‌ನ ಮೋ ಕಿಯೂಕಾಗೆ ಮಣಿದಿದ್ದರು.

ಪುಣೆ: ಏ.13ರಿಂದ ಗ್ರ್ಯಾನ್‌ಪ್ರಿ ಚೆಸ್

ಪುಣೆ (ಪಿಟಿಐ): ವಿಶ್ವ ರ್‍ಯಾಪಿಡ್ ಚಾಂಪಿಯನ್ ಕೋನೇರು ಹಂಪಿ, ಒಲಿಂಪಿಯಾಡ್ ಚಿನ್ನ ವಿಜೇತರಾದ ದ್ರೋಣವಲ್ಲಿ ಹಾರಿಕಾ, ವೈಶಾಲಿ ರಮೇಶ್‌ಬಾಬು, ದಿವ್ಯಾ ದೇಶಮುಖ್ ಅವರು ಏಪ್ರಿಲ್ 13 ರಿಂದ 24ರವರೆಗೆ ಇಲ್ಲಿ ನಡೆಯಲಿರುವ ಫಿಡೆ ಮಹಿಳಾ ಗ್ರ್ಯಾನ್‌ಪ್ರಿ ಐದನೇ ಲೆಗ್‌ನಲ್ಲಿ ಭಾಗವಹಿಸುತ್ತಿರುವ ಭಾರತದ ಆಟಗಾರ್ತಿಯರಲ್ಲಿ ಪ್ರಮುಖರಾಗಿದ್ದಾರೆ.

ಮಹಾರಾಷ್ಟ್ರ ಚೆಸ್ ಸಂಸ್ಥೆ ಟೂರ್ನಿಯನ್ನು ಆಯೋಜಿಸುತ್ತಿದ್ದು 14 ಆಟಗಾರ್ತಿಯರು ಭಾಗವಹಿಸಲಿದ್ದಾರೆ.

ನ.28ರಿಂದ ಜೂನಿಯರ್ ವಿಶ್ವಕಪ್ ಹಾಕಿ

ಚೆನ್ನೈ (ಪಿಟಿಐ): ಎಫ್‌ಐಎಚ್ ಜೂನಿಯರ್ ಪುರುಷರ ವಿಶ್ವ ಕಪ್ ಹಾಕಿ ಟೂರ್ನಿಯು ಇದೇ ವರ್ಷದ ನವೆಂಬರ್ 28 ರಿಂದ ಡಿಸೆಂಬರ್ 10ರವರೆಗೆ ಚೆನ್ನೈ ಮತ್ತು ಮದುರೈ ಆತಿಥ್ಯದಲ್ಲಿ ನಡೆಯಲಿದೆ

ಮೊದಲ ಬಾರಿ 24 ತಂಡಗಳು ಈ ಕೂಟದಲ್ಲಿ ಪೈಪೋಟಿ ನಡೆಸಲಿವೆ. ಈ ಪ್ರತಿಷ್ಠಿತ ಟೂರ್ನಿಯ ಮೂರನೇ ಬಾರಿ ಭಾರತದಲ್ಲಿ ನಡೆಯುತ್ತಿದೆ. ಈ ಹಿಂದೆ 2016ರಲ್ಲಿ ಲಖನೌದಲ್ಲಿ ಮತ್ತು 2021ರಲ್ಲಿ ಭುವನೇಶ್ವರದಲ್ಲಿ ನಡೆದಿದ್ದವು.

ಗ್ರ್ಯಾನ್‌ಪ್ರಿ : 100 ಮೀ. ಓಟ: ಗುರಿಂದರ್ ರಾಷ್ಟ್ರೀಯ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಂಚಿನ ಓಟ ಓಡಿದ ಪಂಜಾಬ್‌ನ ಗುರಿಂದರ್‌ವೀರ್ ಸಿಂಗ್ ಅವರು ಶುಕ್ರವಾರ ಇಲ್ಲಿ ನಡೆದ ಇಂಡಿಯನ್ ಗ್ರ್ಯಾನ್‌ಪ್ರಿ 1 ಅಥ್ಲೆಟಿಕ್‌ಗ ಕೂಟದ ಪುರುಷರ 100 ಮೀ. ಓಟದಲ್ಲಿ ಅಗ್ರಸ್ಥಾನ ಪಡೆದರಲ್ಲದೇ ಆ ಹಾದಿಯಲ್ಲಿ ರಾಷ್ಟ್ರೀಯ ದಾಖಲೆಯನ್ನೂ ಮುರಿದರು.



ಗುರಿಂದರ್‌ವೀರ್ ಸಿಂಗ್ ಚಿತ್ರ: ಪುಷ್ಕರ್ ವಿ.

ಕೆಂಗೇರಿಯ ಭಾರತದ ಕ್ರೀಡಾ ಪ್ರಾಧಿಕಾರದ ಟ್ರ್ಯಾಕ್‌ನಲ್ಲಿ 24 ವರ್ಷದ ಗುರಿಂದರ್ ಅವರು 10.20 ಸೆಕೆಂಡುಗಳಲ್ಲಿ ಗುರಿತಲುಪಿದರು. ಆ ಮೂಲಕ 2023ರ ಅಕ್ಟೋಬರ್‌ನಲ್ಲಿ ಮಣಿಕಂಠ ಹೋಬಳಿದಾರ್ ಸ್ಥಾಪಿಸಿದ್ದ 10.23 ಸೆ.ಗಳ ದಾಖಲೆ ಮುರಿದರು. ಜಲಂಧರ್‌ನವರಾದ ಸಿಂಗ್, ತಮ್ಮ ಈ ಹಿಂದಿನ ವೈಯಕ್ತಿಕ ಉತ್ತಮ ಸಾಧನೆಯನ್ನು (10.27 ಸೆ.) 2021ರಲ್ಲಿ ದಾಖಲಿಸಿದ್ದರು.


ಕರ್ನಾಟಕ ಮೂಲದ ಮಣಿಕಂಠ ಮತ್ತು ಆಮ್ಲನ್ ಬೊರ್ಗೊಹೇನ್ ಅವರೂ ಚಿನ್ನದ ರೇಸ್‌ನಲ್ಲಿದ್ದರು. ಮಣಿಕಂಠ ಶ್ರೇಷ್ಠ ಅವಧಿಯೊಡನೆ (10.22 ಸೆ.) ಎರಡನೇ ಸ್ಥಾನ ಪಡೆದರು. ಆಮ್ಲನ್ (10.43 ಸೆ.) ಮೂರನೇ ಸ್ಥಾನ ಗಳಿಸಿದರು. ಈ ಮೂವರೂ ರಿಲಯನ್ಸ್ ಪ್ರತಿಷ್ಠಾನದಲ್ಲಿ ತರಬೇತಿಯಲ್ಲಿದ್ದಾರೆ.


ಇಲ್ಲಿನ ಸಾಧನೆಯಿಂದ ಗುರಿಂದರ್‌ವೀರ್ ಮತ್ತು ಮಣಿಕಂಠ ಅವರು ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದಿದ್ದಾರೆ. ಈ ಕೂಟ ದಕ್ಷಿಣ ಕೊರಿಯಾದ ಗುಮಿಯಲ್ಲಿ ಮೇ 27 ರಿಂದ 31ರವರೆಗೆ ನಡೆಯಲಿದೆ.

ನಿತ್ಯಾಗೆ ಚಿನ್ನದ ಡಬಲ್: ಮಹಿಳೆಯರ ವಿಭಾಗದ 100 ಮೀ. ಓಟದಲ್ಲಿ ತೆಲಂಗಾಣದ ನಿತ್ಯಾ ಗಂಧೆ (11.41 ಸೆ.) ವಿಜೇತರಾದರು. ಅವರು 200 ಮೀ. ನಲ್ಲೂ (23.36ಸೆ.) ಚಿನ್ನ ಗೆದ್ದರು. 100 ಮೀ. ಓಟದಲ್ಲಿ ಕರ್ನಾಟಕದ ಎಸ್.ಎಸ್.ಸ್ನೇಹಾ ಎರಡನೇ ಸ್ಥಾನ ಪಡೆದರು.

ಕೂಟದ ಆಕರ್ಷಣೆ ಎನಿಸಿದ್ದ ಜ್ಯೋತಿ ಯರ್ರಾಜಿ ಮಹಿಳೆಯರ 100 ಮೀ. ಓಟದಲ್ಲಿ 13.07 ಸೆ.ಗಳಲ್ಲಿ ಗುರಿ ತಲುಪಿ ಅಗ್ರಸ್ಥಾನ ಗಳಿಸಿದರೂ, ತಮ್ಮ ವೈಯಕ್ತಿಕ ಶ್ರೇಷ್ಠ ಅವಧಿ (12.78 ಸೆ.) ಮೀರಲಾಗಲಿಲ್ಲ.

ಕರ್ನಾಟಕಕ್ಕೆ 2 ಚಿನ್ನ: ಜಾವೆಲಿನ್ ಥ್ರೊನಲ್ಲಿ ಎರಡೂ ವಿಭಾಗದ ಚಿನ್ನ ಕರ್ನಾಟಕದ ಪಾಲಾಯಿತು. ಶಶಾಂಕ್ ಪಾಟೀಲ (76.23 ಮೀ) ಪುರುಷರ ವಿಭಾಗದಲ್ಲಿ ಅಗ್ರಸ್ಥಾನ ಪಡೆದರೆ, ಮಹಿಳೆಯರ ವಿಭಾಗದಲ್ಲಿ ರಮ್ಯಶ್ರೀ ಜೈನ್ (50.41 ಮೀ.) ಚಿನ್ನ ಗೆದ್ದರು.





ಹೊಸತನದ ರೂವಾರಿಗಳಾದ ಕರ್ನಾಟಕದ ಸ್ಫೂರ್ತಿದಾಯಕ ಮಹಿಳೆಯರು ಇದೋ ಇಲ್ಲಿದ್ದಾರೆ. ಅವರ ಧೈರ್ಯ, ಅರ್ಪಣೆ ಹಾಗೂ ಪ್ರಭಾವವು ಸಮಾಜದಲ್ಲಿ ಪ್ರಗತಿಯನ್ನು ಮುನ್ನಡೆಸುತ್ತಾ ಉತ್ತಮ ಭವಿಷ್ಯವನ್ನು ರೂಪಿಸುತ್ತಿದೆ.

ಆರ್.ಕನ್ನಡದಲ್ಲಿ ಪ್ರಜಾವಾಣಿ ಸಾಧಕಿಯರು 2025 ವಿಶೇಷ ಪ್ರಸಾರ ವೀಕ್ಷಣೆಯ ಅವಕಾಶ ತಪ್ಪಿಸಿಕೊಳ್ಳಬೇಡಿ

R. ಕನ್ನಡ ಶನಿವಾರ ಮತ್ತು ಭಾನುವಾರ ಮಾರ್ಚ್ 29 ಮತ್ತು 30 ಮಧ್ಯಾಹ್ನ 3:30ಕ್ಕೆ

Special Partner BHIMA | Fashion Partner BSC | Mobility Partner | Associate Sponsors Muthoot Finance, GM University, VIPS, V.G.PAREKH & CO., VIDYANIKETAN PU SCIENCE COLLEGE, IRCTC



Cheil-25651/25